5. ನಿಯಮ 69ರ ಮೇರೆಗೆ

ವಿಷಯ: ರಾಜ್ಯದಲ್ಲಿ ಉಂಟಾಗಿರುವ ಬರಗಾಲದಿಂದ ಉದ್ಭವಿಸಿರುವ ಪರಿಸ್ಥಿತಿ ಕುರಿತು ಚರ್ಚೆ.

+ ಶ್ರೀ ಬಿ.ಎನ್.ಬಚ್ಚೇಗೌಡ(ಹೊಸಕೋಟೆ): ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಇರತಕ್ಕಂಥ ಬರದ ಬಗ್ಗೆ ಮತ್ತು ವಿದ್ಯುಚ್ಛಕ್ತಿಯ ಬಗ್ಗೆ ಮಾತನಾಡಲು ತಾವು ನಿಯಮ 69ರ ಅಡಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ. ಇವತ್ತು ವಿಶೇಷವಾಗಿ ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಕಣ್ಣುಮುಚ್ಚಾಲೆ ಆಟ ನಡೆಯುತ್ತಿದೆ. ಸುಮಾರು 24 ಗಂಟೆಗಳ ಕಾಲ ನಿರಂತರವಾಗಿ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ ಎಂದು ಹೇಳಿ ಬಂದಂಥ ಸರ್ಕಾರ, 12 ಗಂಟೆಗಳ ಕಾಲ ವಿದ್ಯುತ್ತನ್ನು ಕೊಡುತ್ತೇವೆ ಎಂದು ಕಳೆದ ಬಜೆಟ್‌ನ ಅಧಿವೇಶನದಲ್ಲಿ ಹೇಳಿದಂಥ ಮುಖ್ಯಮಂತ್ರಿಗಳು ಈಗ ಕೇವಲ 6 ಗಂಟೆಗಳ ಕಾಲವೂ ವಿದ್ಯುತ್ತನ್ನು ರೈತರಿಗೆ ಕೊಡದೇ ಇರುವಂಥ ಪರಿಸ್ಥಿತಿ ಇದೆ. 12 ಗಂಟೆಗಳ ಕಾಲ ವಿದ್ಯುತ್ತನ್ನು ಸಿಂಗಲ್ ಫೇಸ್ ಮಾಡುವುವಂಥಾದ್ದು, 6 ಗಂಟೆ ಲೋಡ್ ಶೆಡ್ಡಿಂಗ್ ಮಾಡುವಂಥಾದ್ದು ಆಗಿ, 6 ಗಂಟೆಗಳ ಕಾಲ ಮಾತ್ರ ವಿದ್ಯುತ್ತನ್ನು ತ್ರೀ ಫೇಸ್‌ನಲ್ಲಿ ಕೊಡುವಂಥಾದ್ದು ಆಗಿದೆ. ಆದರೆ ಆ 6 ಗಂಟೆಗಳ ಕಾಲ ಮಾತ್ರ ವಿದ್ಯುತ್ ಸರಬರಾಜೂ ನಿರಂತರವಾಗಿ ಇಲ್ಲದೇ ಇರತಕ್ಕಂಥ, ವೋಲ್ಟೇಜ್ ಇಲ್ಲದೇ ಇರತಕ್ಕಂಥ, ದಿನದಲ್ಲಿ ಸಾಕಷ್ಟು ಬಾರಿ ವಿದ್ಯುತ್ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿರತಕ್ಕಂಥಾದ್ದನ್ನು ಇವತ್ತು ನಾವು ನೋಡುತ್ತಿದ್ದೇವೆ. ವಿದ್ಯುತ್ ಸರಬರಾಜು ಆಗುತ್ತದೆ ಎಂದು ಪ್ರತಿನಿತ್ಯ ರೈತರು ತಮ್ಮ ತೋಟ, ಹೊಲ ಗದ್ದೆಗಳಲ್ಲಿ ಕಾದು ಕುಳಿತಿರುವಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಅದಕ್ಕಿಂತ ಹೆಚ್ಚಿನದಾಗಿ, ಕೆ.ಪಿ.ಟಿ.ಸಿ.ಎಲ್.ನ ಅಧಿಕಾರಿಗಳು ರೈತರಿಗೆ ಸಾಕಷ್ಟು ತೊಂದರೆ ಕೊಡುತ್ತಿರುವಂಥಾದ್ದು ದಿನನಿತ್ಯ ನಾವು ಕಾಣುತ್ತಿರುವ ಸಂಗತಿಯಾಗಿದೆ. ರಾಜ್ಯದಲ್ಲಿ 43 ತಾಲ್ಲೂಕುಗಳು ಡಾರ್ಕ್ ಮತ್ತು ಗ್ರೇ ಏರಿಯಾಗಳು ಎಂದು ಗುರುತಿಸಲ್ಪಟ್ಟಿದ್ದು, ಈ 43 ತಾಲ್ಲೂಕುಗಳಲ್ಲಿ 30 ಸಾವಿರಕ್ಕೂ ಹೆಚ್ಚು ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯನ್ನು ರೆಗ್ಯುಲರೈಸ್ ಮಾಡಬೇಕಾಗಿದೆ. ಅದನ್ನು ಕೆ.ಪಿ.ಟಿ.ಸಿ.ಎಲ್.ನವರು ಇವತ್ತು ಮಾಡಿಸಿಕೊಳ್ಳುತ್ತಿಲ್ಲ. ಈ 43 ತಾಲ್ಲೂಕುಗಳಲ್ಲಿ ನನ್ನ ಕ್ಷೇತ್ರವಾದ ಹೊಸಕೋಟೆ ತಾಲ್ಲೂಕೂ ಸಹ ಒಂದಾಗಿದೆ. ರಾಜ್ಯದಲ್ಲಿ ಈ ರೀತಿ ರೆಗ್ಯುಲರೈಸ್ ಮಾಡಬೇಕಾದ ಪಂಪ್‌ಸೆಟ್‌ಗಳು ಒಂದು ಲಕ್ಷವಿದ್ದು, ಅದರಲ್ಲಿ ಡಾರ್ಕ್ ಮತ್ತು ಗ್ರೇ ಏರಿಯಾದಲ್ಲಿರತಕ್ಕಂಥಾದ್ದು ಎಷ್ಟು ಎಂದು ಸರ್ಕಾರ ಹೇಳಬೇಕಾಗುತ್ತದೆ. ನನಗೆ ಗೊತ್ತಿರುವ ಅಂಕಿಅಂಶಗಳ ಪ್ರಕಾರ ಡಾರ್ಕ್ ಮತ್ತು ಗ್ರೇ ಏರಿಯಾಗಳಲ್ಲಿ ಈ ರೀತಿಯವು ಸುಮಾರು 30 ಸಾವಿರ ಇವೆ. ಸಂಬಂಧಪಟ್ಟ ಸಚಿವರು ಈಗ ಇಲ್ಲಿ ಇಲ್ಲ. ನವೆಂಬರ್‌ವರೆಗೂ ರೆಗ್ಯುಲರೈಸ್ ಮಾಡಬೇಕು ಎಂದು ಅವರು ಆದೇಶ ಕೊಟ್ಟರು.

ಶ್ರೀ ಸಿ.ಬೈರೇಗೌಡ: ಬರದ ಬಗ್ಗೆ ಮಾತನಾಡಬೇಕು ಎಂದರೆ ಕಂದಾಯ ಮಂತ್ರಿಗಳು ಇಲ್ಲಿ ಇಲ್ಲ. ಕೃಷಿಯ ಬಗ್ಗೆ ಮಾತನಾಡಬೇಕು ಎಂದರೆ ಕೃಷಿ ಸಚಿವರು ಇಲ್ಲ. ಈಗ ನನ್ನ ಮಾನ್ಯ ಸ್ನೇಹಿತರು ವಿದ್ಯುತ್ತಿನ ಬಗ್ಗೆ ಮಾತನಾಡುತ್ತಿದ್ದಾರೆ. ಅದಕ್ಕೆ ಸಂಬಂಧಿಸಿದ [xx] ಇಲ್ಲಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಚೆನ್ನಾಗಿರುವುದಿಲ್ಲ. ಮಾಜಿ ಮಂತ್ರಿಗಳು ಮತ್ತು ಹಿರಿಯ ನಾಯಕರಾಗಿರತಕ್ಕಂಥ ನಿಮ್ಮಂಥವರು ಹೀಗೆ ಹೇಳಬಹುದೇ? ಅವರಿಗೆ ಇಂಡಿಪೆಂಡೆಂಟ್ ಚಾರ್ಜ್ ಕೊಡಲಾಗಿದೆ. ನಿಮ್ಮ ಬಾಯಿಂದ ಇಂಥ ಮಾತು ಬರಬಹುದೇ?

ಶ್ರೀ ಸಿ.ಬೈರೇಗೌಡ: ಒಪ್ಪಿಕೊಂಡೆ. ನಾನು ಏಕೆ ಆ ಪದವನ್ನು ಬಳಸಿದೆ ಎಂದರೆ ನೀವು ಪರಿಸ್ಥಿತಿಯನ್ನು ನಿಭಾಯಿಸುವುದು ಇರಲಿ, ಅರ್ಥ ಮಾಡಿಕೊಳ್ಳುವ ಪ್ರಯತ್ನವೂ ನಡೆಯುತ್ತಿಲ್ಲ. ಆದ್ದರಿಂದ, ನನ್ನ ಬಾಯಲ್ಲಿ ತಪ್ಪು ಬಂದಿದೆ, ಅದನ್ನು ನಾನು ವಾಪಸ್ಸು ಪಡೆಯುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಏನೇನು ಹೇಳುತ್ತಿದ್ದಾರೆ, ಅದೆಲ್ಲವನ್ನೂ ಬರೆದುಕೊಳ್ಳುತ್ತಿದ್ದಾರೆ. ತಾವು ಹೇಳಿದ್ದೆಲ್ಲದರ ಬಗ್ಗೆ ನೋಟ್ ತಯಾರು ಮಾಡಿ ಸಂಬಂಧಿಸಿದವರಿಗೆ ಹೇಳುತ್ತೇವೆ.

ಶ್ರೀ ಸಿ.ಬೈರೇಗೌಡ: ಬರೆದುಕೊಳ್ಳುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಮಾನ್ಯ ಬಚ್ಚೇಗೌಡರು ಎಷ್ಟು ಪಂಪುಸೆಟ್ಟುಗಳಿವೆ ಎಂದು ಹೇಳಿದರೆಂದು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವೇ ಹೇಳಿದಿರಲ್ಲಾ, ಇಡೀ ರಾಜ್ಯದಲ್ಲಿ 15- 16 ಲಕ್ಷ ಪಂಪುಸೆಟ್ಟುಗಳಿವೆ ಎಂದು.

ಅಧ್ಯಕ್ಷರು: ಕ್ರಾಸ್ ಎಕ್ಸಾಮಿನೇಷನ್ ಬೇಡ. ತಾವು ಅವರಿಗೆ ಕೆಲವು ವಿಚಾರವನ್ನು ಹೇಳಿದ್ದೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅವರು ಹೇಳಿದ್ದಕ್ಕೇ ಹೇಳಿದೆ. ನಾವು ಬರೆದುಕೊಂಡಿದ್ದೇವೆ ಎಂದು ಹೇಳಿದಿರಲ್ಲಾ, ಏನು ಬರೆದುಕೊಂಡಿದ್ದೀರೆಂದು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪ್ರತಿಯೊಬ್ಬರು ಹೇಳಿದ ಪಂಪ್‌ಸೆಟ್‌ಗಳನ್ನು ಟೋಟಲ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಸಿ.ಬೈರೇಗೌಡ: ದಯವಿಟ್ಟು ಅವರನ್ನು ಕರೆಸುವುದಕ್ಕಾದರೂ ವ್ಯವಸ್ಥೆ ಮಾಡಿ.

[xx] ಪದಗಳನ್ನು ಸನ್ಮಾನ್ಯ ಸದಸ್ಯರು ವಾಪಸ್ಸು ತೆಗೆದುಕೊಂಡರು.

ಅಧ್ಯಕ್ಷರು: ಹಾಗೆ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕೃಷಿ ಸಚಿವರು ಈಗ ಬರುತ್ತಾರೆ. ಕಂದಾಯ ಸಚಿವರು ತಮ್ಮನ್ನು ಕೇಳಿಕೊಂಡು ಹೋಗಿದ್ದಾರೆ. ಅವರೂ ಬರುತ್ತಾರೆ. ಅವರೆಲ್ಲರ ಪರವಾಗಿ ಕುಡಿಯುವ ನೀರಿನ ವಿಚಾರವಾಗಲಿ, ವಿದ್ಯುಚ್ಛಕ್ತಿಯ ವಿಚಾರವಾಗಲಿ ಎಲ್ಲದಕ್ಕೂ ಉತ್ತರ ಕೊಡುತ್ತೇವೆ.

ಅಧ್ಯಕ್ಷರು: ಸಂಬಂಧಿಸಿದ ಸಚಿವರನ್ನು ಕರೆಸಿ. ವಿದ್ಯುಚ್ಛಕ್ತಿಯ ಸಚಿವರಾದ ವೀರಕುಮಾರ್ ಪಾಟೀಲ್‌ರವರನ್ನು ಕರೆಸಿ.

ಶ್ರೀ ಬಿ.ಎನ್.ಬಚ್ಚೇಗೌಡ: ಅವರು ಇಲ್ಲೇ ಇದ್ದಾರೆ. ಆದರೆ ತಮ್ಮ ಸೀಟನಲ್ಲಿಲ್ಲ.

ಅಧ್ಯಕ್ಷರು: ಅವರು ಯಾವಾಗಲೂ ಅಲ್ಲಿ ಕುಳಿತುಕೊಳ್ಳುತ್ತಿದ್ದರಲ್ಲಾ. ಆದ್ದರಿಂದ ಅವರ ಸೀಟನ್ನು ನೋಡಿ ಅವರು ಇಲ್ಲ ಎಂದು ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ನಾನು ಅವರೂ ಅದನ್ನೇ ಚರ್ಚೆ ಮಾಡುತ್ತಿದ್ದೆವು. ಹೈಡ್ರೋ ಎಲೆಕ್ಟ್ರಿಸಿಟಿ ಎಷ್ಟು ಜನರೇಟ್ ಆಗುತ್ತದೆ, ಥರ್ಮಲ್ ಪ್ರಾಜೆಕ್ಟ್‌ಗಳಿಂದ ಎಷ್ಟು ವಿದ್ಯುತ್ ಬರುತ್ತದೆ, ಹೊರಗಿನಿಂದ ಎಷ್ಟು ತರಿಸುತ್ತಿದ್ದೇವೆ ಎನ್ನುವ ಮಾಹಿತಿಯನ್ನು ನಾನು ಅವರಿಂದ ಪಡೆದುಕೊಳ್ಳುತ್ತಿದ್ದೆ. ಅಷ್ಟರಲ್ಲೇ ಇವರು ಅರ್ಜ, ಗಿರ್ಜ ಎಂದರೆ ಹೇಗೆ? ನಾನು ಏನು ಮಾಡಲಿ ಈಗ?

ಅಧ್ಯಕ್ಷರು: ಅವರು ಯಾವಾಗಲೂ ಅಲ್ಲಿ ಕುಳಿತುಕೊಳ್ಳುತ್ತಿದ್ದರಲ್ಲಾ, ಆದ್ದರಿಂದ ಅವರು ನನ್ನ ಕಣ್ಣಿಗೆ ಕಾಣಲಿಲ್ಲ. ಮಾನ್ಯ ಶ್ರೀಕಂಠಯ್ಯನವರು ನನಗೆ ಪತ್ರ ಬರೆದು ಹೋಗಿದ್ದಾರೆ. ಅವರು ಅವರ ಜಿಲ್ಲಾ ಪಂಚಾಯಿತಿ ಚುನಾವಣೆಯ ಛೇರ್‌ಮೆನ್ ಅಂತೆ. ಅದಕ್ಕಾಗಿ ನನಗೆ ಪತ್ರ ಬರೆದು ತಿಳಿಸಿ ಹೋಗಿದ್ದಾರೆ.

ಶ್ರೀ ಬಿ.ಎನ್.ಬಚ್ಚೇಗೌಡ: ರಾಜ್ಯದಲ್ಲಿ ಎಷ್ಟು ಅನ್‌ಆಥರೈಸ್ಡ್ ಪಂಪ್‌ಸೆಟ್‌ಗಳಿವೆ, ಅವುಗಳನ್ನು ರೆಗ್ಯುಲರೈಸ್ ಮಾಡಲು ಏನು ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಹೇಳುತ್ತಿದ್ದೆ. ಡಾರ್ಕ್ ಮತ್ತು ಗ್ರೇ ಏರಿಯಾಗಳೆಂದು ಗುರುತಿಸಲಾದ ರಾಜ್ಯದ 43 ತಾಲ್ಲೂಕುಗಳಲ್ಲಿ ಹಿಂದಿನಿಂದಲೂ ಪಂಪ್‌ಸೆಟ್‌ಗಳನ್ನು ಉಪಯೋಗಿಸುತ್ತಿರುವವರಿಗೆ ರೆಗ್ಯುಲರೈಸ್ ಮಾಡುವುದಿಲ್ಲ ಎಂದು ಕೆ.ಪಿ.ಟಿ.ಸಿ.ಎಲ್. ಅಧಿಕಾರಿಗಳು ನಿರಾಕರಿಸಿದ್ದಾರೆ. ಅವರು ಬ್ಯಾಂಕುಗಳಿಂದ ಹಣ ಪಡೆದು ಖರ್ಚು ಮಾಡಿ ಪಂಪ್‌ಸೆಟ್‌ಗಳನ್ನು ಹಾಕಿಕೊಂಡು ಅದರಿಂದ ಬದುಕುವಂಥ ಕಾರ್ಯವಾಗಿದೆ. ಅನೇಕ ನಿರುದ್ಯೋಗಿ ಯುವಕರು ವ್ಯವಸಾಯ ಮಾಡುವ ದೃಷ್ಟಿಯಿಂದ 50 ಸಾವಿರ, ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬೋರ್‌ವೆಲ್ ಹಾಕಿದ್ದಾರೆ. ನವೆಂಬರ್‌ವರೆಗೂ ರೆಗ್ಯುಲರೈಸ್ ಮಾಡುತ್ತೇವೆ ಎಂದು ಹೇಳಿದ

ಕೆ.ಪಿ.ಟಿ.ಸಿ.ಎಲ್.ನವರು ಈಗ ರೆಗ್ಯುಲರೈಸ್ ಮಾಡುವುದಿಲ್ಲ ಎಂದು ನಿರಾಕರಿಸುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಏಪ್ರಿಲ್ 6ನೇ ತಾರೀಖಿನವರೆಗೆ ರೆಗ್ಯುಲರೈಸ್ ಮಾಡಿಸಿಕೊಳ್ಳಿ ಎಂದು ಕೊಟ್ಟಿರುವ ಗಡುವಿನ ಅವಕಾಶವನ್ನು ಇದಕ್ಕೂ ಕೊಡಬೇಕು. ಗಣಿ ಸಚಿವರು ಈಗ ಇಲ್ಲಿ ಇಲ್ಲ. ಮಾನ್ಯ ಗಣಿ ಸಚಿವರು ಕಳೆದ ಬಾರಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ ಡಾರ್ಕ್ ಮತ್ತು ಗ್ರೇ ಏರಿಯಾಗಳನ್ನು ರಿಲ್ಯಾಕ್ಸ್ ಮಾಡುತ್ತೇವೆ ಎಂದು ಹೇಳಿದ್ದರು. ಇವುಗಳನ್ನು ರಿಲ್ಯಾಕ್ಸ್ ಮಾಡಲಾಗಿದೆಯೇ ಎನ್ನುವ ಬಗ್ಗೆ ನಮಗೆ ಮಾಹಿತಿ ಇಲ್ಲ. ಇದರ ಬಗ್ಗೆ ಮಾಹಿತಿ ಇದ್ದರೆ ನಮಗೆ ತಿಳಿಸಬೇಕು, ಇಲ್ಲದಿದ್ದರೆ ನಾವೆಲ್ಲಾ ಸಾಕಷ್ಟು ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತೇವೆ ಎಂದು ಇಂದು ಬೆಳಿಗ್ಗೆ ನಾನು ಅವರ ಹತ್ತಿರ ಮಾತನಾಡಿದ್ದೇನೆ. ನೀರು ರೀಚಾರ್ಜ್ ಆದ ಹಾಗೆ ಉಪಯೋಗಿಸಿಕೊಳ್ಳುತ್ತಿರತಕ್ಕಂಥ ನೀರಿನ ಮಟ್ಟ ಮೇಲೆ ಬರುವುದರಿಂದ ಯಾವಾಗಲೂ ಶಾಶ್ವತವಾಗಿ ಡಾರ್ಕ್ ಏರಿಯಾ ಎಂದು ಇರುವುದಿಲ್ಲ ಅಥವಾ ಗ್ರೇ ಏರಿಯಾ ಎಂದು ಇರುವುದಿಲ್ಲ. ಕೆಲವು ಪ್ರದೇಶಗಳಲ್ಲಿ ಇವತ್ತು ನೀರು ಸಿಕ್ಕುತ್ತಿದೆ. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಗಂಗಾಕಲ್ಯಾಣ ಮತ್ತು ಬೇರೆ ಬೇರೆ ಯೋಜನೆಗಳ ಮೂಲಕ ಅವರಿಗೆ ಅವಕಾಶಗಳನ್ನು ನಾವು ಮಾಡಿಕೊಟ್ಟಿದ್ದೇವೆ, ಕೊಳವೆ ಬಾವಿಗಳನ್ನು ಕೊರೆದಿದ್ದೇವೆ. ಈಗ ಅವರಿಗೂ ಇದನ್ನೇ ಅಪ್ಲೈ ಮಾಡಬೇಕು, ನೀವು ಡಾರ್ಕ್ ಏರಿಯಾ, ಗ್ರೇ ಏರಿಯಾದಲ್ಲಿ ಇದ್ದೀರಿ, ನಾವು ನಿಮಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವುದಿಲ್ಲ ಎಂದು ಹೇಳಬೇಕಾಗುತ್ತದೆ. ನಾವು ಹೇಳುವುದೇನೆಂದರೆ, ಇನ್ನು ಮುಂದೆ ನೀವು ಏನಾದರೂ ನಿಯಮಗಳನ್ನು ಮಾಡಿ, ಆದರೆ ಇದುವರೆಗೂ ಮಾಡಿರತಕ್ಕಂಥ ಒಂದು ಲಕ್ಷ ಅಥವಾ ಎರಡು ಲಕ್ಷ ಅಥವಾ ಮೂರು ಲಕ್ಷ ಅಥವಾ ಇವತ್ತು ಎಷ್ಟು ಅನ್ಆಥರೈಸ್ಡ್ ಆಗಿ ಕೊಳವೆ ಬಾವಿಗಳನ್ನು ಕೊರೆದು ಉಪಯೋಗಿಸಿಕೊಳ್ಳುತ್ತಿದ್ದಾರೆ, ಅವರನ್ನು ರೆಗ್ಯುಲರೈಸ್ ಮಾಡತಕ್ಕಂಥ ತೀರ್ಮಾನವನ್ನು ಸರ್ಕಾರ ಮಾಡಬೇಕು.

ಅಧ್ಯಕ್ಷರು: ಶ್ರೀ ಖರ್ಗೆಯವರೆ, 43 ತಾಲ್ಲೂಕುಗಳಲ್ಲಿ ರೆಗ್ಯುಲರೈಸ್ ಮಾಡುತ್ತೇವೆ ಎಂದು ಅರ್ಜಿಗಳನ್ನು ತೆಗೆದುಕೊಂಡಿದ್ದಾರೆ. ಆ ಮೇಲೆ ಮುಂದಿನ ತಿಂಗಳು 6ನೇ ತಾರೀಖು ನೀವೆಲ್ಲಾ ರೆಗ್ಯುಲರೈಸ್ ಮಾಡಿಸಿಕೊಂಡಿಲ್ಲ ಎಂದು ಕೇಸ್ ಹಾಕುತ್ತಾರೆ. ಹಾಗಾದರೆ 43 ತಾಲ್ಲೂಕುಗಳಲ್ಲಿ ರೆಗ್ಯುಲರೈಸ್ ಮಾಡುತ್ತೇವೆಂದು ಅರ್ಜಿಗಳನ್ನು ಏಕೆ ತೆಗೆದುಕೊಳ್ಳಬೇಕಾಗಿತ್ತು? ರೆಗ್ಯುಲರೈಸ್ ಮಾಡುತ್ತೇವೆಂದು ಹಣವನ್ನೂ ಸಹ ಕಟ್ಟಿಸಿಕೊಂಡಿದ್ದಾರೆ. ಈಗ ರೆಗ್ಯುಲರೈಸ್ ಮಾಡದಿದ್ದರೆ ಹೇಗೆ? ಇದರ ಬಗ್ಗೆ ಸ್ವಲ್ಪ ಸೀರಿಯಸ್ ಆಗಿ ಯೋಚನೆ ಮಾಡಿ because Our Taluk also comes under these 43 Taluks.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ

ಶ್ರೀ ಭೈರೇಗೌಡರು ಮತ್ತು ಶ್ರೀ ಕೆ.ಶ್ರೀನಿವಾಸಗೌಡರು ಪ್ರಸ್ತಾಪ ಮಾಡಿದ್ದರು. ಮತ್ತು ಈಗ ಶ್ರೀ ಬಚ್ಚೇಗೌಡರೂ ಸಹ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಏನಾದರೂ ಒಂದು ಡೆಫಿನೆಟ್ ಸಲ್ಯೂಷನ್ ಇನ್ನು ಒಂದೆರಡು ದಿವಸದಲ್ಲಿ ಬರುತ್ತದೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಅಧ್ಯಕ್ಷರೆ, ಈ ತರಹದ್ದು ಏನಾದರೂ ಒಂದು ಮಾಹಿತಿ ಹೋಗದಿದ್ದರೆ ಬಹಳ ಕಷ್ಟವಾಗುತ್ತದೆ. ರೈತರು ಬಹಳ ಆತಂಕದಲ್ಲಿದ್ದಾರೆ. 43 ತಾಲ್ಲೂಕಿನ ರೈತರಿಗೆ 6ನೇ ತಾರೀಖು ಆದ ತಕ್ಷಣ ಅವರು ಏನು ವಿದ್ಯುತ್ ಸಂಪರ್ಕ ತೆಗೆದುಕೊಂಡಿದ್ದಾರೆ ಅದನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಹಾಕುತ್ತೇವೆ ಎನ್ನುವ ಒಂದು ಭಯ ವಾತಾವರಣ ನಿರ್ಮಾಣವಾಗಿದೆ.

ಅಧ್ಯಕ್ಷರು: ವಿದ್ಯುಚ್ಛಕ್ತಿ ಕಟ್ ಮಾಡುವುದಲ್ಲದೆ ಅವರ ಮೇಲೆ ಕೇಸ್ ಹಾಕುತ್ತಾರೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಆದ್ದರಿಂದ, ನಾನು ಹೇಳುವುದೇನೆಂದರೆ, ದಯಮಾಡಿ ಇವತ್ತು ಸರ್ಕಾರದಿಂದ ಒಂದು ಸೂಚನೆ ಹೋಗಬೇಕಾಗುತ್ತದೆ. ಇವತ್ತು ಆ 43 ತಾಲ್ಲೂಕಿನಲ್ಲಿ ಕೂಡ ಆ ರೈತರು ಅಕ್ರಮವಾಗಿ ತೆಗೆದುಕೊಂಡಿರತಕ್ಕಂಥ ಸಂಪರ್ಕವನ್ನು ಸಕ್ರಮಗೊಳಿಸತಕ್ಕಂಥ ಕೆಲಸವನ್ನು ಸರ್ಕಾರ ಮಾಡುತ್ತದೆ, ಮಾನವೀಯತೆಯ ದೃಷ್ಟಿಯಿಂದ 43 ತಾಲ್ಲೂಕಿಗೆ ಕೂಡ ವಿಸ್ತರಣೆ ಮಾಡುತ್ತದೆ ಎನ್ನುವಂಥ ಮಾಹಿತಿ ಹೋಗದಿದ್ದರೆ ನಮಗೆಲ್ಲಾ ಬಹಳ ತೊಂದರೆಯಾಗುತ್ತದೆ. ನಮ್ಮ ತುಮಕೂರು ಜಿಲ್ಲೆಯಲ್ಲಿ 10 ತಾಲ್ಲೂಕು ಇದೆ. ಅದರಲ್ಲಿ 8 ತಾಲ್ಲೂಕನ್ನು ಕಪ್ಪು, ಬೂದು ಎಂದು ಮಾಡುತ್ತಾರೆ. ಇನ್ನು ಎರಡು ಮಾತ್ರ ಇಲ್ಲ.

ಅಧ್ಯಕ್ಷರು: ನಮ್ಮ ಜಿಲ್ಲೆಯಲ್ಲಿಯೂ ಕೂಡ 11 ತಾಲ್ಲೂಕುಗಳ ಪೈಕಿ 10 ತಾಲ್ಲೂಕನ್ನು ಕಪ್ಪು ಎಂದು ಮಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದಕ್ಕೆಲ್ಲಾ ಇನ್ನು ಒಂದೆರಡು ದಿವಸದಲ್ಲಿ ಪರಿಹಾರ ಸಿಗುತ್ತದೆ. ಈಗ ಏಕೆ ಇದರ ಬಗ್ಗೆ ಚರ್ಚೆ?

ಅಧ್ಯಕ್ಷರು: ಮಾನ್ಯ ಗೃಹ ಸಚಿವರು ಅಷ್ಯೂರೆನ್ಸ್ ಕೊಟ್ಟಿರುವುದರಿಂದ ಮುಂದಿನ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುದ್ದಹನುಮೇಗೌಡರು ಹೇಳಿದಂತೆ ಸರ್ಕಾರದಿಂದ ಮೆಸೇಜ್ ಹೋಗದೇ ಇದ್ದರೆ, ಕೆ.ಪಿ.ಟಿ.ಸಿ.ಎಲ್.ನವರು ನಾಳೆಯ ದಿವಸ ಬರುತ್ತಾರೆ. ಅದಕ್ಕೆ ಬಹಳ ಕಷ್ಟ ಆಗಿರುವಂಥದ್ದು. ಅದಕ್ಕೋಸ್ಕರ ಮೆಸೇಜ್ ಹೋಗಬೇಕೆಂದು ಹೇಳಿರುವಂಥದ್ದು.

MR.SPEAKER: The message should go!

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಅಧ್ಯಕ್ಷರೆ, ಯಾರೋ ಐ.ಎ.ಎಸ್. ಆಫೀಸರ್ ಕುಳಿತುಕೊಂಡು ಅವೈಜ್ಞಾನಿಕವಾಗಿ ಕಪ್ಪು, ಬೂದು ಎಂದು ತೀರ್ಮಾನ ಮಾಡತಕ್ಕಂಥದ್ದು it is very bad. ವೈಜ್ಞಾನಿಕವಾಗಿ ಕಾರಣವೇ ಇಲ್ಲ. ಸುಮ್ಮನೆ ಕುಳಿತುಕೊಂಡು ಏನೋ ಒಂದು ಮ್ಯಾಪ್ ತೆಗೆದುಕೊಂಡು ಇದು ಕಪ್ಪು ಪ್ರದೇಶ, ಇದು ಬೂದು ಪ್ರದೇಶ, ನಿಮಗೆ ರೆಗ್ಯುಲರೈಸ್ ಮಾಡುವುದಿಲ್ಲ, ಅನ್‌ಆಥರೈಸ್ಡ್ ಎಂದರೆ ಹೇಗೆ?

ಅಧ್ಯಕ್ಷರು: ಒಂದೆರಡು ದಿವಸಗಳಲ್ಲಿ ರಿಲೀಫ್ ಕೊಡುತ್ತೇವೆಂದು ಹೇಳುತ್ತಿದ್ದಾರಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಶ್ರೀ ಮುದ್ದಹನುಮೇಗೌಡರೇ, ತಮಗೆ ಗೊತ್ತಿದ್ದ ಹಾಗೆ ಗ್ರೇ ಅಥವಾ ಡಾರ್ಕ್ ಏರಿಯಾ ಎಂದು ನಿನ್ನೆ ಮೊನ್ನೆ ಫಿಕ್ಸ್ ಮಾಡಿದ್ದಲ್ಲ. ಇದು ಹಿಂದೆ ಕೂಡ ಇತ್ತು. ಈ ತಾರತಮ್ಯ ಏಕೆ ಇರಬೇಕು ಎನ್ನತಕ್ಕಂಥ ಪ್ರಶ್ನೆ ಇತ್ತೀಚೆಗೆ ಹೆಚ್ಚಿನ ರೀತಿಯಲ್ಲಿ ಎಲ್ಲರೂ ಕೂಡ ಕೇಳುತ್ತಿದ್ದಾರೆ. ಅದಕ್ಕೆ ಪರಿಹಾರ ಇನ್ನು ಒಂದೆರಡು ದಿವಸದಲ್ಲಿ ಸಿಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಪುನಃ ಪದೇ ಪದೇ ಪ್ರಸ್ತಾಪಿಸುವುದು ಪ್ರಯೋಜನವಿಲ್ಲ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಮಾನ್ಯ ಅಧ್ಯಕ್ಷರೆ, ಎರಡು ವರ್ಷಗಳಿಂದ ಇದರ ಬಗ್ಗೆ ಸದನದಲ್ಲಿ ಚರ್ಚೆ ನಡೆಯುತ್ತಲೇ ಇದೆ. ಮಾನ್ಯ ಹಿರಿಯ ಮಂತ್ರಿಗಳು ಎರಡು ದಿವಸದಲ್ಲಿ ಇದರ ಬಗ್ಗೆ ಸಲ್ಯೂಷನ್ ಸಿಗುತ್ತದೆ ಎಂದು ಹೇಳಿದರು. ದಯಮಾಡಿ 43 ತಾಲ್ಲೂಕಿನಲ್ಲಿ ಅದು ಆಗಲೇಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಇದರ ಜೊತೆಗೆ ಫೆನಾಲ್ಟಿ ಎಂದು ಈವಾಗ ಹಾಕುವಂಥದ್ದು, ಇನ್ನು ಎರಡು ದಿವಸದಲ್ಲಿ ಈ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆಂದು ಮಾನ್ಯ ಖರ್ಗೆಯವರು ಹೇಳಿದರು. ಅದುವರೆಗಾದರೂ ಮಾನ್ಯ ಮುದ್ದಹನುಮೇಗೌಡರು ಹೇಳಿದ ಹಾಗೆ ಒಂದು ಮೆಸೇಜ್ ಹೋಗಬೇಕಾಗುತ್ತದೆ. ಈ ಅಧಿಕಾರಿಗಳು ಬಹಳ ತೊಂದರೆ ಕೊಡುತ್ತಾರೆ. ಮೋಟರ್ ಜೊತೆಯಲ್ಲೇ ಬಂದು ಏಣಿ ಹಾಕಿಕೊಂಡು ಅವರೇ ಗೋಡೆಗೆ ಹಾಕಿಬಿಡುತ್ತಾರೆ. ಹಾಗೆಯೇ ಬುಕ್ ಮಾಡಿ ಬಿಡುತ್ತಾರೆ. ಇವತ್ತು ರೈತರಿಗೆ ದೊಡ್ಡ ಹೆರಾಸ್‌ಮೆಂಟ್ ಆಗಿದೆ. ರೈತರೆಲ್ಲಾ ಹೆದರಿಬಿಟ್ಟಿದ್ದಾರೆ. ಅಧಿಕಾರಿಗಳು ಹೋಗತಕ್ಕಂಥ ವೇಗವನ್ನು ನೋಡಿದಾಗ ಭಯೋತ್ಪಾದನೆ ತರಹ ಆಗಿಬಿಟ್ಟಿದೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಅಧ್ಯಕ್ಷರೆ, theft of energy, ಏನಿದೆ ಸೆಕ್ಷನ್ 379 ಏನಾದರೂ ಹಾಕಿಬಿಟ್ಟು ಕೋರ್ಟಿಗೆ ಪ್ರೊಡ್ಯೂಸ್ ಮಾಡಿಬಿಟ್ಟರೆ immediately he will be remanded to judicial custody.

ಬಹಳ ಆತಂಕಕಾರಿಯಾದಂಥ ಬೆಳವಣಿಗೆ ಆದ್ದರಿಂದ ದಯಮಾಡಿ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ, in the interest of these farmers, ತಕ್ಷಣ ಇದಕ್ಕೆ ಏನಾದರೂ ಒಂದು ಪರಿಹಾರ ಸೂಚನೆ ಕಳುಹಿಸಲೇ ಬೇಕಾಗುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಈ ನಿರ್ಬಂಧನೆಯನ್ನು ಸಂಪೂರ್ಣವಾಗಿ ತೆಗೆಯಬೇಕು. ಡಾರ್ಕ್ ಮತ್ತು ಗ್ರೇ ಏರಿಯಾದಲ್ಲಿ ರೆಗ್ಯುಲರೈಸ್ ಮಾಡುವುದಕ್ಕೆ ಏನು ನಿರ್ಬಂಧ ಇದೆ ಅದನ್ನು ಸಡಿಲ ಮಾಡಿ, ಇವತ್ತು ಅಷ್ಟೇ ಮುಂದೆ ತೆಗೆದುಕೊಳ್ಳುವವರು ಮಾಡುವುದು ಅಂತಹದ್ದೇ. ನಮ್ಮ ತಾಲ್ಲೂಕುಗಳಲ್ಲಿ 100-200 ಅರ್ಜಿಗಳನ್ನು ಹಾಕಿಕೊಂಡಿದ್ದಾರೆ. ಇದರಲ್ಲಿ ಬೋರ್‌ವೆಲ್ ಕೊರೆದಿರತಕ್ಕಂಥವರು, ಫ್ರೆಶ್ ಆಗಿ ಮಾಡುವಂಥವರು ಇದ್ದಾರೆ. ಆ ರೈತರಿಗೂ ಸಹ ಮುಂದೆ ತೊಂದರೆ ಆಗುತ್ತದೆ. ಅದಕ್ಕೋಸ್ಕರ ಈ ನಿರ್ಬಂಧವನ್ನು ಸಂಪೂರ್ಣವಾಗಿ ತೆಗೆದುಹಾಕುವಂಥ ಕಾರ್ಯ ಇವತ್ತು ಆಗಬೇಕಾಗುತ್ತದೆ. ಶ್ರೀ ಮುದ್ದಹನುಮೇಗೌಡರು ಏನು ಹೇಳಿದರು, ಇದು ಅವೈಜ್ಞಾನಿಕವಾಗಿ ಆಗಿದೆಯೋ ಅಥವಾ ವೈಜ್ಞಾನಿಕವಾಗಿದೆಯೋ ಅದು ನಮಗೆ ಗೊತ್ತಿಲ್ಲ ಒಟ್ಟಿನಲ್ಲಿ ತಾಲ್ಲೂಕಿನಲ್ಲಿ ಓವರ್ ಎಕ್ಸ್‌ಪ್ಲಾಯಿಟೆಡ್ ಏರಿಯಾಸ್ ಎಂದು ಹೇಳಿ ಯಾರು ನೀರನ್ನು ಹೆಚ್ಚು ಬಳಸುತ್ತಿದ್ದಾರೆ ಅಲ್ಲಿ ಸಾಕಷ್ಟು ರೀಚಾರ್ಜ್ ಆಗುವುದಿಲ್ಲವೆಂದು ಹೇಳಿ ಈ ನಿಯಮವನ್ನು ಅಳವಡಿಸಿಕೊಂಡು ಇದನ್ನು ಮಾಡಿರತಕ್ಕಂಥದ್ದು.

(ಈ ಹಂತದಲ್ಲಿ ಉಪಾಧ್ಯಕ್ಷರು (ಶ್ರೀ ಮನೋಹರ್.ಹೆಚ್ ತಹಶೀಲ್ದಾರ್ ಅವರು) ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಆದ್ದರಿಂದ ಇವತ್ತು ಯಾರು ಸರ್ವೀಸ್ ಮೆಯಿನ್ಸ್ ಕಟ್ಟಿದ್ದಾರೆ ಅವರಿಗೆ 5 ಸಾವಿರ ರೂಪಾಯಿ ಕಟ್ಟಿ ಎಂದು ಹೇಳುವುದು, ಯಾರು ಅರಿಯರ್ಸ್ ಸರ್ವೀಸ್ ಮೆಯಿನ್ಸ್ ಇಲ್ಲದೆ ಇರತಕ್ಕಂಥ ಹೊಸದಾಗಿ ಹೋಗಿ ನಮಗೆ ಕೊಡಿ ಎಂದು ಕೇಳಿದರೆ ಅವರಿಗೆ ಏಳೂವರೆ ಸಾವಿರ ರೂಪಾಯಿಗಳನ್ನು ಕೊಡಿ ನಿಮ್ಮ ಅರ್ಜಿಯನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದು, ಈ ತರಹ ಮನಸ್ಸಿಗೆ ಬಂದ ಹಾಗೆ ಈ ಇಲಾಖೆಯಲ್ಲಿ ನಡೆದುಕೊಳ್ಳುವಂಥದ್ದನ್ನು ನಾವು ಕಾಣುತ್ತಿರತಕ್ಕಂಥದ್ದು. ಇದು ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಆಗತಕ್ಕಂಥ ದೃಶ್ಯ. ಮೊದಲು ನಮ್ಮ ಸರ್ಕಾರ ಇದ್ದಾಗ ಬೋರ್‌ವೆಲ್ ಪಂಪುಸೆಟ್‌ಗೆ ಸರ್ವೀಸ್ ತೆಗೆದುಕೊಳ್ಳಬೇಕಾದರೆ 300 ರೂಪಾಯಿ ಡಿಪಾಸಿಟ್ ಕಟ್ಟಬೇಕೆಂದು ಇರತಕ್ಕಂಥದ್ದು. 300 ರೂಪಾಯಿ ಕಟ್ಟಿದರೆ ರಿಜಿಸ್ಟರ್ ಮಾಡಿಕೊಂಡು ಅವರಿಗೆ ಆರ್.ಆರ್.ನಂ. ಕೊಟ್ಟು ಮಾಡುವಂಥ ಕಾರ್ಯಕ್ಕೆ ಇವತ್ತು ರೈತ ಡಿಪಾಸಿಟ್ ರೂಪದಲ್ಲಿ 900 ರೂಪಾಯಿಗಳನ್ನು ಕೊಡಬೇಕು. 10 ಹೆಚ್.ಪಿ. ಆದಮೇಲೆ ಅವನು 900 ರೂಪಾಯಿಗಳನ್ನು ಕೊಡುವಂಥದ್ದು. ಈಗಲೇ 900

ರೂಪಾಯಿಗಳನ್ನು ಕೊಡಿ ಎಂದು ಹೇಳುತ್ತಿದ್ದಾರೆ. ಬಿಲ್ ಕೊಡುತ್ತಾರೆ, ಆ ಬಿಲ್‌ನಲ್ಲಿ ಏನೇನು ಡಿಪಾಸಿಟ್ ಎಂಬುದು ಅರ್ಥವೇ ಆಗುವುದಿಲ್ಲ. ಆ ಬಿಲ್ ನೋಡಿಯೇ ರೈತನಿಗೆ ಹಾರ್ಟ್ ಅಟ್ಯಾಕ್ ಆಗಬೇಕು ಆ ರೀತಿ ಬೇರೆ ಬೇರೆ ರೀತಿಯ ಡಿಪಾಸಿಟ್ ಎಂದು ಹೇಳಿ 16,000 ರೂಪಾಯಿಗಳನ್ನು ಕೊಡಬೇಕು. ಮೊದಲನೇ ಮೂರು ಪೋಲ್ ಎಂದು ಹೇಳಿ ಮೂರು ಕಂಬ ಹಾಕಿದರೆ ಏಳೂವರೆ ಸಾವಿರ ರೂಪಾಯಿ ಕೊಡಬೇಕು. ನಾಲ್ಕನೇ ಪೋಲ್ ಹಾಕಿದರೆ 10,000 ರೂಪಾಯಿಗಳನ್ನು ಕೊಡಬೇಕು. ಈ ತರಹ ಮಾಡಿರುವುದರಿಂದ ರೈತರು ಸಂಪೂರ್ಣ ಮುಗಿದೇ ಹೋಗಿದ್ದಾರೆ. ಕೆ.ಪಿ.ಟಿ.ಸಿ.ಎಲ್.ರವರು ಹೇಳಿದ ಹಾಗೆ ಈ ಸರ್ಕಾರ ಕೇಳಿಕೊಂಡು ಕುಳಿತರೆ ಸಂಪೂರ್ಣ ರೈತರ ಕತೆ ಈ ರಾಜ್ಯದಲ್ಲಿ ಮುಗಿದೇ ಹೋಗುತ್ತದೆ. ವಿದ್ಯುಚ್ಛಕ್ತಿ ಸರಿ ಇಲ್ಲದೆ ರೈತನ ಬಾಳು ಮೊದಲೇ ಗೋಳಾಗಿದೆ. ರೈತನು ಆರಾಮವಾಗಿ ಇರುವ ಹಾಗಿಲ್ಲ. ತಲೆಯ ಮೇಲೆ ಚಪ್ಪಡಿ ಎಳೆದುಕೊಳ್ಳುವ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ನಿರ್ಮಾಣ ಆಗಿರತಕ್ಕಂಥದ್ದು. ಮಾನ್ಯ ಸಚಿವರು ಅನೇಕ ಬಾರಿ ರೈತರಿಗೆ ಎಷ್ಟು ವಿದ್ಯುಚ್ಛಕ್ತಿ ಕೊಡುತ್ತೇವೆ ಎನ್ನುವ ಹೇಳಿಕೆಗಳನ್ನು ಅನೇಕ ಬಾರಿ ಕೊಟ್ಟಿದ್ದಾರೆ. ಅನೇಕ ಸಭೆಗಳಲ್ಲಿ ಕೂಡ ಭಾಷಣ ಮಾಡುವುದರ ಮೂಲಕ ಹೇಳಿದ್ದಾರೆ. ''ರೈತರು ಒಪ್ಪಿದರೆ ಬೆಳಿಗ್ಗೆ ಲೋಡ್ ಷೆಡ್ಡಿಂಗ್, ರಾತ್ರಿ 8 ಗಂಟೆ ವಿದ್ಯುತ್'' ಬೆಳಿಗ್ಗೆ ಲೋಡ್ ಷೆಡ್ಡಿಂಗ್ ಎಂದು, ಮತ್ತೆ 'ಲೋಡ್ ಷೆಡ್ಡಿಂಗ್ ಅನಿವಾರ್ಯ' ಮಾನ್ಯ ಮುಖ್ಯಮಂತ್ರಿಗಳು ಹೇಳುವಂಥದ್ದು. 'ವಿದ್ಯುತ್ ಕಡಿತ ಅನಿವಾರ್ಯ', 'ರೈತರು ಬಯಸಿದರೆ ದಿನ ಬಿಟ್ಟು ದಿನ 12 ಗಂಟೆ ವಿದ್ಯುತ್ ಪೂರೈಕೆ' ಅಂದರೆ ಆಲ್ಟರ್‌ನೇಟ್ ಡೇಸ್ ವಿದ್ಯುತ್ ಕೊಡುತ್ತೇವೆಂದು ಹೇಳಿಕೆಗಳು. ಹೀಗೆ ಹತ್ತಾರು ಹೇಳಿಕೆಗಳು ಇವೆ. ನಂತರ 'ಮನವಿ ಆಧರಿಸಿ ರಾಯಚೂರಿಗೆ ರಾತ್ರಿ ನಿರಂತರ ವಿದ್ಯುತ್' ಎಂದು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಘೋಷಣೆ ಮಾಡಿರುವಂಥದ್ದು. ಅದೂ ಕೂಡ ರೈತರಿಗೆ ಸಿಗಲಿಲ್ಲ. ಇಂಥ ಬೋಗಸ್ ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟು, ನಮ್ಮಲ್ಲಿ ಹೈಡ್ರೋ ವಿದ್ಯುಚ್ಛಕ್ತಿ ಉತ್ಪಾದನೆ ಏನು ಇದೆ, ಥರ್ಮಲ್ ವಿದ್ಯುಚ್ಛಕ್ತಿ ಉತ್ಪಾದನೆ ಏನು ಇದೆ, ಎಷ್ಟು ಸಾವಿರ ಮಿಲಿಯನ್ ಯೂನಿಟ್ ಪರ್ ಡೇ ನಮ್ಮಲ್ಲಿ ಬರುತ್ತಿದೆ, ಅದನ್ನು ಬೇಡಿಕೆ ಆಧರಿಸಿ ಏನು ಕೊಡಬೇಕೆನ್ನುವ ದೃಷ್ಟಿಯಲ್ಲಿ ಒಂದು ಶ್ವೇತಪತ್ರ ಸಹ ಇಲ್ಲ. ಪ್ರತಿನಿತ್ಯ ಕೆ.ಪಿ.ಟಿ.ಸಿ.ಎಲ್.ನ ಅಧ್ಯಕ್ಷರ ಒಂದು ಹೇಳಿಕೆ ಸಂಬಂಧಪಟ್ಟ ಮಂತ್ರಿಗಳಿಂದ ಒಂದು ರೀತಿಯ ಹೇಳಿಕೆ, ಮತ್ತು ಮುಖ್ಯಮಂತ್ರಿಗಳಿಂದ ಏನಾದರೂ ಕೇಳಿದರೆ ಅವರು ಒಂದು ತರಹ ಹೇಳಿಕೆ ಹೇಳುವಂಥದ್ದು ನಡೆಯುತ್ತಿದೆ. ಯಾವುದೂ ಕೂಡ ಕರಾರುವಾಕ್ಕಾಗಿ ನಮ್ಮ ಪೊಜಿಷನ್ ಹೀಗಿದೆ, ನಮ್ಮ ಕಷ್ಟ ಹೀಗಿದೆ ಎಂದು ಹೇಳುವಂಥದ್ದು ಇಲ್ಲಿ ಇಲ್ಲ. ಈ ಪರಿಸ್ಥಿತಿಯಲ್ಲಿ ಇವತ್ತು ಕೆ.ಪಿ.ಟಿ.ಸಿ.ಎಲ್. ನಡೆಯುತ್ತಿರತಕ್ಕಂಥದ್ದು. ಇವರು ರೂರಲ್‌ನಲ್ಲಿ ಮಾತ್ರ ಲೋಡ್ ಶೆಡ್ಡಿಂಗ್ ಮಾಡುತ್ತಿದ್ದಾರೆ. ಅರ್ಬನ್‌ನಲ್ಲಿ ಲೋಡ್ ಷೆಡ್ಡಿಂಗ್ ಇಂಟ್ರಡ್ಯೂಸ್ ಮಾಡಿ ರೂರಲ್ ಸೆಕ್ಟಾರ್‌ಗೆ ಏಕೆ ಕೊಡಲಿಲ್ಲ ಇವರು? ಇವತ್ತು ಅರ್ಬನ್‌ನವರಿಗೆ ಲೋಡ್ ಷೆಡ್ಡಿಂಗ್ ಕೊಟ್ಟಿಲ್ಲ. ರೂರಲ್‌ಗೆ ಲೋಡ್

ಷೆಡ್ಡಿಂಗ್ ಕೊಡುತ್ತಿರುವುದಾಗಿದೆ. ಜೊತೆ ಜೊತೆಗೆ, ಅರಿಯರ್ಸ್, ಇಂಟರೆಸ್ಟ್ ಏನಿದೆ ಅದೆಲ್ಲವನ್ನೂ ಸಂಪೂರ್ಣವಾಗಿ ವೇವ್-ಆಫ್ ಮಾಡಬೇಕು ಎಂದು ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ. ಹಿಂದಿನ ಬಾಕಿಗಳನ್ನಿಟ್ಟುಕೊಂಡು ನೀವು ಅಷ್ಟು ಕಟ್ಟಬೇಕು, ಇಷ್ಟು ಕಟ್ಟಬೇಕೆಂದು ಹೇಳಿದರೆ ರೈತ ಎಲ್ಲಿಂದ ಕಟ್ಟುತ್ತಾನೆ? ನೀವು ಮುಂದೆ ಏನಾದರೂ ಮಾಡಿಕೊಳ್ಳಿ. ನಾವು ಬೇಡವೆಂದು ಹೇಳುವುದಿಲ್ಲ. ಹಿಂದೆ ಇರುವ ಯಾವ್ಯಾವುದನ್ನೋ ಸೇರಿಸಿ ರೈತನಿಗೆ ಹಣ ಕಟ್ಟು ಎಂದರೆ ಆತ ಎಲ್ಲಿಂದ ಹಣ ಕಟ್ಟಲು ಸಾಧ್ಯ? ಆ ದೃಷ್ಟಿಯಿಂದ ಮುಂದೆ ನೀವು ರೆಗ್ಯುಲರೈಜ್ ಮಾಡಿ, ಆತನಿಗೆ ವಿದ್ಯುಚ್ಛಕ್ತಿ ಕೊಡುವುದಾದರೆ ಮುಂದೆ ಆತ ಕಟ್ಟಬೇಕಾದ ಹಣವನ್ನು ಕೊಡುವುದಕ್ಕೆ ಏನು ಬೇಕೋ ಅದನ್ನು ಎನ್‌ಫೋರ್ಸ್ ಮಾಡಬೇಕೇ ವಿನಃ ಹಿಂದಿನದನ್ನು ಇಟ್ಟುಕೊಂಡು ನೀವು ವಿದ್ಯುತ್ ಕೊಡಿ ಎಂದು ಹೇಳುವುದು ಆಗುತ್ತಿಲ್ಲ. ಇದರ ಜೊತೆಗೆ ಮೀಟರ್‌ಗಳು ಇಲ್ಲ, ಮೀಟರ್‌ಗಳು ಇವೆ, ಹಾಕುತ್ತೇವೆಂದು ಹೇಳಿಕೊಂಡು ಹೋಗುವ ವಿಧಾನ. ಇವತ್ತು ರಾಜ್ಯದಲ್ಲಿ ಏನು ಅನ್ಥಾಥರೈಸ್ಡ್ ಗ್ರಾಹಕರು ಇದ್ದಾರೆ ಅವರುಗಳನ್ನು ರೆಗ್ಯುಲರೈಜ್ ಮಾಡುವ ಕಾರ್ಯ ಆಗಬೇಕು. ಆಲಮಟ್ಟಿ ಯೋಜನೆ ಮುಗಿದು 2005ಕ್ಕೆ ಕಮಿಷನ್ ಆಗುತ್ತದೆ. ಆದರ ಜೊತೆಗೆ, ಇವತ್ತು ಮತ್ತೆ ಬಳ್ಳಾರಿಯಲ್ಲಿ 500 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆಂದು ಹೇಳಿದ್ದಾರೆ. ನಾವು ಹಾಕಿದ್ದ ಶಂಕು ಸ್ಥಾಪನೆಯನ್ನು ಅವರ ಅಧ್ಯಕ್ಷರ ಕೈಯಲ್ಲಿ ಹಾಕಿಸಿದ್ದಾರೆ. ಹಿಂದೆ ಹಾಕಿರುವ ಶಂಕುಸ್ಥಾಪನೆಯನ್ನು ಮತ್ತೊಮ್ಮೆ ಮಾಡಿ 2005ಕ್ಕೆ ಕೊಡುತ್ತೇವೆಂದು ಹೇಳುವುದು. ಇಲ್ಲಿ ವಿದ್ಯುತ್ ಇಲ್ಲ, ರೈತರಿಗೆ ಬವಣೆ ಇದೆ ಎಂದು ಕೇಳಿದಾಗ, ಮಂತ್ರಿಗಳು ಒರಿಸ್ಸಾದಿಂದ ವಿದ್ಯುತ್ ಬರುತ್ತಿದೆ ಎಂದು ಹೇಳುತ್ತಾರೆ. ಎಲ್ಲಿ ಬರುತ್ತಿದೆ ಗೊತ್ತಿಲ್ಲ? ಅಲ್ಲಿಂದ ಹೇಗೆ ಟ್ರಾನ್ಸ್‌ಮಿಷನ್ ಆಗುತ್ತದೋ ಗೊತ್ತಿಲ್ಲ? ಎಷ್ಟು ಮೆಗಾವ್ಯಾಟ್ ತರುತ್ತಿದ್ದಾರೆ.?ಸೆಂಟ್ರಲ್ ಗ್ರಿಡ್‌ನಿಂದ ನಮಗೆ ಬರುವ ಬಾಕಿ ಏನಿದೆ ಅದರಲ್ಲೆನಾದರೂ ಕೊಂಡುಕೊಂಡಿದ್ದಾರೆಯೇ? ಅದೂ ನಮಗೆ ಗೊತ್ತಿಲ್ಲ. ಮಹಾರಾಷ್ಟ್ರದಿಂದ ಏನಾದರೂ ನೆಗೋಷಿಯೇಟ್ ಮಾಡಿ ತರುತ್ತೇವೆಂದು ಹೇಳಿದ್ದಾರೆ. ಯಾವುದಾದರೂ ಪಕ್ಕದ ರಾಜ್ಯಗಳಲ್ಲಿ ವಿದ್ಯುತ್ ತರುವಂತಹ ವ್ಯವಸ್ಥೆಯಲ್ಲಿ ಎಷ್ಟು ಮೆಗಾವ್ಯಾಟ್ ವಿದ್ಯುತ್‌ಗೆ ನಮ್ಮ ಬೇಡಿಕೆ ಇದೆ ಎನ್ನುವ ದೃಷ್ಟಿಯಿಂದ ಆ ಬಗ್ಗೆ ಸದನಕ್ಕೆ ತಿಳಿಸಬೇಕಾಗುತ್ತದೆ. ಸಾಕಷ್ಟು ಗೊಂದಲಮಯ ಹೇಳಿಕೆಗಳನ್ನು, ಕೆಪಿಟಿಸಿಎಲ್ ಬಗ್ಗೆ, ಸಚಿವರು ಕೊಡುತ್ತಿರುವ ಹೇಳಿಕೆ ಬಗ್ಗೆ ಮತ್ತು ಅಧ್ಯಕ್ಷರು ಕೊಡುವ ಹೇಳಿಕೆಗಳ ಬಗ್ಗೆ ಕರಾರುವಕ್ಕಾಗಿ ಸದನಕ್ಕೆ ಮಾಹಿತಿ ಬೇಕಾಗುತ್ತದೆ. ಪ್ರತಿನಿತ್ಯ 16 ಲಕ್ಷ ಪಂಪ್‌ಸೆಟ್ಟುಗಳನ್ನು ಬಳಸುತ್ತಿರುವ, ಶೇಕಡ 70 ಭಾಗದ ರೈತರು ಇದನ್ನೇ ಅವಲಂಬಿಸಿದ್ದು ಅವರಿಗೆ ಇದು ಗೊತ್ತಾಗಬೇಕಾಗುತ್ತದೆ. ಇವತ್ತು ಬೆಳಗಿನ ಪತ್ರಿಕೆಗಳಲ್ಲಿ ವರದಿಯಾಗಿರುವ ಪ್ರಕಾರ ಮದ್ರಾಸ್‌ನಲ್ಲಿ ಲಿಗ್ನೈಟ್ ಕಾರ್ಮಿಕರು ಸ್ಟ್ರೈಕ್ ಮಾಡುತ್ತಿದ್ದಾರೆ. ಅನಿಂಟರಪ್ಟೆಡ್ ಏನಿತ್ತು ಅದನ್ನು ಇಂಟರ್‌ಪ್‌ಷನ್, ಯಾವಾಗ ಬೇಕಾದರೂ ವಿದ್ಯುತ್ ಹೋಗಬಹುದು. ನಾವೇನೂ ಮಾಡಲಿಕ್ಕಾಗುವುದಿಲ್ಲ. ನೀವು ನೋಡಿಕೊಳ್ಳಬೇಕು. ಹ್ಯಾಂಡ್ಸ್-ಆಫ್ ಎಂದು ಹೇಳುವುದು. ನಾವೇನೂ

ಮಾಡಲಿಕ್ಕಾಗುವುದಿಲ್ಲ. ನೀವು ವಿಷಯ ತಿಳಿದುಕೊಳ್ಳಿ ಎಂದು ಮಾಹಿತಿ ಕೊಟ್ಟಿರುವುದು. ಇಂಥ ಪರಿಸ್ಥಿತಿ ರಾಜ್ಯದಲ್ಲಿ ಉಂಟಾಗಿದೆ. ತಣ್ಣೀರುಬಾವಿ ಪವರ್ ಪ್ರೊಡಕ್ಷನ್ ಮಾಡುವಂಥಾದ್ದು ಏನಿದೆ, ಕೆಪಿಟಿಸಿಎಲ್‌ನವರು ಕಳುಹಿಸಿರುವುದನ್ನು ಮಾಡುವುದಕ್ಕೆ, ಅದನ್ನು ಬಿಟ್ಟು ಸರ್ಕಾರ ಅವರದೇ ಆದ ತೀರ್ಮಾನ ತೆಗೆದುಕೊಂಡು 1,000, 1,200 ಕೋಟಿ ರೂಪಾಯಿ ಎಕ್ಸೆಸ್‌ನಲ್ಲಿ ಬೇರೆಯವರಿಗೆ ಕೊಟ್ಟಿರುವುದು, ಈ ವಿಚಾರದಲ್ಲಿ ಕೆಪಿಟಿಸಿಎಲ್ ವರ್ಸ್‌ಸ್ ಗವರ್ನ್‌ಮೆಂಟ್ ಆಗಿದೆ. ಯಾರೋ ಒಬ್ಬ ಅಧಿಕಾರಿ ಪಿಪಿಎ ಏನಿದೆ ಅದನ್ನು ಓವರ್‌ಲುಕ್ ಮಾಡಿ ಕೊಟ್ಟಿರುವ ಕಾರ್ಯವಾಗಿದೆ. ಇದರ ಬಗ್ಗೆ ಸರ್ಕಾರ ಹೇಳಿಕೆ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಕಂಟ್ರಾಕ್ಟ್‌ದಾರರಿಗೆ ಸುಮಾರು 1,000 ಕೋಟಿ ರೂಪಾಯಿ ಜಾಸ್ತಿ ಕೊಡುವ ವ್ಯವಸ್ಥೆ ಇಥರಲ್ಲಾಗಿದೆ. ಇಷ್ಟು ಹಣ ಅವ್ಯವಹಾರವಾಗಿ ಈ ಒಂದು ಆದೇಶ ಹೊರಟಿದೆ ಎಂಬುದು ಈ ಸದನಕ್ಕೆ ತಿಳಿಯಬೇಕಾಗುತ್ತದೆ. ಇದರ ಜೊತೆಗೆ ವಿಶೇಷ ಎಂದರೆ, ಕೆಪಿಟಿಸಿಎಲ್‌ಗೆ ಎಸ್.ಎನ್.ಅಗರ್‌ವಾಲ್ ಎಂಬುವವರನ್ನು, ಅವರೂ ಒಬ್ಬ ಪವರ್ ಪ್ರೊಡ್ಯೂಸರ್ ಅವರನ್ನು ಸದಸ್ಯರನ್ನಾಗಿ ತೆಗೆದುಕೊಂಡಿದ್ದಾರೆ. ಇವರು ಮೂರೂವರೆ ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿದ್ದಾರೆ. ಇದರಲ್ಲಿ ಏನು ಕಾಣುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಪಾರದರ್ಶಕ ಟ್ರಾನ್ಸ್‌ಫರೆನ್ಸಿ ಎಂದು ಹೇಳುವ ಮುಖ್ಯಮಂತ್ರಿಗಳು ಎಂಥ ಮನುಷ್ಯನನ್ನು ಸದಸ್ಯನನ್ನಾಗಿ ಇಟ್ಟುಕೊಂಡು ನಡೆಸುವುದನ್ನು ನಾವು ಕಾಣುತ್ತಿದ್ದೇವೆ. ಒಬ್ಬ ರೈತನಿಗೆ 500, 1,000 ರೂಪಾಯಿ ಕೊಡಲಿಲ್ಲವೆಂದರೆ ಏಪ್ರಿಲ್ 6ರಿಂದ ಜೈಲಿಗೆ ಕಳುಹಿಸುತ್ತೇವೆಂದು ನಿರಂತರವಾಗಿ ಟಿವಿಯಲ್ಲಿ ಪ್ರಸಾರವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. 6ನೇ ತಾರೀಖು ರೆಗ್ಯುಲರೈಜ್ ಮಾಡಿಸಿಕೊಳ್ಳದಿದ್ದರೆ ದಂಡ, ಸಜ, 6 ತಿಂಗಳವರೆಗೆ ಜೈಲಿಗೆ ಕಳುಹಿಸಲಾಗುವುದೆಂದು ಹೇಳಲಾಗುತ್ತಿದೆ. ಅನ್ನ ಕೊಡುವ ರೈತನನ್ನು ಜೈಲಿಗೆ ಕಳುಹಿಸುತ್ತೇವೆಂದು ಹೇಳುವುದನ್ನು ಇವರು ತೋರಿಸುವಂಥಾದ್ದು. ಇವರು ತೆಗೆದುಕೊಂಡಿರುವ ಮನುಷ್ಯ ಮೂರೂವರೆ ಕೋಟಿ ರೂಪಾಯಿಗಳ ಬಾಕಿದಾರನಿದ್ದಾನೆ. ಇದೇ ಸಂದರ್ಭದಲ್ಲಿ ಪವರ್ ಥೆಫ್ಟ್ ಪರ್ಸೆಂಟೇಜ್ ಏನಿದೆ? ಪವರ್ ಟ್ರಾನ್ಸ್‌ಮಿಷನ್ ಲಾಸ್ ಏನಿದೆ? ಇದನ್ನು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಯಾವ ವ್ಯವಸ್ಥೆಯನ್ನು ಮಾಡಿಕೊಂಡು ಕಾರ್ಯಗತ ಮಾಡಿದ್ದೇವೆಂದು ತಿಳಿಸಬೇಕಾಗುತ್ತದೆ. ನಾವು ಪತ್ರಿಕೆಗಳಲ್ಲಿ ಓದಿದ್ದೇವೆ, ಸಾಕಷ್ಟು ಬಾಕಿ ಉಳಿಸಿಕೊಂಡಿದ್ದಾರೆ, ಪವರ್ ಕಾರ್ಪೊರೇಷನ್‌ಗೆ ಕೊಡಬೇಕು, ಸರ್ಕಾರ ಕೆಪಿಟಿಸಿಎಲ್‌ಗೆ ಕೊಡಬೇಕು. 1,380 ಕೋಟಿ ರೂಪಾಯಿ 2,300 ಕೋಟಿ ರೂಪಾಯಿ ಬಾಕಿ ಇದೆ ಎನ್ನುತ್ತಾರೆ. ಯಾರು ಯಾರಿಗೆ ಬಾಕಿ ಇದ್ದಾರೋ ಗೊತ್ತಿಲ್ಲ. ಬಾಕಿ ವಸೂಲಿಗಳ ಬಗ್ಗೆ ಹೇಳಬೇಕಾದರೆ 6 ಸಾವಿರ ಪಂಚಾಯಿತಿಗಳೇನಿವೆ ಅವುಗಳಿಗೆ ಕೊಡುವುದನ್ನು ಇಲ್ಲೇ ಕಟ್ ಮಾಡಿಕೊಂಡು ಕೊಡುವುದು. ಗ್ರಾಮ ಪಂಚಾಯತಿಗಳಿಗೆ ಪವರ್ ಎಂದು ಹೇಳಿ ಇಲ್ಲೇ ತೆಗೆದುಕೊಳ್ಳುವುದು. ಇದೇ ರೀತಿ ನಗರಸಭೆ, ಪುರಸಭೆ ಮತ್ತು ಕಾರ್ಪೊರೇಷನ್ಸ್ ಏನಿವೆ ಅವರು ಕೊಡುವ ಬಾಕಿ ಎಷ್ಟಿದೆ ಎಂಬ ಮಾಹಿತಿ

ಬೇಕು. ವಾಟರ್ ಬೋರ್ಡ್ಸ್ ಇವೆ. ಕರ್ನಾಟಕ ಅರ್ಬನ್ ವಾಟರ್ ಬೋರ್ಡ್ ಇದೆ. ಸಾಕಷ್ಟು ಬೋರ್ಡ್ಸ್‌ಗಳು ಇವೆ. ಅವುಗಳಿಂದ ಎಷ್ಟು ಬಾಕಿ ಬರಬೇಕು? ಹೆಚ್‌ಟಿ ಕನ್‌ಸ್ಯೂಮರ್ಸ್ ಇದ್ದಾರೆ, ಅವರಿಂದ ಎಷ್ಟು ಬಾಕಿ ಇದೆ? ಬಾಕಿ ಇರಿಸಿಕೊಂಡಿರುವವರ ಮೇಲೆ ಮೊಕದ್ದಮೆ ಹಾಕಿದ್ದೀರಾ? ರೈತರು ಉಪಯೋಗಿಸುವ ವಿದ್ಯುತ್ ಪ್ರಮಾಣವೆಷ್ಟು ಎಂಬುದು ನಮಗೆ ಗೊತ್ತಿಲ್ಲ. ಎಷ್ಟು ಪರ್ಸೆಂಟೇಜ್ ಹೆಚ್.ಟಿ., ಎಲ್.ಟಿ. ಕನ್ಸಂಪ್ಷನ್ ಇದೆ? ರೈತರು ಉಪಯೋಗಿಸುವ ಪವರ್ 100 ಪರ್ಸೆಂಟ್‌ಗೆ 30, 35, 40 ಪರ್ಸೆಂಟ್ ಇದೆಯೇ ಎನ್ನುವ ಮಾಹಿತಿ ಇಲ್ಲ. ವೇಗ್ ಆಗಿ ರೈತರ ಮೇಲೆ ಹಾಕುವುದು. ರೈತರು ಉಪಯೋಗಿಸುತ್ತಾರೆಂದು ಹೇಳುವುದು. ಬೇರೆ ಬೇಕಾದಷ್ಟು ಕೈಗಾರಿಕೆಗಳು, ಕೈಗಾರಿಕಾ ಪ್ರದೇಶಗಳಲ್ಲಿ ಸಾಕಷ್ಟು ವಿದ್ಯುತ್ ಸೋರುವಂಥಾದ್ದಾಗಿದೆ. ಫಿಲ್‌ಫಿರೇಜ್ ಆಗಿ, ಅವರ ಮೇಲೆ ಎಷ್ಟು ಕೇಸ್ ಹಾಕಿದ್ದಾರೆ? ಯಾವ್ಯಾವುದನ್ನು ಹಿಡಿದಿದ್ದಾರೆ? ಎಷ್ಟು ಪವರ್ ಥೆಫ್ಟ್‌ನಲ್ಲಿ 38 ಭಾಗವೆಂದು ಮುಖ್ಯಮಂತ್ರಿಗಳು ಒಂದು ಬಾರಿ ಸದನದಲ್ಲಿ ಹೇಳಿದ್ದರು. 38 ಭಾಗ ಇದೆಯೋ, 30 ಭಾಗ ಇದೆಯೋ ಯಾರ ಕಡೆಯಿಂದ ಪವರ್ ಥೆಫ್ಟ್ ಆಗುತ್ತಿದೆ, ಟ್ರಾನ್ಸ್‌ಮಿಷನ್ ಲಾಸ್ ಎಷ್ಟಾಗುತ್ತಿದೆ ಗೊತ್ತಿಲ್ಲ. ಇದೆಲ್ಲಾ ವ್ಯವಸ್ಥೆಯಲ್ಲಿ ಇವತ್ತುಕೆಪಿಟಿಸಿಎಲ್ ಬಗ್ಗೆ ನಮಗೆಲ್ಲಾ ಬಹಳ ವಿಶ್ವಾಸವಿತ್ತು. ಹಿಂದೆ ಕೆಇಬಿ ಇದ್ದದ್ದು ಈಗ ಕೆಪಿಟಿಸಿಎಲ್ ಆಗಿದೆ. ಕೆಪಿಟಿಸಿಎಲ್ ಎಂಬ ಸಂಸ್ಥೆ ರೈತರಿಗೆ ಮಾರಕವಾಗಿ, ರೈತ ವಿರೋಧಿಗಳೆನ್ನುವ ರೀತಿಯಲ್ಲಿ ನಡೆದುಕೊಳ್ಳುವುದು ತಪ್ಪಬೇಕು. ಎಲ್ಲರಿಗೂ ಒಂದೇ ಮಾನದಂಡವನ್ನು ಉಪಯೋಗಿಸಬೇಕು. ರೈತನನ್ನು ಮಾತ್ರ ಟಾರ್ಗೆಟ್ ಮಾಡಿ, ಅವನು ತಪ್ಪು ಮಾಡಿದ್ದಾನೆ ಎನ್ನುವ ದೃಷ್ಟಿಯಿಂದ ಆತನನ್ನೇ ತಪ್ಪಿತಸ್ಥನನ್ನಾಗಿ ಮಾಡುವುದು, ಹೇಳಿಕೆಗಳು, ಬರಹ ರೂಪದಲ್ಲಿ ಪ್ರಕಟವಾಗುವುದು, ಇವೆಲ್ಲಾ ಮೀಡಿಯಾದಲ್ಲಿ ಬರುವುದನ್ನು ತಪ್ಪಿಸಬೇಕು. ಇದರ ಸುಧಾರಣೆ ಮಾಡುವ ದೃಷ್ಟಿಯಲ್ಲಿ ನಾವೆಲ್ಲಾ ಸಹಕಾರ ಕೊಡಬೇಕಾಗುತ್ತದೆ. ಎಲ್ಲರ ಸಹಕಾರ ಬೇಕಾಗುತ್ತದೆ. ಹಣವಿಲ್ಲದೆ ಸಂಸ್ಥೆ ನಡೆಸಲಾಗುವುದಿಲ್ಲ. ಇದು ನಮಗೆ ಗೊತ್ತಿದೆ.

3.50 ಪಿಎಂ

ಆದ್ದರಿಂದ ಇವಕ್ಕೆಲ್ಲಾ ಇರುವ ಬೇಡಿಕೆ, ಹಣ ಎಷ್ಟು ಬೇಕು, ಮುಂದೆ ಖರ್ಚಾಗುವ ಹಣವೆಷ್ಟು ಈ ಎಲ್ಲಾ ಅಂಶಗಳ ಬಗ್ಗೆ ಇವತ್ತು ಹೇಳಬೇಕಾಗುತ್ತದೆ ಇದರ ಜೊತೆಗೆ ಕುಡಿಯುವ ನೀರಿಗೆ ಬಹಳ ಕಷ್ಟವಾಗಿದೆ, ರಾಜ್ಯದಲ್ಲಿ ಅನೇಕ ಜಿಲ್ಲೆಗಳಲ್ಲಿ ಬರ ಪ್ರಾರಂಭವಾಗಿದೆ, ಉತ್ತರ ಕರ್ನಾಟಕ, ಮಲ್ನಾಡು, ಬೆಳಗಾಂ, ಹಾವೇರಿ, ಹುಬ್ಬಳ್ಳಿ-ಧಾರವಾಡ, ಚಿಕ್ಕಮಗಳೂರು ಈ ಎಲ್ಲಾ ಭಾಗಗಳಲ್ಲಿ ನೀರಿಗೆ ಸಾಕಷ್ಟು ತೊಂದರೆಯಾಗಿದೆ. ತಮ್ಮ ಜಿಲ್ಲೆಯಾದ ಹಾವೇರಿಯಲ್ಲೂ ಕೂಡ ಕುಡಿಯುವ ನೀರಿಗೆ ಸಾಕಷ್ಟು ತೊಂದರೆಯಾಗಿರುವುದನ್ನು ನಾವು ಓದಿದ್ದೇವೆ. ಪತ್ರಿಕೆಗಳಲ್ಲಿ ಈಗಾಗಲೇ ನಾವು ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಿದ್ದು ಅವರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ನೀವು ಪಟ್ಟಿ ಕೊಡಿ ಶಾಸಕರ ನೇತೃತ್ವದಲ್ಲಿ ತಾಲ್ಲೂಕಿನಲ್ಲಿ

ಒಟ್ಟಾರೆಯಾಗಿ ಎಲ್ಲಿ ಬರ ಇದೆ? ಎಲ್ಲಿ ನೀರಿನ ತೊಂದರೆ ಇದೆ? ಯಾವ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಹೇಳಿಕೆಗಳು ಬಂದಿವೆ. ಜಿಲ್ಲಾ ಪಂಚಾಯತ್ ಮೂಲಕ ಆಗುವ ಬೋರ್‌ವೆಲ್‌ಗಳಿಂದ ನೀರು ಕೊಡುವ ಕಾರ್ಯವಿರಬಹುದು, ಜಿಲ್ಲಾಧಿಕಾರಿಗಳು, ಮಾಡುವಂಥ ವ್ಯವಸ್ಥೆಯಿರಬಹುದು ನಾವು ಯಾವ ರೀತಿ ಈ ಬರ ಹಾಗೂ ನೀರಿನ ತೊಂದರೆಯನ್ನು ಅನುಭವಿಸುತ್ತಿದ್ದೇವೆ, ಮುಂಬರುವ ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ಇನ್ನಷ್ಟು ತೊಂದರೆಯನ್ನು ಅನುಭವಿಸುತ್ತಿದ್ದೇವೆ. ಇದರ ಬಗ್ಗೆ ಎಲ್ಲಾ ವಿವರಗಳನ್ನು ನೀಡಬೇಕು. ನನ್ನ ಅಂದಾಜಿನ ಪ್ರಕಾರ ಸುಮಾರು ಶೇಕಡಾ 25ರಷ್ಟು ಬೋರ್‌ವೆಲ್‌ಗಳು ಡಿಫಂಕ್ಟ್ ಆಗುತ್ತಿವೆ. ಆದ್ದರಿಂದ, ಆಯಾಯ ತಾಲ್ಲೂಕುಗಳಲ್ಲಿ ಪುನಃ 25ರಷ್ಟು ಬೋರ್‌ವೆಲ್‌ಗಳನ್ನು ಹಾಕಬೇಕಾದರೆ, ಸರ್ಕಾರ ಇದಕ್ಕೆ ಹಣ ತೊಡಗಿಸಬೇಕಾಗುತ್ತದೆ. ಇವತ್ತು ಗ್ರಾಮೀಣ ಪ್ರದೇಶದಲ್ಲಿ ಕಿರು ನೀರು ಯೋಜನೆಗಳಿಂದ, ಓವರ್ ಹೆಡ್ ಟ್ಯಾಂಕ್‌ಗಳಿಂದ, ನಲ್ಲಿ ನೀರು ಕೊಡುವಂಥ ಯೋಜನೆಗಳು ಪವರ್ ಇಲ್ಲದೇ ಇದ್ದರೆ ಸಾಕಷ್ಟು ಕಷ್ಟವಾಗುತ್ತದೆ. ಅದಕ್ಕಾಗಿ ಮಾನ್ಯ ಸಚಿವರು ಏನು ಹೇಳಬೇಕು ಎಂದರೆ, ರಾತ್ರಿ ಹೊತ್ತು ನಾವು ತ್ರೀ ಫೇಸಿನ ವಿದ್ಯುತ್ತನ್ನು ಏನು ಕೊಡುತ್ತೇವೆ ಅಂದರೆ ರಾತ್ರಿ ಹತ್ತು ಗಂಟೆಯಿಂದ ಬೆಳಿಗ್ಗೆ ಆರು ಗಂಟೆಯವರೆಗೆ ಇದರ ಉಪಯೋಗ ಕುಡಿಯುವ ನೀರಿಗೆ ಆಗುತ್ತದೆ. ಮಾನ್ಯ ಸಚಿವರಲ್ಲಿ ನಾನು ಏನು ಕೇಳುತ್ತೇನೆಂದರೆ, ನೀವು ಸಿಂಗಲ್ ಫೇಸ್ ಮಾಡುವುದರಿಂದ ಇದು ಬಹಳ ಕಷ್ಟವಾಗುತ್ತದೆ. ಲೋಡ್ ಷೆಡ್ಡಿಂಗ್, ತ್ರೀ ಫೇಸ್ ಪವರ್, ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಕೊಡುವಂಥದ್ದನ್ನು ಬದಲಿ ವ್ಯವಸ್ಥೆ ಮಾಡಿ ಕೊಡುವಂಥದ್ದರ ಬಗ್ಗೆ ತಾವು ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ಎಂಬುದರ ಬಗ್ಗೆ ನಮಗೆ ತಿಳಿಸಬೇಕಾಗುತ್ತದೆ. ಈ ಮೂರು ತಿಂಗಳುಗಳ ಕಾಲದಲ್ಲಿ ರೈತರು ವ್ಯವಸಾಯ ಮಾಡುವ ದೃಷ್ಟಿಯಿಂದ ಹೆಚ್ಚು ವಿದ್ಯುತ್ತನ್ನು ಕೊಡುವ ಕಾರ್ಯ ಆಗಬೇಕು, ಜೊತೆಗೆ ಮಾನ್ಯ ಸಚಿವರು ಇದರ ಬಗ್ಗೆ ಸದನದಲ್ಲಿ ತಿಳಿಸಬೇಕು ಎಂದು ಕೇಳುತ್ತಾ, ಇವತ್ತು ಅನೇಕ ಜಿಲ್ಲೆಗಳಲ್ಲಿ ಅದರಲ್ಲೂ ಬಳ್ಳಾರಿ ಹಾಗೂ ನಮ್ಮ ಜಿಲ್ಲೆಗಳಲ್ಲೂ ಕೂಡ ನೀರಿನ ಅಭಾವ ಇದೆ. ನಮಗೆ ಒಂದೂ ರೂಪಾಯಿ ಸಹ ಬಿಡುಗಡೆ ಆಗಿಲ್ಲ. ಈ ಬರದ ದೃಷ್ಟಿಯಿಂದ ಬರಗಾಲ ಎಂದು ಆಗಿರುವುದು, ಬರಗಾಲ ಎಂದು ಆಗಿ ಒಂದು ರೂಪಾಯಿ ಬಿಡುಗಡೆ ಆಗದೇ ಎಲ್ಲಿಯೂ ಬೋರ್‌ವೆಲ್ ಕೊರೆಯುವ ಕೆಲಸ ಆಗಿಲ್ಲ. ಸದನ ನಡೆಯುತ್ತಿರುವುದರಿಂದ ನಾವು ಇಲ್ಲಿಯೇ ಇರುತ್ತೇವೆ ಆದ್ದರಿಂದ ಈ ಬಗ್ಗೆ ಆದಷ್ಟು ಬೇಗ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಶಿಕಾರಿಪುರ, ಸೊರಬ, ಇನ್ನು ಅನೇಕ ಕಡೆ ಭೀಕರ ಬರಗಾಲ ಇದೆ, ನಾಗಮಂಗಲದಲ್ಲೂ ಬರಗಾಲ ಇದೆ ಎಂದು ಹೇಳಿದ್ದಾರೆ, ಈ ರೀತಿ ಇವತ್ತು ಅನೇಕ ಗ್ರಾಮಗಳಲ್ಲಿ ಜಲಕ್ಷಾಮ, ಮೇವಿಗೆ ಬರ, ಇಂಥ ಪರಿಸ್ಥಿತಿ ಇದೆ. ಸರ್ಕಾರ ನಾಳೆ ಬಜೆಟ್‌ನ್ನು ಮಂಡಿಸುವವರು ಇದ್ದಾರೆ, ಇಂಥ ಕಾರ್ಯಕ್ರಮಗಳಿಗೆ ಹೆಚ್ಚು ಹಣವನ್ನು ತೊಡಗಿಸಲಿ ಎಂದು ತಿಳಿಸುತ್ತಾ, ಇವತ್ತು

ಗುಟುಕು ನೀರಿಗೆ ಬೆವರು ಸುರಿಸುವ ಪರಿಸ್ಥಿತಿ ಧಾರವಾಡದಲ್ಲಿ ಆಗಿರುವಂಥದ್ದು, ನಮ್ಮ ಗಮನಕ್ಕೆ ಬಂದಿದೆ. ಮಾನ್ಯ ಬೆಲ್ಲದ್‌ರವರು ಇಲ್ಲಿಯೇ ಇದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಹೇಳಿದರು, ತಮಗೂ ಕೂಡ ಗೊತ್ತಿರುವಂತೆ ಹಾವೇರಿಯಲ್ಲೂ ಇದೇ ಪರಿಸ್ಥಿತಿಯಿರಬಹುದು. ಸುಮಾರು 15 ದಿವಸಕ್ಕೆ ಒಂದು ಸಾರಿ ನೀರು ಕೊಡದಿರುವ ಪರಿಸ್ಥಿತಿ ಅನೇಕ ಪಟ್ಟಣಗಳಲ್ಲಿ ನಾವು ಇಂದು ನೋಡುತ್ತಿದ್ದೇವೆ. ಬೆಂಗಳೂರಿನಲ್ಲೂ ಕೂಡ ಇದೇ ಪರಿಸ್ಥಿತಿಯಾಗುತ್ತದೆಂದು ನಾವು ಅಂದುಕೊಂಡಿದ್ದೇವೆ. ಏಕೆಂದರೆ ಕಾವೇರಿಯಲ್ಲೂ ಕೂಡ ಸುಮಾರು 12 ಅಡಿಗಳಷ್ಟು ನೀರು ಕಡಿಮೆಯಾಗಿದೆ ಎಂದು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ನಾವು ಇಲ್ಲಿ ಹಣ ಕೇಳಿದಾಗ ಕೇಂದ್ರ ಸರ್ಕಾರದಿಂದ ಹಣ ಬರಬೇಕು ಎಂದು ಹೇಳಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಕೇಂದ್ರ ಸರ್ಕಾರದಿಂದ ಬರುತ್ತದೆಂದು ನಾನು ಕಾದು ಕುಳಿತರೆ ಕೆಲಸ ಆಗುವುದಿಲ್ಲ. ನಮ್ಮ ಪ್ರಯತ್ನಗಳು ಹಾಗೂ ನಮ್ಮ ಸರ್ಕಾರದ ಹಣದ ಮೂಲಕ ಈ ಕೆಲಸ ಮಾಡಬೇಕು. ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೆ ಹಣದ ಕೊರತೆಯಿಲ್ಲ ಎನ್ನುವ ಹೇಳಿಕೆಯನ್ನೂ ಕೂಡ ಹೇಳಿದ್ದಾರೆ. ಡಿಸಿ ಗಳಿಗೆಲ್ಲಾ ಆದೇಶ ಕೊಟ್ಟಿದ್ದೇವೆ ಎನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ಈಗಾಗಲೇ ನಾನು ತಿಳಿಸಿದ ರೈತರ ಮೇಲೆ ಹೆರಾಸ್‌ಮೆಂಟ್ ಮಾಡಿರುವ ಆ ತೊಂದರೆಗಳನ್ನು ತಪ್ಪಿಸಬೇಕು, ಹಾಗೂ ನಾನು ಸದನದಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಮಾನ್ಯ ಸಚಿವರು ತಮ್ಮ ಹೇಳಿಕೆಯ ಮೂಲಕ ಸದನಕ್ಕೆ ತಿಳಿಸಬೇಕು ಎಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಉದಯವಾಣಿಯಲ್ಲಿ ದಿನಾಂಕ 6-3-2001ರಂದು ಮಾನ್ಯ ಮುಖ್ಯಮಂತ್ರಿಗಳು ''ನಿದ್ರಿಸುತ್ತಿದ್ದವರಿಂದ ಪಾಠ ಕಲಿಯಬೇಕಾಗಿಲ್ಲ ಕೃಷ್ಣ'' ಎನ್ನುವ ಒಂದು ಹೇಳಿಕೆ ಉದಯವಾಣಿಯಲ್ಲಿ ಬಂದಿದೆ. ನಿನ್ನೆ ದಿವಸ ಮತ್ತೊಂದು ಬಂದಿದೆ. ''ಸರಕಾರ ಗಾಢ ನಿದ್ರೆಗೆ ಮಂತ್ರಿಗಳೇ ಸಾಕ್ಷಿ'' ಎಂದು ಬಂದಿದೆ, ಅವರ ಹೆಸರು ಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಏನು ಹೇಳುತ್ತಾರೆಂದರೆ, ''ಈವರೆಗೆ ನಿದ್ರಿಸುತ್ತಿದ್ದ ಜನರಿಂದ ನಾನು ಪಾಠ ಕಲಿತುಕೊಳ್ಳಬೇಕಾಗಿಲ್ಲ. ನಿನ್ನೆ ಮೊನ್ನೆಯವರೆಗೆ ಅಧಿಕಾರ ಮಾಡಿದವರು ಈ ಸರ್ಕಾರ ರೈತರನ್ನು ಮರೆತಿದೆ ಎಂದು ಹೇಳುತ್ತಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ರಾಜ್ಯ ಸಂಪೂರ್ಣ ನಿದ್ರಿಸುತ್ತಿತ್ತು. ನಾವು ಅಧಿಕಾರಕ್ಕೆ ಬಂದ ಮೇಲೆ ಮಲಗಿದ್ದವರನ್ನು ಎಚ್ಚರಗೊಳಿಸಿದೆವು. ಹೊಸ ಅವಿಷ್ಕಾರಗಳಂತಹ ಮಾಹಿತಿ ತಂತ್ರಜ್ಞಾನ ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗಬಾರದೆಂಬ ದೃಷ್ಟಿಯಿಂದ ಈ ಸೌಲಭ್ಯ ಗ್ರಾಮಾಂತರ ಪ್ರದೇಶಕ್ಕೂ ತಲುಪಿಸಲಾಗುತ್ತಿದೆ. ಆದರೆ ಕೆಲ ಕಿಡಿಗೇಡಿಗಳು ತಪ್ಪು ಗ್ರಹಿಕೆಯಿಂದ ಇದನ್ನು ಅಪಪ್ರಚಾರ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಕೃಷ್ಣ ಕಿಡಿ ಕಾರಿದರು.'' ಇದು ಅಪ ಪ್ರಚಾರವಲ್ಲ ಪ್ರಚಾರವಾಗುತ್ತಿದೆ ಅಷ್ಟೆ. ಕಿಡಿಗೇಡಿಗಳು ಎಂದು ಯಾರನ್ನು

ಉದ್ದೇಶಿಸಿ ಈ ಮಾತು ಹೇಳಿದ್ದಾರೆ ಆ ಬಗ್ಗೆ ಚರ್ಚೆಯಾಗಬೇಕು. ಅದಕ್ಕೆ ಪತ್ರಿಕೆಯವರೇ ಯಾರು ನಿದ್ರೆ ಮಾಡುತ್ತಿದ್ದಾರೆ ಎಂದು ಬರೆದಿರುತ್ತಾರೆ. ''ಕುಡಿಯುವ ನೀರಿಗೆ ಹಣ ಸಂಪುಟದ ಒಪ್ಪಿಗೆ'' ಎಂದು ಮತ್ತೊಂದು ಬಂದಿದೆ. ''ರಾಜ್ಯದಲ್ಲಿ ಪ್ರಸಕ್ತ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಬೇಡಿಕೆ ಬಂದಾಗಲೆಲ್ಲಾ ಹಣ ಬಿಡುಗಡೆ ಮಾಡಬೇಕೆಂದು ಇಲ್ಲಿ ಸೇರಿದ ಸಚಿವ ಸಂಪುಟ ಹಣಕಾಸಿನ ಇಲಾಖೆಗೆ ನಿರ್ದೇಶನ ನೀಡಿದೆ.'' ಮತ್ತೊಂದು ಪತ್ರಿಕಾ ಹೇಳಿಕೆಯಲ್ಲಿ ''ಸಚಿವ ಸಪುಟ ಎಲ್ಲೆಲ್ಲಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದೆ'' ಎಂಬ ಬಗ್ಗೆ ದಿನಾಂಕ 6-3-2001ರಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದು ಏನೆಂದರೆ, ಬೆಂಗಳೂರು ಗ್ರಾಮಾಂತರಕ್ಕೆ ಒಂದು ಕೋಟಿ ನಲವತ್ತು ಲಕ್ಷ ರೂ.ಗಳು, ನಗರಕ್ಕೆ ಎರಡು ಕೋಟಿ, ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಕೋಟಿ ಎಂಬತ್ತು ಲಕ್ಷ ರೂ. ಎಂದು ಬಂದಿದೆ.

ಶ್ರೀ ಬಿ.ರಮಾನಾಥ ರೈ: ಆ ಫೋಟೋ ತೆಗೆದುಕೊಂಡಿರುವುದು ಹೊರಗಡೆ ಅದನ್ನು ತೆಗೆದುಕೊಂಡು ಪತ್ರಿಕೆಯಲ್ಲಿ ಏನೋ ಬರೆದಿದ್ದಾರೆ, ಅದಕ್ಕೆ ಹೀಗೆ ಹೇಳಿದರೆ ಹೇಗೆ?

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಾನು ತಮ್ಮ ಹೆಸರು ತೆಗೆದುಕೊಳ್ಳಲಿಲ್ಲ.

ಶ್ರೀ ರಮಾನಾಥ ರೈ: ಪತ್ರಿಕೆಯಲ್ಲಿ ಯಾವ ಫೋಟೋ ಇದೆ ಎಂದು ಗೊತ್ತಿದೆಯಲ್ಲವೆ?

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಾನು ಹೇಳಿದ್ದು ಏನೆಂದರೆ, ಪತ್ರಿಕೆಯಲ್ಲಿ ಬಂದ ಹೇಳಿಕೆಯನ್ನು ''ಸರಕಾರ ಗಾಢ ನಿದ್ರೆ'' ಎಂದು ಬಂದಿರುವುದನ್ನು ಓದಿ ಹೇಳಿದೆ ಅದನ್ನು ಬಿಟ್ಟರೆ ನಾನು ನಿಮ್ಮ ಹೆಸರನ್ನು ಹೇಳಲಿಲ್ಲ. ತಮ್ಮ ಮನಸ್ಸಿಗೆ ನೋವು ಮಾಡಬಾರದೆನ್ನುವ ಉದ್ದೇಶದಿಂದಲೇ ನಾನು ನಿಮ್ಮ ಹೆಸರು ತೆಗೆದುಕೊಳ್ಳಲಿಲ್ಲ.

ಶ್ರೀ ಬಿ.ರಮಾನಾಥ ರೈ: ಅಲ್ಲಿ ಫೋಟೋ ನೋಡಿಕೊಂಡು ನೀವು ಹೀಗೆ ಮಾತನಾಡಿದರೆ ಹೇಗೆ? ಆರಾಮವಿರುವ ಜಾಗದಲ್ಲಿ ಕುಳಿತು ನಿದ್ದೆ ಮಾಡಿದರೆ ಅದನ್ನು ಪೇಪರ್‌ನಲ್ಲಿ ಹಾಕುತ್ತಾರೆ ಅಂದರೆ ಏನು ಮಾಡುವುದು?

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಒಳಗೆ ನಿದ್ದೆ ಮಾಡಿರುವುದರ ಬಗ್ಗೆಯೂ ಬರೆದಿರುತ್ತಾರೆ.

ಶ್ರೀ ಬಿ.ರಮಾನಾಥ ರೈ: ನನ್ನ ಲೆಕ್ಕದಲ್ಲಿ ಇಲ್ಲಿ ಸ್ವಲ್ಪ ಹೊತ್ತು ನಿದ್ದೆ ಮಾಡದವರು ಯಾರೂ ಇಲ್ಲ.

ಶ್ರೀ ಜಯಪ್ರಕಾಶ್ ಹೆಗಡೆ: ಹೊರಗಡೆ ನಿದ್ದೆ ಮಾಡಿದ್ದಕ್ಕೆ ಯಾರೂ ಆಕ್ಷೇಪಣೆ ಮಾಡಿಲ್ಲ.

ಶ್ರೀ ಬಿ.ರಮಾನಾಥ ರೈ: ಈಗ ಇಲ್ಲಿ ಕುಳಿತಾಗ ಯಾರ್‍ಯಾರು ನಿದ್ದೆ ಮಾಡಿದರು ಎಂದು ನಾನು ಬೇಕಾದರೆ ಹೇಳುತ್ತೇನೆ. ಸುಮ್ಮನೆ ಅದನ್ನೇ ಒಂದು ದೊಡ್ಡ ವಿಷಯವನ್ನಾಗಿ ತೆಗೆದುಕೊಂಡು ಇಲ್ಲಿ ಮಾತನಾಡಿದರೆ ಹೇಗೆ?.....

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಾನು ನಿಮ್ಮ ಹೆಸರನ್ನು ತೆಗೆದುಕೊಳ್ಳಲಿಲ್ಲವಲ್ಲಾ.

ಶ್ರೀ ಅಪ್ಪಾಜಿ ಎಸ್ ನಾಡಗೌಡ: ಮಾನ್ಯ ಹೆಗಡೆಯವರೆ, ಬಹಳ ಗಹನವಾಗಿ ವಿಚಾರ ಮಾಡತಕ್ಕಂತ ಸಂದರ್ಭದಲ್ಲೂ ಕೂಡ ಕಣ್ಣು ಮುಚ್ಚಿಕೊಂಡು ನಿದ್ರಾವಸ್ಥೆಯಲ್ಲಿ ವಿಚಾರ ಮಾಡುತ್ತೇವೆ, ಹೀಗಾಗಿ ಕೆಲವರು ಆ ತರಹ ಮಾಡುತ್ತಿರುತ್ತಾರೆ, ಅದನ್ನೇ ಏಕೆ ದೊಡ್ಡದು ಮಾಡುತ್ತೀರಿ?.....

ಶ್ರೀ ಎಸ್. ಪಿ.ಮುದ್ದಹನುಮೇಗೌಡ: ಮಾನ್ಯ ಹೆಗಡೆಯವರೆ, ನಮ್ಮ ಸಚಿವರು ಒಂದು ದೊಡ್ಡತನ ಮಾಡಿದ್ದಾರೆ, ಏನೆಂದರೆ, ನಾನು ದೇಶದ ಚಿಂತೆ ಮಾಡುತ್ತಿದ್ದೆ ಎಂದು ಹೇಳಲಿಲ್ಲ, ನಿದ್ದೆ ಮಾಡುತ್ತಿದ್ದೆ ಎಂದು ಹೇಳಿದ್ದಾರೆ, ಸುಮ್ಮನೆ ತೂಕಡಿಸುತ್ತಾ ದೇಶದ ಚಿಂತೆ ಮಾಡುತ್ತೇನೆಂದು ಹೇಳಲಿಲ್ಲವಲ್ಲಾ?

ಉಪಾಧ್ಯಕ್ಷರು: ಆಯಿತು ಮಾನ್ಯ ಹೆಗಡೆಯವರೇ, ತಾವು ಮುಂದುವರೆಸಿ. ಬೇರೆ ಕಡೆ ಡೈವರ್ಷನ್ ಬೇಡ, ತಾವು ಭಾಷಣವನ್ನು ಮುಂದುವರೆಸಿ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಕುಡಿಯುವ ನೀರಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂಬ ಹೇಳಿಕೆ ಬಂದಿದೆ. ಇಲ್ಲಿಯವರೆಗೂ ಯಾವ ಜಿಲ್ಲೆಗೂ ಒಂದು ಪೈಸೆ ಹಣ ಬರಲಿಲ್ಲ, ಈಗ ಹಣ ಬರದಿದ್ದರೆ ಇನ್ನು ಯಾವಾಗ ಹಣ ಕೊಡುತ್ತದೆ ಎನ್ನುವುದು ಗೊತ್ತಾಗಬೇಕು. ಏಕೆಂದರೆ, ಕುಡಿಯಲಿಕ್ಕೆ ನೀರು ಇಲ್ಲದಿದ್ದಾಗ, ರೈತರಿಗೆ ನೀರು ಇಲ್ಲದಿದ್ದಾಗ ಈ ಒಂದು ಹಣ ಬಿಡುಗಡೆಯಾಗದೆ ಇನ್ನು ಎಷ್ಟು ಸಮಯ ಬೇಕು. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಗಳು ಬರೆದಿರುವ ಪತ್ರವನ್ನು ಉಲ್ಲೇಖ ಮಾಡಿದರು. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಪತ್ರವನ್ನು ಬರೆದು ಹಣವನ್ನು ಕೊಡಲು ತಿಳಿಸಿದ್ದಾಗಿ ಹೇಳಿದರು. ಕಳೆದ ಬಾರಿ ರಸ್ತೆಗಾಗಿ ಮಾನ್ಯ ಮುಖ್ಯ ಮಂತ್ರಿಗಳು ತಾಲ್ಲೂಕು ಪಂಚಾಯಿತಿಯ ಹಣವನ್ನು ಬಿಡುಗಡೆ ಮಾಡುವುದಕ್ಕೆ ಹೇಳಿದಾಗ ಯಾವ ತಾಲ್ಲೂಕು ಪಂಚಾಯಿತಿಯವರೂ ಹಣವನ್ನು ಕೊಡಲಿಲ್ಲ. ಪುನಃ ಇದರ ಬಗ್ಗೆ ತಾಲ್ಲೂಕು ಪಂಚಾಯತಿಗೆ ಪತ್ರವನ್ನು ಬರೆದು ಇದನ್ನು ಅವರಿಗೆ ವಹಿಸಿದರೆ ಕೊಳವೆಬಾವಿ ಅಥವಾ ಕೊರೆದಬಾವಿ ಯಾವುದೂ ಆಗುವುದಿಲ್ಲ. ಮಳೆ ಬಂದಾಗ ಮಾತ್ರ ನೀರು ಸಿಕ್ಕುವ ಪರಿಸ್ಥಿತಿ ನಿರ್ಮಾಣವಾಗಬಹುದು. ಬಾವಿ ತೋಡಲಿಕ್ಕೆ ಅಲ್ಲಿ ಪೈಪ್‌ಲೈನ್ ಹಾಕಲಿಕ್ಕೆ ಅಲ್ಲಿ ಗುತ್ತಿಗೆಗಾಗಿ ಕಾಂಪಿಟೇಶನ್. ಅಲ್ಲಿ ಇದೊಂದು ಸಮಸ್ಯೆ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯಲ್ಲಾಗುತ್ತದೆ, ಇಲ್ಲಿಯೇ ಕಾರ್ಯದರ್ಶಿಗಳು ಇದ್ದಾರೆ. ಇದರ ಬಗ್ಗೆ

ಅವರು ಗಮನ ಹರಿಸಬೇಕು. ಮೊನ್ನೆ ನಾನು ಒಂದು ಸಭೆಯಲ್ಲಿ ಅಧಿಕಾರಿಗಳಿಗೆ ಹೇಳಿದೆ, ಅವರಿಗೆ ಆಡಳಿತವನ್ನು ಮಾಡಲು ಮಾತ್ರ ಬಿಡಬೇಕು, ಅವರಿಗೆ ಗುತ್ತಿಗೆಯನ್ನು ಮಾಡಲು ಸರ್ಕಾರ ಅವರಿಗೆ ಅಧಿಕಾರವನ್ನು ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರ ಸ್ವಲ್ಪ ಗಮನಹರಿಸಬೇಕು. ಯಾವ್ಯಾವ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಯ ಸದಸ್ಯರು ಗುತ್ತಿಗೆಯನ್ನು ಮಾಡುತ್ತಿದ್ದಾರೆ ಅದರ ಬಗ್ಗೆ ಸ್ವಲ್ಪ ಗಮನವನ್ನು ಹರಿಸಿದರೆ ಕೆಲಸ ಇನ್ನೂ ಸ್ವಲ್ಪ ತ್ವರಿತವಾಗಿ ಆಗುತ್ತದೆಂದು ಕುಡಿಯುವ ನೀರಿಗಾಗಿ ಹೆಚ್ಚು ಹಣವನ್ನು ಅತೀ ಶೀಘ್ರದಲ್ಲಿ ಬಿಡುಗಡೆ ಮಾಡಬೇಕು, ನಮ್ಮ ಭಾಗದಲ್ಲಿಯ ಸದಸ್ಯರು ಅಲ್ಲದೆ ಎಲ್ಲಾ ಭಾಗದ ಸದಸ್ಯರು ಈ ವಿಷಯವನ್ನು ಮಂಡಿಸಿರುವುದರಿಂದ ಕೆಲವು ವಿಷಯಗಳನ್ನು ಮಾತ್ರ ನಾನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಭಾಗದಲ್ಲಿ ಉಪ್ಪು ನೀರಿನ ತಡೆ ಅಣೆಕಟ್ಟುಗಳನ್ನು ಕಟ್ಟಿರುತ್ತಾರೆ, ಎಲ್ಲಾ ಭಾಗಕ್ಕೂ ಅಲ್ಲಿಂದ ನೀರು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಒಂದು ಕಾರ್ಯಕ್ರಮವನ್ನು ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಹಾಕಿಕೊಂಡಿದ್ದಾರೆ. ಅದಕ್ಕೆ ಹಣವೇ ಇಲ್ಲ, ಎರಡು ವರ್ಷವಾಯಿತು ಇದಕ್ಕೆ ಬಜೆಟ್‌ನಲ್ಲಿ ಹಣವನ್ನು ಕೊಡುತ್ತಿಲ್ಲ. ಅದಕ್ಕಾಗಿ ಪಶ್ಚಿಮಾಭಿಮುಖವಾಗಿ ಹರಿಯುವಂಥ ನದಿಗಳಿಗೆ ಉಪ್ಪು ನೀರಿನ ತಡೆ ಅಣೆಕಟ್ಟುಗಳನ್ನು ಕಟ್ಟಿದರೆ ಎಲ್ಲಾ ಭಾಗಕ್ಕೂ ನೀರನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಜಲದ ಮಟ್ಟ ಮೇಲೆ ಹೋಗಿ ಬಾವಿಯಲ್ಲಿ ರೈತರಿಗೆ ಬೇಕಾದಷ್ಟು ನೀರು ಸಿಗುತ್ತದೆ. ಇವೆಲ್ಲವನ್ನೂ ಕಾರ್ಯಗತಗೊಳಿಸುವ ಕ್ರಮ ಆಗಬೇಕು. ಲಿಫ್ಟ್ ಇರಿಗೇಶನ್ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ನಮ್ಮಲ್ಲಿ ವಿದ್ಯುಚ್ಛಕ್ತಿಯ ಕೊರತೆಯಿಂದಾಗಿ ಸಣ್ಣ ನೀರಾವರಿಯ ಇಲಾಖೆಯಲ್ಲಿ ದುಡ್ಡು ಇಲ್ಲದಿರುವುದರಿಂದ ಅವರು ಕೆಪಿಟಿಸಿಎಲ್‌ಗೆ ದುಡ್ಡನ್ನು ಕಟ್ಟುವುದಿಲ್ಲ. ಕೆಪಿಟಿಸಿಎಲ್‌ನವರು ಕೊಟ್ಟಿರುವ ಲಿಫ್ಟ್ ಇರಿಗೇಶನ್ ಕನೆಕ್ಷನ್‌ನ್ನು ಕಟ್ ಮಾಡುವುದು, ಇದರಲ್ಲಿ ಯಾರ ತಪ್ಪಿಲ್ಲವೋ ಅವರಿಗೆ ಈ ಶಿಕ್ಷೆಯಾಗುತ್ತದೆ. ಜನರು ಹಣ ಕಟ್ಟದಿದ್ದರೆ ಅದನ್ನು ಡಿಸ್‌ಕನೆಕ್ಟ್ ಮಾಡಿದರೆ ನಾವು ಒಪ್ಪಬೇಕಾಗುತ್ತದೆ. ಸರ್ಕಾರ ಒಂದು ಇಲಾಖೆ ಸರ್ಕಾರ ಇನ್ನೊಂದು ಅಂಗ ಇಲಾಖೆಗೆ ಹಣವನ್ನು ಕೊಡದೇ ಇದ್ದರೆ, ವಿದ್ಯುಚ್ಛಕ್ತಿಯನ್ನು ಡಿಸ್‌ಕನೆಕ್ಟ್ ಮಾಡಿದರೆ ಆ ಸಮಸ್ಯೆ ಯಾರಿಗೆ ಆಗುತ್ತದೆ ಎನ್ನುವ ಬಗ್ಗೆ ಕೆಪಿಟಿಸಿಎಲ್‌ನವರು ಅದರ ಬಗ್ಗೆ ಅರ್ಥ ಮಾಡಿಕೊಂಡು ಸರ್ಕಾರದಿಂದ ಅವರಿಗೆ ಹಣ ಬಿಡುಗಡೆಯಾಗುವುದು ಇದ್ದರೆ ಅದನ್ನು ಕಡಿತ ಮಾಡಿಕೊಳ್ಳುವುದನ್ನು ಬಿಟ್ಟರೆ, ಅಲ್ಲಿಯ ಪವರ್ ಕನೆಕ್ಷನ್‌ನ್ನು ಡಿಸ್‌ಕನೆಕ್ಟ್ ಮಾಡಿದರೆ, ನಮ್ಮ ಭಾಗದಲ್ಲಿ ಆಗಿದೆ, ಸರ್ಕಾರ ಇದರ ಬಗ್ಗೆ ತಲೆ ತಗ್ಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರಕ್ಕೆ ನಾಚಿಕೆಯಾಗಿದ್ದರೆ ಇದನ್ನು ಮಾಡುತ್ತಿರಲಿಲ್ಲ. ಇನ್ನೊಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ, ನಾನು ಆ ಒಂದು ಸಭೆಗೆ ಹೋಗಿದ್ದೆ, ಸಕಲೇಶಪುರದಿಂದ ನೀರನ್ನು ತಿರುಗಿಸಿ ಈ ಭಾಗಕ್ಕೆ ತೆಗೆದುಕೊಂಡು ಬರಬೇಕು. ಕಳೆದ ಭಾರಿ ನಮ್ಮಲ್ಲಿ ಇದರ ಬಗ್ಗೆ ಚರ್ಚೆಯಾಗಿತ್ತು. ನಮ್ಮ ಭಾಗದಲ್ಲಿ ಸಾಕಷ್ಟು ಮಳೆ ಬಂದಿದೆ ಎಂದು ಹೇಳಿದಾಗ, ಅದಕ್ಕೆ ನಾನು ಹೇಳಿದೆ.

ನಮ್ಮ ಭಾಗದಲ್ಲಿ ಸಾಕಷ್ಟು ಮಳೆ ಬಂದರೆ ಸಾಕಾಗುವುದಿಲ್ಲ. ನಮ್ಮಲ್ಲಿ ಮಳೆಯಿಂದ ಬಂದ ಎಲ್ಲಾ ನೀರು ಸಮುದ್ರಕ್ಕೆ ಹೋಗುತ್ತದೆ. ಮಲೆನಾಡು ಭಾಗದಲ್ಲಿ ಮಳೆ ಬಂದಾಗ ನಮ್ಮ ಭಾಗದಲ್ಲಿ ವರ್ತ್ ಇರುತ್ತದೆ, ಇಲ್ಲದಿದ್ದರೆ ಖಂಡಿತವಾಗಿ ನಮ್ಮ ಭಾಗಧಲ್ಲಿ ಕುಡಿಯುವುದಕ್ಕೆ ಕೂಡ ನೀರು ಸಿಗುವುದಿಲ್ಲ. ಆ ಪರಿಸ್ಥಿತಿ ನಿರ್ಮಾ್ಣವಾಗಿದೆ. ಏಕೆಂದರೆ, ಮಳೆ ಸಾಕಷ್ಟು ಆಗಿದೆ, ಮಲೆನಾಡು ಹಾಗೂ ಘಾಟಿಯಲ್ಲಿ ಮಳೆ ಬಾರದಿರುವುದರಿಂದ ಈ ಭಾಗದ ಬಾವಿ ಹಾಗೂ ಕೊಳವೆಬಾವಿಗಳಲ್ಲಿ ನೀರು ಇಲ್ಲ. ಕೆರೆಗಳಲ್ಲಿ ಕೂಡ ನೀರು ಇಲ್ಲ. ಅದನ್ನು ತಿರುಗಿಸುವ ಪ್ರಯತ್ನವನ್ನು ಮಾಡಿದರೆ ಖಂಡಿತ ಉಡುಪಿ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ತೊಂದರೆಯಾಗುತ್ತದೆ. ಆ ಕೆಲಸವನ್ನು ಮಾಡುವಾಗ ಆ ಭಾಗಕ್ಕೆ ನೀರನ್ನು ಕೊಡಲಿಕ್ಕೆ ಯಾವ ರೀತಿಯಾಧ ವ್ಯವಸ್ಥೆ ಮಾಡುತ್ತಾರೆ. ಅದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ ಹೊರತು ನೇರವಾಗಿ ಈ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಖಂಡಿತವಾಗಿ ಅಲ್ಲಿ ಸಮಸ್ಯೆ ಇನ್ನು ಹೆಚ್ಚಿಗೆ ಉಲ್ಬಣಗೊಳ್ಳುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕುಡಿಯುವ ನೀರಿನ ಬಗ್ಗೆ ಮತ್ತು ಕೃಷಿಕರಿಗೆ ಎಷ್ಟು ಗಂಟೆಗಳ ಕಾಲ ಕೊಡುತ್ತಾರೆ ಎನ್ನುವ ಬಗ್ಗೆ, ಇದರ ಬಗ್ಗೆ ನಿನ್ನೆ ಚರ್ಚೆಯಾಯಿತು ಅದನ್ನು ನಾನು ಕೇಳುತ್ತಾ ಕುಳಿತುಕೊಂಡಿದ್ದೆ. ಮಾನ್ಯ ಸದಾನಂದಗೌಡರು ಹೇಳಿದರು, ಹಿಂದೆ ಹಗಲಿನಲ್ಲಿ 6 ಗಂಟೆಗಳ ಕಾಲ ವಿದ್ಯುಚ್ಛಕ್ತಿ ಕೊಡುತ್ತಿದ್ದರು ರಾತ್ರಿ 10 ಗಂಟೆಯಿಂದ ಬೆಳಗಿನವರೆಗೆ ವಿದ್ಯುಚ್ಛಕ್ತಿ ಕೊಡುತ್ತಿದ್ದರು. ಈಗ ಎಷ್ಟೊತ್ತಿಗೆ ವಿದ್ಯುಚ್ಛಕ್ತಿ ಬರುತ್ತದೆ, ಎಷ್ಟೊತ್ತಿಗೆ ಹೋಗುತ್ತದೆ ಯಾರಿಗೂ ಗೊತ್ತಿಲ್ಲ. ಎಷ್ಟು ಗಂಟೆಗಳ ಕಾಲ, ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ವಿದ್ಯುಚ್ಛಕ್ತಿ ಕೊಡುತ್ತಾರೆ, ಇದರ ಬಗ್ಗೆ ಹೇಳಬೇಕು. ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಒಂದು ಮಾತನ್ನು ಹೇಳಿದರು ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಎಲ್ಲಾ ಮಂತ್ರಿಗಳು ಎಂದು ಹೇಳುವುದಿಲ್ಲ, ಹೆಚ್ಚಿನ ಜಿಲ್ಲಾ ಮಂತ್ರಿಗಳು ಈ ಕುಡಿಯುವ ನೀರಿನ ಸಮಸ್ಯೆ ಉದ್ಭವವಾದಾಗ ರಿವ್ಯೂ ಮೀಟಿಂಗ್‌ನ್ನು ಮಾಡಿಲ್ಲ. ಜಿಲ್ಲಾಧಿಕಾರಿಗಳ ಕಛೇರಿಗೆ ಹಣ ಬಂದಿದೆಯೇ ಯಾವ ಭಾಗದಲ್ಲಿ ಸಮಸ್ಯೆ ಇದೆ, ಅದರ ಬಗ್ಗೆ ಚರ್ಚೆಯನ್ನು ಮಾಡಿಲ್ಲ. ನಮ್ಮ ಜಿಲ್ಲಾ ಮಂತ್ರಿಗಳು ಒಪ್ಪಿಕೊಂಡಿದ್ದಾರೆ, ನಾನು ರಿವ್ಯೂ ಮೀಟಿಂಗ್ ಮಾಡಿಲ್ಲವೆಂದು ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ವಿದ್ಯುಚ್ಛಕ್ತಿ ಬಗ್ಗೆ ಒಂದು ಉತ್ತರವನ್ನು ಹೇಳಬೇಕಾಗುತ್ತದೆ. ನಿಜವಾಗಿ ವಿದ್ಯುಚ್ಛಕ್ತಿಯ ಅಭಾವವಿದೆಯೇ, ಇದ್ದಲ್ಲಿ ಈ ಸಮಸ್ಯೆ ಏಕೆ ಉಂಟಾಯಿತು. ಈ ಮಾತಿನ ಪ್ರಶ್ನೆಯನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಉಚ್ಚನ್ಯಾಯಾಲಯದಲ್ಲಿ ನೀವು ಒಂದು ಅಫಿಡವಿಟ್ ಹಾಕಿದ್ದೀರಿ. ವಿದ್ಯುಚ್ಛಕ್ತಿಯ ಅಭಾವವಿಲ್ಲ. 2006ನೇ ಸಾಲಿಗೆ ಯಾವುದೇ ಒಂದು ಸಮಸ್ಯೆ ಉದ್ಭವವಾಗುವುದಿಲ್ಲ. ಇವತ್ತಿನವರೆಗೆ ಯಾವುದೇ ಒಂದು ಪ್ರಾಜೆಕ್ಟ್ ಪ್ರಾರಂಭವಾಗಿಲ್ಲ. ಪ್ರಾಜೆಕ್ಟ್‌ಗಳು ಎರಡು-ಮೂರು ವರ್ಷ ಪೂರ್ತಿಯಾಗುವ ಯಾವ ಪರಿಸ್ಥಿತಿಯೂ ಇಲ್ಲ. ಹಾಗಾದರೆ ನೀವು ಹೈಕೋರ್ಟಿನಲ್ಲಿ ಈ ಒಂದು ಅಫಿಡವಿಟ್‌ನ್ನು ಏತಕ್ಕಾಗಿ ಹಾಕಿದಿರಿ. ತಾವು

ಹಾಕಿದ ಅಫಿಡವಿಟ್ ಈ ರೀತಿ ಇದೆ. The Government expect that there will be no need for this quantum of power at that point of time, i.e., 2006.ಗೆ ಹೇಳುತ್ತಾರೆ. ಕೇವಲ ಹಳೆಯ ಪ್ರಾಜೆಕ್ಟ್‌ಗಳು ಬರಬಾರದು ಅದನ್ನು ನಿಲ್ಲಿಸಬೇಕು ಎನ್ನುವ ಒಂದು ಈ ಕಾರ್ಯಕ್ರಮವೇ ಅಥವಾ ನಿಜವಾಗಿಯೂ ಈ ಸಮಸ್ಯೆ ಇದೆಯೇ? ಒಂದು ವೇಳೆ ಸಮಸ್ಯೆ ಇದ್ದರೆ Does it not amount to perjury? ಏಕೆ ನೀವು ಸುಳ್ಳು ಅಫಿಡವಿಟ್ ಹೈಕೋರ್ಟಿನಲ್ಲಿ ಹಾಕಿರುವುದು? ಉತ್ತರವನ್ನು ನೀವು ಹೈಕೋರ್ಟಿನಲ್ಲಿ ಹಾಗೂ ಈ ಸದನಕ್ಕೂ ಕೊಡಬೇಕಾಗುತ್ತದೆ. ಈ ಸ್ಟೇಟ್‌ಮೆಂಟ್ ಸಲುವಾಗಿ ನೀವು ಉತ್ತರವನ್ನು ಕೊಡಬೇಕಾಗುತ್ತದೆ. ಇವತ್ತಿನ ಪತ್ರಿಕೆಯಲ್ಲಿ ಕೆಪಿಸಿಎಲ್‌ನ ಎಂಡಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ . Need for C.E.A. approval for projects questioned. Federation of Chamber of Commerce & industry. ಮೀಟಿಂಗ್‌ನಲ್ಲಿ ನಡೆದಾಗ Bellary thermal power station without clearance from Central Electricity Authority. ಇನ್ನೂ ಇವತ್ತು starting work ಎಂದು ಕೊಡುತ್ತಾರೆ. After interaction with the Federation of Karnataka Chamber of Commerce & Industry here, he told press persons that he felt CEA clearance were not needed in a deregulated era. ಹಾಗಾದರೆ ಕೆಪಿಸಿಎಲ್‌ಗೆ ಕ್ಲಿಯರೆನ್ಸ್ ಅಗತ್ಯವಿಲ್ಲದಿದ್ದರೆ ಬೇರೆ ಯಾವ ಪ್ರಾಜೆಕ್ಟ್‌ಗೂ ಕ್ಲಿಯರೆನ್ಸ್ ಅಗತ್ಯವಿರುವುದಿಲ್ಲ. ಎಲ್ಲರೂ ಪ್ರಾರಂಭ ಮಾಡಬಹುದೆಂದು ಅರ್ಥವಾಗುತ್ತದೆ. ಸರ್ಕಾರ ಮಾತ್ರ ಕಾನೂನುಬಾಹಿರವಾದ ಕೆಲಸಗಳನ್ನು ಮಾಡುವುದಕ್ಕಾಗುತ್ತದೆ. ಬೇರೆಯವರು ಮಾತ್ರ ಕಾನೂನನ್ನು ಪಾಲಿಸಬೇಕೆಂದು ಹೇಳಲು ಬರುವುದಿಲ್ಲ. ಯಾವ ಕಾನೂನು ಸರ್ಕಾರಕ್ಕೆ holds good ಎಲ್ಲರಿಗೂ holds good. ಬೇರೆಯವರಿಗೆ ಆಗುವುದಿಲ್ಲವೆಂದರೆ ಸರ್ಕಾರಕ್ಕೂ ಆಗುವುದಿಲ್ಲ. ಕೇವಲ ಸರ್ಕಾರ ವಿತ್‌ಔಟ್ ಪರ್ಮಿಷನ್ ಮಾಡಬೇಕೆಂದಾದರೆ ಬೇರೆಯವರು ಮಾಡಬಹುದೆಂದು ಅರ್ಥವನ್ನು ಕೊಡುತ್ತದೆ. ಕೇಂದ್ರದಲ್ಲಿ ಕೂಡ ರಾಜ್ಯ ಸಭೆಯಲ್ಲಿ ಮಾನ್ಯ ರೆಹಮಾನ್‌ಖಾನರವರ ಪ್ರಶ್ನೆಗೆ ಉತ್ತರವನ್ನು ಅದೇರೀತಿಯಲ್ಲಿ ಕೇಂದ್ರ ಸಚಿವರು ಕೊಟ್ಟಿದ್ದಾರೆ. Recently Mr.Rehman Khan, Rajya Sabha Member asked Union Minister Suresh Prabhu if the CEA had cleared the B.T.P.S ? ಬಳ್ಳಾರಿಯ ಬಗ್ಗೆ, ಅದರ ಬಗ್ಗೆ ಶ್ರೀ ಬಚ್ಚೇಗೌಡರು ಮಾತನಾಡಿದರು. Mr.Prabhu said, it had not. ಹಾಗಾದರೆ ಈ ಕಾರ್ಯಕ್ರಮವನ್ನು ಒಂದು ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಿ ಏಕೆ ಹಮ್ಮಿಕೊಂಡರು? ಅವರ ನಾಯಕರ ಬಗ್ಗೆ, ಅದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಫೌಂಡೇಶನ್‌ಸ್ಟೋನ್‌ನ್ನು ಹಾಕಿದ್ದಾರೆ, ಯಾವುದೇ

ಒಂದು ಕ್ಲಿಯರೆನ್ಸ್ ಇಲ್ಲದೆ ಅವರ ನಾಯಕರನ್ನು ಕರೆದುಕೊಂಡು ಬಂದು ಈ ಕೆಲಸವನ್ನು ಮಾಡಿಸಿದ್ದಾರೆ. ಪತ್ರಿಕೆಯಲ್ಲಿ ಕೆಪಿಸಿಎಲ್‌ನ ಎಂಡಿ ಯವರು ಹೇಳುತ್ತಾರೆ, ಕ್ಲಿಯರೆನ್ಸ್ ಸಿಕ್ಕಿಲ್ಲವೆಂದು, ಇದರ ಜವಾಬ್ದಾರಿ ಯಾರು? ನಾಳೆ ಸೆಂಟ್ರಲ್ ಗೌರ್ನಮೆಂಟ್‌ನವರು ಇದಕ್ಕೆ ಕ್ಲಿಯರನ್ಸ್ ಕೊಡಲಿಲ್ಲ, ಇಷ್ಟೊಂದು ಹಣ ವ್ಯಯವಾದರೆ, ಈ ಹಣಕ್ಕೆ ಯಾರು ಜವಾಬ್ದಾರರು? ಆಲಮಟ್ಟಿ ಪ್ರಾಜೆಕ್ಟ್‌ನಲ್ಲಿ ಇವರು ಮೊನ್ನೆ ದಿವಸ ಹೋಗಿ ಕ್ಲಿಯರೆನ್ಸ್ ತಂದಿದ್ದಾರೆ ಆದರೆ ಅಡ್ವಾನ್ಸ್ ಹಣ 2 1/2 ಕೋಟಿ ರೂಪಾಯಿಗಳನ್ನು ಒಂದೆರಡು ತಿಂಗಳುಗಳ ಹಿಂದೆಯೇ without any clearance ಇಲ್ಲದೆ ಕಂಟ್ರಾಕ್ಟದಾರರಿಗೆ ಕೊಟ್ಟಿದ್ದಾರೆ. ಹಾಗಾದರೆ ಸರ್ಕಾರ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ಈ ಸದನಕ್ಕೆ ಹೇಳಬೇಕಾಗುತ್ತದೆ. ಮೊನ್ನೆ ದಿವಸ ಎಂ.ಪಿ.ಗಳ ಸಭೆಯನ್ನು ಮಾಡಿದರು, ಇಂತಿಂಥ ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಿ ಕೊಡಿ ಎಂದು ಹೇಳಿದರು. ಯಾವ ಪ್ರಾಜೆಕ್ಟ್‌ಗೂ statutory stipulations ಲೇಡೌನ್ ಮಾಡಿದೆ ಅದರ ಕ್ಲಿಯರೆನ್ಸ್ ಆಗಿಯೇ ಇಲ್ಲ. ಹಾಗಾದರೆ ಎಂಪಿಗಳು ಅಲ್ಲಿಗೆ ಹೋಗಿ ಕ್ಲಿಯರೆನ್ಸ್ ಹೇಗೆ ತರಲಿಕ್ಕೆ ಸಾಧ್ಯವಾಗುತ್ತದೆ? ಎಂಪಿಸ್‌ಗೆ they were kept in dark. ಅವರಿಗೆ ಈ ವಿಷಯದ ಬಗ್ಗೆ ಮಾಹಿತಿಯನ್ನೇ ಕೊಟ್ಟಿಲ್ಲ. ಇವತ್ತು ಬಳ್ಳಾರಿಯ ಕೆಪಿಟಿಸಿಎಲ್ ಪ್ರಾಜೆಕ್ಟ್ 500 ಮೆಗಾವ್ಯಾಟ್‌ದ್ದು, ಕೆಪಿಸಿ ಆಲ್‌ಮಟ್ಟಿದು 250, ಆಲಮಟ್ಟಿದು ಮೊನ್ನೆ ದಿನ ಕ್ಲಿಯರೆನ್ಸ್ ತೆಗದುಕೊಂಡರು. ಉಳಿದಿದ್ದಕ್ಕೆ ಕ್ಲಿಯರೆನ್ಸ್ ಯಾವಾಗ ಸಿಕ್ಕುತ್ತದೆ, ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ, ಇದರ ಬಗ್ಗೆ ಸದನಕ್ಕೆ ಈ ಸರ್ಕಾರ ಹೇಳಬೇಕಾಗುತ್ತದೆ. ಒಂದು ಕಡೆ ಸರ್ಕಾರ ಹಿಂದೆ ಎಲ್ಲಾ ಸ್ಟಾಟ್ಯುಟರಿ ಕ್ಲಿಯರೆನ್ಸ್ ತೆಗೆದುಕೊಂಡು ಪ್ರಾಜೆಕ್ಟ್‌ಗಳನ್ನು ಬರುವುದಕ್ಕೆ ಬಿಡುತ್ತಿಲ್ಲ. ಇದಕ್ಕೆ ಕಾರಣವೇನು ಗೊತ್ತಿಲ್ಲ, ಇವತ್ತು ಕರ್ನಾಟಕದಲ್ಲಿ ದಿವಸಕ್ಕೆ 90,000 ಮಿಲಿಯನ್ ಯೂನಿಟ್ ಸಪ್ಲೈ ಮಾಡುವುದಕ್ಕೆ ಆಗುತ್ತಿಲ್ಲ. ಆದರೆ ಆಂಧ್ರದಲ್ಲಿ 155 ಮಿಲಿಯನ್ ಯೂನಿಟ್‌ನ್ನು ಡೈಲಿ ಸಪ್ಲೈ ಮಾಡುತ್ತಿದ್ದಾರೆ. ಈ ಹೊಸ ಪ್ರಾಜೆಕ್ಟ್‌ಗಳು ಬರದೆ ಇದ್ದರೆ ಇನ್ನು ಎರಡು ವರ್ಷಗಳ ಕಾಲ ಹೇಗೂ ಬರುವುದಿಲ್ಲ. ಈ ಕೊರತೆಯನ್ನು ಹೇಗೆ ನೀಗಿಸುವುದಕ್ಕೆ ಸಾಧ್ಯವಾಗುತ್ತದೆ? ಮತ್ತೆ ಯಾವುದೇ ಪ್ರಾಜೆಕ್ಟ್‌ಗೆ ಆಲಮಟ್ಟಿ ಸಮೇತ ಫೈನಾನ್‌ಷಿಯಲ್ ಕ್ಲೋಜರ್ ಆಗಿಲ್ಲ. ಒಂದು ವೇಳೆ ಆ ಪವರ್ ಬಂದರೂ ಸಹ ಹಿಂದಿನ ಕೊರತೆಯನ್ನು ತುಂಬುವುದಕ್ಕೆ ಸಾಧ್ಯವಿಲ್ಲ, ಅದು ಮುಂದಿನ ಬೇಡಿಕೆಗೆ ಸಾಕಾಗಬಹುದು. ಈಗಾಗಲೇ ಇರುವ ವಿದ್ಯುಚ್ಛಕ್ತಿ ಕೊರತೆಗೆ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಒಂದು ಸರಿಯಾದ ಪಾಲಿಸಿ ಮತ್ತು ನೀತಿಯನ್ನು ಮಾಡಿದೆಯಾ? ಈಗಾಗಲೇ ಕೆಲವು ಕಂಪನಿಗಳು ಎಲ್ಲವನ್ನೂ ಕ್ಲಿಯರೆನ್ಸ್ ಮಾಡಿಕೊಂಡು ಏಟ್ರಿಯಾದವರು, ಪುಲಿಕೇಶಿ, ತಣ್ಣೀರುಬಾವಿ, ನಾಗಾರ್ಜುನ ಇವರೆಲ್ಲರೂ ಕೋರ್ಟಿನ ಮೂಲಕ ಸರ್ಕಾರದ ಮೇಲೆ ಉಚ್ಚ ನ್ಯಾಯಾಲಯದವರು ಈಗಾಗಲೇ ಆದೇಶವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರದವರು ಅಪೀಲನ್ನು ಹಾಕಿದ್ದಾರೆ. That is another aspect. ಆದರೆ ಈಗಾಗಲೇ ಆಗಿರುವಂಥದ್ದು

ಇವೆರಡಕ್ಕೆ ತಣ್ಣೀರುಬಾವಿಗೆ ಹೆಚ್ಚಿನ ದರವನ್ನು ಕೊಟ್ಟು ವಿದ್ಯುಚ್ಛಕ್ತಿಯನ್ನು ಖರೀದಿ ಮಾಡುತ್ತಿದ್ದಾರೆ. ಈ ಲಿಟಿಗೇಷನ್‌ನಲ್ಲಿ ಸಮಯವನ್ನು ಕಳೆಯುವುದಕ್ಕಿಂತ ನೆಗೋಷಿಯೇಟ್ ಮಾಡಿ, ಯಾವುದೋ ಒಂದು ಕಂಪನಿಯವರ ಹತ್ತಿರ ಕಡಿಮೆ ಬೆಲೆಗೆ ಕೊಡುತ್ತೇವೆಂದು ಹೇಳಿದ್ದಾರೆ. They have written a letter to the Government. 2 ರೂಪಾಯಿ 10 ಪೈಸೆಯಲ್ಲಿ ಈಗ ಪ್ರೆಸೆಂಟ್ ರೇಟ್ 2 ರೂಪಾಯಿ 70 ಪೈಸೆ 2006ನೇ ಇಸವಿಗೆ 3 ರೂಪಾಯಿ 10 ಪೈಸೆಗೆ ಕೊಡುತ್ತೇವೆಂದು ಬರೆದು ಆಗಿದೆ. subject to clarification. ಒಂದು ವೇಳೆ ಅವರು ಕೊಡುತ್ತೇವೆಂದು ಒಪ್ಪಿದ್ದೇ ಆದರೆ ಏಕೆ ಸರ್ಕಾರ ಅವರ ಜೊತೆ ನೆಗೋಷಿಯೇಟ್ ಮಾಡುತ್ತದೆ. ಒಂದು ವೇಳೆ ನೋ ಪೇಮೆಂಟ್ ಕಮಿಟ್‌ಮೆಂಟ್ ಎಸ್ಕ್ರೋ ಕೊಡದೆ ಪ್ರಾಜೆಕ್ಟ್ ಬರಬೇಕೆಂದರೆ ಯಾವ ಪ್ರಾಜೆಕ್ಟ್ ಬರಲಿಕ್ಕೆ ಸಾಧ್ಯ. ಈಗಾಗಲೇ ಕೆಪಿಸಿಎಲ್, ಎನ್‌ಟಿಪಿಸಿ, ಪವರ್ ಟ್ರೇಡಿಂಗ್ ಕಾರ್ಪೊರೇಷನ್‌ಗೆ ಇವೆಲ್ಲವುಗಳಿಗೂ ಎಸ್ಕ್ರೋ ಕೊಡುತ್ತಿದ್ದಾರೆ. ಪೇಮೆಂಟ್‌ಗಳ ಕಮಿಟ್‌ಮೆಂಟ್ ಇದೆ, ಈಗ ಏರ್‌ಪೋರ್ಟ್ ಪ್ರಾಜೆಕ್ಟ್ ಏನು ಬರುತ್ತಿದೆ ಅದಕ್ಕೂ ಸಹ ಕೊಡುತ್ತಿದ್ದಾರೆ. ಹಾಗಾದರೆ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವಂತಹ ಹೊಸ ಹೊಸ ಕಂಪನಿಗಳು ಬಂದಾಗ ಏತಕ್ಕಾಗಿ ಕೊಡುವುದಕ್ಕೆ ಸಾಧ್ಯವಾಗಿಲ್ಲ? ರಾಜ್ಯದ ಇಡೀ ಸಮಸ್ಯೆ ವಿದ್ಯುಚ್ಛಕ್ತಿಯ ಮೇಲೆ ಹಮ್ಮಿಕೊಂಡಿದೆ, ಉಳಿದಿದ್ದೆಲ್ಲಾ ಸೆಕೆಂಡರಿ, ಪ್ರೈಮರಿ ಪ್ರಾಬ್ಲಮ್ ವಿದ್ಯುಚ್ಛಕ್ತಿ, ಉಳಿದೆಲ್ಲಾ ಪ್ರಾಬ್ಲಮ್‌ಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ನಾಗಾರ್ಜುನದವರು ಏನೊಂದು ಪ್ರಪೋಸಲ್‌ಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ Government should rethink ಈಗ ಛತ್ತೀಸ್‌ಘಡದಿಂದ ಎಷ್ಟು ತರುತ್ತಿದ್ದಾರೆ, ಈಸ್ಟರ್ನ್ ಇಂಡಿಯಾದಿಂದ ಏಷ್ಟು ಹಣ ಕೊಟ್ಟು ತರುತ್ತಿದ್ದಾರೆ. Probably, it is more than four rupees, I am not sure ಅದರ ಬಗ್ಗೆ ಸರ್ಕಾರದವರು ಹೇಳಬೇಕೆಂದು ತಿಳಿಸುತ್ತೇನೆ. ಇನ್ನು ಕೆಪಿಸಿಎಲ್‌ನ ವೆಬ್‌ಸೈಟ್‌ಗೆ ಹೋದಾಗ ನಾವು ವಿದ್ಯುಚ್ಛಕ್ತಿಯನ್ನು ಎಷ್ಟು ಉತ್ಪಾದನೆಯನ್ನು ಮಾಡಿ ಗ್ರಿಡ್‌ಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ಕೆಪಿಸಿಎಲ್‌ನ ವೆಬ್‌ಸೈಟ್‌ನಲ್ಲಿ ಏನು ಹೇಳುತ್ತದೆಂದರೆ, 98ನೇ ಇಸವಿಯಲ್ಲಿ That is the only time, ಕೆಪಿಸಿಎಲ್‌ನವರು ಪ್ರೊಡ್ಯೂಸ್ ಮಾಡಿ ಕೊಟ್ಟಿರುವಂತದ್ದು ಯಾವ ಕಾಲದಲ್ಲಿಯೂ ಕೂಡ 600 ಮೆಗಾವ್ಯಾಟ್ ಉತ್ಪಾದನೆಯನ್ನು ಮಾಡಿಲ್ಲ. ಮತ್ತೇ ಹಿಂದಿನ ಸರ್ಕಾರವಿದ್ದಾಗ 1000 ಮೆಗಾವ್ಯಾಟ್ ಆ್ಯಡ್ ಆಗಿರುವುದು. ಇವತ್ತು ಆಗಿಲ್ಲ ಇನ್ನು 2-3 ವರ್ಷಗಳ ಕಾಲ ಆಗುವುದಿಲ್ಲ. ಹೊರಗಡೆಯಿಂದ ಪರ್ಚೇಸ್ ಮಾಡುವುದನ್ನು ಬಿಟ್ಟರೆ, ಇವರೇ ಉತ್ಪಾದನೆಯನ್ನು ಮಾಡಿ ಇಲ್ಲಿಯ ಜನರಿಗೆ ಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗುವುದಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ಸರ್ಕಾರ ಯಾವ ರೀತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುಚ್ಛಕ್ತಿಯ ಸಮಸ್ಯೆ, ಈಗಾಗಲೇ ಪವರ್ ಕಂಪನಿಗಳು ಯಾವುದು

ಬರುವುದಕ್ಕೆ ಪ್ರಯತ್ನ ಮಾಡುತ್ತಿದೆ ಇವೆಲ್ಲವನ್ನೂ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ, ಈ ಬಗ್ಗೆ ಅವರಿಗೆ ಗೊತ್ತಿಲ್ಲವೆಂದು ಹೇಳುತ್ತಿಲ್ಲ, ಎಲ್ಲವೂ ಅವರಿಗೆ ಗೊತ್ತಿದೆ. ಆದರೆ ಯಾವ ಕಾರಣಕ್ಕೆ ಇದನ್ನು ಉದಾಸೀನ ಮನೋಭಾವನೆಯಿಂದ ನೋಡುತ್ತಿದ್ದಾರೆ ನನಗಂತೂ ಗೊತ್ತಿಲ್ಲ. They should take it up seriously. ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಜಾಸ್ತಿ ಮಾಡಿಲ್ಲ. ಕೊಳವೆ ಬಾವಿಗಳನ್ನು ತೋಡುತ್ತೇವೆ, ಅಲ್ಲಿ ಓವರ್‌ಹೆಡ್ ಟ್ಯಾಂಕ್‌ನ್ನು ಮಾಡುತ್ತೇವೆ ನೀರು ಹೋಗುವುದಕ್ಕೆ ವಿದ್ಯುಚ್ಛಕ್ತಿ ಇಲ್ಲ. ಲಿಫ್ಟ್‌ಇರಿಗೇಷನ್‌ನ್ನು ಮಾಡುತ್ತೇವೆ, ವಿದ್ಯುಚ್ಛಕ್ತಿ ಇಲ್ಲ. ಇವೆಲ್ಲಾ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಮಾನ್ಯ ಸರ್ಕಾರದವರು ತಕ್ಷಣ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬೆಲ್ಲದ್ ಚಂತ್ರಕಾಂತ್ ಗುರಪ್ಪ(ಧಾರವಾಡ): ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಈಗಾಗಲೇ ಅನೇಕ ಸ್ನೇಹಿತರುಗಳು ಕರ್ನಾಟಕ ರಾಜ್ಯದಲ್ಲಿಯ ಬರಗಾಲದ ಬಗ್ಗೆ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ, ವಿದ್ಯುಚ್ಛಕ್ತಿಯ ಅಭಾವದ ಬಗ್ಗೆ, ಹಾಗೂ ಕರ್ನಾಟಕ ರಾಜ್ಯದಲ್ಲಿ ಕಾಣುತ್ತಿರುವಂತಹ ಬರಗಾಲದ ಬಗ್ಗೆ ಅನೇಕ ಸ್ನೇಹಿತರುಗಳು ನಿನ್ನೆಯಿಂದ ಇವತ್ತಿನವರೆಗೆ ಮಾತನಾಡಿದ್ದಾರೆ. ಬಹುಶಃ ಕರ್ನಾಟಕ ರಾಜ್ಯದಲ್ಲಿ ಹಿಂದೆ ಈ ಸರ್ಕಾರ ಎಂದೂ ಕಾಣದಂತಹ ಬಹುಶಃ ಇವತ್ತಿನ ದಿವಸ ಅನೇಕ ಜನ ಹಿರಿಯರು ಹೇಳುತ್ತಿದ್ದಾರೆ, ಬಹುಶಃ ಇಂತಹ ಬರಗಾಲವನ್ನು ನಾವು ಎಂದೂ ಕಂಡಿರಲಿಲ್ಲ ಎನ್ನುವಂತಹ ಸ್ಥಿತಿಯಲ್ಲಿ ಕರ್ನಾಟಕದಲ್ಲಿ ಬರಗಾಲವು ಬಂದಿದೆ. ಆದರೆ ಸರ್ಕಾರ ಇದರ ಬಗ್ಗೆ ಎಷ್ಟು ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೋ ಅಥವಾ ಜನರಿಗೆ ಉದ್ಯೋಗವನ್ನು ಒದಗಿಸಿಕೊಡಬೇಕಾಗಿತ್ತೋ ಆ ದಿಸೆಯಲ್ಲಿ ಏನು ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿತ್ತು, ಅನೇಕ ದಿವಸಗಳಿಂದ ಈ ಬರಗಾಲವು ಕಾಣುತ್ತಿದೆ. ಬಹುಶಃ ಹಿಂದಿನ ಸದನದಲ್ಲಿಯೂ ಕೂಡ ಹೇಳಿದ್ದೇವೆ, ಅದರ ಹಿಂದಿನ ಸದನದಲ್ಲಿಯೂ ಕೂಡ ಪ್ರಸ್ತಾಪ ಮಾಡುತ್ತಲೇ ಬಂದಿದ್ದೇವೆ. ಸರ್ಕಾರ ಇದರ ಬಗ್ಗೆ ಸಾಕಷ್ಟು ಮುತುವರ್ಜಿಯನ್ನು ವಹಿಸಿ ಏನು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೋ, ಅವುಗಳನ್ನು ತೆಗೆದುಕೊಳ್ಳಲಿಲ್ಲವೆಂದು ಹೇಳಬೇಕಾಗುತ್ತದೆ. ಬಹುಶಃ ಬರಗಾಲ ಕೇವಲ ಒಂದು ಜಿಲ್ಲೆಗೆ ಸೀಮಿತವಾಗಿಲ್ಲ ಈ ಸಲ ಒಂದು ತಾಲ್ಲೂಕಿಗೆ ಸೀಮಿತವಾಗಿಲ್ಲ, ಇಡೀ ಕರ್ನಾಟಕದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ, ಎಲ್ಲಾ ತಾಲ್ಲೂಕುಗಳಲ್ಲಿ ಇಂತಹ ಬರಗಾಲವನ್ನು ಎಂದೂ ಕಂಡಿರಲಿಲ್ಲ. ಅಂತಹ ಬರಗಾಲವನ್ನು ಕಾಣುವುದರ ಮೂಲಕ ರೈತ ಏನು ಮುಂಗಾರು ಬೆಳೆಯನ್ನು ಪಡೆಯುತ್ತಿದ್ದ ಆ ಮುಂಗಾರು ಬೆಳೆಗಳು ಸಹ ರೈತರ ಕೈಗೆ ಸಿಗಲಿಲ್ಲ. ನಂತರ ಹಿಂಗಾರು ಬೆಳೆಯಾದರೂ ಮಳೆ ಬಂದು ಸಿಗಬಹುದು ಎಂದು ನಿರೀಕ್ಷೆ ಮಾಡಿದ್ದರೆ ಹಿಂಗಾರು ಬೆಳೆಯೂ ಸಹ ಎಲ್ಲಿಯೂ ಆಗಲಿಲ್ಲ. ಇದರಿಂದಾಗಿ ಬಹುಶಃ ಈ ಸಲದಂತಹ ಪರಿಸ್ಥಿತಿ ನಮ್ಮ ರೈತರು

ಯಾವಾಗಲೂ ಸಹ ಕಂಡಿಲ್ಲ, ಅಂತಹ ಒಂದು ದುಸ್ಥಿತಿಯನ್ನು ಇವತ್ತು ಕಂಡಿದ್ದಾನೆ. ಆತನಿಗೆ ಕೇವಲ ಬೆಳೆ ಬರಲಿಲ್ಲ ಇಂತಿಷ್ಟೆ ಅಲ್ಲಾ, ಅವನ ಮೇಲೆ ಅವಲಂಬಿತರಾದಂತಹ ಕೆಲಸ ಮಾಡುವಂತಹ ಕೂಲಿಕಾರರಿಗೆ ಇವತ್ತು ಬಹಳ ಕಠಿಣವಾದಂತಹ ಪರಿಸ್ಥಿತಿ ಇದೆ. ಇಂತಹ ಬರಗಾಲದ ಕಾಲದಲ್ಲಿ ಅನೇಕ ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಂಡು ಅವರ ಕೈಗೆ ಕೆಲಸವನ್ನು ಕೊಟ್ಟು ಅವರಿಗೆ ಕೂಲಿ ಕೊಟ್ಟು ಕೆಲಸವನ್ನು ಮಾಡಬೇಕಾಗಿತ್ತು. ಬಹುಶಃ ಯಾವಾಗ ಇಲ್ಲಿ ಬರಗಾಲದ ಒಂದು ನಿರೀಕ್ಷೆಯನ್ನು ಕಂಡ ತಕ್ಷಣ ಕೇಂದ್ರ ಸರ್ಕಾರದವರು ಸಾಕಷ್ಟು ಪ್ರಮಾಣದಲ್ಲಿ ಆಹಾರಧಾನ್ಯವನ್ನು ಅಕ್ಕಿ ಮತ್ತು ಗೋಧಿಯನ್ನು ಕರ್ನಾಟಕ ಸರ್ಕಾರಕ್ಕೆ ಕೊಟ್ಟಿತು. ಬಹುಶಃ ಆ ಹೊತ್ತಿಗೆ ಜಿಲ್ಲಾ ಆಡಳಿತದವರು ''ಕೂಲಿಗಾಗಿ ಕಾಳು'' ಎಂಬ ಕಾರ್ಯಕ್ರಮಗಳನ್ನು ತೆಗೆದುಕೊಂಡರು. ಆ ಕೆಲಸವು ಪ್ರಾರಂಭವಾಗಿ ಜನರಿಗೆ ಕೈಗೆ ಕೆಲಸ ಸಿಗುವ ಹೊತ್ತಿಗೆ ಎಲ್ಲೋ ಒಂದೆರಡು ಕಡೆ ಮಳೆ ಬಂತು ಎಂದು ಹೇಳಿ ಇದರಿಂದಾಗಿ ಬರಗಾಲವೇ ಮುಗಿದುಹೋಯಿತು, ಇನ್ನೇನು ಈ ಬರಗಾಲದ ಕಾರ್ಯಕ್ರಮ ಹಾಕಿಕೊಳ್ಳುವ ಅವಶ್ಯಕತೆ ಇಲ್ಲವೆಂದು ಹೇಳಿ ಪೂರ್ಣ ಕೆಲಸವೇ ನಿಂತು ಹೋಯಿತು. ಬಹುಶಃ ನಿಮಗೆ ಹೇಳಬೇಕೆಂದರೆ, ಧಾರವಾಡ, ಹುಬ್ಬಳ್ಳಿ, ಅಂತಹ ಮಹಾನಗರಗಳಲ್ಲಿ ಬರುವಂತಹ ಹಳ್ಳಿಗಳಲ್ಲಿ ನಾವು ಕೂಲಿಗಾಗಿ ಕಾಳು ಎಂಬ ಕಾರ್ಯಕ್ರಮದಲ್ಲಿ ಕೆಲವೊಂದು ಕಾರ್ಯಕ್ರಮವನ್ನು ತೆಗೆದುಕೊಂಡರೆ, ಒಂದೊಂದು ಗ್ರಾಮದಲ್ಲಿ ಸಾವಿರಾರು ಜನರು ಆ ಕೆಲಸಕ್ಕಾಗಿ ಬಂದು ನಿಂತಿದ್ದರು. ಅಂದರೆ ಎಷ್ಟೊಂದು ಬರಗಾಲವನ್ನು ಆ ರೈತನು ಅನುಭವಿಸುತ್ತಿದ್ದಾನೆಂದು ಕಾಣಿಸುತ್ತದೆ. ಬರೀ ಒಂದೊಂದು ಸಣ್ಣಸಣ್ಣ ಹಳ್ಳಿಯಲ್ಲಿ, ಸಾವಿರಗಟ್ಟಲೆ ಜನರು ನಮ್ಮ ಕಾಮಗಾರಿಗೆ ''ಕೂಲಿಗಾಗಿ ಕಾಳಿಗೆ'' ಕೆಲಸಕ್ಕಾಗಿ ಬಂದರು. ಇದೇ ಪ್ರಕಾರವಾಗಿ ಹಳ್ಳಿಗಳಲ್ಲಿಯೂ ಸಹಿತ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇಂತಹ ಒಂದು ಬರಗಾಲವನ್ನು ಕಂಡಿದ್ದೇವೆ. ಇಷ್ಟೇ ಅಲ್ಲ ಬಹುಶಃ ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಬೆಳಗಾಂ, ಧಾರವಾಡ, ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್ಚು ಮಳೆಯಾಗುವಂತಹ ಪ್ರದೇಶದಲ್ಲಿ ಅಲ್ಲಿ ಇವತ್ತು ನೀವು ಹೋಗಿ ನೋಡಿದರೆ ಗೊತ್ತಾಗುತ್ತದೆ.

4.20 ಪಿಎಂ

ಇವತ್ತು ಎಲ್ಲಾ ಕೆರೆಗಳೂ ಬತ್ತಿಹೋಗಿವೆ. ಎಲ್ಲಿಯೂ ದನಕರುಗಳು ಕುಡಿಯಲಿಕ್ಕೆ ಇವತ್ತು ನೀರಿಲ್ಲ. ದನಕರುಗಳಿಗೆ ಕುಡಿಯುವ ನೀರು ಅಷ್ಟೇ ಏಕೆ ಮನುಷ್ಯನಿಗೂ ಸಹಿತ ಕುಡಿಯುವ ನೀರು ಇಲ್ಲದ ಪರಿಸ್ಥಿತಿ ಬಂದಿದೆ. ದನಕರುಗಳಿಗೆ ಮೇವು ಎಲ್ಲಿಂದ ಬರುತ್ತದೆ? ಇವತ್ತು ದನಕರುಗಳಿಗೆ ಮೇವು ಸಿಗುತ್ತಿಲ್ಲ. ಸರ್ಕಾರ ಅದರ ಬಗ್ಗೆ ಕಾಳಜಿಯನ್ನು ತೆಗೆದುಕೊಂಡಿಲ್ಲ. ಬಹಳ ದೊಡ್ಡ ದೊಡ್ಡ ಕಿಮ್ಮತ್ತಿನ ದನಗಳನ್ನು ದೊಡ್ಡ ದೊಡ್ಡ ರೈತರು ಕಟುಕರಿಗೆ ಮಾರಾಟ ಮಾಡುವಂತಹ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ದನಕರುಗಳಿಗೆ ಮೇವಿಲ್ಲದೆ ಕುಡಿಯುವ ನೀರಿಲ್ಲದೆ

ಅವುಗಳನ್ನು ಸಾಕುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿಯನ್ನು ನಾವೆಂದೂ ಕಂಡಿರಲಿಲ್ಲ. ಅಷ್ಟು ದೊಡ್ಡ ಪ್ರಮಾಣದಲ್ಲಿ ರೈತ ಬರಗಾಲದ ಪರಿಸ್ಥಿತಿಯನ್ನು ದನಕರುಗಳಿಗೆ ನೀರಿಲ್ಲದೆ, ಮೇವಿಲ್ಲದೆ ರೈತ ಸಾಲಗಾರನಾಗಿ ಪರಿತಪಿಸುವುದು ದನಕರುಗಳನ್ನು ಜೋಪಾನ ಮಾಡುವುದಕ್ಕೂ ಸಾಧ್ಯವಿಲ್ಲದೆ ಕೈಗೆ ಬಂದ ರೇಟಿಗೆ ಮಾರಾಟ ಮಾಡುತ್ತಿದ್ದಾನೆ. ಒಂದು ಜೋಡಿ ಎತ್ತು 15 ರಿಂದ 20 ಸಾವಿರ ರೂಪಾಯಿ ಬೆಲೆ ಬಾಳುವಂತಹ ದನಗಳನ್ನು ಕೈಗೆ ಬಂದ ರೇಟಿಗೆ ಮಾರಾಟ ಮಾಡುವ ಪರಿಸ್ಥಿತಿಯನ್ನು ಇವತ್ತು ಕರ್ನಾಟಕ ರಾಜ್ಯದಲ್ಲಿ ಕಾಣುತ್ತಿದ್ದೇವೆ. ಇವತ್ತು ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿಲ್ಲ. ಅಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಏಕೆಂದರೆ ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ ಅಷ್ಟೇ ಅಲ್ಲ ಉತ್ತರ ಕರ್ನಾಟಕ ಭಾಗದಲ್ಲಿ ಅಷ್ಟೇ ಅಲ್ಲ, ಕರ್ನಾಟಕ ರಾಜ್ಯದ ಅನೇಕ ಭಾಗಗಳಲ್ಲಿದೆ. ರೈತರ ಮೇಲೆ ಅವಲಂಬಿತವಾದ ಕೂಲಿಕಾರ್ಮಿಕರು ಅವರಿಗೆ ಕೆಲಸವಿಲ್ಲ. ಅವರೆಲ್ಲರನ್ನೂ ಸಂರಕ್ಷಣೆ ಮಾಡುವುದಕ್ಕೆ ಬರಗಾಲ ಪರಿಸ್ಥಿತಿಯಲ್ಲಿ ಅವರಿಗೆ ಕೆಲಸವನ್ನು ಕೊಡಬೇಕಾಗುತ್ತದೆ. ಅದರ ಜೊತೆಗೆ ರೈತ ಪಡೆದಂತಹ ಸಾಲವನ್ನು ವಾಪಸ್ಸು ಮುಟ್ಟಿಸುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ಮುಂಗಾರಿ ಬೆಳೆ ಬರಲಿಲ್ಲ. ಹಿಂಗಾರಿ ಬೆಳೆ ಸಹ ಇಲ್ಲ. ಆದ್ದರಿಂದ ರೈತ ಪಡೆದಂತಹ ಸಾಲವನ್ನು ಮುಟ್ಟಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಅಕಸ್ಮಾತ್ ಮಳೆ ಬಂದು ಮುಂಗಾರಿ ಬೆಳೆ ಇಡಲಿಕ್ಕೆ ಸರ್ಕಾರ ರೈತನಿಗೆ ಏನು ವ್ಯವಸ್ಥೆ ಮಾಡುತ್ತಿದೆ ಎಂಬುದನ್ನು ಸರ್ಕಾರ ಹೇಳಬೇಕಾಗಿದೆ. ಅವರಿಗೆ ಇವತ್ತು ಮರು ಸಾಲ ಪಡೆಯುವಂತಹ ವ್ಯವಸ್ಥೆಯಾಗಿಲ್ಲ. ಪಡೆದಂತಹ ಸಾಲವನ್ನು ತೀರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಯಾವುದೇ ಬೆಳೆ ರೈತನ ಕೈಗೆ ಸಿಕ್ಕಿಲ್ಲ. ಮುಂಗಾರಿ ಬೆಳೆ ಬರುತ್ತಿತ್ತು, ಆಮೇಲೆ ಹಿಂಗಾರಿ ಬೆಳೆ ಬರುತ್ತಿತ್ತು. ಇವತ್ತು ಯಾವ ಬೆಳೆಯೂ ರೈತನ ಕೈಗೆ ಬರುತ್ತಿಲ್ಲ. ಇವತ್ತು ರೈತ ಸಾಲಗಾರನಾಗಿದ್ದಾನೆ. ಅವನನ್ನು ಹೇಗೆ ರಕ್ಷಣೆ ಮಾಡುತ್ತೀರಿ? ರೈತನಿಗೆ ಮುಂದೆ ಸಾಲ ಒದಗಿಸಿ ಕೊಡುತ್ತೀರಾ? ಇವತ್ತು ಕುಡಿಯುವ ನೀರಿನ ಸಮಸ್ಯೆ ಜಾಸ್ತಿಯಾಗಿದೆ. ಕೆರೆಗಳು ಬತ್ತಿ ಹೋಗಿವೆ. ಸರ್ಕಾರ ಜಲ ಸಂವೃದ್ಧಿ ಕಾರ್ಯವನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಕೆರೆಗಳ ಹೂಳೆತ್ತುವ ಕಾರ್ಯವನ್ನು ತೆಗೆದುಕೊಳ್ಳಬೇಕು. ಅನೇಕ ಯೋಜನೆಗಳನ್ನು ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ ಹೊರತಾಗಿ ಆ ಕಾರ್ಯವನ್ನು ನಾವು ಎಲ್ಲೂ ನೋಡಲಿಲ್ಲ. ಇವತ್ತು ಅಂತಹ ಕೆಲಸ ಮಾಡುವ ಅವಕಾಶವಿದೆ. ಕರ್ನಾಟಕ ರಾಜ್ಯದಲ್ಲಿ ಬಹುಶಃ ಸರ್ಕಾರ ಎಲ್ಲಕ್ಕಿಂತ ಮೊಟ್ಟಮೊದಲ ಆದ್ಯತೆಯನ್ನು ಕೆರೆ ಹೂಳೆತ್ತುವ ಕಾರ್ಯಕ್ರಮಕ್ಕೆ ನೀಡಬೇಕಾಗಿದೆ. ಒಂದೆರಡು ತಿಂಗಳುಗಳಲ್ಲಿ ಸಾಕಷ್ಟು ಕೆರೆ ಹೂಳೆತ್ತುವ ಕೆಲಸವನ್ನು ತೆಗೆದುಕೊಳ್ಳಬಹುದು. ಅಂತಹ ಒಂದು ಅವಕಾಶ ಸಿಕ್ಕಿದೆ. ಕೆರೆ ಹೂಳು ತೆಗೆಯುವುದಕ್ಕೆ ಹಿಂದೆ ಎಂದೂ ಅಂತಹ ಅವಕಾಶ ಸಿಕ್ಕಿರಲಿಲ್ಲ. ಎಂದೂ ಬತ್ತದ ಕೆರೆಗಳು ಇವತ್ತು ನೀರಿಲ್ಲದ ಹಾಗೆ ಆಗಿವೆ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ

ಮಾಡುತ್ತಿದ್ದೇನೆ, ಫಾರ್ಮರ್ಸ್ ಪಾರ್ಟಿಸಿಪೇಷನ್ ಮೇಲಾದರೂ ಸಹಿತ ಜೆಸಿಬಿ ಹಚ್ಚಿ ರೈತರನ್ನು ಸೇರಿಸಿಕೊಂಡು ಮಾಕ್ಸಿಮಮ್ ಕೆರೆಗಳ ಹೂಳು ತೆಗೆಯುವುದಕ್ಕೆ ಸಾಧ್ಯವಿದೆ. ಸರ್ಕಾರ ಹೂಳು ತೆಗೆಯತಕ್ಕ ಕೆಲಸವನ್ನು ತೀವ್ರವಾಗಿ ಯುದ್ಧದೋಪಾದಿಯಲ್ಲಿ ಕೈಗೊಳ್ಳಬೇಕಾದ ಅವಶ್ಯಕತೆಯಿದೆಯೆಂದು ಹೇಳುತ್ತಿದ್ದೇನೆ. ಏಕೆಂದರೆ ಇಂತಹ ಅವಕಾಶ ಹೂಳು ತೆಗೆಯುವುದಕ್ಕೆ ಯಾವಾಗಲೂ ಸಿಕ್ಕಿದ್ದಿಲ್ಲ. ಇದರಿಂದ ದೊಡ್ಡ ಲಾಭ ನಾಳೆ ಬರುವ ಮಳೆಗಾಲದಿಂದ ಅದರ ಪ್ರಯೋಜನ ನಮ್ಮ ರೈತರಿಗೆ ಸಿಗುತ್ತದೆ. ಹೂಳು ತೆಗೆಯುವುದರಿಂದ ನಾವೇನು ಕುಡಿಯುವ ನೀರಿನ ಅಭಾವವನ್ನು ಕಾಣುತ್ತಿದ್ದೇವೆ, ಈ ಅಭಾವಕ್ಕೆ ಮೂಲ ಕಾರಣ ಜಲ ಸಂಗ್ರಹ ಮಾಡದಿರುವುದು. ಮತ್ತೊಂದು ಎಷ್ಟೋ ವರ್ಷಗಳಿಂದ ಕೆರೆಗಳ ಹೂಳನ್ನು ತೆಗೆದಿಲ್ಲ. ಈಗಿರತಕ್ಕ ಎಲ್ಲಾ ಪ್ರಾಜೆಕ್ಟ್‌ಗಳಲ್ಲಿ ಸಿಲ್ಟ್ ಬಂದು ನಿಂತಿದೆ. ಅದಕ್ಕೋಸ್ಕರ ಕೆರೆಗಳ ಹೂಳು ತೆಗೆಯುವುದರಿಂದ ಕೆರೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನೀರು ನಿಂತುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿ ಮಾಡುವುದರಿಂದ ಬೋರ್‌ವೆಲ್‌ಗಳು ಏನು ಬತ್ತಿ ಹೋಗಿವೆ ಅಂತಹ ಬೋರ್‌ಗಳಲ್ಲಿ ನೀರು ಸಿಗುತ್ತದೆ. ಆದರಿಂದ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಅನುಕೂಲವಾಗುತ್ತದೆ. ಆ ಕೆಲಸವನ್ನು ತೀವ್ರವಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಹುಬ್ಬಳ್ಳಿ-ಧಾರವಾಡ ಸಮಸ್ಯೆಗಳ ಬಗ್ಗೆ ಇನ್ನೊಮ್ಮೆ ಹೇಳಬೇಕಾಗುತ್ತದೆ. ಧಾರವಾಡ-ಹುಬ್ಬಳ್ಳಿ ಬಗ್ಗೆ ನಮ್ಮ ನಾಯಕರಾದ ಜಗದೀಶ್‌ಶೆಟ್ಟರ್ ಹೇಳಿದ್ದಾರೆ. ಹುಬ್ಬಳ್ಳಿ-ಧಾರವಾಡ ಕರ್ನಾಟಕದಲ್ಲಿ ಬೆಂಗಳೂರು ನಂತರ ಎರಡನೇ ದೊಡ್ಡ ಮಹಾನಗರ. ಅಷ್ಟು ದೊಡ್ಡ ನಗರದಲ್ಲಿ 1983ರಿಂದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆ ನಡೆದಿದೆ. ಸವದತ್ತಿಯಿಂದ ಧಾರವಾಡ ನಗರಕ್ಕೆ ಬರತಕ್ಕ ನೀರಿನ ಪೈಪು ಸೋರುವ ಬಗ್ಗೆ, 1983ರಲ್ಲಿ ಪೈಪು ಹಾಕಿದ್ದಾರೆ, 1985ರಿಂದಲೇ ಆ ಪೈಪುಗಳಲ್ಲಿ ನೀರು ಸೋರಲಿಕ್ಕೆ ಶುರುವಾಯಿತು. ಪೈಪು ಹಾಕಿದ ಒಂದೆರಡು ವರ್ಷಗಳಲ್ಲಿ ನೀರು ಸೋರಿದೆ. ಅವೊತ್ತು ಮಾಡಿದ ಕಾಮಗಾರಿಯ ಬಗ್ಗೆ ನಾನು 1985ರಲ್ಲಿ ಶಾಸಕನಾಗಿದ್ದಾಗ ಹೋರಾಟ ಮಾಡಿದ್ದೇನೆ. ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಕುಳಿತು ಕುಡಿಯುವ ನೀರಿನ ಬಗ್ಗೆ ಹೋರಾಟ ಮಾಡಿದ್ದೇನೆ. ಆಗ ಅಷ್ಟು ದೊಡ್ಡ ಪ್ರಮಾಣದಲ್ಲಿ ಸೋರುತ್ತಿರಲಿಲ್ಲ. ಇವತ್ತು ಸವದತ್ತಿಯಿಂದ ಧಾರವಾಡದವರೆಗೆ ದೊಡ್ಡ ಪ್ರಮಾಣದಲ್ಲಿ ಸೋರುತ್ತಿರುವುದನ್ನು ಕಾಣುತ್ತಿದ್ದೇವೆ. ಇವತ್ತು ಸರ್ಕಾರ 40 ಕೋಟಿ ರೂಪಾಯಿಗಳನ್ನು ಕೊಟ್ಟು ಎಲ್ ಅಂಡ್ ಟಿ ಯವರು ಹೊಸ ಪೈಪುಗಳನ್ನು ಹಾಕಲಿಕ್ಕೆ ಶುರು ಮಾಡಿದ್ದಾರೆ. ಸರ್ಕಾರ ಏನು ಗ್ಯಾರಂಟಿಯನ್ನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲವೆಂದು ನಮ್ಮ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಎಲ್ ಅಂಡ್ ಟಿ ಸಂಸ್ಥೆಯವರು ಜನವರಿಗೆ ಕೆಲಸ ಮಾಡಬೇಕಾಗಿತ್ತು. ಅವರಿಗೆ ಸರ್ಕಾರ ಗ್ಯಾರಂಟಿಯನ್ನು ಕೊಡಬೇಕಾಗಿತ್ತು ಮತ್ತು ಅವರಿಗೆ ಕೊಡಬೇಕಾದ ಹಣವನ್ನು ಕೊಡಬೇಕಾಗಿತ್ತು. ಆ ಕೆಲಸ ಮಾಡಿದ್ದರೆ ಜನವರಿಯೊಳಗೆ ಅವರು ಕೆಲಸ ಮುಗಿಸುತ್ತಿದ್ದರು. ಇವತ್ತು ನಾವೇನು ಕಷ್ಟವನ್ನು ಅನುಭವಿಸುತ್ತಿದ್ದೇವೆ, 15

ದಿವಸಕ್ಕೊಮ್ಮೆ ಒಂದು ದಿನ ನೀರು ಹುಬ್ಬಳ್ಳಿ-ಧಾರವಾಡದಲ್ಲಿ ಸಿಗುತ್ತಿದೆ ಅವರು ಕೆಲಸ ಮಾಡಿದ್ದರೆ ಎಂಟು ದಿವಸಕ್ಕೊಮ್ಮೆ ನೀರು ಸಿಗುತ್ತಿತ್ತು.

ಶ್ರೀ ಸಿ.ಎಂ.ಲಿಂಗಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗಬೇಕು. ಒಂದು ವಿಚಾರವನ್ನು ಹೇಳುತ್ತೇನೆ. ಹುಬ್ಬಳ್ಳಿ-ಧಾರವಾಡ ನಗರಕ್ಕೆ ಕುಡಿಯುವ ನೀರು ಯೋಜನೆಯ ಬಗ್ಗೆ ಸರ್ಕಾರ ಗ್ಯಾರಂಟಿ ಕೊಟ್ಟಿಲ್ಲ ಎನ್ನತಕ್ಕ ವಿಚಾರವನ್ನು ವಿರೋಧಪಕ್ಷದ ನಾಯಕರು ಹೇಳಿದರು ಎನ್ನುವ ಮಾತನ್ನು ಉಲ್ಲೇಖ ಮಾಡಿ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗಾಗಲೇ ಸರ್ಕಾರ ಅದಕ್ಕೆ ಅನುಮತಿಯನ್ನು ಕೊಟ್ಟಿದ್ದು ಗ್ಯಾರಂಟಿಯನ್ನು ಕೊಟ್ಟಿದೆ. ನಮಗೆ ಹುಡ್ಕೋ ಸಾಲದ ಮೊತ್ತ ಜಮಾವಾಗುವ ಸ್ಥಿತಿಯಲ್ಲಿದೆ. ಕೆಲಸ ನಿಧಾನವಾಗುವುದಕ್ಕೆ ಬಿಟ್ಟಿಲ್ಲ. ಇತ್ತೀಚೆಗೆ ಆಗಿರತಕ್ಕ ಪ್ರಗತಿಯನ್ನು ತಾವು ನೋಡಿಲ್ಲವೆಂದು ಕಾಣುತ್ತದೆ. ಈಗಾಗಲೇ ಸ್ಟೀಲ್ ಪೈಪುಗಳನ್ನು ಹಾಕುವ ಕಾಮಗಾರಿಯನ್ನು ಬಹಳ ಶೀಘ್ರವಾಗಿ ಮಾಡಲಾಗುತ್ತಿದೆ. ಇತ್ತೀಚೆಗೆ ನಮ್ಮ ಅಧಿಕಾರಿಗಳು ಏಪ್ರಿಲ್ 31ರೊಳಗೆ ಆ ಕೆಲಸವನ್ನು ಮುಗಿಸುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಈ ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ.ಎಂ.ಹಿಂಡಸಗೇರಿ(ಕಾರ್ಮಿಕ ಮತ್ತು ವಕ್ಫ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಿನ್ನೆ ನಾನು ಆ ಮನೆಯಲ್ಲಿದ್ದೆ. ವಿರೋಧಪಕ್ಷದ ನಾಯಕರಾದ ಜಗದೀಶ್‌ಶೆಟ್ಟರ್‌ರವರು ನಮ್ಮ ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಕುಡಿಯುವ ನೀರು ಪೂರೈಕೆ ಬಗ್ಗೆ ನಿನ್ನೆ ಸವಿಸ್ತಾರವಾಗಿ ಮಾತನಾಡಿದ್ದಾರೆ. ಕೆಲವು ಆಪಾದನೆಗಳನ್ನೂ ಸಹ ಮಾಡಿದ್ದಾರೆ. ಅದು ಸತ್ಯಕ್ಕೆ ದೂರವಾದುದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಮುಂಜಾನೆ ದಿನಪತ್ರಿಕೆಯಲ್ಲಿ ನೋಡಿದೆ, ಅಲ್ಲಿ ಯಾರೂ ಹೋಗಿ ನೋಡಿಲ್ಲವೆಂದಿದ್ದಾರೆ. ನಾನು ಎರಡು ಸಲ ಹೋಗಿದ್ದೇನೆ. ದುರ್ದೈವ, ಮಾನ್ಯ ಚಂದ್ರಕಾಂತ್ ಗುರಪ್ಪ ಬೆಲ್ಲದ್‌ರವರೂ ಕೂಡ ನನ್ನ ಜೊತೆಯಲ್ಲಿ ಕೆಡಿಬಿ ಮೀಟಿಂಗ್‌ಗೆ ಬಂದಿದ್ದರು. ಮಹಾನಗರಕ್ಕೆ ಎರಡು ಮೂರು ಕಡೆಯಿಂದ ನೀರಿನ ವ್ಯವಸ್ಥೆಯಿದೆ. ನೀರಸಾಗರ, ಮತ್ತೊಂದು ಉಣಕಲ್ ಈಗ ಅಲ್ಲಿಂದ ನೀರು ತೆಗೆದುಕೊಳ್ಳುತ್ತಿಲ್ಲ. ಅದರ ನಂತರ ಮಲಪ್ರಭದಿಂದ ನೀರು ತೆಗೆದುಕೊಳ್ಳುತ್ತಿದ್ದೇವೆ. ನಮ್ಮ ಬೇಡಿಕೆಯ ಪ್ರಕಾರ ಶೇಕಡ 50ಕ್ಕಿಂತ ಹೆಚ್ಚು ನೀರು ಎಂಜಿಡಿಯಿಂದ ಬೇಕಾಗುತ್ತದೆ. ಈಗ ಬರುತ್ತಿರತಕ್ಕದ್ದು ಶೇಕಡ 15-16ರವರೆಗೆ ಎಂಜಿಡಿ ನೀರು ಬರುತ್ತಿದೆ. ಆದರೆ ದುರ್ದೈವ ನಮ್ಮ ನೀರಸಾಗರ ಬತ್ತಿಹೋಗಿದೆ. ಅದು ಏಕೆ ಹಾಗೆ ಆಗಿದೆಯೆಂದು ಗೊತ್ತಿಲ್ಲ. ತೀವ್ರಗತಿಯಲ್ಲಿ ಸರ್ಕಾರ ಅಲ್ಲಿ ಹತ್ತು ಬೋರ್‌ವೆಲ್‌ಗಳನ್ನು ಕೊರೆದು ಬೇರೆ ಅರೇಂಜ್‌ಮೆಂಟ್ ಮಾಡಿ ನೀರು ಪಡೆಯಲಿಕ್ಕೆ ವ್ಯವಸ್ಥೆ ಮಾಡುತ್ತೇವೆ. ಡೀಸಿಲ್ಟಿಂಗ್ ಸಲುವಾಗಿ ಇವತ್ತು 4 ಕೋಟಿ ರೂಪಾಯಿ ಯೋಜನೆ ಮಂಜೂರಾಗಿದೆ. ಅತಿ ತೀವ್ರವಾಗಿ ಆ ಕೆಲಸವನ್ನು ವಾಟರ್‌ಸಪ್ಲೈ ಬೋರ್ಡ್‌ನಿಂದ ಪ್ರಾರಂಭ ಮಾಡುವುದಕ್ಕೆ

ಪ್ರಯತ್ನ ಮಾಡಿದ್ದೇವೆನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ನಾನು ಮತ್ತು ಹೆಚ್.ಕೆ.ಪಾಟೀಲ್‌ರು ಹೆಚ್‌ಯುಡಿ ಸೆಕ್ರೆಟರಿಯವರು ಮತ್ತು ವಾಟರ್‌ಸಪ್ಲೈ ಬೋರ್ಡ್‌ನ ಎಂಡಿಯವರು ಮಲಪ್ರಭ ವಾಟರ್‌ಸಪ್ಲೈ ಕೆಲಸಕಾರ್ಯವನ್ನು ಹೋಗಿ ನೋಡಿದ್ದೇವೆ. ಅಲ್ಲಿಂದ ಜಾಸ್ತಿ ನೀರು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮತ್ತು ತಾವು ಹೇಳಿದಂತೆ ಆ ಪೈಪ್‌ಲೈನ್ ಏನು ಬದಲಾವಣೆ ಮಾಡುತ್ತಿದ್ದೇವೆ, ಆ ಕೆಲಸ ಬಹಳ ಜೋರಾಗಿ ನಡೆಯುತ್ತಿದೆ. ಮತ್ತು ಅದಕ್ಕೆ ಸರ್ಕಾರದಿಂದ ಏನು ಗ್ಯಾರಂಟಿಯನ್ನು ಕೊಡಬೇಕು, ಅದನ್ನು ಕೊಡಲಾಗಿದೆ. ನಾವಾಗಲೀ, ಯಾರೇ ಆಗಲಿ ನೀರಿನ ವ್ಯವಸ್ಥೆಯಲ್ಲಿ, ಬರಗಾಲದ ವಿಷಯದಲ್ಲಿ ಯಾರೂ ರಾಜಕೀಯ ಮಾಡಬಾರದು. ಅದು ಏನಾದರೂ ಇದ್ದರೆ ಸತ್ಯ ಹೇಳಬೇಕು. ನಮ್ಮನಮ್ಮಲ್ಲಿ, ಉಸ್ತುವಾರಿ ಸಚಿವರಿಗೂ, ಕಾಂಗ್ರೆಸ್‌ಪಕ್ಷಕ್ಕೂ ಒಡಕು ಇದೆಯೆಂದು ಹೇಳಿದ್ದಾರೆ. ನೀರಿಗೂ ಕಾಂಗ್ರೆಸ್‌ಪಕ್ಷಕ್ಕೂ ಏನು ಒಡಕು? ಇವರ ಒಡಕು ಜಗಜ್ಜಾಹೀರಾಗಿದೆ. ಹನ್ನೆರಡು ಎಂ.ಎಲ್.ಎ.ಗಳು ಆಚೆಕಡೆಗೆ ಹೋಗುತ್ತಾರೆ, ಹತ್ತು ಎಂ.ಎಲ್.ಎ.ಗಳು ಈಚೆಗೆ ಹೋಗುತ್ತಾರೆ ಎಂದು ಇರುವಾಗ ಅವರದ್ದನ್ನು ಹೇಳುವುದು ಬಿಟ್ಟು ನಮ್ಮ ಒಡಕಿನ ಬಗ್ಗೆ ಹೇಳುತ್ತಿದ್ದಾರೆ. ನೀರಿನ ವಿಷಯದಲ್ಲಿ ಏನು ಒಡಕು ಇರುತ್ತದೆ? ಎರಡು-ಮೂರು ತಿಂಗಳಲ್ಲಿ ಒಂದೂವರೆ ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಕೊಟ್ಟಿದ್ದೇವೆ ಮತ್ತು ಇನ್ನೂರು ಬೋರ್‌ವೆಲ್‌ಗಳನ್ನು ನಾವು ತೆಗೆಸಿದ್ದೇವೆ. ಪ್ರತಿಯೊಂದು ಡಿವಿಜನ್‌ನಲ್ಲಿ ಮಾನ್ಯ ಹಿರಿಯ ಸದಸ್ಯರು ಮೀಟಿಂಗ್‌ನಲ್ಲಿ ಹಾಜರಾಗಿದ್ದಾರೆ. ಅವರಿಗೆ ಎಲ್ಲಾ ಗೊತ್ತಿದೆ. ನಮ್ಮ ಕಡೆ ಯಾವುದೇ ಒಡಕು ಇಲ್ಲ. ನಾವು ಅದರ ಸಲುವಾಗಿ ಒಳ್ಳೆ ರೀತಿಯಿಂದ ಕೆಲಸ ಮಾಡುತ್ತಿದ್ದೇವೆ ಎಂದು ನಾನು ತಮ್ಮ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರು ನಿನ್ನೆ ಅವರು ಏನು ಹೇಳಿದ್ದಾರೆ, ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಜಗದೀಶ ಶೆಟ್ಟರ್: ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಿಂಡಸಗೇರಿಯವರು ಕೆಲವೊಂದು ಸ್ಪಷ್ಟೀಕರಣ ಮಾಡಿದರು. ಆದರೆ ನಿಜವಾಗಿ ಅಲ್ಲಿ ಏನು ನಡೆಯುತ್ತಿದೆ, ಆ ಜಿಲ್ಲೆಯಲ್ಲಿ ಏನು ನಡೆಯುತ್ತಿದೆ ಎನ್ನುವುದು ಅಲ್ಲಿನ ಜನರಿಗೆ ಗೊತ್ತಿರುತ್ತದೆ. ಅದನ್ನು ಏನೆಂದು ನಾನು ಹೇಳುವುದಿಲ್ಲ. ಆದರೆ.......

ಶ್ರೀ ಎ.ಎಂ.ಹಿಂಡಸಗೇರಿ: ಮಾನ್ಯ ಉಪಾಧ್ಯಕ್ಷರೇ, ರಾಜಕೀಯ ಎಲ್ಲಿ ಇಲ್ಲ? ಎಲ್ಲಾ ಕಡೆ ರಾಜಕೀಯ ಇದೆ.

ಶ್ರೀ ಜಗದೀಶ ಶೆಟ್ಟರ್: ಅವರು ಮಾತನಾಡುವಾಗ ನಾನು ಸುಮ್ಮನೆ ಇದ್ದೆ. ನಾನೇನೂ ಅಡ್ಡಿ ಮಾಡಲಿಲ್ಲ. ನನಗೆ ಹೇಳುವುದಕ್ಕೆ ಹಕ್ಕಿದೆ, ನಾನು ಮಾತನಾಡುತ್ತೇನೆ. ನಮ್ಮ ಪಕ್ಷದಲ್ಲಿ ಯಾವುದೂ ಒಡಕಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿ ಇದ್ದೇವೆ. ತಮ್ಮ ತಲೆಯಿಂದ ಇದನ್ನು ತೆಗೆದುಬಿಡಿ. ನಿಮ್ಮಲ್ಲಿ ಏನಾಗಿದೆ ಎಂದರೆ.....

ಶ್ರೀ ಎ.ಎಂ.ಹಿಂಡಸಗೇರಿ: ಅವರೂ ಸಹ ಎರಡು ತಿಂಗಳಿಂದ ಮೀಟಿಂಗ್ ಮಾಡಿದರು. ಏಕೆಂದರೆ ಮುಂಜಾಗ್ರತಾಕ್ರಮ ಸಲುವಾಗಿ ಈ ಜಿಲ್ಲೆಯಲ್ಲಿ ಈ ಮಹಾನಗರದಲ್ಲಿ ನೀರಿನ ಅಭಾವ ಬರುತ್ತದೆ, ಎಂದು ಎಲ್ಲರೂ ಕೂಡಿ ಮೀಟಿಂಗ್ ಮಾಡಿದ್ದಾರೆ. ಇದರಲ್ಲಿ ಯಾವುದೇ ರಾಜಕೀಯ, ಬೇರೆ ಯಾವ ಸಂಬಂಧವೂ ಇಲ್ಲ. ಈ ನೀರಿನ ಸಮಸ್ಯೆ ವಿಚಾರದಲ್ಲಿ ನಾವೆಲ್ಲರೂ ಪಕ್ಷಾತೀತವಾಗಿ ಕೆಲಸ ಮಾಡಬೇಕಾಗಿದೆ. ಅವರ ಪಕ್ಷದಲ್ಲಿ ಎಷ್ಟು ಒಗ್ಗಟ್ಟು ಇದೆ ಅದು ಜಗಜ್ಜಾಹೀರಾಗಿದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೇ, ಇವತ್ತು ಏನಾಗಿದೆ ಎಂದರೆ, ಹುಬ್ಬಳ್ಳಿ-ಧಾರವಾಡದಲ್ಲಿ ಇವತ್ತು ಒಬ್ಬರು ಜಿಲ್ಲೆ ಉಸ್ತುವಾರಿ ಸಚಿವರು ಇದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ತಮ್ಮದು ಮುಗಿದಮೇಲೆ ನಾನು ಹೇಳುತ್ತೇನೆ. ನಾನು ಏನು ಹೇಳುತ್ತೇನೆ, ಅದನ್ನು ಫೇಸ್ ಮಾಡುವುದಕ್ಕೆ ನಿಮಗೆ ಧೈರ್ಯ ಇಲ್ಲ. ಇವತ್ತು ಏನಾಗಿದೆ 'ಎಂದರೆ, ಹುಬ್ಬಳ್ಳಿ-ಧಾರವಾಡದಲ್ಲಿ ಹದಿನೈದು ದಿವಸಕ್ಕೊಮ್ಮೆ ನೀರು ಕೊಡುತ್ತಾರೆ. ಇಂತಹ ಪರಿಸ್ಥಿತಿ ಅಲ್ಲಿ ಬಂದಿದೆ. ಇವತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಹಿಂಡಸಗೇರಿಯವರು ಇಲ್ಲೇ ಇದ್ದಾರೆ. ಇವತ್ತು ಹೆಚ್.ಕೆ.ಪಾಟೀಲರು ಕ್ಯಾಬಿನೆಟ್‌ನಲ್ಲಿ ಪ್ರಭಾವಿ ಸಚಿವರು, ಎಂ.ಎಲ್.ಸಿ.ಯಾಗಿ ಈ ಕ್ಷೇತ್ರವನ್ನು ಅವರು ಪ್ರನಿಧಿಸುವವರು. ನಾನು ಏಕೆ ನಿನ್ನೆದಿವಸ ಹೇಳಿದೆ ಎಂದರೆ, ಹೆಚ್.ಕೆ.ಪಾಟೀಲರು, ಹಿಂಡಸಗೇರಿಯವರು ಮೊನ್ನೆ ಅಲ್ಲಿಗೆ ಹೋಗಿದ್ದಾರೆ. ಮಾನ್ಯ ಹೆಚ್.ಕೆ.ಪಾಟೀಲರು ಅಲ್ಲಿಂದ ಆರಿಸಿಬಂದವರು, ನೀರಿನ ಬಗ್ಗೆ ಹಾಹಾಕಾರವಾಗಿ ಮೂರು ತಿಂಗಳಿಂದ ಜನರು ಏನು ಒದ್ದಾಡುತ್ತಿದ್ದಾರೆ, ಅವರಿಗೆ ಇದು ಗೊತ್ತಿದೆ. ಇವತ್ತು ಎಲ್ಲಾ ಸೇರಿ ಕೆಲಸ ಮಾಡುತ್ತಿದ್ದಾರೆ. ಪೈಪ್ ರಿಪ್ಲೇಸ್‌ಮೆಂಟ್‌ಗೆ ಹುಡ್ಕೊ ಲೋನ್ ಸಲುವಾಗಿ ಗ್ಯಾರಂಟಿಯನ್ನು ಯಾವಾಗ ಕೊಟ್ಟರು? ಬಹುಶಃ ಯಾವ ಕಾಲದಲ್ಲಿ ಕೊಡಬೇಕಾಗಿತ್ತೋ ಆಗ ಕೊಟ್ಟಿದ್ದರೆ ಜನವರಿಯೊಳಗೇ ಕೆಲಸ ಮುಗಿಯುತ್ತಿತ್ತು. ಹಾಗೆ ಮಾಡಿದ್ದರೆ ಇವತ್ತು ಇಂತಹ ಪರಿಸ್ಥಿತಿ ನಿರ್ಮಾಣವಾಗಿ ಹದಿನೈದು ದಿವಸಕ್ಕೊಮ್ಮೆ ನೀರು ಕೊಡುವ ಪರಿಸ್ಥಿತಿ ಉದ್ಭವ ಆಗುತ್ತಿರಲಿಲ್ಲ. ಇವರು ಯಾವಾಗ ಗ್ಯಾರಂಟಿ ಕೊಟ್ಟರು ಎಂದರೆ ಒಂದು ವಾರದ ಹಿಂದೆ.

ಉಪಾಧ್ಯಕ್ಷರು: ಕೊಟ್ಟಿಲ್ಲವೆಂದು ಹೇಳುತ್ತಿದ್ದಿರಿ. ಆದರೆ ಈಗ ಕೊಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ನಾಲ್ಕು ದಿವಸದ ಹಿಂದೆ ಕೊಟ್ಟಿದ್ದಾರೆ. ಆದರೂ ಸಹಿತ ಇದರ ಬಗ್ಗೆ ಸ್ಪಷ್ಟತೆ ಇಲ್ಲ. ಈಗ ಹೇಳುತ್ತಿದ್ದಾರೆ ಮತ್ತು ನಾವು ನಂಬಬೇಕಾಗುತ್ತದೆ. ಮೂರು-ನಾಲ್ಕು ತಿಂಗಳ ಹಿಂದೆ ಗ್ಯಾರಂಟಿಯನ್ನು ಕೊಟ್ಟಿದ್ದರೆ ಹೇಗಿರುತ್ತಿತ್ತು? ಕುಡಿಯುವ ನೀರಿನ ಸಲುವಾಗಿ ನಾವೇನೂ ರಾಜಕೀಯ ಮಾಡುತ್ತಿಲ್ಲ. ರಾಜಕೀಯ

ಎಲ್ಲಿದೆ ಎಂದರೆ ಅಲ್ಲಿ ಇವತ್ತು ಎರಡು ಗುಂಪುಗಳಿವೆ. ಇದನ್ನು ಓಪನ್ ಆಗಿ ಹೇಳುತ್ತಿದ್ದೇನೆ, ಆಪಾದನೆ ಮಾಡುತ್ತಿದ್ದೇನೆ. ಶಾಸಕರದ್ದು ಒಂದು ಗುಂಪು ಮತ್ತು ಮಂತ್ರಿಗಳದ್ದು ಒಂದು ಗುಂಪು. ಈ ಎರಡು ಗುಂಪುಗಳಿವೆ. ನಾನು ಡೈರೆಕ್ಟ್ ಆಗಿ ಆಪಾದನೆ ಮಾಡುತ್ತಿದ್ದೇನೆ. ಈ ಶಾಸಕರ ಗುಂಪು ಏನಿದೆ, ಅವರು ಯಾವುದೇ ಕೆಲಸ ಮಾಡಬಾರದು ಎಂದು ಸಚಿವರ ಗುಂಪು ಅಡ್ಡಗಾಲು ಹಾಕುತ್ತಿದೆ, ಹೀಗಾಗಿ ಇಲ್ಲೇ ತೊಂದರೆ ಇರುವುದು. ಇವತ್ತು........

ಶ್ರೀ ಬಿ.ಎನ್.ಬಚ್ಚೇಗೌಡ: ತಂದೆ-ತಾಯಿ ಇಬ್ಬರ ಜಗಳದಲ್ಲಿ ಕೂಸು ಬಡವಾಯಿತು.

ಶ್ರೀ ಜಗದೀಶ ಶೆಟ್ಟರ್: ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಎಲ್ಲಿ ಬೇಕಾದರೂ ಬಂದು ಹೇಳುವುದಕ್ಕೆ ನಾನು ತಯಾರಿದ್ದೇನೆ. ಏಕೆಂದರೆ ಈ ಒಂದು ಒಳಜಗಳದಲ್ಲಿ ಮಹಾಜನತೆ ಪರಿತಪಿಸುತ್ತಿದೆ. ಯಾವ ಕೆಲಸ ತಕ್ಷಣ ಆಗಬೇಕು, ಆದ್ಯತೆ ಮೇಲೆ ಯಾವ ಕೆಲಸ ಆಗಬೇಕು ಅದು ಅವರ ಜಗಳದಿಂದ ಆಗುತ್ತಿಲ್ಲ. ಇಂತಹ ವ್ಯವಸ್ಥೆ ಬೇರೆ ಯಾವ ನಗರದಲ್ಲೂ ಇಲ್ಲ. ಹದಿನೈದು ದಿವಸಗಳಿಗೊಮ್ಮೆ ನೀರು ಸಿಗುತ್ತದೆ ಎಂದರೆ ಜನರು ಏನು ಮಾಡಬೇಕು? ಇವತ್ತು ಮಾನ್ಯ ಹೆಚ್.ಕೆ.ಪಾಟೀಲರು ಬಂದು ಮಾರ್ಚ್ 31ರಿಂದ ಐದು ದಿವಸಕ್ಕೊಮ್ಮೆ ನೀರು ಕೊಡುತ್ತೇವೆ ಎಂದು ಹೇಳಿದರು. ನಾನು ಚಾಲೆಂಜ್ ಮಾಡುತ್ತೇನೆ ಏನೆಂದರೆ ನೀವು ಹಾಗೆ ನೀರು ಕೊಟ್ಟರೆ ನೀವು ಏನು ಹೇಳಿದರೂ ಕೇಳುವುದಕ್ಕೆ ನಾವು ತಯಾರಿದ್ದೇವೆ. ಈಗೇನು ಹದಿನೈದು ದಿವಸಗಳಿಗೊಮ್ಮೆ ನೀರು ಸಿಗುತ್ತದೆ, ಅದನ್ನು ಐದು ದಿವಸಕ್ಕೊಮ್ಮೆ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಈಗ ಗ್ಯಾರಂಟಿಯನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಹಾಗಾದರೆ ಸಮರೋಪಾದಿಯಲ್ಲಿ ಕೆಲಸ ನಡೆಯುತ್ತಿದೆಯಾ? ಇಲ್ಲ. ನೀರಸಾಗರ್ ಮೊದಲನೇ ಸಲ ಬತ್ತಿಹೋಗಿದೆ. ನಾನು ಒಪ್ಪಿಕೊಳ್ಳುತ್ತೇನೆ, ಇದು ಎರಡು ತಿಂಗಳಿಂದ ಬತ್ತಿಹೋಗಿದೆ. ಇವರೇನು ಡಿಸಿಲ್ಟಿಂಗ್ ಸಲುವಾಗಿ ಮಂಜೂರು ಮಾಡುವುದಕ್ಕೆ ನಾಲ್ಕು ಕೋಟಿ ರೂಪಾಯಿಗೆ ಪ್ರಪೋಸಲ್‌ನ್ನು ಕಳುಹಿಸಿದ್ದಾರೆ, ಇದೇನು ದೊಡ್ಡದಾ? ಹತ್ತು ಲಕ್ಷ ಜನಸಂಖ್ಯೆ ಇರುವಂಥ ಹುಬ್ಬಳ್ಳಿ-ಧಾರವಾಡಕ್ಕೆ ಒಂದು ಕೆರೆಯ ಹೂಳು ತೆಗೆಯುವ ಸಲುವಾಗಿ ನಿಮಗೆ ಇನ್ನೂ ಮಂಜೂರು ಮಾಡುವುದಕ್ಕೆ ಆಗುತ್ತಿಲ್ಲ. ಅದು ಇನ್ನೂ ಪ್ರಪೋಸಲ್ ಇದೆ, ಪೆಂಡಿಂಗ್ ಇದೆ. ಜನರ ಸಲುವಾಗಿ, ಕುಡಿಯುವ ನೀರಿನ ಸಲುವಾಗಿ ನಿಮಗೆ ಏನೂ ಬೇಡ. ನಾವೇನೂ ರಸ್ತೆ ಕೇಳುತ್ತಿಲ್ಲ, ಮೂಲಭೂತ ಸೌಕರ್ಯ ಕೇಳುತ್ತಿಲ್ಲ ಕುಡಿಯುವ ನೀರನ್ನು ಮಾತ್ರ ನಾವು ಕೇಳುತ್ತಿದ್ದೇವೆ. ನಿಮಗೆ ಇದನ್ನೂ ಕೂಡ ಕೊಡುವುದಕ್ಕೆ ಆಗುತ್ತಿಲ್ಲ. ಒಳಜಗಳದಿಂದ, ಗುಂಪುಗಾರಿಕೆಯಿಂದ ತೊಂದರೆಯಾಗುತ್ತಿದೆ......

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಸರಿಪಡಿಸಿಕೊಂಡು ಆಮೇಲೆ ಇನ್ನೊಬ್ಬರಿಗೆ

ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಅದು ನಿಮ್ಮಲ್ಲೇ ಇರುವಂಥಾದ್ದು. ಈ ರೀತಿಯ ಒಳಜಗಳದಿಂದ ಜನರಿಗೆ ತೊಂದರೆಯಾಗುತ್ತಿದೆ ಎಂದು ನಾನು ಹೇಳುತ್ತಿದ್ದೇನೆ. ಆಮೇಲೆ ಕಾರ್ಪೊರೇಷನ್‌ನವರು ರೆಸಲ್ಯೂಷನ್ ಮಾಡಿದ್ದಾರೆ. ವಾಟರ್ ಬೋರ್ಡ್‌ನವರು ನೀರು ಸಂಗ್ರಹ ಮಾಡುವಂಥಾದ್ದು ಮತ್ತು ನೀರು ಸರಬರಾಜು ಮಾಡುವಂಥಾದ್ದು ಕಾರ್ಪೊರೇಷನ್‌ನವರು ಎಂದು ನಿರ್ಣಯ ಆಗಿದೆ. ಆದರೆ ಇವರಲ್ಲಿ ಹೊಂದಾಣಿಕೆ ಇಲ್ಲ. ಇದರ ಬಗ್ಗೆ ಒಂದು ವರ್ಷದಿಂದಲೂ ಹೇಳುತ್ತಿದ್ದೇವೆ. ಏನಾದರೂ ತೀರ್ಮಾನವನ್ನು ನೀವು ತೆಗೆದುಕೊಂಡಿದ್ದೀರಾ? ಇಲ್ಲಿಯವರೆಗೂ ನಿಮ್ಮಿಂದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಅಲ್ಲಿ ಸರಿಯಾದ ಮ್ಯಾನೇಜ್‌ಮೆಂಟ್ ಇಲ್ಲ. ಕಾರ್ಪೊರೇಷನ್‌ನಲ್ಲಿ ರೆಸಲ್ಯೂಷನ್ ಮಾಡಿದ್ದಾರೆ, ನಿಮಗಿನ್ನೂ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇವತ್ತು ಕೆರೆಹೂಳು ತೆಗೆಯುವ ಸಲುವಾಗಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು ಹೇಳಿ. ಮಾನ್ಯ ಸಿ.ಎಂ.ಲಿಂಗಪ್ಪನವರು ಒಂದು ಪ್ರೆಸ್‌ಸ್ಟೇಟ್‌ಮೆಂಟ್ ಕೊಟ್ಟು ನಾಲ್ಕು ಕೋಟಿ ರೂ. ಮಂಜೂರು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದು ನಿಜವೇ ಎಂಬುದನ್ನು ಸಚಿವರು ಹೇಳಬೇಕು. ಏಕೆಂದರೆ ಇದನ್ನು ನಾವು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ಉತ್ತರ ಕೊಡಲಿಕ್ಕೆ ನಾವು ತಯಾರಾಗಿ ನಿಂತಿದ್ದೇವೆ. ಆದರೆ ಮಧ್ಯದಲ್ಲಿ ಇದು ಪ್ರಾರಂಭವಾಯಿತು. ಈಗ ತಮಗೂ ಗೊತ್ತಿದೆ. ಏಕೆಂದರೆ ನಾಳೆ ಸರ್ಕಾರ ಏನೂ ಮಾಡಲಿಲ್ಲ, ಹುಬ್ಬಳ್ಳಿ-ಧಾರವಾಡ ಬಗ್ಗೆ ವಿರೋಧಪಕ್ಷದವರೆಲ್ಲರೂ, ನಾಯಕರುಗಳು ಹೇಳಿದರೂ ಕೂಡ ಸರ್ಕಾರ ಗಮನಕ್ಕೆ ತೆಗೆದುಕೊಂಡಿಲ್ಲ ಅಥವಾ ಅಲ್ಲಿ ಜನರ ಬಗ್ಗೆ ಕಾಳಜಿಯೇ ಇಲ್ಲ ಎನ್ನತಕ್ಕಂಥ ಅಭಿಪ್ರಾಯ ಮೂಡಬಾರದು. ತಮಗೆ ಗೊತ್ತಿದ್ದಹಾಗೆ ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದಂಥ ಈ ಪ್ರಾಜೆಕ್ಟ್‌ಗೆ 43 ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿ, ಈಗಾಗಲೇ ಡಿಸಿಲ್ಟಿಂಗ್ ಎಂದು ಹೇಳಿ ನಾಲ್ಕು ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿದ್ದೇವೆ. ಅದು ಆಗಿದೆ, ಸ್ಯಾಂಕ್ಷನ್ ಆಗಿದೆ. ಪೈಪ್‌ಲೈನ್ ಚೇಂಜ್ ಮಾಡುವುದಕ್ಕೆ ಏನು ಹಳೆಯದು ಉತ್ತಮವಾದದ್ದು ಪೈಪ್‌ಲೈನ್‌ನ್ನು ಹಾಕಿದ್ದರಲ್ಲಾ, ಅದನ್ನು ರಿಪ್ಲೇಸ್ ಮಾಡುವುದಕ್ಕೆ 43 ಕೋಟಿ ರೂಪಾಯಿಗಳ ಗ್ಯಾರಂಟಿಯನ್ನು ಕೊಟ್ಟಿದ್ದೇವೆ. ಅದು ತಮ್ಮ ಕಾಲದಲ್ಲಿ ಇರಬಹುದು, ಇನ್ನೊಬ್ಬರ ಕಾಲದಲ್ಲಿ ಇರಬಹುದು. ಆದರೆ ಒಂದು ಕೋಟಿ ರೂಪಾಯಿ ಬರೇ ಬೋರ್‌ವೆಲ್ ರಿಪೇರಿಗೆ ಹಾಗೂ ಟ್ರಾನ್ಸ್‌ಪೋರ್ಟೇಶನ್ ಆಫ್ ವಾಟರ್ ರಿಲೀಸ್ ಮಾಡಿದ್ದೇವೆ. ಹಣ ಬಿಡುಗಡೆಯಾಗಿದೆ. ಡಿಸಿಲ್ಟಿಂಗ್‌ಗೆ ನಾಲ್ಕು ಕೋಟಿ ರಿಲೀಸ್ ಮಾಡಲಾಗಿದೆ. ಇನ್ನೂ ಸರ್ಕಾರ ಏನೂ ಮಾಡಿಲ್ಲ, ಜಗಳ ಮಾಡುತ್ತಿದ್ದಾರೆ ಎಂದು

ಹೇಳಿದರೆ ಏನರ್ಥ?

ಶ್ರೀ ಜಗದೀಶ್ ಶೆಟ್ಟರ್: ಈ ಕೆಲಸ ಜನವರಿಯೊಳಗೆ ಮುಗಿಯಬೇಕಾಗಿತ್ತು. ಒಂದು ವರ್ಷದ ನಂತರ ಆದರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಯಾವಾಗ ಸಂಕಟ ಇರುತ್ತದೆ, ತೊಂದರೆ ಇರುತ್ತದೆ ಆಗ ಸ್ಕೇರ್‌ಸಿಟಿ ಅಮೌಂಟ್ ರಿಲೀಸ್ ಆಗುತ್ತದೆ. ಸ್ಕೇರ್‌ಸಿಟಿ ಅಮೌಂಟ್ ಅಥವಾ ನ್ಯಾಚರಲ್ ಕೆಲಾಮಿಟಿ ಅಮೌಂಟ್‌ನ್ನು ಯಾವಾಗ ಬೇಕಾದರೂ ರಿಲೀಸ್ ಮಾಡುತ್ತಾರಾ? ಪ್ರಾಜೆಕ್ಟ್‌ಗೆ ಏನು ಬೇಕು, ಅದಕ್ಕೆ ವಿಳಂಬ ಆಗಿದ್ದರೆ ಒಪ್ಪಿಕೊಳ್ಳುತ್ತೇವೆ. ಅದಕ್ಕೆ ಪ್ರಯತ್ನ ಹಿಂದಿನಿಂದ ನಡೆದಿದೆ. ಅದರ ಬಗ್ಗೆ ತಾವೆಲ್ಲರೂ ಮೀಟಿಂಗ್ ಮಾಡಿ, ಮುಖ್ಯಮಂತ್ರಿಗಳನ್ನು ಭೇಟಿಯಾದ ಮೇಲೆ, ಸಚಿವರು, ವಿರೋಧಪಕ್ಷದ ನಾಯಕರು ಎಲ್ಲರೂ ಕೂಡಿ ಮಾತುಕತೆ ನಡೆಸಿದ ಮೇಲೆ ಅದಕ್ಕೆ ವಿಶೇಷವಾದಂಥ ಅನುಮತಿಯನ್ನು ಕೊಟ್ಟು, ಗ್ಯಾರಂಟಿಯನ್ನು ಕೊಟ್ಟು, ಇವತ್ತು ಅದನ್ನು ಬಿಡುಗಡೆ ಮಾಡುವುದಕ್ಕೆ ಒಪ್ಪಿಕೊಂಡಿದ್ದೇವೆ. ನಾಲ್ಕು ಕೋಟಿ ರೂಪಾಯಿ ಈಗಾಗಲೇ ಮಂಜೂರಾಗಿದೆ. ಈಗಾಗಲೇ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಅಂಡ್ ಸೀವರೇಜ್ ಬೋರ್ಡ್‌ಗೆ ಕೇಳಿದ್ದಾರೆ, ಒಂದು ಕೋಟಿ ರೂಪಾಯಿಗಳನ್ನು ರಿಪೇರಿಗೆ ಕೂಡ ಬಿಡುಗಡೆ ಮಾಡಿದ್ದಾರೆ. ಆ ಕೆಲಸವನ್ನೂ ಕೂಡ ತ್ವರಿತಗತಿಯಿಂದ ಮಾಡಬೇಕೆಂದು ಹೇಳಿದ್ದಾರೆ. ಆ ಕೆಲಸವೂ ನಡೆಯುತ್ತಿದೆ. Because of this problem ಪೈಪ್‌ಲೈನ್‌ನಿಂದ ಬರತಕ್ಕ ನೀರು 15 ದಿವಸಕ್ಕೆ ಒಮ್ಮೆ ಬರುತ್ತಿದೆ. ತಮಗೆ ಗೊತ್ತಿರುವ ಹಾಗೆ ಸುಮಾರು 4-5 ಎಂ.ಜಿ.ಡಿ. ನೀರು ಪೈಪ್ ಲೈನ್‌ನಲ್ಲಿ ಸೋರಿ ಹೋಗುತ್ತಿದೆ. ಅದನ್ನು ರಿಪೇರಿ ಮಾಡುವುದಕ್ಕೋಸ್ಕರ ಇಷ್ಟು ಹಣವನ್ನು ಖರ್ಚು ಮಾಡಿದರೂ ತಾವು ಶಹಬಾಸ್‌ಗಿರಿಯನ್ನು ಕೊಡಬೇಕಿತ್ತು. ಅದಕ್ಕೆ ಆಲ್ಟರ್‌ನೇಟೀವ್ ವ್ಯವಸ್ಥೆಯಾದ ಬೋರ್‌ವೆಲ್‌ಗಳನ್ನು ಸರ್ಕಾರ ಮಾಡಿಲ್ಲವೇ? ಬೋರ್‌ವೆಲ್‌ಗಳ ರಿಪೇರಿ ಮಾಡುತ್ತಿಲ್ಲವೇ? ಓಪನ್ ವೆಲ್ ಇಲ್ಲವೇ? ಖಾಸಗಿಯವರು ವೆಲ್‌ನಿಂದ ನೀರನ್ನು ತರುತ್ತಿಲ್ಲವೆ? We are making other alternative arrangements. We are doing our best to help the people. In spite of that, nobody is appreciating. ತಮಗೆ ಇವೆಲ್ಲಾ ಗೊತ್ತಿದ್ದೂ ಹೀಗೆ ಹೇಳಿದರೆ ಹೇಗೆ? ನನಗಂತೂ ಇದು ವಿಚಿತ್ರವೆನಿಸುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಇವೆಲ್ಲದರ ಕೊನೆಯ ರಿಸಲ್ಟ್ ಏನು? ಯಾವಾಗ? ನೂರಾರು ಬೋರ್‌ವೆಲ್‌ಗಳನ್ನು ಹಾಕಿದ್ದೀರಿ, ಅದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿದರೆ ಕೂಡಲೇ ನೀರು ಸಪ್ಲೈಯಾಗುತ್ತದೆ. ಆದರೆ ಅದಕ್ಕೆ ಹಣವಿಲ್ಲ. ಕಾರ್ಪೊರೇಷನ್‌ರವರ ಹತ್ತಿರ ಹಣವಿಲ್ಲ. ಹಣ ಬಿಡುಗಡೆ ಮಾಡಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾತ್ಕಾಲಿಕವಾಗಿ ಹಲವಾರು ವ್ಯವಸ್ಥೆಯನ್ನು ಈಗಾಗಲೇ

ಮಾಡಿದ್ದೇವೆ. ನೂರಾರು ಬೋರ್‌ವೆಲ್‌ಗಳನ್ನು ಮಾಡಿದ್ದೇವೆಂದು ಹೇಳಿದಿರಲ್ಲಾ ಅದಕ್ಕೆ ಧನ್ಯವಾದಗಳು.

ಶ್ರೀ ಎ.ಎಂ.ಹಿಂಡಸಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ ಇದೆಯೆಂದು ಹೇಳುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದುದು. ನೀರು ಕೊಡುವ ವಿಚಾರದಲ್ಲಿ ಅಥವಾ ಬೇರೆ ವ್ಯವಸ್ಥೆ ಮಾಡುವಲ್ಲಿ ನಮ್ಮಲ್ಲಿ ಗುಂಪುಗಾರಿಕೆ ಇಲ್ಲ. ರಾಜ್ಯದಲ್ಲಾಗಲಿ, ರಾಷ್ಟ್ರದಲ್ಲಾಗಲಿ, ಮಹಾನಗರದಲ್ಲಾಗಲಿ ಗುಂಪುಗಾರಿಕೆ ಯಾವುದೂ ಇಲ್ಲ. ಗುಂಪುಗಾರಿಕೆ ಇದ್ದರೆ ಅವರ ಕಡೆಯಲ್ಲಿ ಇರಬಹುದು. ನೀರು ಕೊಡುವ ವಿಚಾರದಲ್ಲಿ, ಬಡವರಿಗೆ ಕೆಲಸ ಮಾಡುವ ವಿಚಾರದಲ್ಲಿ ಗುಂಪುಗಾರಿಕೆಯ ಪ್ರಶ್ನೆಯೇ ಬರುವುದಿಲ್ಲ. ಗುಂಪುಗಾರಿಕೆ ಸ್ಥಾನಮಾನ ಪಡೆಯುವಾಗ ಮಾತ್ರ ಇರುತ್ತದೆ. ನಾನು ಮೇಯರ್ ಆಗಬೇಕು, ಮಂತ್ರಿ ಆಗಬೇಕು, ಎಂ.ಪಿ. ಆಗಬೇಕು ಎಂಬ ವಿಚಾರದಲ್ಲಿ ಮಾತ್ರ ಅವರೂ ಗುಂಪುಗಾರಿಕೆ ಮಾಡುತ್ತಾರೆ ನಾವೂ ಮಾಡುತ್ತೇವೆ. ಆದರೆ ಬಡವರ ಕೆಲಸ ಮಾಡುವಾಗ, ಯಾಷ್ಟುದಾದರೂ ಹಣವನ್ನು ತರುವುದರ ಸಲುವಾಗಿ ಗುಂಪುಗಾರಿಕೆ ಮಾಡುವುದಿಲ್ಲ. ನಾವು ಅಧಿಕಾರಕ್ಕೆ ಬಂದ ಮೇಲೆ ಆ ಪೈಪ್ ಲೈನ್‌ನ ಕೆಲಸಕ್ಕಾಗಿ **44** ಕೋಟಿ ರೂಪಾಯಿಗಳನ್ನು ಕೊಡಿಸಿ ಎಲ್ ಅಂಡ್ ಟಿ ಗೆ ಟೆಂಡರ್ ಕೊಡಿಸಿ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಒಂದು ದಿವಸ ಸಹಿತ ಕೆಲಸ ನಿಂತಿಲ್ಲ. 26 ಕಿಲೋಮೀಟರ್‌ಗಿಂತ ಜಾಸ್ತಿ ಕೆಲಸ ನಡೆದಿದೆ. ನಾನು ಮೂರು ಸಲ ಹೋಗಿ ಕೆಲಸದ ಪ್ರಗತಿಯ ಬಗ್ಗೆ ನೋಡಿದ್ದೇನೆ. ಅವರನ್ನೂ ಕರೆದುಕೊಂಡು ಹೋಗಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ನವೆಂಬರ್‌ನ ಒಳಗಾಗಿ ಕೆಲಸ ಮುಗಿಯಬೇಕಿತ್ತು, ಆದರೆ ಇನ್ನೂ ಏಕೆ ಮುಗಿದಿಲ್ಲ? ತಾವು ಗ್ಯಾರಂಟಿ ಕೊಡಲಿಲ್ಲ, ಆದ್ದರಿಂದ ಲೇಟ್ ಆಯಿತು.

ಶ್ರೀ ಎ.ಎಂ.ಹಿಂಡಸಗೇರಿ: ಅವರಿಗೆ ಸಮಯ ಕೊಟ್ಟಿದ್ದೆವು. ಈ ಎರಡು ತಿಂಗಳಿನಲ್ಲಿ 200 ಬೋರ್‌ವೆಲ್‌ಗಳನ್ನು ತೆಗೆದು ನೀರನ್ನು ಕೊಡುತ್ತಿದ್ದೇವೆ. ಈ ಮೊದಲು 1300 ಬೋರ್ ವೆಲ್‌ಗಳು ಇತ್ತು. ಇದರ ಜೊತೆಗೆ ಟ್ಯಾಂಕರ್‌ನಿಂದ ನೀರನ್ನು ಕೊಡುತ್ತಿದ್ದೇವೆ. ಆದರೆ ದುರಾದೃಷ್ಟವಶಾತ್ ನೀರಸಾಗರದಲ್ಲಿ ನೀರು ಬತ್ತಿಹೋಗಿ ತೊಂದರೆಯಾಗಿದೆ. ಆದರೂ ಆಲ್ಟರ್‌ನೇಟೀವ್ ನೀರನ್ನು ಒದಗಿಸುವ ವ್ಯವಸ್ಥೆ ಮಾಡಿದ್ದೇವೆ. ಈಗೇನು ಹತ್ತು ದಿವಸಕ್ಕೊಮ್ಮೆ ನೀರು ಒದಗಿಸುತ್ತಿದ್ದೇವೆ ಅದನ್ನು ಐದು ದಿವಸಕ್ಕೊಮ್ಮೆ ಒದಗಿಸುವ ಬಗ್ಗೆ ಅಧಿಕಾರಿಗಳ ಜೊತೆ ಮೊನ್ನೆ ಚರ್ಚೆ ಮಾಡಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ತಾವೂ ಸಹಕಾರ ಕೊಡಬೇಕು. ತಾವೇನು ಪ್ರಯತ್ನ ಮಾಡಿದ್ದೀರೆಂದರೆ, ನಾವು ಪ್ರಯತ್ನವನ್ನು ಮಾಡಿದ್ದೇವೆ, ಜನರು ಅದಕ್ಕಾಗಿಯೇ ನಮ್ಮನ್ನು ಆರಿಸಿದ್ದಾರೆ. ನಾವು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದ್ದೇವೆ. ಡೀಸಿಲ್ಟಿಂಗ್‌ನ ಸಲುವಾಗಿ 13.3.2002ರಲ್ಲಿ ಆದೇಶವಾಗಿದೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ಈ ಮೊದಲು ಕೋಲಾರ, ಗುಲ್ಬರ್ಗಾ, ಚಿತ್ರದುರ್ಗ ಈ ಭಾಗಗಳಲ್ಲಿ ಕುಡಿಯುವ ನೀರಿಗೆ ಬರವಿತ್ತು. ಆದರೆ ಆ ಕಷ್ಟ ಈಗ ಬೆಳಗಾಂ, ಧಾರವಾಡಗಳಿಗೂ ಬಂದಿರುವುದು ನಮಗೆ ಗೊತ್ತಾಗುತ್ತಿದೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ(ಧಾರವಾಡ): ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ವಿಳಂಬವಾಯಿತು ಎಂಬ ದೃಷ್ಟಿಯಿದ ನಾವು ಹೇಳುತ್ತಿದ್ದೇವೆ. ಸಮರೋಪಾದಿಯಲ್ಲಿ ಈ ಕೆಲಸವನ್ನು ತೆಗೆದುಕೊಂಡು ಜನವರಿಯ ಒಳಗಾಗಿ ಪೂರ್ಣ ಮಾಡಬೇಕಿತ್ತು. ಕುಡಿಯುವ ನೀರಿನ ಸಮಸ್ಯೆ ಇವತ್ತು ಗೊತ್ತಾಗಿದ್ದೇನಲ್ಲ. ಧಾರವಾಡ ಹುಬ್ಬಳ್ಳಿಗೆ ಇದರ ಪರಿಣಾಮ ಬಹಳ ಆಗುತ್ತದೆಂದು ಮೊದಲಿನಿಂದಲೇ ನಾವು ತಿಳಿದುಕೊಂಡಿದ್ದೆವು. ಇದರ ಬಗ್ಗೆ ಸರ್ಕಾರಕ್ಕೆ, ಸಚಿವರಿಗೆ ಎಲ್ಲರಿಗೂ ತಿಳುವಳಿಕೆ ಮಾಡಿಕೊಟ್ಟಿದ್ದೆವು. ಆದರೆ ಆ ಕೆಲಸ ವಿಳಂಬವಾಗಿದೆ. ಈಗಲಾದರೂ ಆ ಕೆಲಸವನ್ನು ಸಮರೋಪಾದಿಯಲ್ಲಿ ತೆಗೆದುಕೊಂಡು ಮುಗಿಸಿಕೊಡಬೇಕೆಂದು ಕೇಳುತ್ತಿದ್ದೇವೆ. ಐದು ದಿವಸಕ್ಕೊಮ್ಮೆ ನೀರನ್ನು ಒದಗಿಸುವ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆಂದು ಸಚಿವರು ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿ ಈಗಾಗಲೇ ಬಂದಿದೆ. ಒಂದು ವೇಳೆ ಅವರು ಆ ಕೆಲಸ ಮಾಡಿದ್ದೇ ಆದರೆ ಇಡೀ ಧಾರವಾಡ-ಹುಬ್ಬಳ್ಳಿ ನಗರದ ಜನರೇ ಅವರಿಗೆ ಸನ್ಮಾನ ಮಾಡುತ್ತಾರೆ. ಆ ಕೆಲಸವನ್ನು ತೀವ್ರವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕಲಗಟಕಿ ತಾಲ್ಲೂಕು ಮಲೆನಾಡು ತಾಲ್ಲೂಕು. ನವಲಗುಂದ ಮತ್ತು ಕಲಗಟಗಿಯಲ್ಲಿ ಬರಗಾಲವಿಲ್ಲವೆಂದು ಘೋಷಣೆ ಮಾಡಿದ್ದಾರೆ. ಆದರೆ ಅಲ್ಲಿರುವ ನೀರಸಾಗರದ ಕೆರೆಯು ಬತ್ತಿಹೋಗಿದೆ. ಬಹುಶಃ ಇತಿಹಾಸದಲ್ಲಿ ಎಂದೂ ಆ ಕೆರೆ ಬತ್ತಿದ್ದಿಲ್ಲ. ಆದ್ದರಿಂದ ಕಲಗಟಗಿ ತಾಲ್ಲೂಕು ಬರಗಾಲದಲ್ಲಿದೆ. ಅಲ್ಲಿನ ಜನರು ಸ್ಟ್ರೈಕ್ ಮಾಡಿ ಡಿ.ಸಿ. ಕಛೇರಿಯ ಮುಂದೆ ಕುಳಿತು ಇದನ್ನು ಬರಗಾಲದ ಪ್ರದೇಶವೆಂದು ಸಾರಬೇಕೆಂದು ಒತ್ತಾಯ ಮಾಡಬೇಕಾದ ಪ್ರಸಂಗ ಬಂತು. ಆ ಕೆಲಸವೂ ಆಗಿದೆ. ನೀರಸಾಗರ ಕೆರೆ ಬತ್ತಿದ್ದೇ ಸಾಕ್ಷಿ, ಧಾರವಾಡ ಜಿಲ್ಲೆಯಲ್ಲಿ ರೈತರ ಸಹಭಾಗಿತ್ವದಲ್ಲಿ ತಾವು ಕೆರೆಗಳ ಹೂಳನ್ನು ತೆಗೆಯುವ ಕೆಲಸ ಮಾಡಬೇಕು. ಇದರ ಬಗ್ಗೆ ಮಾನ್ಯ ಸಿ.ಎಂ.ಲಿಂಗಪ್ಪನವರಿಗೆ ಮೊದಲೂ ಹೇಳಿದ್ದೇನೆ, ಮೊನ್ನೆಯೂ ಹೇಳಿದ್ದೇನೆ. ತಾವು ಪತ್ರಿಕೆಯಲ್ಲಿ ಮಾತ್ರ ಹಣ ಬಿಡುಗಡೆ ಮಾಡಿರುವ ಬಗ್ಗೆ ಹೇಳಿದ್ದೀರಿ, ಆದರೆ ಕೆಲಸವನ್ನೂ ಬೇಗನೆ ಪ್ರಾರಂಭ ಮಾಡಬೇಕೆಂದು ಆಗ್ರಹ ಮಾಡಿದ್ದೇನೆ, ಅದಕ್ಕೆ ಅವರು ಆ ಕೆಲಸ ಮಾಡುವುದಾಗಿ ಹೇಳಿದ್ದಾರೆ, ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಧಾರವಾಡ ಹುಬ್ಬಳ್ಳಿಯಲ್ಲಿ ಸಾವಿರಾರು ಬೋರ್‌ವೆಲ್‌ಗಳು ನೀರಿಲ್ಲದೆ ಕೊಲ್ಯಾಪ್ಸ್ ಆಗಿದೆ. ನೀರನ್ನು ಸಂಗ್ರಹ ಮಾಡುವ ವ್ಯವಸ್ಥೆ ಇಲ್ಲದಿದ್ದರೆ ಹೀಗಾಗುತ್ತದೆ. ಇವತ್ತು ಅಲ್ಲಿ 11 ಕೆರೆಗಳನ್ನು ಮುಚ್ಚಿಹಾಕಿಬಿಟ್ಟಿದ್ದೇವೆ. ಹೀಗಾದರೆ ಬಾವಿಗಳಲ್ಲಿ ನೀರು ಎಲ್ಲಿಂದ ಬರಬೇಕು? ಅದಕ್ಕಾಗಿ ಬಹಳ ದೊಡ್ಡ ಪ್ರಮ್ಮಾಣದಲ್ಲಿ ಹೀರೇಕೆರೆ ಎಂಬ

ಕೆರೆಯ ಹೂಳನ್ನು ಐದು ವರ್ಷದಿಂದ ನಾನು ತೆಗೆಸುತ್ತಿದ್ದೇನೆ. ಮೊದಲು ಧಾರವಾಡಕ್ಕೆ ಕೆಲಗೆರಿ ಎಂಬಲ್ಲಿಂದ ನೀರು ಬರುತ್ತಿತ್ತು. ಅದೇ ರೀತಿ ಹುಬ್ಬಳ್ಳಿಗೆ ಉಣಕಲ್‌ನಿಂದ ನೀರು ಬರುತ್ತಿತ್ತು. ಈಗ ಕೆಲಗೆರಿ ಕೆರೆಯೂ ಹೂಳಿನಿಂದ ಮುಚ್ಚಿಹೋಗಿದೆ. ಇಲ್ಲೂ ಹೂಳನ್ನು ತೆಗೆಯುವ ಕೆಲಸ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಕೆಲಗೇರಿ ಕೆರೆಯ ಹೂಳನ್ನು ತೆಗೆದರೆ ನೀರಿನ ಸಂಗ್ರಹ ಹೆಚ್ಚಾಗುತ್ತದೆ ಆ ಮೂಲಕ ಬೋರ್‌ವೆಲ್‌ಗೆ, ಬಾವಿಗೆ ನೀರು ಬರುತ್ತದೆ. ಇದನ್ನು Privatise ಮಾಡಲು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕೊಟ್ಟಿದ್ದೇವೆ, ಆದರೂ ನಗರದ ದೃಷ್ಟಿಯಿಂದ ಈ ಕೆಲಸ ಬಹಳ ಅವಶ್ಯಕವಾಗಿದೆ.

ಶ್ರೀ ಸಿ.ಎಂ.ಲಿಂಗಪ್ಪ: ಆ ಕೆಲಗೆರೆ ಕೆರೆ ಏನಿದೆ ಅಲ್ಲಿ ಕುಡಿಯುವುದಕ್ಕೆ ಯೋಗ್ಯವಾದ ನೀರು ಸಂಗ್ರಹವಾಗುತ್ತಿಲ್ಲ. ಅಲ್ಲಿ ಸ್ಯೂಏಜ್ ನೀರೆಲ್ಲಾ ಬಂದು ಸೇರಿಕೊಂಡಿದೆ. ಅಲ್ಲಿ ಹೂಳನ್ನು ಎತ್ತಿದರೂ ಕುಡಿಯುವುದಕ್ಕೆ ಅದನ್ನು ಉಪಯೋಗಿಸಲು ಆಗುವುದಿಲ್ಲವೆಂದು ನಮ್ಮ ಇಂಜಿನಿಯರ್‌ಗಳು ಅಭಿಪ್ರಾಯ ನೀಡಿದ್ದಾರೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಅಲ್ಲಿನ ನೀರನ್ನು ಕುಡಿಯುವುದಕ್ಕೆ ನೇರವಾಗಿ ಕೊಡಲು ಆಗುವುದಿಲ್ಲ. ಅಲ್ಲಿ ನೀರು ಸಂಗ್ರಹವಾಗುವುದರಿಂದ ಸಾವಿರಾರುಗಟ್ಟಲೆ ಬೋರ್‌ವೆಲ್‌ಗಳಿಗೆ ನೀರು ಬರುತ್ತದೆ. ನೀರು ಸಂಗ್ರಹ ಮಾಡುವ ವ್ಯವಸ್ಥೆಯನ್ನೇನಾದರೂ ಮಾಡಬೇಕಲ್ಲವೆ? ಆ ಕೆರೆಗಳನ್ನು ಉಳಿಸಿಕೊಳ್ಳಬೇಕಲ್ಲಾ? ಆದ್ದರಿಂದ ಅಲ್ಲಿ ಹೂಳನ್ನು ತೆಗೆಯಬೇಕು, ಅದರಿಂದ ಬೋರ್‌ವೆಲ್‌ಗಳಿಗೆ ನೀರು ಬರುತ್ತದೆ. 150 ಅಡಿಗೆ ಬೋರ್‌ವೆಲ್‌ಗಳಲ್ಲಿ ಮೊದಲೇನು ನೀರು ಸಿಗುತ್ತಿತ್ತು ಈಗ 400 ಅಡಿಗಳಿಗೆ ಹೋದರೂ ಸಿಗುತ್ತಿಲ್ಲ. ಏಕೆಂದರೆ ಇದ್ದ ಕೆರೆಗಳೆಲ್ಲಾ ಹೋಗಿಬಿಟ್ಟಿದೆ. ನೀರು ಸಂಗ್ರಹ ಮಾಡುವಂಥ ವ್ಯವಸ್ಥೆ ತಪ್ಪಿಹೋಗಿದೆ. ಆದ್ದರಿಂದ ಅದರ ಹೂಳನ್ನು ತೆಗೆಯಬೇಕೆಂದು ಹೇಳುತ್ತಿದ್ದೇನೆ. ನಗರದ ಸುತ್ತಮುತ್ತಲಿರುವ ಯಾವುದೇ ಕೆರೆಯಿಂದಲೂ ಇವತ್ತು ಕುಡಿಯುವುದಕ್ಕೆ ನೀರನ್ನು ನೇರವಾಗಿ ಉಪಯೋಗ ಮಾಡುವುದಕ್ಕಾಗುವುದಿಲ್ಲ. ಸಾರ್ವಜನಿಕರಿಗೆ ಬಳಸಿಕೊಳ್ಳಲು ಸಾಧ್ಯವಾಗುತ್ತದೆ ಅಥವಾ ಇರತಕ್ಕಂಥ ಬಾವಿ, ಬೋರ್‌ವೆಲ್‌ಗಳಿಗೆ ನೀರು ಬರುತ್ತದೆ ಎಂಬ ದೃಷ್ಟಿಯಿಂದ ಹೇಳಿದ್ದೇನೆ. ಅಗ್ರಿಕಲ್ಚರ್ ಯೂನಿವರ್ಸಿಟಿ ಮತ್ತು ಕರ್ನಾಟಕ ಯೂನಿವರ್ಸಿಟಿ ಇವೆರಡೂ ಅತ್ಯಂತ ಎತ್ತರವಾದ ಪ್ರದೇಶದಲ್ಲಿದೆ. ರಾಜಾಸ್ತಾನ ಮುಂತಾದ ಕಡೆಗಳಲ್ಲಿ ಹೇಗೆ ವಾಟರ್ ಹಾರ್ವೆಸ್ಟಿಂಗ್ ಮಾಡುತ್ತಿದ್ದಾರೆ ಅದರ ಬಗ್ಗೆ ನಾವೂ ಲಕ್ಷ್ಯ ಕೊಡಬೇಕಾಗಿದೆ. ಮೊನ್ನೆ ಕರ್ನಾಟಕ ಯೂನಿವರ್ಸಿಟಿಯ ಸಭೆಯಲ್ಲಿ ಮಳೆ ಬಂದಾಗ ಬೇಕಾದಷ್ಟು ನೀರು ಗುಡ್ಡದ ಮೂಲಕ ಹರಿದು ಹೋಗಿಬಿಡುತ್ತದೆಂದು ಹೇಳಿದ್ದಾರೆ. ಆದ್ದರಿಂಧ ಆ ನೀರನ್ನು ಎಲ್ಲಿಯಾದರೂ ಸಂಗ್ರಹ ಮಾಡುವ ವ್ಯವಸ್ಥೆ ಮಾಡಬೇಕು. ಇವತ್ತು ಕರ್ನಾಟಕ ವಿಶ್ವವಿದ್ಯಾನಿಲಯದವರ ಗಾರ್ಡನ್‌ಗೇ ನೀರಿಲ್ಲದ ಪರಿಸ್ಥಿತಿ ಬಂದಿದೆ. ಆ ಗಾರ್ಡನ್ ಪೂರ್ಣವಾಗಿ ಒಣಗಿಹೋಗಿದೆ. ಅದೇ ಪ್ರಕಾರ ಕೃಷಿ

ವಿಶ್ವವಿದ್ಯಾನಿಲಯದವರಿಗೂ ಹೇಳುತ್ತೇವೆ. ಸರ್ಕಾರ ಏನಾದರೂ ಮಾಡಿ ಕುಡಿಯುವ ನೀರಿಗಾಗಿ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ನೀರನ್ನು ಸಂಗ್ರಹ ಮಾಡುವ ಕೆಲಸ ಮಾಡಬೇಕು. ವಾಟರ್ ಕನ್‌ಸರ್ವೇಷನ್, ಹಾಗೂ ಹಾರ್ವೆಸ್ಟಿಂಗ್ ಕೆಲಸವನ್ನು ಮಾಡಲು ಸರ್ಕಾರ ಯೋಜನೆಯನ್ನು ರೂಪಿಸಬೇಕು. ಎರಡೂ ವಿಶ್ವವಿದ್ಯಾನಿಲಯಗಳಲ್ಲಿ ಇದರ ಬಗ್ಗೆ ಹೇಳಿದ್ದೇನೆ. ಇಂಥ ಬರಗಾಲದ ಪರಿಸ್ಥಿತಿಯಲ್ಲಿ ಸರ್ಕಾರ ರೈತರ ಸಮಸ್ಯೆಯನ್ನು ಯಾವ ಪ್ರಕಾರದಲ್ಲಿ ಪರಿಹಾರ ಮಾಡುತ್ತದೆ, ರೈತರಿಗೆ ಮರುಸಾಲ ಸಿಗುವಂತೆ ಹೇಗೆ ಮಾಡುತ್ತದೆ, ಬಡ್ಡಿ ಮನ್ನಾ ಮಾಡುತ್ತದೆಯೇ ಎಂಬ ಬಗ್ಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ವಿದ್ಯುಚ್ಛಕ್ತಿ ವಿಚಾರದಲ್ಲಿ ಸಾಕಷ್ಟು ಎಲ್ಲಾ ನಾಯಕರು ಮಾತನಾಡಿದ್ದಾರೆ. ನನಗೆ ತಿಳಿದಮಟ್ಟಿಗೆ ಹೈಡಲ್ ವಿದ್ಯುತ್‌ನ್ನು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡುವಂಥ ಈ ರಾಜ್ಯದಲ್ಲಿ ಇಂಥ ದೊಡ್ಡ ವಿದ್ಯುತ್ ಅಭಾವವನ್ನು ನಾವು ಅನುಭವಿಸುತ್ತಿದ್ದೇವೆ. ಮಳೆಯೇ ಆಗಿಲ್ಲದಿರುವುದರಿಂದ ಹೈಡಲ್ ವಿದ್ಯುತ್ ಉತ್ಪಾದನೆ ಬಹಳ ಕಡಿಮೆಯಾಗಿದೆ.

4.50 ಪಿಎಂ

ಆದರೆ, ಇದೆಲ್ಲದಕ್ಕಿಂತ ಬಹಳ ಮುಖ್ಯವಾಗಿ ನಮ್ಮಲ್ಲೇನು 38 ಪರ್ಸೆಂಟ್ ವಿದ್ಯುತ್ತಿನ ಸೋರಿಕೆ ಇದೆ, ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನಾದರೂ ಮಾಡಿ, ಒಂದು ವ್ಯವಸ್ಥೆಯನ್ನು ಮಾಡಬೇಕು. ಈ ಸೋರುವ ಪ್ರಮಾಣ ಭಾರತದಲ್ಲಿರುವಂಥ ಸರಾಸರಿಗೆ ಇದನ್ನು ತೆಗೆದುಕೊಂಡು ಬಂದು ನಿಲ್ಲಿಸಬೇಕು. ಅಂದರೆ, ನಾವು ಸರಿಯಾದಂಥ ರೇಟಿನಲ್ಲಿ ರೈತರಿಗೆ ವಿದ್ಯುತ್‌ನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಈ ಕೆಲಸ ಮೊದಲು ಆಗಬೇಕು. ನಾವು ಬೇರೆ ಬೇರೆ ಯೋಜನೆಗಳಿಗೆ ಯಾವರೀತಿ ಸಾಲ ತೆಗೆದುಕೊಂಡು ಬರುತ್ತೇವೆಯೋ ಹಾಗೆ ಇದಕ್ಕೆ ಸಾಲವನ್ನಾದರೂ ತೆಗೆದುಕೊಂಡು ಬಂದು ವ್ಯವಸ್ಥೆ ಮಾಡಬೇಕು. ಇವತ್ತೇನು ಪವರ್ ಲಾಸ್ ಆಗುತ್ತಾ ಇದೆ, ಈ 38 ಪರ್ಸೆಂಟ್ ಭಾರತದಲ್ಲಿ ಏನು ಸರಾಸರಿ ಲಾಸ್ ಇದೆ, ಈ ಟ್ರಾನ್ಸ್‌ಮಿಷನ್ ಲಾಸ್‌ಗೆ ತರಬೇಕೆಂದು ನಾನು ಕೇಳುತ್ತಿದ್ದೇನೆ. ಮತ್ತೆ ನಾವು ಲಾಸ್ ಕಡಿಮೆ ಮಾಡಿದರೆ, ನಾವು ವಿದ್ಯುಚ್ಛಕ್ತಿಯಲ್ಲಿ ಭಾರತದಲ್ಲಿರುವಂಥ ಎಲ್ಲರಿಗಿಂತಲೂ ಯೋಗ್ಯ ರೀತಿಯಿಂದ ಪವರನ್ನು ರೈತರಿಗೆ ಕೊಡಬಹುದು ಮತ್ತು ಎಲ್ಲರಿಗೂ ಸಪ್ಲೈ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂಬ ವಿಚಾರವನ್ನು ಹೇಳುತ್ತೇನೆ. ಅದರಜೊತೆಗೆ ಇವತ್ತು ನಾವು ಸಾಕಷ್ಟು ಉದ್ದಿಮೆಗಳಿಗೆ ಸವಲತ್ತು ಕೊಡುತ್ತೇವೆ, ಬೇರೆ ಬೇರೆ ಪರಿಹಾರ ಕೊಡುತ್ತೇವೆ. ಇಂಥಾದ್ದನ್ನೆಲ್ಲಾ ಮಾಡುವಾಗ, ಇದಕ್ಕೆ ಮೊದಲ ಆದ್ಯತೆ ಕೊಡಬೇಕು. ಪವರ್ ಉತ್ಪಾದನೆಗೆ ಮತ್ತು ಪವರ್ ಟ್ರಾನ್ಸ್‌ಮಿಷನ್‌ಗೆ. ಅದರಲ್ಲೂ ನೀವು ರೈತರಿಗೆ ಏನು ಕೊಡುತ್ತಾ ಇದ್ದೀರಿ, ಇದನ್ನು ನೀವು ಏನಾದರೂ ಮಾಡಿ ಅವರಿಗೆ ಸಹಾಯ ಮಾಡಬೇಕು. ಅವರಿಗೆ ಸಹಾಯ ಮಾಡುವುದರ ಮೂಲಕ ದೇಶದ ಆರ್ಥಿಕ ಬೆಳವಣಿಗೆಗೆ ಸಹಾಯವಾಗುತ್ತದೆ. ಇವತ್ತು ನೀವು ರೈತರಿಗೆ ವಿದ್ಯುಚ್ಛಕ್ತಿ

ಕೊಡುವುದರಿಂದ, ಪ್ರತಿಯೊಂದು ಪಂಪ್‌ಸೆಟ್ ಇರುವಂತಹ ರೈತನಿಗೆ, ಹತ್ತು ಮಂದಿಗೆ ಕೂಲಿ ಕೆಲಸ ಕೊಡಲಿಕ್ಕೆ ಆಗುತ್ತದೆ. ಬಹಳಷ್ಟು ಮಂದಿ ನಿರುದ್ಯೋಗಿ ಜನರಿಗೆ ಉದ್ಯೋಗ ಕೊಡಲಿಕ್ಕೆ ಆಗುತ್ತದೆ. ಇವತ್ತು ಹಳ್ಳಿಗಳನ್ನು ಬಿಟ್ಟು, ರೈತನೇ ಶಹರುಗಳಿಗೆ ಉದ್ಯೋಗಕ್ಕಾಗಿ ಬರುವಂಥ ಪರಿಸ್ಥಿತಿ ಬಂದಿದೆ. ಏಕೆಂದರೆ, ಅವನು ಬೆಳೆದಂಥ ಮಾಲಿಗೆ ಸರಿಯಾದಂಥ ಬೆಲೆ ಇಲ್ಲವೆನ್ನುವುದು ಒಂದು. ಆಮೇಲೆ, ವಿದ್ಯುಚ್ಛಕ್ತಿ ಅಭಾವದಿಂದ, ಅವನು ಇವತ್ತೇನು ಫಸಲು ತೆಗೆಯುತ್ತಾನೆ, ಅದು ಸರಿಯಾದ ಪ್ರಮಾಣದಲ್ಲಿ ಉತ್ಪನ್ನ ಬರುವಂಥ ಸ್ಥಿತಿಯಲ್ಲಿ ಇಲ್ಲ. ಇವತ್ತು ಅವರು ಕೇಳುತ್ತಾ ಇರುವುದು ಕ್ವಾಲಿಟಿ ಪವರ್ ಮತ್ತು ನಿರ್ದಿಷ್ಟವಾದ ಅವಧಿಯಲ್ಲಿ ಅವರಿಗೆ ಪವರ್ ಸಪ್ಲೈ. ಇವನ್ನು ಮಾಡಿದರೆ, ನೀವು ಮೀಟರ್ ಮೇಲೆಯೂ ಸಹಿತ ಆಕರಣೆ ಮಾಡಿ, ವಸೂಲಿ ಮಾಡಬಹುದು. ನೀವು ಯಾರಿಗೂ ಫ್ರೀ ಕೊಡಿ ಎಂದು ಹೇಳುವುದಿಲ್ಲ. ಏಕೆಂದರೆ, ಚಾರ್ಜ್ ಮಾಡಲೇಬೇಕಾಗುತ್ತದೆ. ಆದರೆ, ರೈತರಿಗೆ ಕನಿಷ್ಟ ಎಷ್ಟು ಚಾರ್ಜ್ ಮಾಡಬಹುದು, ಅವನು ದುಡಿಯುತ್ತಿರುವ ಶ್ರಮಕ್ಕೆ, ಅವನು ಹಾಕತಕ್ಕ ಬಂಡವಾಳಕ್ಕೆ, ಅವನು ಬೆಳೆದಂಥ ಉತ್ಪಾದನೆಗಳಿಗೆ ಏನು ಬೆಲೆ ಸಿಗುತ್ತಾ ಇದೆ, ಇದರಿಂದ ಅವನ ಪರಿಸ್ಥಿತಿ ಏನಿದೆ ಎಂಬುದನ್ನು ತಿಳಿದುಕೊಂಡು, ಅದರ ಪ್ರಕಾರ ನಾವು ರೈತರಿಗೆ ಪವರ್ ಚಾರ್ಜ್ ಮಾಡಬೇಕಾಗುತ್ತದೆ. ಇಷ್ಟೇ ಅಲ್ಲ, ಅವನ ಮೇಲೆ ಅವಲಂಬಿಸಿರುವಂಥ ಕೂಲಿಕಾರರಿಗೆಲ್ಲರಿಗೂ ಉದ್ಯೋಗ ಸಿಗಬೇಕಾದರೆ ಮ್ಯಾಕ್ಸಿಮಮ್ ಪವರ್ ನಾವು ಉತ್ಪಾದನೆ ಮಾಡಬೇಕು. ಮತ್ತು ಸರಿಯಾದಂಥ ರೀತಿಯಲ್ಲಿ ಸರಬರಾಜು ಮಾಡಬೇಕು. ಅದೂ ಸಹಿತ ರೈತರಿಗೆ ಡೇ ಟೈಮ್‌ನಲ್ಲಿ ಪವರ್ ಕೊಡಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇವೆಲ್ಲಾ ಕಾರ್ಯಗಳನ್ನು ಮಾಡುವುದರ ಮೂಲಕ ಈ ಬರಗಾಲದ ಪರಿಹಾರಕ್ಕೆ ಸರ್ಕಾರ ಈ ಜಲಾನಯನ ಯೋಜನೆಯಾಗಲೀ, ಕೆರೆ ಹೂಳು ತೆಗೆಯುವಂಥ ಯೋಜನೆಯಾಗಲೀ, ಅಥವಾ ಜಲ ಸಂವರ್ಧನೆ ಯೋಜನೆಯಾಗಲೀ ಈ ಕಾರ್ಯಗಳನ್ನು ತೀವ್ರವಾಗಿ ತೆಗೆದುಕೊಳ್ಳಬೇಕು. ಇವತ್ತು ಸಚಿವರು ಆಶ್ವಾಸನೆ ನೀಡಿದಂತೆ ಧಾರವಾಡ ಹುಬ್ಬಳ್ಳಿಯ ಬಗ್ಗೆ 30ನೇ ತಾರೀಖಿನೊಳಗಾಗಿ ಯುದ್ಧೋಪಾದಿಯಲ್ಲಿ ಎಲ್ಲಾ ಕಾರ್ಯಗಳನ್ನು ಮುಗಿಸಿ ಐದು ದಿವಸಕ್ಕೊಮ್ಮೆ ಜನರಿಗೆ ನೀರು ಸಿಗುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಲಿಂಗಪ್ಪನವರಿಗೂ ಸಹಿತ ಹೇಳಿದ್ದೇನೆ. ಹಾಲಿ 15 ದಿವಸಕ್ಕೊಮ್ಮೆ ಸಿಗುತ್ತಾ ಇದೆ, ಇದನ್ನು 5 ದಿವಸಕ್ಕೊಮ್ಮೆ ಕೊಟ್ಟರೆ ಸಾಕಾಗುತ್ತದೆ. ಇದರಿಂದ ದೊಡ್ಡ ಉಪಕಾರವಾಗುತ್ತದೆ, ಇದಕ್ಕೆ ನಾವೆಲ್ಲರೂ ಅವರಿಗೆ ಶಹಭಾಸ್ ಎಂದು ಹೇಳಬಹುದು. ಅದರಲ್ಲೂ ನಾನು ಶ್ರೀ ಲಿಂಗಪ್ಪನವರಿಗೆ ಹೇಳಿದ್ದೇನೆ. ನೀವೇನಾದರೂ ಕೆಲಸ ಮಾಡುವುದಿದ್ದರೆ, ನೀರಸಾಗರ ಕೆರೆಯ ಯೋಜನೆಯ ಬಗ್ಗೆ ಯುದ್ಧೋಪಾದಿಯಲ್ಲಿ ಬಂದು ನಿಂತು, ಅಲ್ಲಿ ಹೂಳು ತೆಗೆಯಬೇಕು. ನೀವು ಬರೀ ಜೆ.ಸಿ.ಬಿ. ಹಂತದಲ್ಲಿ ಫಾರ್ಮರ್ಸ್ ಪಾರ್ಟಿಸಿಪೇಷನ್ ಮೇಲೆ, ಉತ್ತಮವಾದಂಥ ಮಣ್ಣು ಹೊಲಕ್ಕೆ ಹೋಗುತ್ತದೆ. ಮತ್ತು ಅದರ ಮೇಲೆ ನಾವು ಬಹಳ ದೊಡ್ಡ

ಸೇವಿಂಗ್ ಮಾಡಬಹುದು. ಅಲ್ಲಿಯೂ ನಾವು ಬೋರ್ ಹಾಕುವುದಕ್ಕಾಗುತ್ತದೆ. ವಾಟರ್ ಹಾರ್‌ವೆಸ್ಟಿಂಗ್ ಮಾಡುವುದಕ್ಕೆ ಇವೆರಡು ಯೂನಿವರ್ಸಿಟಿಗೂ ಬೇಕಾದರೆ ಹಣ ಕೊಡುವುದಕ್ಕಾಗುತ್ತದೆ. ಕೆಲ್ಗೇರಿಯಲ್ಲಿ ಹೂಳು ತೆಗೆಸಬೇಕೆಂದು ಏನು ಹೇಳುತ್ತೀರಿ, ಇದನ್ನು ತೆಗೆಸುವುದಕ್ಕೂ ಸಹಿತ ಅದೇ ದುಡ್ಡಿನಲ್ಲಿ ನಾವು ಸಹಾಯ ಮಾಡುವುದಕ್ಕಾಗುತ್ತದೆ. ಅದಕ್ಕೆ ದಯವಿಟ್ಟು ಹೂಳು ತೆಗೆಯುವಂಥ ಕಾರ್ಯ ತೆಗೆದುಕೊಳ್ಳಿ ಎಂದು ಮಾನ್ಯ ಲಿಂಗಪ್ಪನವರಿಗೆ ನಾನು ಹೇಳಿದ್ದೇನೆ. ಅದರಂತೆ, ಸರ್ಕಾರದ ವತಿಯಿಂದ ಮಾನ್ಯ ಸಚಿವರೂ ಸಹಿತ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಇವತ್ತು ಬಹಳ ದಿವಸದಿಂದ ಹುಬ್ಬಳ್ಳಿ ಧಾರವಾಡದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಉಳಿದ ಎಲ್ಲಾ ಸಮಸ್ಯೆಗಳಿಗಿಂತ ಅಂದರೆ ರಸ್ತೆ ಬಗ್ಗೆ ಹೇಳುವುದಿಲ್ಲ, ಕೊಳಚೆಯದ್ದು ಹೇಳುವುದಿಲ್ಲ, ಗಟಾರದ್ದು ಹೇಳುವುದಿಲ್ಲ, ಯು.ಜಿ.ಡಿ.ದ್ದು ಹೇಳುವುದಿಲ್ಲ, ಮೊಟ್ಟಮೊದಲು ಹೇಳುತ್ತಾ ಇರುವುದು ಕುಡಿಯುವ ನೀರಿನ ಸಮಸ್ಯೆ. ಈ ಸಮಸ್ಯೆಯನ್ನು ಪರಿಹಾರ ಮಾಡಿಬಿಟ್ಟರೆ ಜನರೆಲ್ಲಾ ಇವರನ್ನು ಹಾಡಿಹರಸುತ್ತಾರೆಂದು ಹೇಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ): ಮಾನ್ಯ ಸಭಾಧ್ಯಕ್ಷರೇ, ನಿಯಮ 69ರ ಕೆಳಗಡೆ ವಿದ್ಯುತ್, ಕುಡಿಯುವ ನೀರು ಹಾಗೂ ಬರಗಾಲದ ವಿಷಯದ ಮೇಲೆ ಚರ್ಚೆಗೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಇವತ್ತು ವಿದ್ಯುಚ್ಛಕ್ತಿ ಬಗ್ಗೆ ಸದನದಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಜಗದೀಶ್ ಶೆಟ್ಟರು ಮತ್ತು ನಮ್ಮ ನಾಯಕರಾದಂಥ ಮಾನ್ಯ ಸಿಂಧ್ಯರವರು ಇನ್ನಿತರ ಹಲವಾರು ಪ್ರಮುಖರು ಇವತ್ತು ರಾಜ್ಯದಲ್ಲಿ ಏನು ಸಮಸ್ಯೆ ಇದೆ ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಾನು ಕೂಡ ಈ ವಿದ್ಯುಚ್ಛಕ್ತಿ ಬಗ್ಗೆ ಸ್ವಲ್ಪಮಟ್ಟಿಗೆ ಹೇಳಲಿಕ್ಕೆ ಬಯಸುತ್ತೇನೆ. ಸುಮಾರು ನಮ್ಮ ರಾಜ್ಯದಲ್ಲಿ 17 ರಿಂದ 18 ಲಕ್ಷ ಜನ ಐ.ಪಿ. ಸೆಟ್‌ನ್ನು ಹೊಂದಿದಂಥ ರೈತರಿದ್ದೇವೆ. ಸರ್ಕಾರ ಅವರಿಗೆ ವಿದ್ಯುತ್‌ನ್ನು ಸಪ್ಲೈ ಮಾಡುವುದು 6 ತಾಸುಗಳ ಕಾಲ ತ್ರೀಫೇಸನ್ನು ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದೆ. ಅಂದರೆ, ಇನ್ನೂ 12 ತಾಸುಗಳು ಸಿಂಗಲ್ ಮತ್ತು ಲೋಡ್ ಷೆಡ್ಡಿಂಗ್ 6 ಹವರ್ಸ್ ಎಂಬ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ, ಇದನ್ನು ಕೊಡತಕ್ಕಂಥ ಸಂದರ್ಭದಲ್ಲಿ, ಈ 6 ತಾಸಿನ ಅವಧಿಯಲ್ಲಿ ಹಲವಾರುಸಾರಿ ಇಂಟ್ರಪ್‌ಷನ್ ಆಗುತ್ತದೆ. ಇದರಿಂದ ಏನಾಗುತ್ತದೆಂದರೆ, ತಮಗೆ ಗೊತ್ತಿರುವ ಹಾಗೆ ಇವತ್ತು ಸ್ಟಾಟರುಗಳು ಸುಡುತ್ತಾ ಇವೆ, ಪಂಪುಸೆಟ್ಟುಗಳು ಸುಡುತ್ತಾ ಇವೆ, ರೈತ ಪೂರ್ತಿ ಆರ್ಥಿಕ ದೃಷ್ಟಿಯಿಂದ ಪೂರಾ ಕೆಳಗೆ ಇದ್ದಾನೆ. ಏಕೆಂದರೆ, ಅವನಿಗೆ ಕಳೆದ ಬಾರಿ ತಮಗೆ ಗೊತ್ತಿದ್ದಂತೆ ಬರಗಾಲವನ್ನು ಎದುರಿಸಿದ್ದಾನೆ. ಉತ್ತರ ಕರ್ನಾಟಕದಂಥ ಭಾಗದಲ್ಲಿ ಈ ಐ.ಪಿ. ಸೆಟ್‌ನ್ನು ಬಿಟ್ಟರೆ ಬೇರೆ ನೀರಾವರಿ ಮೂಲದಿಂದ ಬದುಕುವುದಕ್ಕೆ ಸಾಧ್ಯವಿಲ್ಲ. ಇಂತಹ

ಪರಿಸ್ಥಿತಿಯಲ್ಲೂ ಕೂಡ ಅಕ್ರಮ, ಸಕ್ರಮ ಎಂಬ ಜಾರಿಯನ್ನು ಕೆ.ಪಿ.ಟಿ.ಸಿ.ಎಲ್.ನವರು ಅಧ್ಯಕ್ಷರು ಮತ್ತು ಮಂತ್ರಿಗಳು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅದನ್ನೂ ಕೂಡ ನಾವು ಸ್ವಾಗತ ಮಾಡುತ್ತೇವೆ. ಆದರೆ, ನಮ್ಮ ಭಾಗದಲ್ಲಿ ಏನಾಗಿದೆ ಎಂದರೆ, 1995ರಿಂದ 2001ರ ಕೊನೆಯವರೆಗೆ ಡಿಪಾಸಿಟ್‌ನ್ನು ಮಾಡಿಸಿಕೊಂಡಿದ್ದಾರೆ. ಮತ್ತು ಕಾಮಗಾರಿ ಆದೇಶವನ್ನು ಕೊಟ್ಟಿದ್ದಾರೆ. ಅವರಿಗೆ ಆರ್.ಆರ್. ನಂಬರು ಇಷ್ಯೂ ಮಾಡಿಲ್ಲ. ಅಂದರೆ, ಇನ್ನು ಅವರನ್ನು ಅನಧಿಕೃತ ಪಂಪುಸೆಟ್ಸ್ ಎಂದು ಘೋಷಣೆ ಮಾಡಿದ್ದಾರೆ. ಈಗ ಅವರಿಗೆ ಅಡಿಷನಲ್ ಡಿಪಾಸಿಟ್ ಮಾಡಿದರೆ ಮಾತ್ರ, ಅವರಿಗೆ ಅಧಿಕೃತ ಪಂಪುಸೆಟ್ಸ್ ಎಂದು ಘೋಷಿಸುತ್ತಾರೆ. ಇದು ಯಾವ ನ್ಯಾಯ ಎಂದು ಈ ಸಂದರ್ಭದಲ್ಲಿ ಕೇಳಲಿಕ್ಕೆ ಬಯಸುತ್ತೇನೆ. ಇದು ಇಲಾಖೆಯವರು ಮಾಡಬೇಕಾಗಿತ್ತು. ಏಕೆಂದರೆ, 1995 ರಿಂದ ಡಿಪಾಸಿಟ್ ಮಾಡಿಸಿಕೊಂಡು, ಕಾಮಗಾರಿ ಆದೇಶವನ್ನು ಕೊಟ್ಟರೂ ಕೂಡ ಇವತ್ತು ನಂಬರು ಕೊಟ್ಟಿಲ್ಲವೆಂದರೆ, ಇದು ಸರ್ಕಾರದ ತಪ್ಪು ನೀತಿ ಎಂದು ಭಾವಿಸಬೇಕಾಗುತ್ತದೆ. ಹೀಗಾಗಿ, ರೈತರಿಗೆ ಬಹಳ ತೊಂದರೆಯಾಗುತ್ತದೆ. ಈಗಿರತಕ್ಕಂಥ ಐ.ಪಿ.ಸೆಟ್‌ನ್ನು ಅಧಿಕೃತವೆಂಬ ಫೀಲಿಂಗ್‌ನಲ್ಲಿ ರೈತ ಇದ್ದರೆ, ಇವರು ಅನಧಿಕೃತ ಎಂದು ಘೋಷಣೆ ಮಾಡಿದ್ದಾರೆ. ಅದಕ್ಕಾಗಿ ಇದನ್ನು ವಾಪಸ್ ತೆಗೆದುಕೊಳ್ಳತಕ್ಕ ವಿಚಾರವನ್ನು ಸರ್ಕಾರ ಮಾಡಬೇಕಾಗುತ್ತದೆ. ಅವರಿಗೆ ಅಡಿಷನಲ್ ಡಿಪಾಸಿಟ್‌ನ್ನು ಹಾಕಬಾರದೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಮತ್ತು ಅದಲ್ಲದೆ, ಇವತ್ತು ಹೊಸ ಒಂದು ಪ್ರೊಡಕ್ಷನ್, ಕೆ.ಇ.ಬಿ. ಬಗ್ಗೆ ಉತ್ಪಾದನೆ ಈ ರಾಜ್ಯದಲ್ಲಿ ಏನು ಸಮಸ್ಯೆ ಇದೆ, ಈ ವರ್ಷ ನಾವು ಜಲಾಶಯಗಳ ಮೇಲೆ ಹೇಳುತ್ತಾ ಹೋಗುತ್ತಿದ್ದೇವೆ. ಈಗ ಮುಂದಿನ ದಿನಮಾನವನ್ನೂ ಕೂಡ ನೋಡಬೇಕಾಗಿದೆ. ಇವತ್ತೇನು ಉತ್ಪಾದನೆ ಮಾಡುತ್ತಿದ್ದಾರೆಂಬ ಬಗ್ಗೆ ಮಾನ್ಯ ಶ್ರೀನಿವಾಸಗೌಡರ ಪ್ರಶ್ನೆಗೆ ಉತ್ತರವನ್ನೂ ಕೂಡ ಸರ್ಕಾರದವರು ಕೊಟ್ಟಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಇವರು ಒಂದು ಮೆಗಾವ್ಯಾಟ್ ವಿದ್ಯುತ್ತನ್ನೂ ಉತ್ಪಾದನೆ ಮಾಡಿಲ್ಲ. ಆದರೆ, ಆಲಮಟ್ಟಿ ಪ್ರಾಜೆಕ್ಟ್ ಮತ್ತು ಬಳ್ಳಾರಿ ಪ್ರಾಜೆಕ್ಟ್ ಬಗ್ಗೆ ಪ್ರಾರಂಭ ಮಾಡಿದ್ದೇವೆಂದು ಹೇಳುತ್ತಾ ಇದ್ದಾರೆ. ಇನ್ನೂ ಮೂರು ವರ್ಷ ಒಂದು ಮೆಗಾವ್ಯಾಟ್ ಸಿಗುವುದಕ್ಕೆ ಸಾಧ್ಯವಿಲ್ಲವೆಂದು ನಾವು ಭಾವಿಸಿಕೊಂಡಿದ್ದೇವೆ. ಆದರೆ, ಸರ್ಕಾರ ಇದರ ಬಗ್ಗೆ ಪೂರ್ವಾಪರ ಚಿಂತನೆಯನ್ನು ಮಾಡಬೇಕಾಗಿದೆ. ಏಕೆಂದರೆ, ರೈತರಿಗೆ ವಿದ್ಯುತ್ ಪೂರ್ತಿಯಾಗಿ ಜೀವನದ ಜೀವಾಳವಾಗಿದೆ. ಯಾವುದೇ ಒಂದು ಕ್ಷೇತ್ರವನ್ನು ತೆಗೆದುಕೊಂಡರೆ, ವಿದ್ಯುತ್ ಇಲ್ಲದೆ ನಾವು ಬದುಕುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ಆ ಭಾಗದಲ್ಲಿರತಕ್ಕ ರೈತರಿಗೆ ಏಪ್ರಿಲ್ 6ರ ವರೆಗೆ ಕಟ್ ಆಫ್ ಡೇಟ್ ಕೊಟ್ಟಿದ್ದೀರಿ. ಆ ಡೇಟ್‌ನೊಳಗೆ ಸಕ್ರಮಗೊಳಿಸಿಕೊಳ್ಳದಿದ್ದರೆ, ಅದನ್ನು ಕಿತ್ತುಹಾಕುತ್ತೇವೆ ಮತ್ತು ರೈತನನ್ನು ಜೈಲಿಗೆ ಕಳುಹಿಸುತ್ತೇವೆಂಬ ಮಾತನ್ನು ಘೋಷಣೆ ಮುಖಾಂತರ, ಮತ್ತು ಮಾಧ್ಯಮದ ಮುಖಾಂತರ ನಾವು ಕೇಳುತ್ತಾ ಇದ್ದೇವೆ. ಈ ರೈತನ ಬಗ್ಗೆ ಜೈಲು ಎಂದರೆ, ನಾವು ಆತ್ಮ ವಿಮರ್ಶೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಪಾಲಿಸಿ ನಿರ್ಣಯಗಳನ್ನು

ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ನಾವು ಆರ್ಥಿಕ ಭದ್ರತೆಯನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಜೊತೆಗೆ ಆ ಸಂಸ್ಥೆಯನ್ನು ಕೂಡ ನಾವು ಉಳಿಸಿಕೊಳ್ಳಬೇಕಾಗುತ್ತದೆ. ಆದರೆ, ಅದೇ ಐ.ಪಿ. ಸೆಟ್‌ನ್ನು ನಂಬಿದಂಥ ರೈತ, ಇವತ್ತು 6ನೇ ತಾರೀಖಿನೊಳಗೆ ಆ ಡಿಪಾಸಿಟ್‌ನ್ನು ಮಾಡದೇ ಇದ್ದರೆ, ಅದನ್ನು ಕಿತ್ತು ಹಾಕುತ್ತೇವೆ, ರೈತನನ್ನು ಜೈಲಿಗೆ ಕಳುಹಿಸುತ್ತೇವೆ, ಅವನು 6 ತಿಂಗಳವರೆಗೆ ಹೊರಗೆ ಬರುವುದಕ್ಕೆ ಸಾಧ್ಯವಿಲ್ಲವೆಂದರೆ ಇದು ಬಹಳ ಕಠಿಣ ನಿಲುವು ಆಗುತ್ತದೆ. ಈ ವ್ಯವಸ್ಥೆ ಮುಂದುವರೆದರೆ, ಇಡೀ ರಾಜ್ಯದಲ್ಲಿ ರೈತರು ದಂಗೆ ಏಳುತ್ತಾರೆ. ಕೆ.ಇ.ಬಿ. ಅಧಿಕಾರಿಗಳು ನಮ್ಮನ್ನು ಮುಟ್ಟಲಿಕ್ಕೆ ಸಾಧ್ಯ ಇಲ್ಲ. ನಾವು ಹೇಳಬಹುದು, ಕಾನೂನನ್ನು ಮಾಡಬಹುದು. ಆದರೆ, ಕಾರ್ಯಕ್ರಮವನ್ನು ಕಾರ್ಯಗತಗೊಳಿಸತಕ್ಕ ಸಂದರ್ಭದಲ್ಲಿ ಬಹಳ ತೊಂದರೆಯನ್ನು ನೀವು ಎದುರಿಸಬೇಕಾಗುತ್ತದೆ. ಮತ್ತೆ ಏನು ಮಾಡಿದ್ದಾರೆ, ತಮ್ಮಟೆ ಬಾರಿಸುತ್ತಾ ಇದ್ದಾರೆ. ವಿದ್ಯುತ್ ಜೋಡಣೆಯನ್ನು ಸಕ್ರಮ ಎಂದು ಘೋಷಣೆ ಮಾಡಬೇಕಾದರೆ, ರೈತರ ಬಾಕಿ ತುಂಬಿಸಿಕೊಳ್ಳುವಂಥ ಸಂದರ್ಭದಲ್ಲಿ ತಮಟೆ ಬಾರಿಸುತ್ತಾರೆ. ಈ ತರಹದ ವ್ಯವಸ್ಥೆಯನ್ನು ನಾವು ಎಲ್ಲಿಯೂ ನೋಡಿಲ್ಲ. ಸರಕಾರವು ಇದರ ಬಗ್ಗೆ ಏಕೆ ಚಿಂತನೆ ಮಾಡುತ್ತಾ ಇಲ್ಲ? ರೈತರು ನಮ್ಮವರು ಹೌದೋ ಅಲ್ಲವೋ ಎಂಬ ರೀತಿಯಲ್ಲಿದೆ ಇವರ ವರ್ತನೆ. ನಾವೂ ಕೂಡ ಹಳ್ಳಿಗಳಿಂದ ಬಂದವರು, ಗ್ರಾಮೀಣ ಬದುಕಿನಿಂದ ಮಾತ್ರ ಇವೊತ್ತು ರಾಜ್ಯವನ್ನು ಕಟ್ಟುವುದಕ್ಕೆ ಸಾಧ್ಯವಾಗಿದೆ. ಇಂಥ ಚಿಂತನೆಗಳನ್ನು ಸರಕಾರದವರು ಏಕೆ ಮಾಡುತ್ತಾ ಇಲ್ಲ? ಆ ದಿಶೆಯಲ್ಲಿ ನಾವು ಇವೊತ್ತು ಕೊಡತಕ್ಕಂಥಾದ್ದು ದಿನಕ್ಕೆ ಕೇವಲ ಆರು ಗಂಟೆಗಳ ಕಾಲದ ವಿದ್ಯುತ್‌ನ್ನು ಮಾತ್ರ. ಒಂದು ವಿದ್ಯುತ್ ಕಂಬಕ್ಕೆ ಎಷ್ಟು ಖರ್ಚಾಗುತ್ತದೆ ಅದರ ಎಸ್ಟಿಮೇಟ್ ಪ್ರಕಾರ ಡಿಪಾಸಿಟ್‌ನ್ನು ರೈತರು ಮಾಡಬೇಕಾದರೆ, ಇಲ್ಲಿ ನಮ್ಮ ಭದ್ರತೆಯನ್ನು ನಾವು ಗುರುತಿಸಿಕೊಳ್ಳುತ್ತೇವೆ. ಇವೊತ್ತು ಪೂರ್ಣ ಪ್ರಮಾಣದಲ್ಲಿ ವಿದ್ಯುತ್‌ನ್ನು ರೈತರಿಗೆ ಕೊಡಲಿಕ್ಕೆ ಆಗದಿದ್ದ ಸಂದರ್ಭದಲ್ಲಿ ನೀವು ರಿಯಾಯತಿಯನ್ನು ಕೊಡಬೇಕಾಗುತ್ತದೆ. ಎಫ್.ಎಲ್.ಆರ್. ಏನು ಗಡುವು ಇದೆ ಅದನ್ನು ನೀವು ಮುಂದುವರಿಸಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. 1995 ರಿಂದ 2000ದ ವರೆಗೆ ಡಿಪಾಸಿಟ್ ಮಾಡಿದಂಥ ರೈತರಿಗೆ ಆರ್.ಆರ್. ನಂಬರ್‌ನ್ನು ಇಷ್ಯೂ ಮಾಡಬೇಕಾಗಿತ್ತು. ಅಂಥವುಗಳನ್ನು ಅಧಿಕೃತ ಐ.ಪಿ. ಸೆಟ್ ಎಂದು ಘೋಷಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರಕಾರವನ್ನು ಒತ್ತಾಯಿಸುತ್ತೇನೆ. ಮಾನ್ಯ ಸಿಂಧ್ಯರವರು ಒಂದು ಮಾತನ್ನು ಹೇಳಿದರು. ಕುಡಿಯುವ ನೀರು ಮತ್ತು ವಿದ್ಯುತ್ ಇವುಗಳೆರಡು ಲಿಂಕ್ ಇರತಕ್ಕಂಥವುಗಳು. ಕುಡಿಯುವ ನೀರಿನ ವ್ಯವಸ್ಥೆಗೆ ಪ್ರತ್ಯೇಕವಾದ 25 ಕೆ.ವಿ. ಟ್ರಾನ್ಸ್‌ಫಾರ್ಮರ್‌ನ್ನು ಕೊಟ್ಟಿದ್ದರೆ ಅನುಕೂಲವಾಗುತ್ತದೆ. ಇವೊತ್ತು ಎನ್‌ಆರ್‌ಡಬ್ಲ್ಯೂ, ಡಬ್ಲ್ಯೂ ಮುಂತಾಗಿ ಬೇರೆ ಯಾವುದೇ ಸ್ಕೀಮ್ ಇರಬಹುದು ಅಂಥ ಕುಡಿಯುವ ನೀರಿನ ಯೋಜನೆಗಳಿಗೆ ಪ್ರತ್ಯೇಕವಾದ ಟ್ರಾನ್ಸ್‌ಫಾರ್ಮರ್‌ನ್ನು ವ್ಯವಸ್ಥೆಗೊಳಿಸಿದರೆ ಇರತಕ್ಕಂಥ ಆರು ಘಂಟೆಗಳ ಕಾಲಾವಧಿಯಲ್ಲಿ ನಾವು ಜನರಿಗೆ ಕುಡಿಯುವ ನೀರನ್ನು

ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಆ ದಿಶೆಯಲ್ಲಿ ಸರಕಾರದವರು ಚಿಂತನೆಯನ್ನು ಮಾಡಬೇಕೆಂದು ಒತ್ತಾಯವನ್ನು ಮಾಡುತ್ತಾ ಹೊಸತಾಗಿ ವಿದ್ಯುತ್ ಉತ್ಪಾದನೆಯ ಬಗ್ಗೆ ಕೈಹಾಕಬೇಕಾಗುತ್ತದೆ. ವಿದ್ಯುಚ್ಛಕ್ತಿಯು ನಮಗೆ ಬಹಳ ಮುಖ್ಯವಾಗಿ ಬೇಕಾಗಿದೆ. ನಾವು ಬೇರೆ ಬೇರೆ ವಿಷಯಗಳಿಗೆ ಸಾಲವನ್ನು ಎತ್ತುತ್ತಾ ಇದ್ದೇವೆ. ಸಾಲ ಎತ್ತುವುದನ್ನು ಬಿಟ್ಟರೆ ಬೇರೆ ಕೆಲಸವೇ ಇಲ್ಲವೆಂಬಂತಾಗಿದೆ. ಯಾವುದಾದರೂ ಒಂದು ಯೋಜನೆ ಬಗ್ಗೆ ಸಂಬಂಧಪಟ್ಟ ಮಂತ್ರಿಯವರನ್ನು ಕೇಳಿದರೆ, ನಾವು ಹುಡ್ಕೋ, ನಬಾರ್ಡ್, ವಿಶ್ವಬ್ಯಾಂಕ್ ಮುಂತಾದ ಲೋನ್ ಅನ್ನು ತೆಗೆದುಕೊಳ್ಳುತ್ತಾ ಇದ್ದೇವೆ, ಅದು ಬಂದ ಮೇಲೆ ನಿಮ್ಮ ಯೋಜನೆಯನ್ನು ನಾವು ಕೈಗೆತ್ತಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಇವೊತ್ತು ಅಂಗನವಾಡಿ ಕಟ್ಟಡಗಳಿಗೆ ಕೂಡ ನಾವು ನಬಾರ್ಡ್ ಸಾಲವನ್ನು ಎತ್ತುತ್ತಾ ಇದ್ದೇವೆ. ಹಿಂದಿನ ಹಿರಿಯರು ಗುರುಕುಲ ಶಿಕ್ಷಣ ಪದ್ಧತಿಯಲ್ಲಿ ಪರಿಸರದ ವಾತಾವರಣದಲ್ಲಿ ಶಿಕ್ಷಣವನ್ನು ಪಡೆದುಕೊಂಡರು. ಆದರೆ ಸಾಲವನ್ನು ಯಾವುದಕ್ಕೆ ಪಡೆದುಕೊಳ್ಳಬೇಕೆಂಬ ಬಗ್ಗೆ ಸರಕಾರದವರು ಚಿಂತನೆ ಮಾಡುತ್ತಾ ಇಲ್ಲ. ಮೂಲಭೂತವಾಗಿರತಕ್ಕಂಥ ವಿದ್ಯುತ್ ಸರಬರಾಜು, ಕುಡಿಯುವ ನೀರು, ಜನರಿಗೆ ಉದ್ಯೋಗ ನೀಡುವುದು ಮುಂತಾದ ಸಮಸ್ಯೆಗಳ ಬಗ್ಗೆ ಸರಕಾರದವರು ಗಂಭೀರ ಚಿಂತನೆ ಮಾಡಬೇಕೆಂದು ಒತ್ತಾಯಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ನಮ್ಮ ನಾಯಕರಾದ ಮಾನ್ಯ ಸಿಂಧ್ಯರವರು ಮಾತನಾಡತಕ್ಕಂಥ ಕಾಲದಲ್ಲಿ ಹೇಳಿದರು. ಆರ್‌ಡಿಪಿಆರ್ ಸೆಕ್ರೆಟರಿಯವರ ಜೊತೆಗೆ ಇವೊತ್ತು ಮಾತನಾಡಿ ಅವರಿಗೆ ಆದೇಶವನ್ನೂ ಕೂಡ ಕೊಟ್ಟಿದ್ದೇನೆ, ಗ್ರಾಮಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ನವರು ಆ ಹಣವನ್ನು ನೇರ ಬಿಡುಗಡೆ ಮಾಡುತ್ತಾರೆ. ಬೋರ್‌ವೆಲ್‌ಗಳ ಮುಖಾಂತರ ಜನರಿಗೆ ನೀರು ಒದಗಿಸಿಕೊಡಲು ವ್ಯವಸ್ಥೆ ಮಾಡಿದ್ದೇವೆಂದು ಹೇಳಿದರು. ಮಾನ್ಯ ಘೋರ್ಪಡೆಯವರು ಇಲ್ಲಿದ್ದಾರೆ. ನೀವು ಇರತಕ್ಕಂಥ ಅನುದಾನದಲ್ಲಿಯೇ ಖರ್ಚು ಮಾಡಲು ಆದೇಶ ನೀಡಿದ್ದೀರೋ ಹೇಗೆ ಎಂಬ ಬಗ್ಗೆ ತಿಳಿಸಬೇಕು. ಅಂತೆಯೇ ಕುಡಿಯುವ ನೀರಿಗಾಗಿ ಪ್ರತ್ಯೇಕ ಹಣವನ್ನು ಜಿಲ್ಲಾಪಂಚಾಯತ್ ಸಿಇಓ ಗಳವರಿಗೆ ಕಳುಹಿಸಿಕೊಟ್ಟಿದ್ದೀರೋ ಹೇಗೆ ಎಂಬುದನ್ನು ತಿಳಿಸಬೇಕು. ಇಲ್ಲವಾದಲ್ಲಿ ನಾವು ಜಿಲ್ಲಾ ಪಂಚಾಯತ್‌ನಲ್ಲಿ ಕೇಳಿದರೆ ನಮ್ಮ ಅನುದಾನದ ಕ್ರಿಯಾ ಯೋಜನೆಯು ಮುಗಿದಿದೆ, ಡಿಸಿ ಯವರಿಗೆ ಸಂಪರ್ಕ ಮಾಡಿದರೂ ನಮಗೆ ಹಣ ರಿಲೀಸ್ ಆಗಿಲ್ಲ, ಕಂದಾಯ ಮಂತ್ರಿಯವರು ಘೋಷಣೆ ಮಾಡಿರುವುದು ಪತ್ರಿಕೆಗಳಲ್ಲಿ ಬಂದಿದೆ ಎಂದು ಡಿಸಿ ಯವರನ್ನು ಕೇಳಿದರೆ ನಮಗೆ ಇನ್ನೂ ಹಣವೇ ಬಂದಿಲ್ಲ ನಾವು ಕೆಲಸವನ್ನು ಹೇಗೆ ತೆಗೆದುಕೊಳ್ಳುವುದು ಎಂದು ಹೇಳುತ್ತಾರೆ. ಹೀಗೆ ನಾವು ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡದಿದ್ದರೆ ಇನ್ನು ಯಾವುದಕ್ಕೆ ಕೊಡುತ್ತೇವೆ ಎಂಬುದನ್ನು ಹೇಳಬೇಕು. ಇವೊತ್ತು ಕುಡಿಯುವ ನೀರಿನ ಅಭಾವದ ಬಗ್ಗೆ ನಾವು ಪತ್ರಿಕೆಗಳಲ್ಲಿ ನೋಡುತ್ತಿರುತ್ತೇವೆ. ಹುಬ್ಬಳ್ಳಿ-ಧಾರವಾಡ, ಗಂಗಾವತಿ, ಬಿಜಾಪುರ, ಕಲ್ಬುರ್ಗಿ, ಬೆಳಗಾವಿ ಮುಂತಾದ ಕಡೆಗಳಲ್ಲಿ ಬರಗಾಲದ ಹಿನ್ನಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನಾವು

ಎದುರಿಸುತ್ತಾ ಇದ್ದೇವೆ. ತಾವುಗಳು ಸಂಬಂಧಪಟ್ಟ ಜಿಲ್ಲಾ ಮಂತ್ರಿಯವರಿಗೆ ಒಂದು ಆದೇಶವನ್ನು ತಾವುಗಳು ಕೊಡಬೇಕಾಗುತ್ತದೆ. ಹಣವು ಕಂದಾಯ ಸಚಿವರಲ್ಲಿದ್ದರೆ, ಎಫ್ ಡಿ ಯಲ್ಲಿದ್ದರೆ ಆ ಹಣವನ್ನು ಇವೊತ್ತು ರವಾನೆ ಮಾಡಿದರೆ ಜಿಲ್ಲಾಮಂತ್ರಿಗಳು ಕ್ಷೇತ್ರವಾರು ಎಷ್ಟು ಕೊಳವೆಬಾವಿಗಳನ್ನು ಕೊರೆಯುವುದಕ್ಕೆ ಸಾಧ್ಯ ಎಂಬುದನ್ನು ಅವರು ಅಂದಾಜು ಮಾಡಲು ಸಾಧ್ಯವಾಗುತ್ತದೆ?

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೇ, ಈ ಬೋರ್‌ವೆಲ್‌ಗಳ ಬಗ್ಗೆ ಪರಿಸ್ಥಿತಿಯನ್ನು ನಾನು ಅರ್ಥ ಮಾಡಿಕೊಳ್ಳ ಬಲ್ಲೆ. ನಮ್ಮ ಕುಡಿಯುವ ನೀರಿನ ಕಾರ್ಯಕ್ರಮಕ್ಕೆ ಕೇಂದ್ರ ಸರಕಾರದರು ಹಣವನ್ನು ಕೊಡುತ್ತಾರೆ. ನಾವು ಹಣವನ್ನು ಕೊಡುತ್ತೇವೆ. ಸಾಕಷ್ಟು ಹಣ ಬೋರ್‌ವೆಲ್‌ಗಳಿಗೆ, ಪೈಪ್‌ವಾಟರ್ ಸಪ್ಲೈಗೆ, ಮಿನಿವಾಟರ್ ಸಪ್ಲೈಗೆ, ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಸಿಇಒ ರವರ ಹತ್ತಿರ ಇದೆ. ಈಗ ಬಂದಿರುವ ಪ್ರಶ್ನೆ ಏನೆಂದರೆ ಈ ಎರಡು ತಿಂಗಳು ಏನು ನೀರಿನ ತೊಂದರೆಯಾಗುತ್ತದೆ, ಆ ತೊಂದರೆಯನ್ನು ಎದುರಿಸುವುದಕ್ಕೆ ಏನು ಮಾಡಬೇಕೆಂದು ನಿರ್ಧರಿಸಬೇಕು. ಅದು ಏಪ್ರಿಲ್, ಮೇ, ತಿಂಗಳಲ್ಲಿ. ಅದಕ್ಕೋಸ್ಕರ ನಾವು ಮೊನ್ನೆ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ಸಿಇಒಗಳಿಗೆ ಅಂಥ ಕಷ್ಟದ ಪರಿಸ್ಥಿತಿಯು ಏನಾದರೂ ಬಂದರೆ, ನೀವು ಏನುಮಾಡುವುದಕ್ಕೆ ಸಾಧ್ಯ, ಅಥವಾ ಏನು ಮಾಡುವುದು ಸೂಕ್ತ ಇದೆ, ಅದನ್ನು ದಯವಿಟ್ಟು ಮಾಡಿ ಎಂದು ನಾವು ಹೇಳಿದ್ದೇವೆ. ಮತ್ತು ಇದಕ್ಕೆ ಕೆಲಾಮಿಟಿಸ್ ರಿಲೀಫ್‌ನಿಂದ ಹಣವನ್ನು ಕೊಡುತ್ತೇವೆ. ಕೆಲಾಮಿಟಿಸ್ ರಿಲೀಫ್‌ನಿಂದ ಹಣವನ್ನು ಕೊಡುವಾಗ ಕೇಂದ್ರ ಸರಕಾರದವರು ಅದನ್ನು ಬೇರೆ ಉದ್ದೇಶಗಳಿಗೋಸ್ಕರ ಉಪಯೋಗಿಸಬಾರದು ಎಂದು ಹೇಳಿದ್ದಾರೆ. ಏಕೆಂದರೆ ಈ ದೇಶದಲ್ಲಿ ನಾವು ಮಾತು ಮಾತಿಗೆ ನಾವು ನೂರಾರು ಬೋರ್‌ವೆಲ್ಸ್‌ಗಳನ್ನು ಹಾಕುತ್ತಾ ಹೋದರೆ, ಅದರಿಂದ ನಮ್ಮ ಸಮಸ್ಯೆ ಪರಿಹಾರವಾಗುವುದಿಲ್ಲ. ಆದರೂ ಕೂಡ ಕೆಲವು ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕುವ ಅನಿವಾರ್ಯ ಆದೀತು ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡು ನಾವು ತಿಳಿಸಿದ್ದೇವೆ. ನಮ್ಮ ಹಣ ಏನಿದೆ, ಅದನ್ನು ಅನಿವಾರ್ಯ ಎಂದು ಕಂಡು ಬಂದಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಲು ಉಪಯೋಗಿಸಿ ಎಂದು ಹೇಳಿದ್ದೇನೆ. ಬರಗಾಲದಲ್ಲಿ ಅಂದರೆ ಬೇಸಿಗೆಯಲ್ಲಿ ಏನಾಗುತ್ತದೆ ಅಂದರೆ, ಎಷ್ಟೋ ಕಡೆಗಳಲ್ಲಿ ಕೆಟ್ಟು ಹೋಗುತ್ತದೆ, ರಿಪೇರಿ ಮಾಡಲು ಹಣ ಇರುವುದಿಲ್ಲ. ಹತ್ತಿರ ಎಲ್ಲಾದರೂ ನೀರು ಇರುವ ಕಡೆಗಳಿಂದ ನೀರು ತರುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಟ್ರಕ್ ಮೂಲಕ ತರುವ ವ್ಯವಸ್ಥೆ ಮಾಡಬೇಕಾಗುತ್ತದೆ. ಇದಕ್ಕೆಲ್ಲಾ ಸಾಕಷ್ಟು ಹಣವನ್ನು ನಾವು ಆಗಲೇ ಕೊಟ್ಟಿದ್ದೇವೆ. ಬೋರ್‌ವೆಲ್ಸ್ ಹ್ಯಾಂಡ್ ಪಂಪ್ ಇದ್ದರೆ ಒಂದೊಂದು ಹ್ಯಾಂಡ್ ಪಂಪ್‌ಗೆ 600 ರೂಪಾಯಿಗಳ ಮೆಂಟೇನೆನ್ಸ್ ಗ್ರ್ಯಾಂಟ್ ಇದೆ. ಅಂದರೆ ನಮ್ಮ ರಾಜ್ಯದಲ್ಲಿರತಕ್ಕಂಥ 1,75,000 ಬೋರ್‌ವೆಲ್ಸ್‌ಗೆ 600 ರೂಪಾಯಿಗಳ ಪ್ರಕಾರ ನೀವು ಲೆಕ್ಕ ಹಾಕಿದರೆ, ಅದು

ಹತ್ತು ಕೋಟಿ ರೂ.ಗಳಾಗುತ್ತದೆ. ಮಿನಿವಾಟರ್ ಸಪ್ಲೈ ಸ್ಕೀಂ ಏನಿದೆ, ಕರ್ನಾಟಕದಲ್ಲಿ 17,398 ಸ್ಕೀಂಗಳಿವೆ. ಒಂದು ಮಿನಿವಾಟರ್ ಸಪ್ಲೈಗೆ 3500 ಮೈಂಟೇನೆನ್ಸ್ ಗ್ರ್ಯಾಂಟ್ ಇದೆ. ಇದನ್ನು ಬಜೆಟ್‌ನಲ್ಲಿ ಸೇರಿಸಿದ್ದೇವೆ. ಅದು ಹೆಚ್ಚು ಕಡಿಮೆ ಆರು ಕೋಟಿ ರೂಪಾಯಿಗಳಾಗುತ್ತವೆ. ಕರ್ನಾಟಕದಲ್ಲಿ 16,000 ಪೈಪ್‌ವಾಟರ್ ಸಪ್ಲೈ ಇದೆ. ಒಂದೊಂದಕ್ಕೆ 8000 ರೂಪಾಯಿಗಳ ಮೈಂಟೇನೆನ್ಸ್ ಇಟ್ಟಿದ್ದೇವೆ. ಇದೆಲ್ಲಾ ಹೆಚ್ಚು ಕಡಿಮೆ 30 ಕೋಟಿ ರೂಪಾಯಿಗಳಾಗುತ್ತವೆ. ಇಷ್ಟು ಹಣ ಬಜೆಟ್‌ನಲ್ಲಿ ಅವರ ಕಡೆ ಇಲ್ಲವೆಂದಲ್ಲ. ಇದೆ, ಅದರಲ್ಲಿ ಯಾವ ಅನುಮಾನವಿಲ್ಲ. ಅದಲ್ಲದೇ ಬೇರೆ ಹಣ ಕೂಡ ಇದೆ.

ಶ್ರೀ ಎಸ್.ಎಸ್.ಪಾಟೀಲ್: ದಯಮಾಡಿ ಇದೇ ಬಜೆಟ್‌ನಲ್ಲಿ ದುಡ್ಡು ಕಳುಹಿಸಿಲ್ಲ. ಉದಾಹರಣೆಗೆ ಒಂದು ಪ್ರಶ್ನೆಯನ್ನು ಇವೊತ್ತು ಕೇಳಿದ್ದೇನೆ. ರಸ್ತೆ ರಿಪೇರಿಗಾಗಿ ಎಷ್ಟು ಹಣ ಇಟ್ಟಿದ್ದೀರಿ ಎಂದುದಕ್ಕೆ 80 ಕೋಟಿ ರೂ. ಇಟ್ಟಿದ್ದೇವೆಂದು ಹೇಳಿದ್ದಾರೆ. ಬಿಡುಗಡೆ ಮಾಡಿದ್ದು ಎಷ್ಟು ಎಂದು ಹೇಳಿಲ್ಲ. ಬಜೆಟ್‌ನಲ್ಲಿ ನೀವು ಬೇರೆ ಬೇರೆ ಹಣ ಇಟ್ಟಿರಬಹುದು. ಜಿಲ್ಲಾ ಮಂತ್ರಿಗಳು ಹಣದ ಬಗ್ಗೆ ಹೇಳಬೇಕಾಗುತ್ತದೆ. ನೀವು ಹಣವನ್ನು ರಿಲೀಸ್ ಮಾಡಿ.

ಶ್ರೀ ಎಂ.ವೈ.ಘೋರ್ಪಡೆ: ಅದು ಸರಿಯಾದಂಥ ಅಭಿಪ್ರಾಯವಲ್ಲ. ಸೆಂಟ್ರಲ್ ಅಸಿಸ್ಟೆನ್ಸ್‌ನಲ್ಲಿ 125 ಕೋಟಿ ರೂ.ಗಳು ಏನು ನಮಗೆ ಬಂದಿವೆ, ಅದರಲ್ಲಿ 25 ಪರ್‌ಸೆಂಟ್ ಸಬ್‌ಮಿಶನ್ ಪ್ರಾಜೆಕ್ಟ್‌ಗೆ ಇಟ್ಟು ಬಾಕಿ ನೂರು ಕೋಟಿ ರೂ.ಗಳನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಸ್ಟೇಟ್ ಸೆಕ್ಟರ್‌ನಲ್ಲಿ ಕೂಡ 70 ಕೋಟಿ ರೂ.ಗಳು ಇವೊತ್ತು ಖರ್ಚಾಗಿದೆ.

ಶ್ರೀ ಎಸ್.ಎಸ್.ಪಾಟೀಲ್: ನಿಮ್ಮ ರಿಲೀಸ್ ಆರ್ಡರ್ ಹೋಗಿಲ್ಲ. ನೀವು ಒಂದು ಬೋರ್‌ವೆಲ್ ಮೈಂಟೇನೆನ್ಸ್‌ಗೆ 600 ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಹಾಗಾದರೆ ನಾಳೆಗೆ ಅಲ್ಲಿ ಕೊಟ್ಟು ಬಿಡಲಿ. ಎಷ್ಟು ಕಡೆಗೆ ಈ ಹಣದ ಅವಶ್ಯಕತೆ ಇದೆ ಎಂದು ನಾವು ವಿವರಗಳನ್ನು ಕೊಡುತ್ತೇವೆ. ಅಧ್ಯಕ್ಷರೆ, ಈ ಕುರಿತು ಎಲ್ಲಾ ಜಿಲ್ಲೆಗಳ ಮಾಹಿತಿಗಳನ್ನು ತರಿಸಿ ಚರ್ಚೆಯಾಗಲಿ. ಸುಮ್ಮನೆ ಉತ್ತರಿಸುವುದು ಸರಿಯಲ್ಲ.

ಶ್ರೀ ಎಂ.ವೈ.ಘೋರ್ಪಡೆ: ಕನಿಷ್ಠ 40 ಕೋಟಿ ರೂಪಾಯಿಗಳನ್ನು ಅವರಿಗೆ ಖರ್ಚು ಮಾಡಲು ಇದೆ. ಯಾವ ಕಾರ್ಯಕ್ರಮ ನಡೆಯುತ್ತಾ ಇದೆ ಅದಕ್ಕೆ ಅದನ್ನು ಪೂರೈಸುವುದಕ್ಕೋಸ್ಕರವಾಗಿ ಕೊಟ್ಟಿದ್ದೇವೆ ಎಂಬ ಮಾತನ್ನು ನಾನು ಒಪ್ಪುತ್ತೇನೆ. ಎಮರ್ಜನ್ಸಿ ಬಂದಾಗ ಅದನ್ನು ನಾವು ಎಷ್ಟರಮಟ್ಟಿಗೆ ಉಪಯೋಗಿಸಲು ಸಾಧ್ಯ ಎಂಬುದು ಬೇರೆ ಪ್ರಶ್ನೆ. ಅದಕ್ಕೋಸ್ಕರ ಎಮರ್ಜೆನ್ಸಿ ಬಂದಾಗ ಅಂದರೆ ಏಪ್ರಿಲ್ ಮೇ ತಿಂಗಳಲ್ಲಿ ನಾರ್ಮಲ್ ವಾಟರ್ ಸಪ್ಲೈ ಸ್ಕೀಂಸ್ ಅವು, ಬರಗಾಲದ ಪರಿಸ್ಥಿತಿ, ಬರಗಾಲ

ಎಂಬ ಪದ ಉಪಯೋಗಿಸಲು ನಾನು ಇಷ್ಟಪಡುವುದಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಅಧ್ಯಕ್ಷರೇ, ಸಚಿವರು ಯಾವ ಯಾವ ಜಿಲ್ಲೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬ ಮಾಹಿತಿ ಕೊಟ್ಟುಬಿಟ್ಟರೆ ಬಹಳ ಉತ್ತಮ.

ಶ್ರೀ ಎಂ.ವೈ.ಘೋರ್ಪಡೆ: ಮೊನ್ನೆ ನಾವು ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಚರ್ಚೆ ಮಾಡಿದಾಗ, ನಮ್ಮ ಗೃಹಸಚಿವರಿಗೂ ಗೊತ್ತಿದೆ, ಪ್ರತಿ ಜಿಲ್ಲಾಧಿಕಾರಿ ಹತ್ತಿರ ಒಂದು ರಿವಾಲ್ವಿಂಗ್ ಫಂಡ್ ಎಂದು ಇರಬೇಕು, ಅದರಲ್ಲಿ ಕನಿಷ್ಟ 25 ಲಕ್ಷ ರೂ. ಇರಬೇಕು, ಕೆಲವು ಕಡೆ 50 ಲಕ್ಷ ರೂ ಇರುವುದಕ್ಕೂ ಸಾಧ್ಯವಿದೆ. ಅಂದರೆ 10-15 ಕೋಟಿ ರೂ. ಪ್ರತ್ಯೇಕವಾಗಿ ಎತ್ತಿಟ್ಟು ಯಾವ ಸಂದರ್ಭದಲ್ಲೂ ಅವರ ಬಳಿ 25 ಲಕ್ಷ ರೂ.ಗಳಿಗಿಂತ ಕಡಿಮೆ ಆಗಬಾರದು ಎಂಬದು - ಇದು ಡಿ.ಸಿ. ಅವರ ಹತ್ತಿರ ಹಣ ಇರುವುದಿಲ್ಲ ಎಂಬ ಮಾತನ್ನು ತಪ್ಪಿಸುವುದಕ್ಕಾಗಿ.

ಶ್ರೀ ಬಿ.ಎಚ್.ಬನ್ನಿಕೋಡ್: ಇದು ಬಹಳ ಸರಳ ಪ್ರಶ್ನೆ. ತಮ್ಮ ಇಲಾಖೆಯ ಕೊಳವೆಬಾವಿ, ಕಿರುನೀರಾವರಿ ಯೋಜನೆ ಎಂದು ಹೇಳಿದಿರಲ್ಲಾ, ಅವುಗಳಿಗೆ ನೀವು ಹೇಳಿದಂತಹ ಹಣ ಸರ್ಕಾರದಿಂದ ಬಿಡುಗಡೆಯಾಗಿದೆಯಾ? ಬಿಡುಗಡೆಯಾಗಿದ್ದರೆ ಇಲ್ಲಿಯವರೆಗೆ ಎಷ್ಟು ಖರ್ಚಾಗಿದೆ, ಇನ್ನೆಷ್ಟು ಉಳಿದಿದೆ? ಎರಡನೆಯದು, ತಮ್ಮ ಇಲಾಖೆಯದು ಬರಗಾಲ ಸಂದರ್ಭದಲ್ಲಿ ನೀರು ಕೊಡುವ ಕಾರ್ಯಕ್ರಮವಲ್ಲ. ರಾಜ್ಯವಲಯ ಕೇಂದ್ರವಲಯದಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಿ ಅವುಗಳಿಗೆ ಹಣ ಮಂಜೂರು ಮಾಡುತ್ತೀರೇ ವಿನಹ ನಮಗೆ ಈಗ ಕುಡಿಯಲು ನೀರಿಲ್ಲ ಅಂದರೆ ಅಲ್ಲಿ ಬೋರ್ ಕೊರೆಯಲು ನೀವು ಹಣ ಕೊಡಲು ಬರುವುದಿಲ್ಲ. ಪೈಪ್‌ಲೈನ್ ಹಾಕಲು ಬರುವುದಿಲ್ಲ. ಬರಗಾಲಕ್ಕಾಗಿ ತಮ್ಮ ಇಲಾಖೆಯಿಂದ ಕುಡಿಯುವ ನೀರಿಗಾಗಿ ಹಣ ಏನಾದರೂ ಒದಗಿಸಿದ್ದೀರಾ ಎನ್ನುವುದರ ಬಗ್ಗೆ ಸಚಿವರು ಸಭೆಗೆ ತಿಳಿಸಬೇಕು.

ಶ್ರೀ ಎಂ.ವೈ.ಘೋರ್ಪಡೆ: ಅಧ್ಯಕ್ಷರೇ, ನಾನು ಅದಕ್ಕೇ ಹೇಳಿದೆ, ಒಟ್ಟು ಕುಡಿಯುವ ನೀರಿನ ಕಾರ್ಯಕ್ರಮವೇನಿದೆ ಅದು ದೊಡ್ಡ ಪ್ರಮಾಣದ ಕಾರ್ಯಕ್ರಮವಿದೆ, ಅದಕ್ಕೋಸ್ಕರ ಅದಕ್ಕಾಗಿ ನಾವು ಸಾಕಷ್ಟು ಹಣ ಬಿಡುಗಡೆ ಮಾಡಿದ್ದೇವೆ. ಜನವರಿ ತಿಂಗಳು ನೀವು ಇಟ್ಟುಕೊಂಡರೆ ಅದರಲ್ಲಿ ಖರ್ಚುಮಾಡಲು ಇನ್ನೂ 42 ಕೋಟಿ ರೂ.ಇದೆ. ಆದರೆ ಆ ಕಾರ್ಯಕ್ರಮ ಏನಿದೆ ಅದನ್ನು ಪೂರೈಸಲು ಕೊಟ್ಟಿರುವ ಹಣ ಎಂಬ ಮಾತು ನಾನು ಒಪ್ಪುತ್ತೇನೆ. ನೀವೇನು ಕೇಳುತ್ತಿದ್ದೀರಿ ಅಂದರೆ ಕಷ್ಟ ಪರಿಸ್ಥಿತಿಯಲ್ಲಿ ಏನಾದರೂ ತೊಂದರೆ ಉಂಟಾದರೆ ಅದಕ್ಕೆ ಹಣ ಎಲ್ಲಿದೆ ಎಂದು, ಅದಕ್ಕೇ ನಾನು ಹೇಳಿದೆ. ನಿರ್ವಹಣಾ ವೆಚ್ಚ ಎಂದು 52 ಕೋಟಿ ರೂ. ಏನಿದೆ ಅದು ಅವರ ಕಡೆ ಇದೆ, ಎಲ್ಲವನ್ನೂ ಅವರು ಖರ್ಚು ಮಾಡಿಲ್ಲ.

ಶ್ರೀ ಬಿ.ಎಚ್.ಬನ್ನಿಕೋಡ್: ಎಲ್ಲಾ ಕಡೆ ಬೋರ್ ರಿಪೇರಿ ಮಾಡಲು ಹಣ ಇಲ್ಲ,

ಪಂಪ್ ರಿಪೇರಿ ಮಾಡಲು ಇಲ್ಲ, ನಲ್ಲಿ ನೀರು ಯೋಜನೆ ರಿಪೇರಿ ಮಾಡಲು ಇಲ್ಲ. ಈ ವಿಚಾರವನ್ನು ಎಲ್ಲಾ ಸದಸ್ಯರುಗಳು ಸಭೆಗಳನ್ನು ನಡೆಸಿ ಅಲ್ಲಿ ಯಾವುದೇ ಹಣ ಇಲ್ಲವೆಂದು ತಿಳಿದುಕೊಂಡು ಈ ಸದನದಲ್ಲಿ ತಮಗೆ ಮನವಿ ಮಾಡುತ್ತಿದ್ದೇವೆ. ದಯವಿಟ್ಟು ತಾವು ಅಂದಾಜು ಹೇಳುವ ಬದಲು ಇಷ್ಟು ಹಣ ಕೈಪಂಪ್ ರಿಪೇರಿಗೆ, ಇಷ್ಟು ಹಣ ನಲ್ಲಿ ನೀರಿಗೆ ಮೆಂಟೆನೆನ್ಸ್ ಸಲುವಾಗಿ ಇಡಲಾಗಿತ್ತು, ಇಲ್ಲಿಯವರೆಗೆ ಇಷ್ಟು ಬಿಡುಗಡೆ ಮಾಡಿದ್ದೇವೆ, ಇಷ್ಟು ಖರ್ಚಾಗಿದೆ, ಇನ್ನೂ ಇಷ್ಟು ಹಣ ಮೆಂಟೆನೆನ್ಸ್ ಬಾಬ್ತು ಇದೆ ಎಂದು ಸರಳವಾಗಿ ಸಭೆಗೆ ತಾವು ಉತ್ತರ ಕೊಟ್ಟರೆ ಅಲ್ಲಿ ಹಣವಿದ್ದರೆ ಹೋಗಿ ಕೇಳುತ್ತೇವೆ, ಇಲ್ಲದೇ ಹೋದರೆ ಸುಮ್ಮನಾದರೂ ಇರುತ್ತೇವೆ. ಬರಗಾಲಕ್ಕಾಗಿ ಕುಡಿಯುವ ನೀರಿಗಾಗಿ ಕಂದಾಯ ಇಲಾಖೆ ಏನು ಕೊಟ್ಟಿದೆ ಆ ವಿಚಾರ ಬೇರೆ. ತಮ್ಮ ಇಲಾಖೆ ಮೂಲಕ ಏನಾದರೂ ಕೊಟ್ಟಿದ್ದೀರಾ?

ಶ್ರೀ ಎಂ.ವೈ.ಘೋರ್ಪಡೆ: ನಮ್ಮ ಇಲಾಖೆಯಿಂದ ನಿರ್ವಹಣೆಗಾಗಿ ಇಟ್ಟಿರುವ ಹಣ 30 ಕೋಟಿ ರೂ. ಕೊಟ್ಟಿದ್ದೇವೆ ಎಂದು ಸ್ಪಷ್ಟವಾಗಿ ಈಗಾಗಲೇ ಹೇಳಿದೆ. ಅದಲ್ಲದೆ ಬರಗಾಲ ಪರಿಹಾರ ನಿಧಿ ಏನು ಕೇಂದ್ರದಿಂದ ಬರುತ್ತದೆ, ನಾವೂ ಕೊಡುತ್ತೇವೆ - ಅದನ್ನೂ ಇದನ್ನೂ ಸೇರಿಸಿ ನಾವು ಈ ಪರಿಸ್ಥಿತಿಯನ್ನು ಎದುರಿಸಬೇಕು. ಅಲ್ಲವೇ?

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಉದಾಹರಣೆಗೆ ಒಂದು ಪ್ರಶ್ನೆ ಸರ್ಕಾರಕ್ಕೆ ಕೇಳಿದ್ದರ ಬಗ್ಗೆ ಉತ್ತರ ಕೊಟ್ಟಿರುವುದನ್ನು ಹೇಳುತ್ತೇನೆ. ರಸ್ತೆ ರಿಪೇರಿ ಬಾಬ್ತು, ಒಂದು ಕಿಲೋಮೀಟರ್ ರಸ್ತೆ ರಿಪೇರಿಗೆ 7690 ರೂ ಲೆಕ್ಕದಲ್ಲಿ 80 ಕೋಟಿ ರೂ. ಇಟ್ಟಿದ್ದೇವೆ ಎಂದು ಉತ್ತರ ಬಂದಿದೆ. ಬಿಡುಗಡೆ ಮಾಡಿದ್ದೆಷ್ಟು ಎಂದರೆ 'ಇಲ್ಲ', ನಾಲ್ಕಾಣೇನೂ ಅದರಲ್ಲಿ ಬಿಡುಗಡೆ ಆಗಿಲ್ಲ. ಇದೇ ರೀತಿ ಕುಡಿಯುವ ನೀರಿನದು ನಿಮ್ಮ ಹಣಬರಹ ಐತೆ.

ಶ್ರೀ ಎಂ.ವೈ.ಘೋರ್ಪಡೆ: ನಾನು ಬಿಡುಗಡೆ ಮಾಡಿದ ಹಣ ಗಮನದಲ್ಲಿಟ್ಟುಕೊಂಡೇ ಹೇಳುತ್ತಿದ್ದೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಕುಡಿಯುವ ನೀರಿಗಾಗಿ ಸ್ಟೇಟ್‌ಸೆಕ್ಟರ್‌ನಲ್ಲಿ 32 ಕೋಟಿ ರೂ. ಇದೆ ಎನ್ನುತ್ತೀರಲ್ಲಾ ಅದು 2001-2002 ಸಾಲಿನದ್ದೋ ಅಥವಾ ಅಡಿಷನಲ್ ಕೊಟ್ಟಿದ್ದೋ ಈ ಸಮ್ಮರ್‌ನಲ್ಲಿ ಅದನ್ನು ಡಿವಿಯೇಷನ್ ಮಾಡಿ ಬಳಸಲು ಸಾಧ್ಯವಿದೆಯೇ? ಎರಡನೆಯದು ಈ ಸಮ್ಮರ್‌ಗಾಗಿ ಕುಡಿಯುವ ನೀರಿಗಾಗಿ ಏನು ಯೋಜನೆ ಹಾಕಿಕೊಂಡಿದ್ದೀರಿ? ಮಾನ್ಯ ಮುಖ್ಯ ಮಂತ್ರಿಗಳು ತಾಲ್ಲೂಕು ಪಂಚಾಯಿತಿ ಜಿಲ್ಲಾಪಂಚಾಯ್ತಿಯವರು ಕುಡಿಯುವ ನೀರಿನ ವ್ಯವಸ್ಥೆ ಪೂರ್ಣಗೊಳಿಸುತ್ತಾರೆಂದು ನಿನ್ನೆ ಉತ್ತರದಲ್ಲಿ ಹೇಳಿದ್ದಾರೆ. ಆದ್ದರಿಂದ ನೀವು ಕ್ಲಾರಿಫೈ ಮಾಡಬೇಕಾಗಿದೆ. ಸ್ಟೇಟ್ ಸೆಕ್ಟಾರಿನ ಜಿಲ್ಲಾ ಪಂಚಾಯ್ತಿಯಲ್ಲಿರುವ ಹಣ ಖರ್ಚು ಮಾಡಬೇಕೋ ಹೇಗೋ, ಅಥವಾ ಕಾಲಾಮಿಟಿ ಫಂಡ್ ಎಂದು ನೀವೇನಾದರೂ ಡೈರೆಕ್ಟಾಗಿ ಕೊಡುತ್ತೀರೋ?

ಶ್ರೀ ಎಂ.ವೈ.ಘೋರ್ಪಡೆ: ಸ್ಟೇಟ್ ಸೆಕ್ಟಾರಿನಲ್ಲಿ ಕುಡಿಯುವ ನೀರಿನದ್ದು ಬಿಡುಗಡೆ ಆಗಿದೆ. ಬಿಡುಗಡೆ ಮಾಡಿಲ್ಲ ಎಂಬ ಮಾತನ್ನು ನಾನು ಒಪ್ಪುವುದು ಕಷ್ಟ. ಅದು ಬಿಡುಗಡೆ ಆದ ನಂತರ ಖರ್ಚಾಗಿಯೂ ಇನ್ನೂ 40 ಕೋಟಿ ರೂ. ಅವರ ಕಡೆ ಇದೆ.

ಶ್ರೀ ಎಸ್.ಎಸ್.ಪಾಟೀಲ್: ಅಯ್ಯೋ ಕರ್ಮ. ಅಲ್ಲಿ ಬಿಡುಗಡೇನೆ ಆಗಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ನಾವು ಒಂದು ಬೋರ್‌ವೆಲ್ ಕೊರೆಸಿ ಎಂದು ಸಿಇಒ ಅವರನ್ನು ಕೇಳಿದರೆ ನಮ್ಮ ಹತ್ತಿರ ಹಣ ಇಲ್ಲ ಎನ್ನುತ್ತಾರೆ. ಇದು ಪರಿಸ್ಥಿತಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಣ ಎಷ್ಟು ಇದೆ ಎಷ್ಟಿಲ್ಲ ಎಂಬುದನ್ನು ಡಿಟೇಲಾಗಿ ರಿಪ್ಲೈ ಕೊಡುವಾಗ ಹೇಳುತ್ತೇವೆ. ಮಧ್ಯದಲ್ಲಿ ಕರಡಿ ಸಂಗಣ್ಣನವರು ಕೇಳಿದ್ದಕ್ಕೆ ಹೇಳಿದರು, ಎಷ್ಟು ದುಡ್ಡಿದೆ, ಸ್ಕೇರ್ಸಿಟಿಯಲ್ಲಿ ಎಷ್ಟು ರಿಲೀಸ್ ಮಾಡಿದ್ದೇವೆ, ಪಂಚಾಯ್ತಿಯಿಂದ ಎಷ್ಟು ರಿಲೀಸ್ ಮಾಡಿದ್ದೇವೆ ಎಲ್ಲಾ ಹೇಳುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಈಗ ಸಚಿವರು ಮೆಂಟೆನೆನ್ಸ್‌ಗಾಗಿ ರಾಜ್ಯದಲ್ಲಿ 52 ಕೋಟಿ ರೂ. ಹಣವಿದೆ ಎನ್ನುತ್ತಾರೆ. ಆ ಹಣ ಯಾವುದು, ಈ ವರ್ಷದ್ದೋ, ಅಥವಾ ಖರ್ಚು ಮಾಡುವುದಕ್ಕೆ ಡಿವಿಯೇಷನ್ ಮಾಡಿ ಕೊಡುತ್ತಾರೋ ಎಂಬುದನ್ನು ಕ್ಲಾರಿಫೈ ಮಾಡಲಿ. ಇವರ ಆಕ್ಷನ್ ಪ್ಲಾನ್‌ನಲ್ಲಿ ಇಷ್ಟು ಹಣ ಇದೆ, ಅದು ಖರ್ಚಾಗಿದೆಯೋ ಬಿಟ್ಟಿದೆಯೋ ಎಂಬುದೂ ಇಲ್ಲವೆಂದ ಮೇಲೆ ಅದು ನಮಗೆ ಯಾವತ್ತು ಬರುತ್ತದೆ. ವಾರ್ಷಿಕ ಕ್ರಿಯಾ ಯೋಜನೆ ಮಾಡಿದಾಗ ಆರ್‌ಡಿಪಿಆರ್‌ಗೆ ಕುಡಿಯುವ ನೀರಿಗೆ 900 ಕೋಟಿ ರೂ.ಗಳು ಅದರಲ್ಲಿ ನಡೆದಿರುವ ಕಾಮಗಾರಿಗಳಿರುತ್ತವೆ, ಸ್ಪಿಲ್ ಓವರ್ ಕೆಲಸಗಳಿರುತ್ತವೆ, ಅದಕ್ಕಾಗಿ ಆ ಹಣ ಖರ್ಚು ಮಾಡಬೇಕು. ಅದನ್ನು ಡಿವಿಯೇಷನ್ ಮಾಡಲು ಸಾಧ್ಯವಿದೆಯೇ? ಆದ್ದರಿಂದ ಈ ಸಮ್ಮರ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಏನು ಉದ್ಭವವಾಗಿದೆ ಅದಕ್ಕೆ ಹೆಚ್ಚಿನ ಹಣ ಒದಗಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅಲ್ಲದೆ ಬರಗಾಲದ ಬಗ್ಗೆ ಲಾಸ್ಟ್ ಟೈಮ್ ನಾವು ಗೋಶಾಲೆಗಳನ್ನು ಪ್ರಾರಂಭ ಮಾಡಿದೆವು. ಆ ಗೋಶಾಲೆಗಳು ಅವತ್ತೇ ಮುಚ್ಚಿಹೋಗಿಬಿಟ್ಟವು. ಇವತ್ತು ನಾವೆಲ್ಲಾ ಬರಗಾಲ ಇದೆ ಎಂದು ಹೇಳಿ ಚರ್ಚೆ ಮಾಡುತ್ತೇವೆ. ಬರಗಾಲದ ಕಹಿ ಅನುಭವವನ್ನು ಪಡೆದುಕೊಳ್ಳುತ್ತೇವೆ. ಆದರೆ ಜಾನುವಾರುಗಳನ್ನು ಬದುಕಿಸತಕ್ಕಂಥ ಕೆಲಸವನ್ನು ಸರ್ಕಾರ ಮಾಡಿದೆಯೇ ಹೇಗೆ? ಜಿಲ್ಲಾ ಮಂತ್ರಿಗಳು ಹಿಂದೆ ಒಂದು ಸಾರಿ ಪ್ರೀಪ್ಲಾನನ್ನು ಮಾಡಿ ಎಲ್ಲೆಲ್ಲಿ ಹಾರ್ಟಿಕಲ್ಚರ್ ಫಾರ್ಮ್ಸ್ ಇವೆ, ಎಲ್ಲಿಲ್ಲಿ ನೀರಿನ ಸೋರ್ಸ್ ಇದೆ, ಎಲ್ಲಿ ಮೇವು ಬೆಳೆಯುವುದಕ್ಕೆ ಸಾಧ್ಯ ಇದೆ, ಅದನ್ನು ಬೆಳೆಯುವ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಮಾಡಿದರು. ಬಹಳ ಸಂತೋಷದ ಕೆಲಸ. ಈಗ ಜಾನುವಾರುಗಳು ಯಾವ ರೈತರ ಹತ್ತಿರ ಇರುವುದಕ್ಕೂ ಸಾಧ್ಯವಿಲ್ಲ. ಈಗಾಗಲೇ ರೈತನು ಜಾನುವಾರುಗಳನ್ನು ಮಾರುಕಟ್ಟೆಯಲ್ಲಿ ಮಾರುತ್ತಿದ್ದಾನೆ. ಇದರ ಮುಂಜಾಗರೂಕತೆ

ಬಗ್ಗೆ ಸರ್ಕಾರ ಏನಾದರೂ ಚಿಂತನೆ ಮಾಡಿದೆಯೇ ಹೇಗೆ? ಜಾನುವಾರುಗಳು ಇವತ್ತು ರೈತನಿಗೆ ಎಷ್ಟು ಅವಶ್ಯಕತೆ ಇದೆ ಎಂಬುದನ್ನು ನೋಡಿ ಅವುಗಳ ರಕ್ಷಣೆಯನ್ನು ಮಾಡಬೇಕಾಗುತ್ತದೆ. ಇವತ್ತು ಎತ್ತುಗಳು ಇರಬಹುದು, ಎಮ್ಮೆ ಇರಬಹುದು, ಅವುಗಳನ್ನು ಬದುಕಿಸುವುದಕ್ಕೆ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆ? ಇನ್ನು ಬಡವರಿಗೆ ಕೂಲಿ ಕೆಲಸವನ್ನು ಕೊಡುವ ಬಗ್ಗೆ, ನಾವೇನು ಉದ್ಯೋಗ ಭರವಸೆ ಯೋಜನೆಯೆಂದು ಕರೆಯುತ್ತೇವೆ, ಒಂದು ಪತ್ರಿಕೆಯಲ್ಲಿ ನೋಡಿದರೆ ಕೇಂದ್ರ ಸರ್ಕಾರದಲ್ಲಿ ನಾಲ್ಕೂವರೆ ಟನ್ ಕೋಟಿ ಆಹಾರಧಾನ್ಯ ಇವತ್ತು ಗೊಬ್ಬರವಾಗಿ ಹೋಗುತ್ತಿದೆ. ಸುಮಾರು ಐವತ್ತು ಸಾವಿರ ಕೋಟಿ ರೂಪಾಯಿ ಬೆಲೆ ಬಾಳತಕ್ಕ ಅಕ್ಕಿ ಮತ್ತು ಗೋಧಿ ಹಾಳಾಗಿ ಹೋಗಿದೆ. ಆದ್ದರಿಂದ ಕೇಂದ್ರ ಸರ್ಕಾರದಲ್ಲಿರತಕ್ಕಂಥ ದಾಸ್ತಾನನ್ನು ತೆಗೆದುಕೊಂಡು ಬಡವರಿಗೆ ಹಂಚತಕ್ಕ ಒಂದು ಚಿಂತನೆ ಸರ್ಕಾರಕ್ಕೆ ಇದೆಯೇ ಎನ್ನುವ ಬಗ್ಗೆಯೂ ತಾವು ಆಲೋಚನೆಯನ್ನು ಮಾಡಬೇಕು. ಇವತ್ತು ಬರಗಾಲ ಇದೆ ಎಂದರೂ ಅದರ ಬಗ್ಗೆ ವಿಚಾರ ಮಾಡುತ್ತಿಲ್ಲ. ಇವತ್ತು ಇವರು ರೈತರ ಪರವಾಗಿ ಚಿಂತನೆ ಮಾಡುತ್ತಿಲ್ಲ, ಇವತ್ತು ಇವರು ಕಾರ್ಮಿಕರ ಪರವಾಗಿ ಚಿಂತನೆ ಮಾಡುತ್ತಿಲ್ಲವೆಂದರೆ ಇನ್ನು ನಾವೇನು ಹೇಳಬೇಕೋ ಅರ್ಥವಾಗುತ್ತಿಲ್ಲ. 50 ಸಾವಿರ ಕೋಟಿ ರೂಪಾಯಿ ಬೆಲೆ ಬಾಳತಕ್ಕಂಥ ಕೇಂದ್ರ ಸರ್ಕಾರದಲ್ಲಿರುವ ಅಕ್ಕಿ ಇವತ್ತು ಅಲ್ಲಿ ಗೊಬ್ಬರವಾಗುತ್ತಿದೆ. ಇವತ್ತು ನಾವು ಬರ ಬಂದಿದೆ ಎಂದು ಹೇಳುತ್ತೇವೆ. ಇವತ್ತು ಕೇಂದ್ರ ಸರ್ಕಾರದ ಜೊತೆ ವ್ಯವಹಾರವನ್ನು ಮಾಡಿ ತಾವು ಅಕ್ಕಿಯನ್ನು ತರಿಸಿಕೊಳ್ಳಬೇಕಾಗಿತ್ತು, ಗೋಧಿಯನ್ನು ತರಿಸಿಕೊಳ್ಳಬೇಕಾಗಿತ್ತು. ಮತ್ತೆ ಏನಾದರೂ ನಾವು ಜನರಿಗೆ ಉದ್ಯೋಗವನ್ನು ಕೊಡಬೇಕಲ್ಲ. ಜನರು ಇವತ್ತು ಗುಳೆ ಹೋಗುತ್ತಿದ್ದಾರೆ. ಇದಕ್ಕೇನು ಕಾರ್ಯಕ್ರಮವನ್ನು ತಾವು ರೂಪಿಸಿದ್ದೀರಿ? ಇದನ್ನೆಲ್ಲಾ ತಾವು ಹೇಳಬೇಕಾಗುತ್ತದೆ. ಏಕೆಂದರೆ ಇನ್ನು ಮೂರು ತಿಂಗಳು ನಾವು ಬರದ ಛಾಯೆಯನ್ನು ಎದುರಿಸಬೇಕಾಗುತ್ತದೆ. ಜೂನ್‌ನಲ್ಲಿ ಮಳೆ ಪ್ರಾರಂಭವಾದರೂ ಇನ್ನು ಸಂಪೂರ್ಣವಾದಂಥ ಮಳೆ ನಮಗೆ ಬರುವುದಿಲ್ಲ. ಅಲ್ಲಿಯವರೆಗೆ ಇವತ್ತು ಜನರಿಗೆ ಉದ್ಯೋಗ ಕೊಡತಕ್ಕಂಥದ್ದು ಇರಬಹುದು, ಕುಡಿಯುವ ನೀರಿನ ಸಮಸ್ಯೆ ಇರಬಹುದು. ವಿದ್ಯುತ್ತಿನ ಸಮಸ್ಯೆ ಇರಬಹುದು, ವಿದ್ಯುತ್ತನ್ನು ಸಕ್ರಮಗೊಳಿಸುವುದರಲ್ಲಿ ಇವತ್ತು ರೈತರಿಗೆ ಹೆರಾಸ್‌ಮೆಂಟ್ ಮಾಡುವುದು ಇರಬಹುದು, ಇವೆಲ್ಲವುಗಳ ಬಗ್ಗೆಯೂ ತಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ಇವತ್ತು ಸರ್ಕಾರ ಸುಭಿಕ್ಷವಾದ ರಾಜ್ಯವಾಗಬೇಕಾದರೆ ಪೂರ್ವಾಪರ ವಿಚಾರ ಮಾಡಿ ಈ ಯೋಜನೆಗಳಿಗೆ ಪರಿಹಾರವನ್ನು ತಾವು ಕಂಡುಕೊಳ್ಳುತ್ತೀರಿ ಎಂದು ಹೇಳಿ ನಾನು ಒತ್ತಾಯಿಸಿ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ವಿವರಗಳನ್ನು

ಕೊಡುವುದಕ್ಕೆ ಇಷ್ಟಪಡುವುದಿಲ್ಲ. ನಾಳೆ ಬಜೆಟ್ ಇದೆ. ಇಷ್ಟು ಮಾತ್ರ ಹೇಳುತ್ತೇನೆ, ಕಾಳು ಮತ್ತು ಕೆಲಸದ ಕಾರ್ಯಕ್ರಮ ಏನು ಇದೆ, ಅದು ವ್ಯಾಪಕವಾದ ರೀತಿಯಲ್ಲಿ ನಮ್ಮ ಕರ್ನಾಟಕದಲ್ಲಿ ನಾವು ಇದೇ ವರ್ಷ ಎಂದರೆ ಬಜೆಟ್ ಆದ ತಕ್ಷಣ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಆದರೆ ಎಷ್ಟರಮಟ್ಟಿಗೆ ಎಂಬುದು ನಾಳೆ ಗೊತ್ತಾಗುತ್ತದೆ.

+ ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ವಿಚಾರಗಳನ್ನು ಈಗಾಗಲೇ ಸದಸ್ಯರೆಲ್ಲಾ ಪ್ರಸ್ತಾಪ ಮಾಡಿದ್ದಾರೆ. ನಾನು ಸುದೀರ್ಘವಾಗಿ ಮಾತನಾಡುವುದಕ್ಕೆ ಇಚ್ಛೆಪಡುತ್ತಿಲ್ಲ. ಆದರೆ ಹಲವಾರು ಯೋಜನೆಗಳು, ವಿಶೇಷವಾಗಿ ಆರ್‌ಡಿಪಿಆರ್ ಬಗ್ಗೆ ಸರ್ಕಾರಗಳ ಯಾವುದೇ ಯೋಜನೆಯನ್ನು ನಿರ್ದಿಷ್ಟ ಸಮಯಕ್ಕೆ ಅದನ್ನು ಸದ್ವಿನಿಯೋಗ ಮಾಡುವುದಕ್ಕೆ ಸರ್ಕಾರದ ವಿಫಲತೆಯೇ ಕುಡಿಯುವ ನೀರಿನ ಈ ರೀತಿ ಬರಕ್ಕೆ ಕಾರಣ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಉದಾಹರಣೆಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜೀವ್ ಗಾಂಧಿ ಪೈಲಟ್ ಯೋಜನೆ ಈಗಾಗಲೇ ಅನುಷ್ಠಾನವಾಗಬೇಕು ಎಂದು ಹೇಳುವಂಥ ಹಿನ್ನೆಲೆಯಲ್ಲಿ ಅದಕ್ಕೆ ಬೇಕಾದ ಹಣವೆಲ್ಲಾ ಬಿಡುಗಡೆಯಾಗಿದೆ. ತಮಗೆ ಗೊತ್ತಿದೆ. ದಕ್ಷಿಣ ಕನ್ನಡ, ಮೈಸೂರು ಮತ್ತು ಬಳ್ಳಾರಿ ಮೂರೂ ಜಿಲ್ಲೆಗಳಿಗೆ ಸುಮಾರು 140 ಕೋಟಿ ರೂಪಾಯಿಗಳ ಯೋಜನೆಯಾಗಿದೆ. ಇದರಲ್ಲಿ ಪ್ರತಿ ಜಿಲ್ಲೆಗೂ ಸುಮಾರು 11.20 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ನಮ್ಮ ಭಾಗದ ಬಗ್ಗೆ ತಮಗೆ ಗೊತ್ತಿದೆ. ಈ ಪೈಲಟ್ ಯೋಜನೆ ಇದು ಔಟ್‌ರೈಟ್ ಗ್ರಾಂಟ್. ಇದರಲ್ಲಿ ಬೇರೇನೂ ವ್ಯತ್ಯಾಸಗಳಿಲ್ಲ. ಇದು ಎಷ್ಟರತನಕ ನಡೆಯುವುದು. ನಮ್ಮ ಭಾಗದಲ್ಲಿ ಸಾರ್ವಜನಿಕರಿಂದ 10 ಪರ್‌ಸೆಂಟ್ ಕಾಂಟ್ರಿಬ್ಯೂಷನನ್ನು ತೆಗೆದುಕೊಂಡು ಮಾಡುವಂಥ ಎಲ್ಲಾ ಕೆಲಸಗಳನ್ನು ಮಾಡಿದರೂ ಕೂಡ ಯಾವುದೇ ರೀತಿಯ ಹಣ ಬಿಡುಗಡೆಯಾದರೂ ಕೂಡ ಯಾವುದೇ ಕೆಲಸಕಾರ್ಯಗಳು ಪ್ರಾರಂಭವಾಗಿಲ್ಲ. ಉದಾಹರಣೆಗಾಗಿ ನಾನು ಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಸಾಧಾರಣವಾಗಿ ಆ ಭಾಗದಲ್ಲಿ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ನಮ್ಮ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಎಲ್ಲಾ ಕಡೆ ಕಲ್ಲನ್ನು ಹಾಕಿದ್ದಾರೆ. ಕಲ್ಲು ಹಾಕಿದ್ದೇ ಹಾಕಿದ್ದು! ಪ್ರಚಾರ ಗಿಟ್ಟಿಸಿದ್ದೇ ಗಿಟ್ಟಿಸಿದ್ದು! ಯೋಜನೆಗಳ ಅನುಷ್ಠಾನವೇ ಆಗಲಿಲ್ಲ. ಬಹುಶಃ ಕಳೆದ ಬಾರಿ ಕೂಡ ತಮ್ಮ ಗಮನಕ್ಕೆ ತಂದಿದ್ದೇನೆ. ಪ್ರಾಯಶಃ ಇದು ಏನಾಗುತ್ತಿತ್ತು ಎಂದು ಹೇಳಿದರೆ ಈ ರಾಜೀವ್ ಗಾಂಧಿ ಪೈಲಟ್ ಯೋಜನೆ ಹಣ ಬಿಡುಗಡೆಯಾದ ಒಂದು ಸಮಯವನ್ನು ನೋಡಿದರೆ ಇವತ್ತು ಪೂರ್ತಿ ಪ್ರಮಾಣದಲ್ಲಿ ಅನುಷ್ಠಾನ ಮಾಡುವಂಥ ಕೆಲಸಕಾರ್ಯಗಳನ್ನು ಮಾಡಬಹುದಿತ್ತು. ಆದರೆ ಮಾಡಲಿಲ್ಲ. ಕಾರಣಗಳು ಹಲವಾರು ಇರಬಹುದು.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಉಪಾಧ್ಯಕ್ಷರೇ, ಸೆಕ್ಟಾರ್ ರಿಫಾರ್ಮ್ಸ್ ಯೋಜನೆ

ಬಗ್ಗೆ ತಾವು ಪ್ರಸ್ತಾಪ ಮಾಡುತ್ತಿದ್ದೀರಿ. ತಮಗೆ ಗೊತ್ತಿದೆ. ನಾನು ನಿಮ್ಮ ಜಿಲ್ಲೆಗೆ ಕೂಡ ಬಂದಿದ್ದೆ. ಹೆಚ್ಚು ಕಡಿಮೆ ಬಳ್ಳಾರಿ ಮತ್ತೆ, ಮೈಸೂರು ಮತ್ತೆ ತಮ್ಮ ಜಿಲ್ಲೆ. ಒಂದೊಂದು ಜಿಲ್ಲೆಯಲ್ಲಿ ಸುಮಾರು 40 ಕೋಟಿ ರೂಪಾಯಿ ಕಾರ್ಯಕ್ರಮ ಇದೆ. ಅದೇ ಸೆಕ್ಟಾರ್ ರಿಫಾರ್ಮ್ಸ್. ಹೊಸ ರೀತಿಯಲ್ಲಿ ಅದನ್ನು ಮಾಡಬೇಕು. ಹೊಸ ರೀತಿ ಎಂದರೆ ಹತ್ತು ಪರ್‌ಸೆಂಟ್ ಕಾಂಟ್ರಿಬ್ಯೂಷನ್ನು ಜನರು ಕೊಡಬೇಕು ಎಂದು ಇದೆ. ಆದಕಾರಣ ಕಾಂಟ್ರಿಬ್ಯೂಷನನ್ನು ತೆಗೆದುಕೊಳ್ಳುವುದರಲ್ಲಿ ಸ್ವಲ್ಪ ಕಾಲ ಬೇಕಾಗುತ್ತದೆ. ಅದರ ಬಗ್ಗೆ ಭಯಪಡಬೇಕಾಗಿಲ್ಲ. ಏಕೆಂದರೆ ಅದು ಮೂರು ವರ್ಷದ ಕಾರ್ಯಕ್ರಮ. ಇನ್ನು ಎರಡು ವರ್ಷ ಆ ಕಾರ್ಯ ಕ್ರಮ ಜಾರಿಯಲ್ಲಿ ಇರುತ್ತದೆ. ಎರಡು ವರ್ಷದಲ್ಲಿ ನೀವೇನಾದರೂ ನಿಮ್ಮ ಜಿಲ್ಲೆಯಲ್ಲಿ 40 ಕೋಟಿ ರೂಪಾಯಿ ಕಾರ್ಯಕ್ರಮ ಜನರಿಗೆ ಏನು ಬೇಕೋ ಅದನ್ನು ಮಾಡಿಕೊಟ್ಟರೆ ಯಶಸ್ವಿ ಕಾರ್ಯಕ್ರಮವಾಗುತ್ತದೆ. ನಮಗೂ ಸಮಾಧಾನವಾಗುತ್ತದೆ. ಕೇಂದ್ರಕ್ಕೂ ಸಮಾಧಾನವಾಗುತ್ತದೆ. ಇದಕ್ಕೆ ಮತ್ತು ರಾಜೀವ್‌ಗಾಂಧಿ ಪೈಲಟ್ ಯೋಜನೆಗೂ ಮಿಕ್ಸ್ ಅಪ್ ಮಾಡಬೇಡಿ. ಇದು ರಿಫಾರ್ಮ್ಸ್ ಕಾರ್ಯಕ್ರಮ. ಈಗ ಸಾವಿರ ಕೋಟಿ ಕಾರ್ಯಕ್ರಮ ವಿಶ್ವಬ್ಯಾಂಕಿನಿಂದ ಏನು ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ನಾವೇನು ಮಾಡುತ್ತಿದ್ದೇವೆ, ಅದಕ್ಕೂ ಕೂಡ ಇದೇ ರೂಲ್ಸ್ ಅನ್ವಯಿಸುತ್ತದೆ. ಹತ್ತು ಪರ್‌ಸೆಂಟ್ ಕಾಂಟ್ರಿಬ್ಯೂಷನ್ ಮತ್ತು ಮೆಂಟೆನೆನ್ಸ್‌ನ್ನು ಪಂಚಾಯಿತಿಯವರೇ ಮಾಡಬೇಕು. ಇದು ತಪ್ಪಿದ್ದಲ್ಲ. ವಿಶ್ವಬ್ಯಾಂಕ್ ಆಗಲಿ, ಕೇಂದ್ರ ಸರ್ಕಾರ ಆಗಲಿ, ನಮ್ಮ ಸರ್ಕಾರವಾಗಲಿ, ಇನ್ನು ಮುಂದೆ ಕುಡಿಯುವ ನೀರಿನ ಕಾರ್ಯಕ್ರಮಕ್ಕೆ ಸ್ವಲ್ಪ ಕಾಂಟ್ರಿಬ್ಯೂಷನನ್ನು ಕೊಡಬೇಕಾಗುತ್ತದೆ. ಮೆಂಟೆನೆನ್ಸ್ ಕೂಡ ಮಾಡಬೇಕಾಗುತ್ತದೆ. ಈ ಮೆಂಟೆನೆನ್ಸ್ ಅದಕ್ಕೋಸ್ಕರ ನಮ್ಮ ಈಗಿನ ವ್ಯವಸ್ಥೆಯಲ್ಲಿ ಮೆಂಟೆನೆನ್ಸ್‌ನ್ನು ಗ್ರಾಮಪಂಚಾಯಿತಿಯವರೇ ಮಾಡಬೇಕು ಎಂದು ಇದೆ. ಮಿನಿ ವಾಟರ್ ಸಪ್ಲೈ ಆಗಲಿ, ಪೈಪ್ಡ್ ವಾಟರ್ ಸಪ್ಲೈಯಾಗಲಿ. ನಾವು ಅದನ್ನು ಬಿಡಿಸಿ ಮತ್ತೆ ಹಿಂದೆ ಏನು ಪರಿಸ್ಥಿತಿ ಇತ್ತು, ಅದಕ್ಕೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಬರೀ ಬೋರ್‌ವೆಲ್ ಏನು ಇದೆ, ಮೆಂಟೆನೆನ್ಸ್‌ನ್ನು ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಮಾಡಬೇಕು ಎಂದು ಸಧ್ಯಕ್ಕೆ ಇದೆ. ಆದರೂ ಕೂಡ ಯಾವುದೇ ಕಾರಣಕ್ಕಾಗಿ ಅವರು ಸರಿಯಾಗಿ ಮಾಡಲಿಕ್ಕಾಗದಿದ್ದರೆ ಜಿಲ್ಲಾ ಪಂಚಾಯಿತಿಯಿಂದ ಅಲ್ಲಿ ಪ್ರವೇಶ ಮಾಡುವುದಕ್ಕೂ ಕೂಡ ನಾವು ಸುತ್ತೋಲೆಯನ್ನು ಕಳುಹಿಸಿದ್ದೇವೆ. ಆದರೆ ಈ ವಿಚಾರ ಏನು ಇದೆ, ನಮ್ಮ ಹಳ್ಳಿಯಲ್ಲಿ ರತಕ್ಕಂಥ ನೀರಿನ ಕಾರ್ಯಕ್ರಮವನ್ನು ನಾವೇ ಮೆಂಟೆನೆನ್ಸ್ ನೋಡಿಕೊಳ್ಳಬೇಕು. ಇದು ತಪ್ಪಿದ್ದಲ್ಲ. ಇದು ಹಳೆಯ ಕಾಲಕ್ಕೆ ಹತ್ತು ವರ್ಷದ ಹಿಂದೆ ಏನು ಇತ್ತು, ಆ ಕಾಲಕ್ಕೆ ನಾವು ಹೋಗುವುದಕ್ಕಾಗುವುದಿಲ್ಲ. ನಿಮಗೆ ಆಗುವುದಿಲ್ಲ. ಇನ್ನೊಬ್ಬರು ಮಾಡಲಿ ಎಂದು ಹೇಳಿದೆವು. ಅದಕ್ಕೋಸ್ಕರ ಮೆಂಟೆನೆನ್ಸ್‌ಗೋಸ್ಕರ ಎಷ್ಟು ಬೇಕಿದೆ, ಅದನ್ನು ನಾವು ಬಜೆಟ್‌ನಲ್ಲಿ ಸೇರಿಸಿ ಬಿಡುಗಡೆ ಮಾಡಿದ್ದೇವೆ. ಅದು ಇನ್ನೂ ಜಾಸ್ತಿ ಮಾಡಬೇಕು ಎನ್ನುವುದಾದರೆ ಬೇರೆ ವಿಷಯ. ಇನ್ನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಬೋರ್‌ವೆಲ್

ಇದೆಯಲ್ಲ, ಕುಡಿಯುವ ನೀರಿನ ಪ್ರಶ್ನೆ ಬಂದ ತಕ್ಷಣ ಬೋರ್‌ವೆಲ್ ಹಾಕಬೇಕು. ಪ್ರತಿಯೊಬ್ಬ ಶಾಸಕರೂ ಬಂದು 50, 100, 200 ಬೋರ್‌ವೆಲ್‌ಗಳನ್ನು ಹಾಕಬೇಕು ಎಂದು ಹೇಳುತ್ತಾರೆ. ಆ ರೀತಿ ಪರಿಹಾರ ಮಾಡುವುದಕ್ಕೆ ಬರುವುದಿಲ್ಲ. ಇವತ್ತು ಕೋಲಾರದಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಹಾಕಿದರೂ ನೀರಿನ ಸಮಸ್ಯೆ ಪರಿಹಾರವಾಗುವುದಿಲ್ಲ. ಏಕೆಂದರೆ ವಾಟರ್ ಟೇಬಲ್ಲೇ ಕೆಳಗೆ ಹೋಗಿದೆ. ಈಗ ಸ್ಪೆಷಲ್ ಸಿಚ್ಯುಯೇಷನ್ ಸಮ್ಮರ್‌ನಲ್ಲಿ ಏನು ಬರುತ್ತದೆ, ಬರೀ ಬೋರ್‌ವೆಲ್‌ಗಳನ್ನು ಕೊರೆದು ಅದನ್ನು ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಬೇರೆ ಬೇರೆ ಕೆಲಸಗಳನ್ನು ಮಾಡಬೇಕಾಗುತ್ತದೆ. ಆದಕಾರಣ ಬೋರ್‌ವೆಲ್ ಹಾಕುವುದೇ ಒಂದು ಪರಿಹಾರ ಎನ್ನುವ ವಿಚಾರ ಏನು ಇದೆ, ಅದನ್ನು ನಾವು ಸ್ವಲ್ಪ ಎಚ್ಚರಿಕೆಯಿಂದ ಅದರ ಕಡೆ ನೋಡಬೇಕಾಗುತ್ತದೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಉಪಾಧ್ಯಕ್ಷರೇ, ನಾನು ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ ಈಗಾಗಲೇ 11.2 ಕೋಟಿ ರೂ. ಇದು 2000-2001ನೇ ಇಸವಿಯಲ್ಲೇ ನಮ್ಮ ಜಿಲ್ಲೆಗೆ ಬಿಡುಗಡೆಯಾಗಿದೆ. ಆದರೆ ಇನ್ನೂ ಕೂಡ ಆ ಕಾರ್ಯ ನಾವೇನು ಒಂದು ಅಂದಾಜು ಮಾಡುತ್ತೇವೆ, ಇಷ್ಟು ಸ್ಪೀಡ್‌ನಲ್ಲಿ ಹೋಗಬೇಕು ಎಂದು, ಆ ಸ್ಪೀಡ್‌ನಲ್ಲಿ ಹೋಗುತ್ತಿಲ್ಲ. ನಮ್ಮ ಉದ್ದೇಶವೇನೆಂದರೆ ಅದು ಆ ಸ್ಪೀಡ್‌ನಲ್ಲಿ ಹೋಗುತ್ತಿದ್ದರೆ ಈ ಎಲ್ಲಾ ಹಣ ಅಲ್ಲಿ ಖರ್ಚಾಗಿ ಇದರ ಅನುಷ್ಠಾನವಾಗುತ್ತಿದ್ದರೆ ಈಗ ಬರ ಬರುತ್ತಿರಲಿಲ್ಲ. ಮೊನ್ನೆ ಮಂಗಳೂರಿನಲ್ಲಿ ನಡೆದಂಥ ಘಟನೆ ಬಗ್ಗೆ ತಮಗೆ ಗೊತ್ತಿರಬಹುದು. ಕಾರ್ಪೊರೇಷನ್‌ನಲ್ಲಿ ಬಾರಿ ದೊಡ್ಡ ಗಲಾಟೆಯಾಯಿತು. ಖಾಲಿ ಕೊಡಗಳ ಪ್ರದರ್ಶನವಾಯಿತು. ಗ್ಯಾಲರಿಯಿಂದ ಗಲಾಟೆಯಾಯಿತು. ಪೋಲೀಸರ ಮಧ್ಯೆ ಪ್ರವೇಶ ಕೂಡ ಆಯಿತು. ಈ ರೀತಿ ಬಾರಿ ಗಲಾಟೆಗಳಾಗಿ ಸಭೆಗಳೇ ನಡೆಯದೇ ಇರತಕ್ಕ ಪರಿಸ್ಥಿತಿಯನ್ನು ನೋಡಿದ್ದೇವೆ. ಜಿಲ್ಲಾ ಪಂಚಾಯಿತಿಯಲ್ಲಿ ಬಾರಿ ವಿಶೇಷ. ಮೊನ್ನೆ ಜಿಲ್ಲಾ ಪಂಚಾಯಿತಿ ಮೀಟಿಂಗ್‌ನಲ್ಲಿ ಏನು ವಿಶೇಷ ನಡೆಯಿತು ಎಂದರೆ ಜಿಲ್ಲಾ ಪಂಚಾಯಿತಿಯಲ್ಲಿ ಈಗೀಗ ನೀರಿನ ಬರ ಉಂಟು ಎಂದು ಎಲ್ಲ ಸದಸ್ಯರೂ ಪ್ರಶ್ನೆ ಮಾಡಿದಾಗ ಅಧ್ಯಕ್ಷರು ನೇರವಾಗಿ ಅಧಿಕಾರಿಗಳ ಹತ್ತಿರ ನೋಡಿದರು. ಆ ಅಧಿಕಾರಿಗಳು ಏನು ಮಾಡುತ್ತಾರೆ, ತಕ್ಷಣ ದೊಡ್ಡ ಅಧಿಕಾರಿ ಬಂದಿರುವುದಿಲ್ಲ. ಯಾರಾದರೂ ಸಣ್ಣ ಅಧಿಕಾರಿ ಬಂದಿರುತ್ತಾರೆ. ಇಂಥ ದಿವಸಗಳಲ್ಲಿ ಅವರೂ ಕೂಡ ಪ್ರಯತ್ನಗಳನ್ನು ಮಾಡುತ್ತಾರೆ. ಬೇರೆಯವರನ್ನು ಕಳುಹಿಸುವಂಥದ್ದು. ಅವರೆಲ್ಲಾ ಮೀಟಿಂಗ್‌ಗೆ ಹೋಗಿದ್ದಾರೆ ಎಂದು ಈ ರೀತಿ ಮಾಡುತ್ತಾರೆ. ವಿಶೇಷವಾಗಿ ಇದರಲ್ಲಿ ಏನು ಮಾಡುತ್ತಾರೆ ಎಂದರೆ ಜಿಲ್ಲಾ ಪಂಚಾಯಿತಿ ಎಲ್ಲಾ ಅಧಿಕಾರಿಗಳು ನೇರವಾಗಿ ಕೆಪಿಟಿಸಿಎಲ್‌ನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಏನು ಹೇಳುತ್ತಾರೆ, ನಾವೆಲ್ಲಾ ಮಾಡಬಹುದು, ಕರೆಂಟ್ ಇಲ್ಲ, ಕೆಪಿಟಿಸಿಎಲ್‌ನವರು ನಮಗೆ ಸರಿಯಾಗಿ ಕರೆಂಟನ್ನು ಕೊಡುವುದಿಲ್ಲ, ಆ ಕಾರಣದಿಂದಾಗಿ ನಾವು ನೀರು ಕೊಡುವುದಕ್ಕಾಗುವುದಿಲ್ಲವೆಂದು

ಹೇಳುತ್ತಾರೆ. ಕೆಪಿಟಿಸಿಎಲ್ ನವರನ್ನು ಪ್ರಶ್ನೆ ಮಾಡಿದರೆ. ಅವರೇನು ಹೇಳುತ್ತಾರೆಂದರೆ ನಮಗೆ ಸರ್ಕಾರ ಆದೇಶ ಮಾಡಿದೆ, ಇಷ್ಟೇ ಹೊತ್ತು ಕರೆಂಟ್ ಕೊಡಿ, ಜಾಸ್ತಿ ಕರೆಂಟನ್ನು ಕೊಡಬೇಡಿ ಎಂದು ಸರ್ಕಾರ ಆದೇಶ ಮಾಡಿದೆ, ನೀವು ಸರ್ಕಾರದಿಂದ ಇದನ್ನು ಮಾಡಿಸಿ ಎಂದು ಹೇಳುತ್ತಾರೆ. ಏಕೆ ಇದನ್ನು ಈ ರೀತಿಯಲ್ಲಿ ಹೇಳುತ್ತಿದ್ದೇನೆಂದರೆ ಹಲವಾರು ಯೋಜನೆಗಳು ನೇರವಾಗಿ ನಿಗದಿತ ಸಮಯಕ್ಕೆ ಅನುಷ್ಠಾನವಾಗದ ಹಿನ್ನೆಲೆಯಲ್ಲಿ ಈ ಸ್ವಲ್ಪಮಟ್ಟಿನ ತೊಂದರೆಗಳಾಗುತ್ತಿದ್ದಾವೆ. ಮತ್ತೆ ಎರಡು ಮೂರು ಇಲಾಖೆಗಳು ಸೇರಿಕೊಂಡು ಒಂದು ಕೆಲಸವನ್ನು ಅನುಷ್ಠಾನ ಮಾಡುವುದರಿಂದ ಇವತ್ತು ಅವರಿಗೆ ಭಾರಿ ಸುಲಭ ಆಗಿದೆ. ಬೇರೆ ಬೇರೆಯವರ ಮೇಲೆ ಕೈತೋರಿಸುವುದಕ್ಕೆ ಸುಲಭ ಆಗಿದೆ. ಜಿಲ್ಲಾ ಪಂಚಾಯತ್‌ನವರು ಕೆಪಿಟಿಸಿಎಲ್‌ನವರ ಮೇಲೆ, ಕೆಪಿಟಿಸಿಎಲ್‌ನವರು ಸರ್ಕಾರಕ್ಕೆ ಹೇಳುವುದು. ಒಟ್ಟಾರೆ ವ್ಯವಸ್ಥೆಯಲ್ಲಿ ಏನು ಆಗಿದೆ ಎಂದರೆ ಗೋಜಲು ಆಗಿದೆ. ಇದಕ್ಕೇನಾದರೂ ಒಂದು ನಿರ್ಧಿಷ್ಟ ವ್ಯವಸ್ಥೆ ಆಗಬೇಕು. ನನ್ನ ಮನಸ್ಸಿನಲ್ಲಿನ ವಿಚಾರ ಏನು ಎಂದರೆ ಯಾವುದಾದರೂ ಒಂದು ಕೆಲಸ ಕಾರ್ಯಗಳ ಬಗ್ಗೆ ಯಾವುದಾದರೂ ಒಬ್ಬ ನಿಗದಿತ ವ್ಯಕ್ತಿಯನ್ನು ಜವಾಬ್ದಾರಿಯುತವಾಗಿ ಮಾಡುವಂತಹ ಕೆಲಸ ಸರ್ಕಾರದಿಂದ ನಡೆದಾಗ ಮಾತ್ರ ಇದು ಅನುಷ್ಠಾನವಾಗುತ್ತದೆ. ಇಲ್ಲದೇ ಇದ್ದರೆ ಏನು ಆಗುತ್ತದೆ ಎಂದರೆ ಇವರು ಕೆಪಿಟಿಸಿಎಲ್ ಕಡೆ ತೋರಿಸುತ್ತಾರೆ, ಕೆಪಿಟಿಸಿಎಲ್‌ನವರು ಜಿಲ್ಲಾ ಪಂಚಾಯತ್‌ನವರ ಮೇಲೆ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮತ್ತೊಬ್ಬರ ಮೇಲೆ ಹೇಳುವುದು. ಕೊನೆಗೆ ಜಿಲ್ಲಾ ಪಂಚಾಯತ್ ಮೀಟಿಂಗ್‌ಗೆ ಶಾಸಕರು ಹೋದರೆ ನಿಮ್ಮನ್ನು ಅಲ್ಲಿ ಕಳುಹಿಸಿದ್ದೇ ಇದಕ್ಕೆ ನೀವು ಅಲ್ಲೇ ಮಾಡಿಸಿಕೊಂಡು ಬನ್ನಿ ಎಂದು ನಮ್ಮ ಮೇಲೆ ಒತ್ತಡ ಹಾಕುವಂತಹ ಕೆಲಸಕಾರ್ಯಗಳು ನಡೆಯುತ್ತಿರುವೆಂಥ ಹಿನ್ನೆಲೆಯಲ್ಲಿ ಸ್ವಲ್ಪಮಟ್ಟಿಗೆ ಈ ವ್ಯವಸ್ಥೆಗಳನ್ನು ಸರಿದೂಗಿಸಬೇಕು ಎಂದು ಆದರೆ ಒಂದು ರೀತಿಯ ವ್ಯಾಪಕವಾದಂತಹ ವ್ಯವಸ್ಥೆಗಳು ಆಗಬೇಕಾಗುತ್ತದೆ. ಅದು ನನ್ನ ವಿನಂತಿ ಅಷ್ಟೇ ಇಲ್ಲದಿದ್ದರೆ ಬಹಳ ತೊಂದರೆಗಳು, ಗೋಜಲುಗಳು ಆಗುವಂತಹದ್ದು ನಡೆಯುತ್ತಲೇ ಇರುತ್ತದೆ. ಇದರಿಂದ ಪರಿಹಾರ ಆಗುವುದಿಲ್ಲ, ಬದಲು ಹೆಚ್ಚು ತೊಂದರೆಗಳು ಆಗುವಂಥದ್ದು ಆಗುತ್ತದೆ. ಆದಕಾರಣ ಈ ರಾಜೀವ್‌ಗಾಂಧಿ ಪೈಲಟ್ ಪ್ರಾಜೆಕ್ಟ್ ಏನು ಇದೆ ಅದನ್ನು ತಕ್ಷಣ ಅನುಷ್ಠಾನ ಮಾಡುವ ರೀತಿಯಲ್ಲಿ ತಾವು ಯಾವುದಾದರೂ ಒಂದು ವ್ಯವಸ್ಥೆ ಮಾಡಿ. ಬಿಡುಗಡೆ ಆದ ಹಣವನ್ನು ಅದಕ್ಕೆ ವಿನಿಯೋಗ ಮಾಡುವಂತಹ ವ್ಯವಸ್ಥೆ ಮಾಡಿ. ಈಗಾಗಲೇ ನಮ್ಮಲ್ಲಿ ಏನಾಗಿದೆ ಎಂಬ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ನಮ್ಮ ಭಾಗದಲ್ಲಿ ಹಲವಾರು ಕಡೆಗಳಲ್ಲಿ ಸಾರ್ವಜನಿಕರು ಹತ್ತು ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟಿದ್ದನ್ನು ಹಿಂದಕ್ಕೆ ಕೇಳುವಂಥ ಎಲ್ಲಾ ಕೆಲಸ ಕಾರ್ಯಗಳು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗುತ್ತಿವೆ. ತಾವು ವರದಿ ತರಿಸಿಕೊಳ್ಳಿ, ತುಂಬಾ ಪಂಚಾಯತಿಗಳಲ್ಲಿ ಮತ್ತು ಕೆಲವು ಭಾಗಗಳಲ್ಲಿ ಸಾರ್ವಜನಿಕ ದೇಣಿಗೆ ಏನು ಹತ್ತು ಪರ್ಸೆಂಟ್ ಕೊಡುವಂಥ ವ್ಯವಸ್ಥೆಗಳನ್ನು ನಮಗೆ ಪುನಃ ವಾಪಸ್ ಕೊಡಿ,

ಯೋಜನೆ ಅನುಷ್ಠಾನ ಮಾಡುತ್ತಿಲ್ಲ ಎಂದು ಹೇಳುವಂಥ ಭಾವನೆ ಜನಗಳಲ್ಲಿ ಬರುವಂಥದ್ದು ಆಗಿದೆ. ಇದನ್ನು ತಕ್ಷಣ ಮಾಡಬೇಕೆಂದು ಹೇಳುವಂಥದ್ದು ಒಂದು ಇನ್ನೊಂದು ಏನಾಗಿದೆ ಎಂದರೆ ನಿಮಗೆ ಗೊತ್ತಿರಬಹುದು. ಪತ್ರಿಕೆಯಲ್ಲಿ ಇವತ್ತು ಕೂಡ ನಾನು ನೋಡಿದೆ. ಆ ಸಾಗರ ತಾಲ್ಲೂಕಿನ ಆನಂದಪುರ ಹೋಬಳಿಯಲ್ಲಿ ಒಂದು ವಿಶ್ವಬ್ಯಾಂಕ್ ಯೋಜನೆಯಲ್ಲಿ ನಡೆದಂತಹ ಕೆಲಸ ಪ್ರಾಯಶಃ ಸುಮಾರು 5.30 ಕೋಟಿ ರೂಪಾಯಿ ಕೆಲಸ 1998ನೇ ಇಸವಿಯಲ್ಲಿ ಶುರು ಆಗಿದೆ. ಎಲ್ಲಾ ಕೆಲಸ ಕಾರ್ಯಗಳು ಆಗಿವೆ. ನೀರಿನ ಟ್ಯಾಂಕ್ ಸಂಪೂರ್ಣ ಆಗಿದೆ. ಅದಕ್ಕೆ ಬೇಕಾದಂತಹ ಶುದ್ಧೀಕರಣ ವ್ಯವಸ್ಥೆ ಆಗಿದೆ. ಯೋಜನೆ ಮುಗಿದಿದೆ. 9 ಎಕರೆ ಪ್ರದೇಶದಲ್ಲಿ ಒಂದು ದೊಡ್ಡ ಸಂಗ್ರಾಹಕ ಟ್ಯಾಂಕ್ ನಿರ್ಮಾಣ ಆಗಿದೆ. 10 ಲಕ್ಷ ಲೀಟರ್‌ನಂತೆ ಮೂರು ಕೋಟಿ ಲೀಟರ್ ನೀರು ಸಂಗ್ರಹಿಸುವ ವ್ಯವಸ್ಥೆ ಮಾಡಿದೆ. ಈ ರೀತಿ ಸುಮಾರು 12 ಹಾರ್ಸ್ ಪವರ್‌ನ ನಾಲ್ಕು ನಾಲ್ಕು ಪಂಪುಗಳನ್ನು, ನಂದಿಹೊಳೆ ಪಕ್ಕದಲ್ಲಿ ಸುಮಾರು 160 ಹೆಚ್‌ಪಿಯ ಪಂಪುಗಳನ್ನು ಮಾಡಿದ್ದಾರೆ. ಈ ಯೋಜನೆಯ ಕೆಲಸವೆಲ್ಲಾ ಮುಕ್ತಾಯವಾಗಿದೆ. ಆದರೆ ಅದಕ್ಕೆ ನೀರು ಬರುವಂಥ ವ್ಯವಸ್ಥೆಗಳು ಇದುವರೆಗೆ ಆಗಲಿಲ್ಲ. ನಾವು ಹೇಳುವಂಥದ್ದು ಇಷ್ಟು ದೊಡ್ಡ ಯೋಜನೆ ಪೂರ್ತಿ ಅನುಷ್ಠಾನ ಆಗಿದ್ದರೂ ಕೂಡ ಸಮಗ್ರ ನೀರು ಸರಬರಾಜು ಹಾಗೂ ನೈರ್ಮಲ್ಯ ಯೋಜನೆಯಡಿಯಲ್ಲಿ ಇದನ್ನು ಮಂಜೂರು ಮಾಡಿದೆ. ಕೆಲಸ ಕಾರ್ಯಗಳು ಆಗಿವೆ. ಆದರೆ ಎಲ್ಲಾ ಕೆಲಸ ಕಾರ್ಯಗಳು ಆಗಿ ಅಲ್ಲಿ ನೀರು ಬರುವಂಥ ವ್ಯವಸ್ಥೆಗಳು ಇನ್ನೂ ಆಗಲಿಲ್ಲ. ತಕ್ಷಣ ದಯವಿಟ್ಟು ಇದನ್ನು ನೋಡಿ. ಒಂದು ವೇಳೆ ಇಂತಹ ಪೂರ್ಣಗೊಂಡ ಯೋಜನೆಗಳನ್ನು ಅನುಷ್ಠಾನ ಮಾಡಿದರೆ ಪ್ರಾಯಶಃ ಅತ್ಯಂತ ಶೀಘ್ರವಾಗಿ ಸುಮಾರು ರೀತಿಯಲ್ಲಿ ಅಲ್ಲಿಯ ನೀರಿನ ಪರಿಸ್ಥಿತಿಯನ್ನು ಸರಿ ಮಾಡಲಿಕ್ಕೆ ಆಗುತ್ತದೆ ಎಂದು ಹೇಳುವಂಥಹದು. ಈ ಎರಡು ವಿಚಾರಗಳನ್ನು ಮಾತ್ರ ಉಲ್ಲೇಖ ಮಾಡಿ ನಾನು ಈಗಾಗಲೇ ಮಾತನಾಡುವಾಗ ನಿನ್ನೆ ಕೆಪಿಟಿಸಿಎಲ್‌ನ ಬಗ್ಗೆ ಹೇಳಿದೆ. ಕಂದು ಮತ್ತು ಬೂದು ಪ್ರದೇಶದ ಬಗ್ಗೆ ಹೇಳಿದೆ. ಸುಮಾರು ಒಂದು ಲಕ್ಷದಷ್ಟು ರೈತರ ಪಂಪುಸೆಟ್ಟುಗಳ ಆ ಭಾಗದಲ್ಲಿ ಇದ್ದಾವೆ. ವಿಶೇಷವಾಗಿ ನಾನು ಸರ್ಕಾರಕ್ಕೆ ಒಂದು ವಿಚಾರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಆ ಭಾಗದ ಯಾವುದೇ ತಾಲ್ಲೂಕುಗಳು ಕಂದು ಅಥವಾ ಬೂದು ಪ್ರದೇಶ ಇರಬಹುದು. ಅಲ್ಲಿ ಬೇರೆ ಯಾವುದೇ ಯೋಜನೆಯಲ್ಲಿ ನೀರು ತೆಗೆಯುವುದಕ್ಕೆ ಆಗುವುದಿಲ್ಲ. ಅವನಿಗೆ ವಾಟರ್ ಲೆವೆಲ್ ಕೆಳಗೆ ಹೋಗುತ್ತದೆ. ವಾಟರ್ ಲೆವೆಲ್ ಸಿಗುವುದಿಲ್ಲ ಎಂಬ ದೃಷ್ಟಿಯಿಂದ ಅಲ್ಲಿ ಯಾವುದೇ ಬೋರ್‌ವೆಲ್‌ಗಳನ್ನು ತೋಡಕಬಾರದು ಕರೆಂಟ್ ಕೊಡಬಾರದು ಎಂದು ಹೇಳಿದರೆ ಆ ಮನುಷ್ಯ ಎಲ್ಲಿಗೆ ಹೋಗಬೇಕು? ಏನಾದರೂ ಇದಕ್ಕೆ ಪರ್ಯಾಯ ವ್ಯವಸ್ಥೆಗಳು ಆಗಬೇಕು. ಈಗಾಗಲೇ ಬೋರ್‌ವೆಲ್ ತೋಡಿರುತ್ತಾನೆ. ಅಕ್ರಮವಾಗಿ ಕನೆಕ್ಷನ್ ಮಾಡಿರುತ್ತಾನೆ. ಅಂಥವನಿಗೆ ಕನೆಕ್ಷನ್ ಕೊಡುವುದಿಲ್ಲ, ಡಿಸ್ಕನೆಕ್ಟ್ ತಕ್ಷಣ ಮಾಡಬೇಕು ಎಂದು ಹೇಳುವಂಥದ್ದು ಸರಿಯಲ್ಲ. 6ನೇ ತಾರೀಖಿಗೆ ಅವರ

ದಿನಾಂಕವನ್ನು ಫಿಕ್ಸ್ ಮಾಡಿದ್ದಾರೆ. ಡಿಸ್ಕನೆಕ್ಟ್ ಮಾಡಿದರೆ ಅವನ ಪರಿಸ್ಥಿತಿ ಏನು? ಅವರು ಮಾಡಿದಂತಹ ಕೃಷಿ ಭೂಮಿಯ ಪರಿಸ್ಥಿತಿ ಏನು? ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ರಾಜ್ಯದಲ್ಲಿರುವಂತಹ 43 ತಾಲ್ಲೂಕುಗಳಲ್ಲಿ ಕಂದು ಮತ್ತು ಬೂದು ಪ್ರದೇಶ ಎಂದು ಹೇಳಿ ಈಗಾಗಲೇ ಘೋಷಣೆ ಮಾಡಿದ್ದಾರೆ. ಈ ಭಾಗದಲ್ಲಿ ಕೂಡ ಏನು ಅಕ್ರಮ ಕನೆಕ್ಷನ್ ತೆಗೆದುಕೊಂಡಿದ್ದಾರೆ ಅದನ್ನು ಸಕ್ರಮೀಕರಣ ಮಾಡಬೇಕೆಂದು ಹೇಳುವಂಥ ಆಗ್ರಹವನ್ನು ಮಾಡಿ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎನ್.ಚೆಲುವರಾಯಸ್ವಾಮಿ(ನಾಗಮಂಗಲ): ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್ ಕನೆಕ್ಷನ್ ಅಕ್ರಮ ಸಕ್ರಮ ಮಾಡುವಂಥ ವಿಚಾರದಲ್ಲಿ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ, ಅದನ್ನು ಸ್ವಾಗತ ಮಾಡುತ್ತೇನೆ. ಎಲ್ಲಾ ವಿಚಾರಕ್ಕಿಂತ ಹೆಚ್ಚಿನ ಒತ್ತನ್ನು ಕೊಟ್ಟು ಜೂನ್ 30ರವರೆಗೂ ಮಾನ್ಯ ಸದಾನಂದ ಗೌಡರು ಹೇಳಿದ ಹಾಗೆ ಈ ರಾಜ್ಯದಲ್ಲಿ ಯಾವುದೇ ತಾಲ್ಲೂಕು ಆಗಬಹುದು, ಕಂದು ಅಥವಾ ಬೂದು ಪ್ರದೇಶ ಯಾವುದೇ ಕ್ಷೇತ್ರದಲ್ಲಿ ಅಥವಾ ತಾಲ್ಲೂಕಿನಲ್ಲಿ ಅಕ್ರಮವಾಗಿ ಮಾಡಿರತಕ್ಕದ್ದನ್ನು ಸಕ್ರಮ ಮಾಡುವಂಥ ಕೆಲಸವನ್ನು ಸರ್ಕಾರ ದಯಮಾಡಿ ಮಾಡಲೆ ಬೇಕಾಗುತ್ತದೆ. ಅದರ ಜೊತೆಗೆ ಅವರಿಗೆ ಇವತ್ತೇನು ಫೆನಾಲ್ಟಿಯನ್ನು ಫಿಕ್ಸ್ ಮಾಡಿದ್ದೀರಿ, ದಯಮಾಡಿ ಸರ್ಕಾರ ನೇರವಾಗಿ.ರೈತರಿಗೆ ಗುಂಡು ಹಾರಿಸುವುದಕ್ಕಿಂತ ಇನ್ನೊಂದು ತರಹ ಅವರು ಆತ್ಮಹತ್ಯೆ ಮಾಡಿಕೊಳ್ಳುವಂತಹ ವ್ಯವಸ್ಥೆಯನ್ನು ನೀವು ತಂದು ಕೊಟ್ಟ ಹಾಗೆ ಆಗುತ್ತದೆ. ಯಾರು ಇವತ್ತು ಕೃಷಿ ಭೂಮಿಗೆ ಪಂಪುಸೆಟ್ಟನ್ನು ಅಳವಡಿಸಲು ಅಕ್ರಮವಾಗಿ ಮಾಡಿದ್ದಾರೆ. ಅವರು ಮುಂದಿನ ದಿನಾಂಕ ನಿಗದಿಪಡಿಸಿರುವುದರೊಳಗೆ ಫೆನಾಲ್ಟಿ ಕಟ್ಟದಿದ್ದರೆ ಅವರನ್ನು ಶಿಕ್ಷೆಗೆ ಗುರಿ ಮಾಡುತ್ತೇವೆ ಎಂದೇನು ಹೇಳಿದ್ದೀರಿ, ಇವತ್ತು ಇರತಕ್ಕಂಥ ವ್ಯವಸ್ಥೆಯಲ್ಲಿ ಖಂಡಿತ ಅವರಿಗೆ ಫೆನಾಲ್ಟಿ ಕಟ್ಟಲಿಕ್ಕೆ ಆಗುತ್ತದೆಯೇ ಎನ್ನುವುದನ್ನು ತಾವು ದಯಮಾಡಿ ಯೋಚನೆ ಮಾಡಬೇಕು. ಇದು ಯಾವುದೇ ಒಂದು ಪಕ್ಷದ, ತಾಲ್ಲೂಕಿನ ಅಥವಾ ಯಾವುದೋ ಒಂದು ವ್ಯಕ್ತಿಯ ಪ್ರಶ್ನೆ ಅಲ್ಲ. ಇಡೀ ರಾಜ್ಯದಲ್ಲಿರತಕ್ಕಂಥ ಇವತ್ತಿನ ರೈತರು ಎದುರಿಸುತ್ತಿರುವ ಆರ್ಥಿಕ ಸಮಸ್ಯೆ. ಈ ಸಮಸ್ಯೆಯಲ್ಲಿ ಈ ಒಂದು ಪೆನಾಲ್ಟಿ ಬಗ್ಗೆ ತಕ್ಷಣ ಇವತ್ತು ನಾಳೆಯೇ ಸರ್ಕಾರ ಪತ್ರಿಕೆಯಲ್ಲಿ ಒಂದು ಹೇಳಿಕೆ ಕೊಡದಿದ್ದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿ ಇದೆ. ದಯಮಾಡಿ ಈ ಫೆನಾಲ್ಟಿಯನ್ನು ಹಿಂದೆ ಇದ್ದ ಹಾಗೆ ಎರಡರಿಂದ ಮೂರು ಸಾವಿರದೊಳಗೆ ಏನಾದರೂ ಮಾಡಲಿಕ್ಕೆ ಸಾಧ್ಯವಾದರೆ ಮಾತ್ರ ರೈತರು ಸಕ್ರಮ ಮಾಡಿಕೊಳ್ಳಲು ಅನುಕೂಲ ಆಗುತ್ತದೆ. ಅದರ ಜೊತೆಗೆ ಇವತ್ತೇನು 7 ಸಾವಿರದಿಂದ 15 ಸಾವಿರ ಇದೆ. ಅದನ್ನು ಯಾವ ಕಾರಣಕ್ಕೂ ನೀವು ಏನಾದರೂ ಉಳಿಸುವುದೇ ಆದರೆ ರೈತರು ಯಾವುದೇ ಸಕ್ರಮವನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಆಗುವುದಿಲ್ಲ. ಅವರು ಮುಂದೆ ಬರುವುದೂ ಇಲ್ಲ. ಇವತ್ತು ಫಿಲಂಗಳಲ್ಲಿ ರೌಡಿಗಳು

ಹೋಗುತ್ತಾರಲ್ಲಾ, ಆ ರೀತಿ ಆಗಿದೆ. ಹಳ್ಳಿಯಲ್ಲಿ ಇವತ್ತು ಕೆಇಬಿಯ ಜೀಪ್ ಬಂತು ಅಂದರೆ ಜನರು ಹೆದರಿ-ಹೆದರಿ ಓಡಿ ಹೋಗುವಂಥ ಪರಿಸ್ಥಿತಿ ಬಂದಿದೆ. ಅದನ್ನು ದಯಮಾಡಿ ತಪ್ಪಿಸುವ ರೀತಿಯಲ್ಲಿ, ಜನರು ನೆಮ್ಮದಿಯಾಗಿ ಇರುವ ಹಾಗೆ ಮಾಡಿ. ಇವತ್ತು ಕುಡಿಯುವುದಕ್ಕೆ ನೀರು ಇಲ್ಲ, ಇವತ್ತು ಬೆಳೆ ಬೆಳೆದಿದ್ದಕ್ಕೆ ರೇಟ್ ಇಲ್ಲ. ಇಂಥ ನೂರಾರು ಸಮಸ್ಯೆಯನ್ನು ಎದುರಿಸುತ್ತಿರತಕ್ಕ ರೈತರಿಗೆ ಇದರ ಮಧ್ಯದಲ್ಲಿ ಇಂಥ ಒಂದು ಮಾನಸಿಕವಾದಂತಹ ಹಿಂಸೆಯನ್ನು ಕೊಡತಕ್ಕಂಥ ಕೆಲಸ ಆಗಬಾರದು. ಸರ್ಕಾರ ತಕ್ಷಣ ಆದೇಶವನ್ನು ಬದಲಾವಣೆ ಮಾಡಬೇಕು. ಮತ್ತು ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಜನ ಹೇಳಿದ್ದಾರೆ. ನಾನು ಅವರು ಮಾತನಾಡಿದ್ದನ್ನು ನೋಡಿದ್ದೇನೆ. ದಯಮಾಡಿ ಈ ಸ್ಥಿತಿಗೆ ಸರ್ಕಾರ ಬರಬಾರದು. ಪತ್ರಿಕೆಯಲ್ಲಿ ಮೊನ್ನೆ ನೋಡಿದೆ. ಕುಡಿಯುವ ನೀರಿನ ವಿಚಾರದಲ್ಲಿ ಯಾವುದೇ ರೀತಿಯ ಹಣದ ಕೊರತೆಯಿಲ್ಲ ಎಂದು ಹೇಳಿಕೆ ಕೊಟ್ಟಿದ್ದೀರಿ. ಏಕೆ ಸ್ವಾಮಿ ಪತ್ರಿಕೆಯನ್ನು ಪ್ರಚಾರ ಮಾಡಿಕೊಳ್ಳುವುದಕ್ಕೆ ಉಪಯೋಗಿಸುತ್ತೀರಿ? ಇಡೀ 54 ವರ್ಷದಲ್ಲಿ ಇಷ್ಟು ಪ್ರಚಾರ ಮಾಡಿಕೊಂಡಂಥ ಬೇರೆ ಸರ್ಕಾರ ಇಲ್ಲ ಎಂದು ಕಾಣುತ್ತದೆ. ದಯಮಾಡಿ ಯಾವುದಾದರೂ ಜಿಲ್ಲೆಯಲ್ಲಿ ಸಿಇಓ ಅಥವಾ ಡಿಸಿ ಅವರೋ ನೇರವಾಗಿ ಬಂದು ಉತ್ತರ ಕೊಟ್ಟು ಬಿಡಲಿ. ಅಥವಾ ಅವರ ಮೂಲಕ ಉತ್ತರ ಯಾರಾದರೂ ಕೊಡಿಸಿ. ಕುಡಿಯುವ ನೀರಿನ ವಿಚಾರದಲ್ಲಿ ಯಾವುದೇ ಕ್ಷೇತ್ರದಲ್ಲಿ ಏನೇ ಕೊರತೆ ಇದ್ದರೂ ಅದನ್ನು ನಾವು ಮಾಡುತ್ತೇವೆಂದು ಹೇಳಿದರೆ ನಾವು ಮತ್ತೆ ಆ ವಿಚಾರದಲ್ಲಿ ಮಾತನಾಡುವುದಿಲ್ಲ. ಮೊನ್ನೆ ನಾನು ಕೆಡಿಬಿ ಮೀಟಿಂಗ್‌ನಲ್ಲಿ ಮಾತನಾಡಿದೆ. ನಮ್ಮ ಉಸ್ತುವಾರಿ ಸಚಿವರು ಹೊರಗಡೆ ಹೋಗಿದ್ದಾರೆಂದು ಕಾಣುತ್ತದೆ. ಒಂದು ಊರಿನಲ್ಲಿ ತೊರೆಮಲ್ಲನಾಯಕನ ಹಳ್ಳಿ ಎಂದು ಹೇಳಿ ನನ್ನ ಕ್ಷೇತ್ರದಲ್ಲಿ ಎರಡು ವರ್ಷ ಆಗಿದೆ ಬೋರ್‌ವೆಲ್ ಕೊರೆದು ಟ್ಯಾಂಕ್ ಕಟ್ಟಿ. ಕೆಇಬಿ ಕನೆಕ್ಷನ್ ಇಲ್ಲ. ಕೊಣನೂರು ಎಂದು ಹೇಳಿ ಒಂದು ಗ್ರಾಮದಲ್ಲಿ ಎರಡು ವರ್ಷ ಆಗಿದೆ ಎಲ್ಲಾ ಕೆಲಸ ಆಗಿದೆ. ಸೋರ್ಸ್‌ಸ್ ಇಲ್ಲ. ಸೋರ್ಸ್‌ಸ್ ಫೇಲಾದರೆ ಮತ್ತೊಂದು ಬೋರ್‌ವೆಲ್ ಹಾಕತಕ್ಕ ಪರಿಸ್ಥಿತಿ ಇವತ್ತು ಜಿಲ್ಲಾ ಪಂಚಾಯತಿಯಲ್ಲಿ ಉದ್ಭವ ಆಗುತ್ತಿಲ್ಲ. ಇವತ್ತು ಆಡಿಷನಲ್ ಆಗಿ ಪೈಪ್‌ಲೈನ್ ಬೇಕು ಎಂದರೆ ಮಾಡಲಿಕ್ಕೆ ಆಗುತ್ತಿಲ್ಲ. ಹೆಚ್ಚುವರಿ ಎಲ್ಲಾದರೂ ತುಂಬಾ ತುರ್ತಾದ ಪರಿಸ್ಥಿತಿ ಬಂದರೂ ಕೂಡ ಒಂದು ಬೋರ್‌ವೆಲ್ ಹಾಕುವುದಕ್ಕೆ ಹಣ ಇಲ್ಲ ಎನ್ನುತ್ತಾರೆ. ಈಗ ನನ್ನ ತಾಲ್ಲೂಕಿನಲ್ಲಿ, ನನ್ನ ಕ್ಷೇತ್ರಕ್ಕೆ ಸೀಮಿತವಾಗಿ 50 ಸ್ಕೀಮ್‌ಗಳು ಎಂಡಬ್ಲ್ಯುಎಸ್, ಎಆರ್‌ಡಬ್ಲ್ಯುಎಸ್, ಎನ್‌ಆರ್‌ಡಬ್ಲ್ಯುಎಸ್‌ನಲ್ಲಿ ಕೆಇಬಿ ಸಮಸ್ಯೆಯಿಂದ ಸೋರ್ಸ್‌ಸ್ ಫೇಲ್ ಆಗಿರತಕ್ಕ ಸಮಸ್ಯೆಯಿಂದ 50 ಸ್ಕೀಮ್‌ಗಳು, ನಡೆಯುತ್ತಿರತಕ್ಕ ಸ್ಕೀಮ್‌ಗಳು ಇವತ್ತು ಫೇಲಾಗಿ ಇವತ್ತು ಕುಡಿಯುವ ನೀರಿನ ಅಭಾವವನ್ನು ಎದುರಿಸತಕ್ಕ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ದಯಮಾಡಿ ಇವತ್ತು ಏನಾದರೂ ಸರ್ಕಾರ ಜನರ ಕಷ್ಟದಲ್ಲಿ ಕೊನೆಯಪಕ್ಷ ಕುಡಿಯುವ ನೀರಿಗಾದರೂ ನಾವು ಸಮಸ್ಯೆ ಬಗೆಹರಿಸುತ್ತೇವೆ ಎನ್ನತಕ್ಕ ದೃಷ್ಟಿ ಇದ್ದರೆ ನೇರವಾಗಿ ಸಮಸ್ಯೆಯನ್ನು ಸ್ಥಳೀಯವಾಗಿ ಜಿಲ್ಲಾ ಪಂಚಾಯತ್ ಮತ್ತು

ಜಿಲ್ಲಾಧಿಕಾರಿಗಳಿಗೆ ತಿಳಿಸಿ, ಸಮಸ್ಯೆಯು ಎಲ್ಲಿದೆ ಅದನ್ನು ಗುರುತಿಸಿ ಕೆಲಸ ಮಾಡತಕ್ಕಂಥ ನಿರ್ದೇಶನ ಕೊಡಿ. ಇವತ್ತು 50 ಕೋಟಿ ಇದೆ, 100 ಕೋಟಿ ಇದೆ, 20 ಕೋಟಿ ಹಣ ಬಜೆಟ್‌ನಲ್ಲಿ ಇದೆ ಎಂಬ ಅಂಕಿ ಅಂಶಬೇಡ. ದಯಮಾಡಿ ಇದರಿಂದ ಯಾವುದೇ ತರಹದ ಉಪಯೋಗನೂ ಬರುವುದಿಲ್ಲ.

(ಸನ್ಮಾನ್ಯ (ಶ್ರೀ ಎಂ.ವಿ.ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದು ಎಲ್ಲಾ ಪತ್ರಿಕೆಯಲ್ಲಿ ಓದಿ ಸಾಕಾಗಿದೆ. ಜನರು ನಾವು ಹಳ್ಳಿಗೆ ಹೋದರೆ ಕೇಳುತ್ತಾರೆ. ಸರ್ಕಾರದ ಮಂತ್ರಿಗಳು ಈ ರೀತಿ ಉತ್ತರ ಕೊಡುತ್ತಾರೆ. ಇಲ್ಲಿ ಜಿಲ್ಲಾ ಪಂಚಾಯತಿಯಲ್ಲಿ ಇಲ್ಲ ಎಂದು ಹೇಳುತ್ತೀರಿ ಎಂದು ನಮಗೆ ಛೀಮಾರಿ ಹಾಕುತ್ತಾರೆ. ದಯಮಾಡಿ ಇದು ಬೇಡಿ. ಈ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಆಗದೇ ಇರತಕ್ಕಂಥ ಸ್ಥಿತಿ ಏಪ್ರಿಲ್ ಮೇನಲ್ಲಿ ಇದೆ. ಇನ್ನೂ ದಿವಸ ದಿವಸ ಜೂನ್ ಕೊನೆಯ ವಾರದವರೆಗೂ ನಾವು ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಇವತ್ತೇ ನಾವು ಆ ರೀತಿ ಸಮಸ್ಯೆಗೆ ಪರಿಹಾರ ಏನಾದರೂ ಕಂಡು ಹಿಡಿದುಕೊಳ್ಳದೇ ಹೋದರೆ ಇನ್ನು ಮೂರು ತಿಂಗಳು ಸಮಸ್ಯೆಯನ್ನು ಎದುರಿಸುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿಗೆ ಹೋಗುವುದರಿಂದ ದಯಮಾಡಿ ಇವತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಗಮನ ಹರಿಸಿ. ನಮ್ಮ ಮಂಡ್ಯದಲ್ಲಿ, ನಾಗಮಂಗಲ, ಕೆ.ಆರ್.ಪೇಟೆ, ಪಾಂಡವಪುರ ಈ ಭಾಗದಲ್ಲಿ ಕೆ.ಆರ್.ಎಸ್. ಇದೆ ಎಂದು ಹೇಳಿ ಕೃಷಿ ಭೂಮಿಯನ್ನು ನಂಬಿಕೊಂಡಿರತಕ್ಕವರು ಬರಗಾಲಕ್ಕಿಂತ ಹೆಚ್ಚು ಪರಿಸ್ಥಿತಿ ಕೆಲವು ಭಾಗದಲ್ಲಿ ಇದೆ. ದಯಮಾಡಿ ಇದನ್ನು ಗಮನ ಹರಿಸಿ. ಸರ್ಕಾರ ಕುಡಿಯುವ ನೀರಿನ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದೆ. ಬರೇ ಹೇಳಿಕೆ ಪತ್ರಿಕೆಯಲ್ಲಿ ಮಾಡುವುದು ಬೇಡ. ಅಧಿಕಾರಿಗಳಿಗೆ ನೇರವಾಗಿ ಹಣ ಬಿಡುಗಡೆ ಮಾಡಿ. ಎಲ್ಲಿ ಹೆಚ್ಚುವರಿ ಬೋರ್ ಬೇಕು? ಎಲ್ಲಿ ಸೋರ್ಸಸ್ ಫೇಲ್ ಆಗಿದೆ? ಕೆಇಬಿ ಸಮಸ್ಯೆಯಿಂದ, ಯಾವ ಸ್ಕೀಮ್‌ಗಳು ವೋಲ್ಟೇಜ್ ಟ್ರಿಪ್‌ನಿಂದ ನಿಂತಿರತಕ್ಕಂಥವು, ಹೊಸ ಕನೆಕ್ಷನ್ ಇಲ್ಲದೇ ಇರತಕ್ಕಂಥವು. ಇ.ಸಿ. ಇಲ್ಲ ಎಂದು ಹೇಳುತ್ತಾರೆ. ಇನ್ಸುಲೇಟರ್ ಇಲ್ಲ ಎಂದು ಹೇಳುತ್ತಾರೆ. ಇಂತಹ ನೂರಾರು ಸಮಸ್ಯೆಗಳು ಇವೆ. ಸಮಸ್ಯೆಯನ್ನು ಬಗೆಹರಿಸಿ, ನಿಜವಾಗಿ ಕುಡಿಯುವ ನೀರನ್ನಾದರೂ ಜನರಿಗೆ ಒಳ್ಳೆಯ ರೀತಿಯಲ್ಲಿ ಕೊಡತಕ್ಕ ಕೆಲಸವನ್ನು ಸರ್ಕಾರ ಮಾಡಬೇಕು. ಮತ್ತು ಕೆಇಬಿ ವಿಚಾರದಲ್ಲಿ ತಕ್ಷಣವೇ ನೀವು ಯಾವುದೇ ದಿನಾಂಕವನ್ನು ಕಾಯದೇ ಒಂದೆರಡು ದಿನಗಳೊಳಗೆ ಅಕ್ರಮವಾಗಿರತಕ್ಕದ್ದನ್ನು ಸಕ್ರಮ ಮಾಡತಕ್ಕಂಥಹದು, ಫೆನಾಲ್ಟಿಯನ್ನು ಕಡಿಮೆ ಮಾಡತಕ್ಕದ್ದು. ಇನ್ನು ಎರಡು ತಿಂಗಳು ಎಕ್ಸ್‌ಟೆಂಡ್ ಮಾಡತಕ್ಕದ್ದನ್ನು ದಯಮಾಡಿ ಮಾಡಬೇಕು. ಇಲ್ಲದಿದ್ದರೆ ರೈತರು ಏನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಅದಕ್ಕೆ ಕಾರಣ, ನೇರವಾದಂತಹ ಜವಾಬ್ದಾರಿಯನ್ನು ಈ ಸರ್ಕಾರ ಹೊರಬೇಕಾಗುತ್ತದೆ. ಇವತ್ತೇನು ಕೆಇಬಿಯವರು ಹಳ್ಳಿಯಲ್ಲಿ ಹೋಗಿ ಗ್ರಾಮಾಂತರ ಪ್ರದೇಶದಲ್ಲಿ ಮಾನಸಿಕವಾಗಿ ಹಿಂಸೆಗೆ ಒಳಪಡಿಸುತ್ತಿದ್ದಾರೆ ಆ ಹಿಂಸೆಯಿಂದ ವಾಪಸ್ ಬರತಕ್ಕ

ರೀತಿಯನ್ನು ನೀವು ದಯಮಾಡಿ ಮಾಡಬೇಕು ಎಂದು ನಾನು ಈ ಸರ್ಕಾರವನ್ನು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

+ ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ(ಕೋಲಾರ): ಮಾನ್ಯ ಅಧ್ಯಕ್ಷರೆ, ವಿದ್ಯುಚ್ಛಕ್ತಿ ವಿಚಾರದಲ್ಲಿ ಈಗಾಗಲೇ ಮಾನ್ಯ ಸದಸ್ಯರು ಬಹಳಷ್ಟು ಮಾತನಾಡಿದ್ದಾರೆ. ಮುಖ್ಯವಾಗಿ ರೈತರು ತಮ್ಮ ಪಂಪ್‌ಸೆಟ್ಟುಗಳಿಗೆ ಅನಧಿಕೃತವಾಗಿ ಕಲ್ಪಿಸಿಕೊಂಡಿರುವ ವಿದ್ಯುತ್ ಸಂಪರ್ಕದ ಸಕ್ರಮೀಕರಣ ಹಾಗೂ ಡಾರ್ಕ್ ಅಂಡ್ ಗ್ರೇ ಎಂಬುದನ್ನು ಪೂರ್ತಿಯಾಗಿ ತೆಗೆದುಹಾಕುವ ಕುರಿತಂತೆ ಪ್ರಸ್ತಾಪವಾಗಿದೆ. ರಾಜ್ಯದಲ್ಲಿ ಸುಮಾರು ಒಂದು ಲಕ್ಷದಿಂದ ಎರಡು ಲಕ್ಷದಷ್ಟು ಪಂಪ್‌ಸೆಟ್ಟುಗಳಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡಿರಬಹುದು. ರೈತ ಒಂದು ಲಕ್ಷ ರೂಪಾಯಿಯಷ್ಟು ಹಣವನ್ನು ಖರ್ಚು ಮಾಡಿ ಬೋರ್‌ವೆಲ್ ತೋಡಿಸಿ ಪಂಪ್‌ಸೆಟ್ ಹಾಕಿಸಿಕೊಂಡು ಅದರ ಮೂಲಕ ತನ್ನ ಜಮೀನಿಗೆ ನೀರು ಹಾಯಿಸಿಕೊಂಡು ಜೀವನ ಮಾಡುತ್ತಿರುವ ಈ ಸಂದರ್ಭದಲ್ಲಿ ಸರ್ಕಾರ ಅವರ ಮೇಲೆ ಕೊಡಲಿಪೆಟ್ಟು ಹಾಕಲು ಹೊರಟಿದೆ. ಈ ಬಗ್ಗೆ ಇಂದಿನ 'ಸಂಜೆವಾಣಿ' ದಿನಪತ್ರಿಕೆಯಲ್ಲಿ ವರದಿಯಾಗಿದೆ. ಈ ರೀತಿಯಾದರೆ ರೈತರ ಗತಿ ಏನು? ಶೇಕಡ 65-70ರಷ್ಟು ರೈತರು ಕೃಷಿ ಮೇಲೆ ಅವಲಂಬಿಸಿದ್ದು, ಇವರು ಉಳಿದ ಶೇಕಡ 35ರಷ್ಟು ಜನರಿಗೆ ಆಹಾರ ಕಲ್ಪಿಸಿಕೊಡುವವರಾಗಿದ್ದರೂ ತಮ್ಮ ಪಂಪ್‌ಸೆಟ್ಟುಗಳಿಗೆ ಅನಧಿಕೃತವಾಗಿ ಕಲ್ಪಿಸಿಕೊಂಡಿರುವ ವಿದ್ಯುತ್ ಸಂಪರ್ಕವನ್ನು ಸಕ್ರಮೀಕರಣವನ್ನು ಏಪ್ರಿಲ್ ಆರನೇ ತಾರೀಖಿನೊಳಗೆ ಮಾಡಿಕೊಳ್ಳದಿದ್ದರೆ ಜೈಲಿಗೆ ಹಾಕುವುದಾಗಿ ಕೆಪಿಟಿಸೆಲ್‌ನವರು ಹೇಳಿರುವುದರ ಕುರಿತು ನಾವುಗಳು ಯೋಚಿಸಬೇಕಾಗಿದೆ. ಮಾನ್ಯ ಗೃಹಮಂತ್ರಿಗಳಾದ ಮಲ್ಲಿಕಾರ್ಜುನ ಖರ್ಗೆಯವರು ಇನ್ನೆರಡು ದಿವಸಗಳಲ್ಲಿ ಒಂದು ಸಂದೇಶ ನೀಡಿ ರೈತರನ್ನು ಜೈಲಿಗೆ ದೂಡದಂತೆ ನೋಡಿಕೊಳ್ಳಬೇಕು. ಮೊದಲನೆಯದಾಗಿ ತಮ್ಮ ಗಮನಕ್ಕೆ ತರುವುದೇನೆಂದರೆ, ರೈತರು ಯಾವತ್ತೂ ಕೂಡ ತಮಗೆ ಪುಕ್ಕಟೆಯಾಗಿ ವಿದ್ಯುತ್ ಕೊಡಬೇಕೆಂದು ಕೇಳಿದವರಲ್ಲ. ಮಾನ್ಯ ಗುಂಡುರಾವ್‌ರವರು ಮುಖ್ಯಮಂತ್ರಿಗಳಾಗಿದ್ದಾಗಲೂ ಸಹ ಯಾವುದೇ ರೈತ ತಮಗೆ ಪುಕ್ಕಟೆಯಾಗಿ ವಿದ್ಯುತ್ ಕೊಡಿ ಪಂಪ್ ಸೆಟ್ ಮೂಲಕ ನೀರು ಹಾಯಿಸಿ ವ್ಯವಸಾಯ ಮಾಡುತ್ತೇವೆಂದು ಕೇಳಲಿಲ್ಲ. ಈ ತೀಟೆ ಇದ್ದುದು ರಾಜಕಾರಣಿಗಳಿಗೆ. ರಾಜಕೀಯ ಪಕ್ಷಗಳು ತಮ್ಮ ತೀಟೆ ತೀರಿಸಿಕೊಳ್ಳುವುದಕ್ಕೋಸ್ಕರ ರೈತರನ್ನು ಬಲಿಪಶುಗಳನ್ನಾಗಿ ಮಾಡಿದವು. ಹೇಗೆ ರಷ್ಯಾ ಚೈನಾದವರು ಕೋತಿ, ಇಲಿಗಳ ಮೇಲೆ ವೈಜ್ಞಾನಿಕ ರೀತಿಯಲ್ಲಿ ಪ್ರಯೋಗ ಮಾಡಿ ಯಶಸ್ಸು ಪಡೆಯುತ್ತಾರೋ ಅದೇ ರೀತಿಯ ಪ್ರಯೋಗವನ್ನು ರಾಜಕೀಯ ಪಕ್ಷಗಳು ರೈತಾಪಿ ವರ್ಗದವರ ಮೇಲೆ ಪ್ರಯೋಗ ಮಾಡಿದವು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ರಾಜಕಾರಣಿಗಳ ತೀಟೆ ಎಂದು ಹೇಳುವುದು ಸರಿಯಲ್ಲ. ಒಂದೊಂದು ಸಂದರ್ಭಾನುಸಾರ ವಿದ್ಯುತ್ ಲಭ್ಯತೆಯಿದ್ದಾಗ ಯಾವುದೇ

ಸರ್ಕಾರವಾಗಲೀ ಕನ್‌ಸೆಷನ್ ಕೊಡುವುದಾಗಲೀ ಅಥವಾ ಪುಕ್ಕಟೆಯಾಗಿ ಕೊಡುವುದಾಗಲೀ ಮಾಡುತ್ತವೆ. ದಿವಂಗತ ಶ್ರೀಮಾನ್ ಗುಂಡುರಾವ್‌ರವರ ಕಾಲದಲ್ಲಿ 1980-81ರಲ್ಲಿ ಸುಮಾರು 3 ಲಕ್ಷ 25 ಸಾವಿರದಷ್ಟು ಪಂಪ್‌ಸೆಟ್ಟುಗಳಿದ್ದವು. ಅದೇ ರೀತಿ ಶ್ರೀಮಾನ್ ಬಂಗಾರಪ್ಪನವರ ಕಾಲದಲ್ಲಿ ಸುಮಾರು 7 ಲಕ್ಷ 50 ಸಾವಿರದಷ್ಟಿದ್ದವು. ಅಲ್ಲದೆ, ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡ 15-16 ಸಾವಿರದಷ್ಟು ಪಂಪ್‌ಸೆಟ್ಟುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ತಾವು ಕೋಲಾರದಿಂದ ಬಂದವರಾಗಿದ್ದು ಹೆಚ್ಚು ಪಂಪುಸೆಟ್ಟುಗಳನ್ನು ಅಳವಡಿಸಿಕೊಂಡಿದ್ದು ಅಧಿಕ ಪ್ರಮಾಣದಲ್ಲಿ ವಿದ್ಯುತ್ ಬಳಸುವವರಾಗಿದ್ದು, ವಿದ್ಯುತ್ ಅನ್ನು ಯಾವ ರೀತಿಯಾಗಿ ಪೂರೈಕೆ ಮಾಡುತ್ತಿದ್ದೀರಿ ಎಂಬುದನ್ನು ನೋಡಿದರೆ ಸುಮ್ಮನೆ ತೀಟೆ ತೀರಿಸಿಕೊಳ್ಳುವುದಕ್ಕೋಸ್ಕರ ಉಚಿತವಾಗಿ ವಿದ್ಯುತ್ ಪೂರೈಸಬಾರದು. ಆಗ ಸುಮಾರು ಮೂರೂವರೆ ಲಕ್ಷದಷ್ಟು ಪಂಪ್‌ಸೆಟ್‌ಗಳಿದ್ದು ಏಳು ಪರ್ಸೆಂಟ್‌ನಷ್ಟು ಕನ್ಸಂಪ್ಷನ್ ಇತ್ತು. ಇವೊತ್ತು ಹದಿನೈದು ಲಕ್ಷ ಪಂಪ್‌ಸೆಟ್‌ಗಳಿರುವುದರಿಂದ ಸುಮಾರು ಅಂದಾಜು 39ರಿಂದ 40ರಷ್ಟು ಕನ್ಸಂಪ್ಷನ್ ಇದೆ. ಆದರೆ, ಅನಧಿಕೃತವಾಗಿ ಸಂಪರ್ಕ ಕಲ್ಪಿಸಿಕೊಂಡಿರುವುದನ್ನೂ ಲೆಕ್ಕ ಹಾಕಬೇಕಲ್ಲಾ. ಜೊತೆಗೆ ಹೈಡ್ರೊ ಎಲೆಕ್ಟ್ರಿಸಿಟಿ ಜನರೇಶನ್ ಸಹ ಜಾಸ್ತಿಯಿದ್ದು ನಾವು ಥರ್ಮಲ್ ಪವರ್ ಪಡೆದುಕೊಳ್ಳುತ್ತಿದ್ದು ಇದರೊಂದಿಗೆ ಛತ್ತೀಸ್‌ಗಡ್ ಮತ್ತು ಒರಿಸ್ಸಾದಿಂದ ವಿದ್ಯುತ್ ಬರಬೇಕಾಗಿದೆ. ಆದುದರಿಂದ ತಾವು ರಾಜಕಾರಣಿಗಳನ್ನು ದೂರಲು ಹೋಗಬೇಡಿ. ನೀವು ನಾನೆಲ್ಲರೂ ಸಹ ರಾಜಕಾರಣಿಗಳು.

ಶ್ರೀ ಕೆ.ಶ್ರೀನಿವಾಸಗೌಡ(ಕುಡುವನಹಳ್ಳಿ): ಎಲ್ಲಾ ರಾಜಕೀಯ ಪಕ್ಷಗಳೆಂದು ನಾನು ಹೇಳುತ್ತಿದ್ದೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವಂತೆ ರೈತರು ಕೇಳದಿದ್ದರೂ ಕರೆಂಟ್ ಕೊಟ್ಟಿರಿ, ಆದರೆ ಇದರ ಲಾಭವನ್ನು ಮಾತ್ರ ಕೈಗಾರಿಕೆಗಳವರು ಪಡೆದುಕೊಂಡರು. ಇವೊತ್ತು ರೈತರಿಗೆ ಶೇಕಡ 38ರಷ್ಟು ಕರೆಂಟ್ ಪೂರೈಕೆ ಮಾಡುತ್ತಿದ್ದೇವೆಂದು ಕೆಪಿಟಿಸಿಎಲ್‌ನವರು ಕರಾರುವಾಕ್ಕಾಗಿ ಹೇಳುತ್ತಾರೆಯೇ? ಹೆವಿ ಎಲೆಕ್ಟ್ರಿಸಿಟಿ ಎಲ್ಲಿ ಕನ್‌ಸ್ಯೂಮ್ ಆಗುತ್ತದೆ? ಹೆಚ್‌ಟಿ ಮತ್ತು ಎಲ್‌ಟಿಯನ್ನು ಕೈಗಾರಿಕೆಗಳವರು ಮತ್ತು ರೈತರು ಎಷ್ಟು ಕನ್‌ಸ್ಯೂಮ್ ಮಾಡುತ್ತಾರೆಂದು ಲೆಕ್ಕ ಹಾಕಬೇಕು. ರೈತರಿಂದ ಮಾತ್ರ ಶೇಕಡ 38ರಷ್ಟು ಎಲೆಕ್ಟ್ರಿಸಿಟಿ ಕನ್‌ಸ್ಯೂಮ್ ಆಗುತ್ತಿದೆಯೆಂದು ಹೇಳುತ್ತಿದ್ದಾರೆ. ಇದಕ್ಕೆ ಆಧಾರ ಮತ್ತು ಮಾನದಂಡವೇನು? ಯಾವುದೇ ಕೆಲಸವಾಗಲೀ ರೈತ ಇವರ ಕೈಗೆ ಬಹಳ ಸುಲಭವಾಗಿ ಸಿಗುತ್ತಾನೆ. ಏಕೆಂದರೆ ಅವರಲ್ಲಿ ಒಗ್ಗಟ್ಟಿಲ್ಲ. ಒಗ್ಗಟ್ಟಿಲ್ಲದ ಕಾರಣ ಎಲ್ಲಾ ರೀತಿಯ ಪ್ರಹಾರಗಳು ಆತನ ಮೇಲೆಯೇ ಬೀಳುತ್ತಿದೆ. ಒಂದೆಡೆ ರೈತನೇ ನಮಗೆ ಜೀವಾಳ ಎಂದು ಹೇಳುವಂಥ ನಾವುಗಳು ಆತನ ಬೆನ್ನುಮೂಳೆ ಮುರಿಯುವಂಥ ಕೆಲಸ ಮಾಡುತ್ತಿದ್ದೇವೆ. ನೀವು ಆಗಲೇ ಪ್ರಸ್ತಾಪಿಸಿದ ರೀತ್ಯ ಮೀಟರ್ ಮೂಲಕ ಕರೆಂಟ್ ಕೊಡುತ್ತಿದ್ದರೆ ಇವೊತ್ತು

ಕರೆಂಟ್ ಸಮಸ್ಯೆಯೇ ಬರುತ್ತಿರಲಿಲ್ಲ. ಕರೆಂಟ್ ಅನ್ನು ಪುಕ್ಕಟೆಯಾಗಿ ಕೊಡುತ್ತೇವೆಂದಾಗ ನಾವೂ ಆಸೆ ಪಡುತ್ತೇವೆ, ಅವರೂ ಆಸೆ ಪಡುತ್ತಾರೆ. ಪುಕ್ಕಟೆಯಾಗಿ ವಿದ್ಯುತ್ ಕೊಡುತ್ತೇವೆಂದಾಗ ನೀರು ಹಾಯಿಸಿ ಬೆಳೆ ತೆಗೆಯಬಹುದೆಂದುಕೊಳ್ಳುತ್ತಾನೆ. ಆಗ ಹಳ್ಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೋರ್‌ವೆಲ್‌ಗಳಿರಲಿಲ್ಲ. 55 ತಾಲ್ಲೂಕುಗಳಲ್ಲಿ ಬಯಲುಸೀಮೆಯಲ್ಲಿ ಕಡಿಮೆ ಸಂಖ್ಯೆಯಲ್ಲಿ ಬಾವಿಗಳಿದ್ದವು. ಈ ಹಿನ್ನೆಲೆಯಲ್ಲಿ ವಿದ್ಯುತ್ ಅನ್ನು ಉಚಿತವಾಗಿ ಕೊಡುತ್ತೇವೆಂದಾಗ ಮತ್ತು ಅದೇ ಸಮಯಕ್ಕೆ ಬೋರ್‌ವೆಲ್ ತೋಡುವಂಥ ಕೆಲಸವನ್ನು ರೈತಾಪಿ ವರ್ಗ ಮಾಡಿತು ಹಾಗೂ ಇದಕ್ಕೆ ಸರ್ಕಾರ ತನ್ನ ಒಪ್ಪಿಗೆ ನೀಡಿತು. ತದನಂತರ, ಕೊಳವೆಬಾವಿಗೆ ಪಂಪ್‌ಸೆಟ್ ಅಳವಡಿಸಿಕೊಂಡು ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡು ತನ್ನ ಜಮೀನಿಗೆ ನೀರುಣಿಸಿ ಬದುಕುತ್ತಿದ್ದಾಗ ತಮ್ಮ ಪಂಪ್‌ಸೆಟ್‌ಗಳಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡಿರುವುದರಿಂದ ಸಂಪರ್ಕ ಕಡಿತ ಮಾಡಿ ಜೈಲಿಗೆ ದೂಡುತ್ತೇವೆಂದರೆ ಯಾವ ನ್ಯಾಯವೆಂಬುದನ್ನು ನೀವೇ ಹೇಳಿ? ರೈತರು ಪಂಪ್‌ಸೆಟ್ ಅಳವಡಿಸಿಕೊಂಡು ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡಿರುವುದಕ್ಕೆ ಶುಲ್ಕ ನಿಗದಿಪಡಿಸಿದರೆ ಅವರು ಅದನ್ನು ಕಟ್ಟುವುದಿಲ್ಲ ಎನ್ನುವುದಿಲ್ಲ. ದಿವಸಕ್ಕೆ 24 ಗಂಟೆ ಕಾಲ ವಿದ್ಯುತ್ ಕಲ್ಪಿಸಿಕೊಟ್ಟಲ್ಲಿ ನೀವು ಎಷ್ಟು ದರ ನಿಗದಿಪಡಿಸುತ್ತೀರೋ ಅಷ್ಟನ್ನು ಕಟ್ಟಲು ಅವರು ತಯಾರಿದ್ದಾರೆ. ಒಂದು ಕಡೆ ತೋಡಿಸಿರುವ ಬೋರ್‌ವೆಲ್‌ಗಳು ಬತ್ತಿಹೋಗುತ್ತಿದ್ದು, 18 ಅಡಿಗಳಷ್ಟಿದ್ದ ಅಂತರ್ಜಲ ಇಂದು ಸುಮಾರು 750-800 ಅಡಿಗಳಷ್ಟು ಆಳಕ್ಕೆ ತಲುಪಿದೆ. ಬಯಲುಸೀಮೆಯಲ್ಲಿ ವಾಸಿಸುತ್ತಿರುವ ಜನರ ಬಗ್ಗೆ ಸರ್ಕಾರದ ಆದ್ಯತೆಗಳೇನು? ಆದ್ಯತೆಗಳಿರುವುದೇ ಕೇವಲ ನೀರು ಮತ್ತು ವಿದ್ಯುತ್. ನೀರಿನ ನಿರ್ವಹಣೆ ಕುರಿತಂತೆ ಇವೊತ್ತಿನವರೆವಿಗೂ ಯಾವುದೇ ಸರ್ಕಾರ ಹಾಗೂ ಯಾರೂ ಕೂಡ ಗಮನಹರಿಸಿಲ್ಲ. ಒಬ್ಬ ರೈತ ಶೇಕಡ ಹತ್ತರಷ್ಟು ನೀರನ್ನು ಮಾತ್ರ ಕಾಲುವೆ ಮೂಲಕ ತನ್ನ ತೋಟಕ್ಕೆ ಹಾಯಿಸಿಕೊಳ್ಳುತ್ತಿದ್ದು ಉಳಿದಂತೆ ತೊಂಭತ್ತರಷ್ಟು ನೀರು ಪೋಲಾಗುತ್ತಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಆದರೆ, ಇವೊತ್ತು ಅಂತರ್ಜಲ 700-800 ಅಡಿಗಳಷ್ಟು ಕೆಳಗಡೆ ಹೋಗಿದೆ. ಅಂತರ್ಜಲ ಮಟ್ಟವನ್ನು ಎತ್ತರಿಸುವ ಕುರಿತಂತೆ ಯಾವುದೇ ಸರ್ಕಾರಗಳೂ ಕೂಡ ಗಮನ ಹರಿಸಿಲ್ಲ. ರೈತನೇ ಏಕೆ ಹೊಣೆಗಾರನಾಗಬೇಕು? ವಿದ್ಯುತ್ ಅನ್ನು ನೀವು ಸರಾಗವಾಗಿ ಕೊಡಬೇಕು. ವಿದ್ಯುತ್ ದರ ನಿಗದಿಪಡಿಸುವ ಕುರಿತಂತೆ ಈ ಹಿಂದೆ ರಚಿಸಲಾಗಿದ್ದ ಸಮಿತಿಗೆ ನಾನೂ ಕೂಡ ಸದಸ್ಯನಾಗಿದ್ದು ಒಂದು ಹೆಚ್‌ಪಿಗೆ ಮುನ್ನೂರು ರೂಪಾಯಿಗಳಂತೆ ವಿಧಿಸಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೆವು. ಕೆಪಿಟಿಸಿಎಲ್ ಸಂಸ್ಥೆಯೂ ಬದುಕಬೇಕಲ್ಲ. ಆದರೆ, ಯಾವ ದಿಕ್ಕಿನಲ್ಲಿ ಬದುಕಿಸಬೇಕೆಂದು ಯೋಚಿಸಬೇಕಷ್ಟೇ. ಹೆಚ್‌ಟಿ ಮತ್ತು ಎಲ್‌ಟಿಯಲ್ಲಿ ಕರೆಂಟ್ ಸಾಕಷ್ಟು ಪ್ರಮಾಣದಲ್ಲಿ ಕಳ್ಳತನವಾಗುತ್ತಿದೆಯೆಂದು ಈಗಾಗಲೇ ಬಹಳಷ್ಟು ಸಾರಿ ಹೇಳಿದ್ದೇವೆ. ಸೋರಿಕೆಯಾಗುತ್ತಿರುವ ವಿದ್ಯುತ್ತನ್ನು ಕಂಟ್ರೋಲ್ ಮಾಡಬೇಕು. ಆ ಮೂಲಕ ಸಿಸ್ಟಂನ್ನು ಇಂಪ್ರೂವ್ ಮಾಡಬೇಕು. ಹಿಂದಿನ

ಸರ್ಕಾರವಿದ್ದಾಗ ಸುಮಾರು 800 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆ ಮಾಡಿದೆ. ತಾವು ಅಧಿಕಾರಕ್ಕೆ ಬಂದ ಕಳೆದ ಎರಡೂವರೆ ವರ್ಷಗಳಿಂದ ಇನ್‌ಫ್ರಾಸ್ಟ್ರಕ್ಚರನ್ನು ಡೆವಲಪ್ ಮಾಡುತ್ತಿದ್ದೀರಿ ಬೆಂಗಳೂರು ಎಂದರೆ 'ಕಂಪ್ಯೂಟರ್ ಸಿಟಿ' ಎನ್ನುವ ಭಾವನೆಯನ್ನು ತಂದಿದ್ದೀರಿ. ಆದರೆ, ಇವತ್ತು ತಾವು ವಿದ್ಯುತ್ ವಲಯಕ್ಕೆ ಆದ್ಯತೆ ಕೊಟ್ಟಿದ್ದೀರೆಂಬುದು ನಿಜ. ತಾವು ರಸ್ತೆಗಳ ಅಭಿವೃದ್ಧಿಗೆ ನಬಾರ್ಡ್‌ನಿಂದ ಹಣವನ್ನು ತೆಗೆದುಕೊಳ್ಳುತ್ತಿದ್ದೀರಿ. ಇನ್ನು ಹತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಹಣ ತನ್ನಿ. ಮುಂದೆ ಯಾವ ಸರ್ಕಾರ ಅಧಿಕಾರಕ್ಕೆ ಬರುತ್ತದೋ ಅವರು ತೀರಿಸುತ್ತಾರೆ! ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ತನ್ನು ಉತ್ಪಾದನೆ ಮಾಡುವುದನ್ನು ಬಿಟ್ಟು ರೈತನೊಬ್ಬನೇ ನಿಮ್ಮ ಕಣ್ಣಿಗೆ ಕಾಣಿಸುತ್ತಿರುವುದು ನನಗೆ ನೋವುಂಟು ಮಾಡಿದೆ.

5.50 ಪಿಎಂ

ಅದರ ಜೊತೆಗೆ ಟ್ರಾಕ್ಟರ್, ಟೆಲಿಫೋನ್, ಕಾರು ಮೊಬೈಲ್ ಹೊಂದಿರುವ ರೈತರಿಗೆ ಬೇರೆ ರೀತಿಯಾದ ಚಾರ್ಜ್ ಎಂದರೆ ಇದು ಯಾವ ನ್ಯಾಯ? ಕೇಂದ್ರ ಕೃಷಿ ಸಚಿವರಾಗಿದ್ದಂಥ ಶ್ರೀ ಬಲರಾಮ್‌ಜಾಖಡ್‌ರವರು ಒಂದು ಫಂಕ್ಷನ್‌ನಲ್ಲಿ ಮಾತನಾಡುತ್ತಾ ನಾನು ಸೂಟನ್ನು ಹಾಕಿಕೊಂಡು ಏಕೆ ಓಡಾಡುತ್ತೇನೆಂದರೆ ಒಬ್ಬ ರೈತ ಮಗನಿಗೂ ಕೋಟು ಹಾಕಿಕೊಳ್ಳಲು ಬರುತ್ತದೆ ಎಂಬುದನ್ನು ಈ ದೇಶಕ್ಕೆ ತೋರಿಸಬೇಕು ಎಂಬ ಕಾರಣಕ್ಕಾಗಿ ಹಾಕಿಕೊಳ್ಳುತ್ತೇನೆಂದು ಒಬ್ಬ ರೈತನ ಮಗನಾಗಿ ಅವರು ಹೇಳಿದರು. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ರೈತ ಟ್ರಾಕ್ಟರ್ ಇಟ್ಟುಕೊಂಡರೂ ವಿದ್ಯುತ್ ಬೆಲೆಯನ್ನು ಜಾಸ್ತಿ ಮಾಡುತ್ತೇವೆಂದರೆ ಯಾವ ನ್ಯಾಯ? ಟಿ.ವಿ. ಇಟ್ಟುಕೊಂಡಿದ್ದರೆ ಅವನಿಗೆ ವಿದ್ಯುತ್ ಬೆಲೆಯನ್ನು ಜಾಸ್ತಿ ಮಾಡುತ್ತೇನೆಂದರೆ ಯಾವ ನ್ಯಾಯ? ಹಾಗಾದರೆ ರೈತರು ಯಾವಾಗಲೂ ಪಟ್ಟಾಪಟ್ಟಿ ನಿಕ್ಕರ್, ಖಾಕಿ ನಿಕ್ಕರ್ ಅಥವಾ ಬಟ್ಟೆಯನ್ನೇ ಹಾಕಿಕೊಂಡು ಓಡಾಡಬೇಕೆ? ನಾವು ಯಾವಾಗಲೂ ಒಳ್ಳೆಯ ಬಟ್ಟೆಯನ್ನು ಹಾಕಿಕೊಂಡು ಓಡಾಡಲೇ ಬಾರದೆ? ಏಕೆಂದರೆ ಅದಕ್ಕೂ ತೆರಿಗೆ ಹಾಕತಕ್ಕ ಪರಿಸ್ಥಿತಿಯಲ್ಲಿ ತಾವು ಯೋಚನೆ ಮಾಡಿರತಕ್ಕ ದಿಕ್ಕು, ಚಿಂತನೆ ಬಹಳ ಕಠಿಣವಾದ ಚಿಂತನೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಇದರ ಬಗ್ಗೆ ಮತ್ತೆ ಪರಾಮರ್ಶೆ ಮಾಡಿ ಇದನ್ನು ಕೈಬಿಡಬೇಕು. ರೈತರು ಯಾವಾಗಲೂ ಹೆಗಲ ಮೇಲೆ ಟವಲ್ ಅನ್ನು ಹಾಕಿಕೊಂಡು ತಲೆಗೆ ಬಟ್ಟೆಯನ್ನು ಕಟ್ಟಿಕೊಂಡೇ ಓಡಾಡಬೇಕು ಎಂಬ ಭಾವನೆ ಈ ದೇಶದಲ್ಲಿ ಅವನದ್ದೇ ಆದಂಥ ಜನರು ನೋಡುವಂಥ ದೃಷ್ಟಿ, ಅವನು ಯಾವಾಗಲೂ ಕೀಳುಮಟ್ಟದಲ್ಲೇ ಇರಬೇಕು, ಅವನು ಯಾವಾಗಲೂ ಕೊಳೆ ಬಟ್ಟೆಯನ್ನೇ ಹಾಕಿಕೊಳ್ಳಬೇಕು ಒಗೆದುಕೊಂಡು ಬಟ್ಟೆಯನ್ನು ಹಾಕಿಕೊಳ್ಳಬಾರದು ಎನ್ನತಕ್ಕ ಭಾವನೆಯನ್ನು ಇದು ತೋರಿಸುತ್ತದೆ. ನಾವೇನು ಟ್ರಾಕ್ಟರ್, ಟಿ.ವಿ., ಕಾರು ಹೊಂದಿರುವ ರೈತರಿಗೆ ವಿದ್ಯುತ್ ಬೆಲೆಯನ್ನು ಜಾಸ್ತಿ ಹಾಕುತ್ತೇವೆಂದು ಹೇಳಿದರೆ ಆ ರೈತರು ಚೆನ್ನಾಗಿ ಬದುಕಬಾರದು ಎಂಬ ಭಾವನೆಯನ್ನು ಕೆ.ಪಿ.ಟಿ.ಸಿ.ಎಲ್. ಮೂಲಕ

ತೋರಿಸುತ್ತಿದ್ದೀರಿ. ಇದನ್ನು ಕೈ ಬಿಡಬೇಕು. ನನ್ನ ಒಂದು ಚುಕ್ಕೆ ರಹಿತ ಪ್ರಶ್ನೆಗೆ ಉತ್ತರ ಬಂದಿತ್ತು. ಅದೇನೆಂದರೆ, ನಾವು ಹಗಲು ಆರು ಗಂಟೆ ವಿದ್ಯುತ್ ಕೊಡುತ್ತೇವೆ, ರಾತ್ರಿಯಾದರೆ ಎಂಟು ಗಂಟೆ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದೀರಿ. ನಾನು ಇನ್ಶ್ಯೂರೆನ್ಸ್ ಕಮಿಟಿ ಛೇರ್ಮನ್ ಆದಮೇಲೆ ಸಂಕಟಹರಣ ವಿಮಾ ಯೋಜನೆಯನ್ನು ತಂದಿದ್ದೇನೆ. ಬಿಜಾಪುರ ಜಿಲ್ಲೆಯಲ್ಲಿ ಒಬ್ಬ ರೈತ ಕಬ್ಬನ್ನು ಕಟ್ ಮಾಡುತ್ತಿದ್ದಾಗ ನಾಗರಹಾವು ಸೇರಿಕೊಂಡಿದ್ದರಿಂದ ಸತ್ತು ಹೋದ. ಹಗಲು ಹೊತ್ತಿನಲ್ಲೇ ಈ ಪರಿಸ್ಥಿತಿಯಾದರೆ ರಾತ್ರಿ ಹೊತ್ತಿನಲ್ಲಿ ರೈತ ನೀರನ್ನು ಕಟ್ಟಬೇಕಾದರೆ ಕಷ್ಟ ಗೊತ್ತಾಗುವುದಿಲ್ಲವೆ? ಇಲ್ಲಿರುವ ನಾವುಗಳೆಲ್ಲರೂ ಗೆದ್ದು ಬಂದಿರುವುದು ರೈತರ ಹಿನ್ನೆಲೆಯಿಂದಲೇ. ಹೀಗಿರುವಾಗ ರಾತ್ರಿಯ ಸಮಯದಲ್ಲಿ ರೈತ ಅವನ ಬೆಳೆಗೆ ನೀರನ್ನು ಕಟ್ಟಲು ಹೋದರೆ ಹಾವು ಕಚ್ಚಿಯೋ ಇನ್ನ್ಯಾವುದೋ ಕಾರಣಕ್ಕೋ ಅವನು ಸತ್ತರೂ ಪರವಾಗಿಲ್ಲ. ರಾತ್ರಿ ಎಂಟು ಗಂಟೆ ವಿದ್ಯುತ್ ಕೊಡುತ್ತೇವೆ ಎನ್ನುತ್ತೀರಿ. ಹಾಗಾದರೆ ಕೆ.ಪಿ.ಟಿ.ಸಿ.ಎಲ್.ರವರಿಂದ ಇಲ್ಲವೆ ಸರ್ಕಾರದಿಂದ ಇನ್‌ಶ್ಯೂರೆನ್ಸ್ ಮಾಡಿಕೊಟ್ಟುಬಿಡಿ. ಈ ರೀತಿ ಅವೈಜ್ಞಾನಿಕವಾಗಿ ಅದರಲ್ಲೂ ರೈತರ ಮೇಲೆಯೇ ಪ್ರಹಾರ ಮಾಡತಕ್ಕದ್ದು ತಪ್ಪು ಎನ್ನತಕ್ಕ ಚಿಂತನೆ ಬರಬೇಕು. ಕೆ.ಪಿ.ಟಿ.ಸಿ.ಎಲ್. ಅಧ್ಯಕ್ಷರಾದ ಶ್ರೀ ಬಾಳಿಗಾರ್‌ರವರು ನಗರ ಪ್ರದೇಶದಲ್ಲಿ ವಿದ್ಯುತ್ ಉಳಿಸಿ ಗ್ರಾಮೀಣ ಪ್ರದೇಶಕ್ಕೆ ಪೂರೈಸುತ್ತೇವೆಂದು ನೀಡಿರುವ ಸ್ಟೇಟ್‌ಮೆಂಟ್ ಪತ್ರಿಕೆಗಳಲ್ಲಿ ಹೆಡ್‌ಲೈನ್ಸ್‌ನಲ್ಲಿ ಬಂದಿದೆ. ಪಟ್ಟಣಗಳಲ್ಲಿ ವಿದ್ಯುತ್‌ನ್ನು ಎಲ್ಲಿ ಎಷ್ಟು ಹೊತ್ತು ಕಡಿಮೆ ಮಾಡಿದ್ದೀರಿ? ಯಾವ ಕೈಗಾರಿಕೆಗಳಿಗೆ ಕಡಿಮೆ ವಿದ್ಯುತ್‌ನ್ನು ಕೊಡುತ್ತಿದ್ದೀರಿ? ಮುಂತಾದ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ ಅದ್ಯಾವುದಕ್ಕೂ ಉತ್ತರವಿಲ್ಲ. ಕೆ.ಪಿ.ಟಿ.ಸಿ.ಎಲ್.ನ ಅಧ್ಯಕ್ಷರು ಏನು ಸ್ಟೇಟ್‌ಮೆಂಟ್ ಕೊಡುತ್ತಾರೆ ಅದಕ್ಕೆ ಪೂರಕವಾಗಿ ಕಾರ್ಯಕ್ರಮಗಳನ್ನು ಏನೇನು ಹಾಕಿಕೊಂಡಿದ್ದೀರಿ? ಅದನ್ನೂ ಹೇಳಬೇಕಾಗುತ್ತದೆ. ಮಾನ್ಯ ಸಚಿವರು ನಗರ ಪ್ರದೇಶಗಳಲ್ಲಿ ಈ ರೀತಿ ವಿದ್ಯುತ್‌ನ್ನು ಉಳಿಸುತ್ತಿದ್ದೇವೆ ಎಂಬ ಬಗ್ಗೆ ಹೇಳಬೇಕು. ಬೇರೆ ದೇಶಗಳಲ್ಲಿ ವಿದ್ಯುತ್ ಉಳಿತಾಯ ಮಾಡುವ ಬಗ್ಗೆ ನಾನು ನೋಡಿದ್ದೇನೆ, ಉದಾಹರಣೆಗೆ ಇಸ್ರೇಲ್ ದೇಶದಲ್ಲಿ ನೀರನ್ನು ಕಾಯಿಸಲು ಪ್ರತಿ ಮನೆಯಲ್ಲಿ ಸೋಲಾರ್‌ನ್ನು ಹಾಕಿದ್ದಾರೆ. ಸಬ್ಸಿಡಿಯನ್ನು ಕೊಡುತ್ತಾರೆ. ತಾವು ವಿದ್ಯುತ್‌ನ್ನು ಉಳಿತಾಯ ಮಾಡಲು ಈ ದಿಕ್ಕಿನಲ್ಲಿ ಯೋಚನೆ ಮಾಡಿ. ಏಕೆ ತಮಗೆ ಬರೀ ರೈತರೇ ಕಣ್ಣಿಗೆ ಬೀಳುತ್ತಾರೆ? ಮಾರಿಯ ಕಣ್ಣೆಲ್ಲಾ ಹೋರಿಯ ಮೇಲೆ ಎಂಬಂತೆ ಎಲ್ಲದಕ್ಕೂ ರೈತರೇ ತಮಗೆ ಕಾಣಿಸುತ್ತಾರೆ, ಬೇರೆ ಯಾರೂ ಕಾಣಿಸುವುದಿಲ್ಲ. ತಮ್ಮ ಈ ಚಿಂತನೆಯನ್ನು ಬದಲಾಯಿಸಿಕೊಳ್ಳಬೇಕೆಂಬುದೇ ನನ್ನ ಇಷ್ಟ. ಮಾನ್ಯ ಅಧ್ಯಕ್ಷರೆ, ವಿದ್ಯುತ್‌ನ ಕಷ್ಟ ತಮಗೂ ಗೊತ್ತಿದೆ, ಏಕೆಂದರೆ ತಾವೂ ನಮ್ಮ ಜಿಲ್ಲೆಯಿಂದಲೇ ಬಂದವರು. ನಾನು ಈ ಸಾರಿ ಕೇವಲ ಆರು ಎಕರೆಯಲ್ಲಿ ಭತ್ತದ ಬೆಳೆಯನ್ನು ಮಾಡಿಸಿದ್ದೇನೆ. ನಮ್ಮ ಅಜ್ಜನ ಕಾಲದಲ್ಲಿ ಊರುಗದ್ದೆಯೆಂದು ಮಾಡುತ್ತಿದ್ದೆವು. ಇವತ್ತು ವಿದ್ಯುತ್‌ನ್ನು ನಂಬಿಕೊಂಡು ಭತ್ತವನ್ನು ಹಾಕಿದ್ದೇನೆ, ಅದರ ಸಹವಾಸ

ಬೇಡವಾಗಿದೆ, ನಾನು ಭತ್ತವನ್ನು ಬೆಳೆಯಲು ಈಗ ಏನು ಜನರೇಟರ್‌ಗೆ, ಡೀಸೆಲ್ ಇಂಜಿನ್‌ಗೆ ಖರ್ಚು ಮಾಡಿದ್ದೇನೆ ಅದರಲ್ಲಿ ಮೂರು ವರ್ಷಕ್ಕಾಗುವಷ್ಟು ಅಕ್ಕಿಯಾಗುತ್ತಿತ್ತು. ನಾನೇ ವ್ಯವಸಾಯ ಮಾಡಿರುವಂಥ ಆರು ಎಕರೆಯಲ್ಲಿ ಈ ಪರಿಸ್ಥಿತಿ ಇದೆ, ಇನ್ನು ಉಳಿದ ರೈತರ ಗತಿಯೇನು? ಇಂಥ ಪರಿಸ್ಥಿತಿಯಲ್ಲೂ ತಾವು ಯೋಚನೆ ಮಾಡದಿದ್ದರೆ ಕಷ್ಟವಾಗುತ್ತದೆ. ಕೆ.ಪಿ.ಟಿ.ಸಿ.ಎಲ್. ನವರೇನು 6ನೇ ತಾರೀಖು ಗಡುವನ್ನು ಕೊಟ್ಟಿದ್ದಾರೆ ಅದನ್ನು ದಯಮಾಡಿ ತೆಗೆಯಬೇಕು ಡಾರ್ಕ್ ಅಂಡ್ ಗ್ರೇ ಎಂದೇನು ಗುರುತು ಮಾಡಿದ್ದಾರೆ ಅದನ್ನು ಪೂರ್ತಿಯಾಗಿ ತೆಗೆಯಬೇಕು ಅದನ್ನು ಸಕ್ರಮಗೊಳಿಸಬೇಕು. ಕುಡಿಯುವ ನೀರಿನ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆಯೆಂದರೆ, ಅದೃಷ್ಟವಶಾತ್ ಕೋಲಾರದಲ್ಲಿ ಈ ಸಲ ನೀರಿದೆ, ಏಕೆಂದರೆ ನಮ್ಮಲ್ಲಿ ಮಳೆ ಚೆನ್ನಾಗಿ ಆಗಿದ್ದರಿಂದ ಕೆರೆಗಳಲ್ಲಿ ನೀರಿದೆ, ಬೋರ್‌ವೆಲ್‌ಗಳಲ್ಲಿ ನೀರಿದೆ. ಆದರೆ ನೀರನ್ನೆತ್ತಲು ವಿದ್ಯುತ್ ಬೇಕು, ಆದರೆ ವಿದ್ಯುತ್ ಇಲ್ಲ. ಮೊನ್ನೆ ನನ್ನ ಸ್ವಂತ ಹಳ್ಳಿಯಾದ ಕುಡುವನಹಳ್ಳಿಗೆ ಹೋಗಿದ್ದೆ, ಅಲ್ಲಿ ಹೆಣ್ಣುಮಕ್ಕಳೆಲ್ಲಾ ಬಂದು ಅಣ್ಣ ನೀರು ಬರುತ್ತಿಲ್ಲವೆಂದರು. ಏಕೆ ಎಂದು ಕೇಳಿದೆ, ನಾಲ್ಕು ದಿವಸಗಳಿಂದ ಕರೆಂಟ್ ಬಂದಿಲ್ಲವೆಂದರು. ಇದಕ್ಕೆ ನಾವೇನು ಉತ್ತರ ಕೊಡಬೇಕು? ನಾನು ಇನ್ನೊಂದು ಹಳ್ಳಿಗೆ ಹೋಗುವುದಲ್ಲ ನನ್ನ ಸ್ವಂತ ಹಳ್ಳಿಯಲ್ಲೇ ನಾನು ನೋಡಿದ ಪರಿಸ್ಥಿತಿ. ಒಂದು ಸಮಯದಲ್ಲಿ ಬೋರ್‌ವೆಲ್‌ಗಳಲ್ಲಿ ನೀರಿರುವುದಿಲ್ಲ, ಆಗ ನೀರಿಲ್ಲವೆಂದು ನಾವು ಬಾಯಿ ಬಡಿದುಕೊಳ್ಳುತ್ತಿದ್ದೆವು, ಆದರೆ ಈಗ ಬೋರ್‌ವೆಲ್‌ಗಳಲ್ಲಿ ನೀರಿದೆ ಆದರೆ ವಿದ್ಯುತ್ ಇಲ್ಲವೆಂದು ಬಾಯಿ ಬಡಿದುಕೊಳ್ಳಬೇಕಾಗಿದೆ. ಅಂಥ ಪರಿಸ್ಥಿತಿ ಕೋಲಾರದಲ್ಲಿ ಬಂದಿದೆ. ನಾನು ಎರಡು ತಿಂಗಳ ಹಿಂದೆ ಬಳ್ಳಾರಿ ಜಿಲ್ಲೆಗೆ ಬಂದಿದ್ದೆ. ಆಗ ಧಾರವಾಡ, ಬೆಳಗಾಂ ಜಿಲ್ಲೆಗಳನ್ನೂ ನೋಡಿದೆ. ಆ ಭಾಗದಲ್ಲಿ ಬೆಳೆಗಳು ಎರಡು ಸೀಜನ್‌ನಲ್ಲಿ ಬರುತ್ತದೆ. ಆಗಸ್ಟ್ ಸೆಪ್ಟೆಂಬರ್ ತಿಂಗಳಿನಲ್ಲಿ ಆ ಭಾಗಕ್ಕೆ ಹೋದರೆ ಅಲ್ಲಿನ ಬೆಳೆಯನ್ನು ನೋಡಲು ಖುಷಿಯಾಗುತ್ತಿತ್ತು, ಎಷ್ಟು ದೂರ ನೋಡಿದರೂ ಆ ಡ್ರೈಲ್ಯಾಂಡ್ ಕ್ರಾಪ್ಸ್ ಅದು ಮೆಣಸಿನ ಗಿಡ ಇರಬಹುದು, ಕಡ್ಲೇಕಾಯಿ, ಜೋಳ ಇರಬಹುದು ಅಷ್ಟೂ ಸಂತೋಷವಾಗುತ್ತಿತ್ತು. ಮತ್ತು ಹಾರ್ವೆಸ್ಟಿಂಗ್ ಸೀಜನ್‌ನಲ್ಲಿ ಹೋದಾಗಲೂ ಅದೇ ಸಂತೋಷವಾಗುತ್ತಿತ್ತು. ಆದರೆ ಈ ಸಲ ಅಲ್ಲಿಗೆ ಹೋದಾಗ ನೋವಾಯಿತು. ಎಲ್ಲಿ ನೋಡಿದರೂ ಬೆಳೆಗಳಾಗಿರಲಿಲ್ಲ. ಹಿಂಗಾರು ಬೆಳೆಗಳೆಲ್ಲಾ ಒಣಗಿ ಹೋಗಿತ್ತು. ಕೋಲಾರ, ಗುಲ್ಬರ್ಗಾ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ತುಮಕೂರು ಈ ಭಾಗಗಳವರು ಈ ಸಲ ಸುಧಾರಿಸಿಕೊಂಡಿದ್ದಾರೆ. ಈ ಭಾಗಗಳಲ್ಲಿ ಬರ ಈ ಸಲ ಕಂಡಿಲ್ಲ. ಆದ್ದರಿಂದ ತಾವು ಸಮರೋಪಾದಿಯಲ್ಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ಹುಬ್ಬಳ್ಳಿ-ಧಾರವಾಡ ನಗರಕ್ಕೆ 15 ದಿವಸಕ್ಕೊಮ್ಮೆ ನೀರು ಕೊಡುತ್ತಿರುವುದಾಗಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದರು. ಬೆಂಗಳೂರನ್ನು ಬಿಟ್ಟರೆ ಎರಡನೇ ಮಹಾನಗರ ಅದಾಗಿರುವಾಗ ಸರ್ಕಾರ ಇದರ ಬಗ್ಗೆ ಯಾವ ರೀತಿಯಲ್ಲಿ ಗಮನ ಹರಿಸುತ್ತಿದೆ ಎಂಬುದರ ಬಗ್ಗೆ ಯೋಚನೆ

ಮಾಡಬೇಕು. ಮೈಸೂರಿನಲ್ಲಿ, ಚಿಕ್ಕಮಗಳೂರಿನಲ್ಲಿ, ಬೆಳಗಾಂನಲ್ಲಿ ಕುಡಿಯಲು ನೀರಿಲ್ಲ. ಇದರ ಬಗ್ಗೆ ತಾವು ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಗ್ರಾಮೀಣಾಭಿವೃದ್ಧಿ ಸಚಿವರು ನಮಗೆ ಇಷ್ಟು ದುಡ್ಡಿದೆಯೆಂದು ಪುಸ್ತಕದಲ್ಲಿ ತೋರಿಸುತ್ತಾರೆ, ಆದರೆ ತಮ್ಮ ಇಂಜಿನಿಯರ್, ಸಿ.ಇ.ಒ. ಇವರನ್ನು ಕೇಳಿದರೆ ದುಡ್ಡಿಲ್ಲವೆನ್ನುತ್ತಾರೆ, ಇದರ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡಿ. 10ನೇ ಮತ್ತು 11ನೇ ಫೈನಾನ್ಸ್ ಕಮೀಷನ್‌ನಲ್ಲಿ ಏನು ಕೊಡುತ್ತೀರಿ ಅದನ್ನು ತಾಲ್ಲೂಕು ಮಟ್ಟದಲ್ಲಿ ಯಾವ ರೀತಿ ಹಂಚಿಕೊಳ್ಳುತ್ತಾರೆ, ಯಾವ ರೀತಿ ಕೆಲಸವಾಗುತ್ತದೆ ಎಂಬ ಬಗ್ಗೆ ನಮ್ಮ ನಾಯಕರಾದ ಸಿಂಧ್ಯಾರವರು ಹೇಳಿದರು. ಆದರೆ ಕುಡಿಯುವ ನೀರಿಗೆ ಯಾವ ಮಟ್ಟದಲ್ಲಿ ಆದ್ಯತೆ ಕೊಡಬೇಕಿತ್ತೋ ಅದನ್ನು ಕೊಡುತ್ತಿಲ್ಲ. ಅದಕ್ಕೆ ಆದ್ಯತೆಯನ್ನು ಕೊಡಬೇಕು. ಬೇರೆ ಬೇರೆ ಜಿಲ್ಲೆಗಳಲ್ಲಿ ಬಂದಂಥ ಬರವನ್ನು ನೀಗಿಸಲು ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಸಿ.ಬಸವರಾಜ್(ಪಿರಿಯಾಪಟ್ಟಣ): ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂತಹ ಜ್ವಲಂತ ಸಮಸ್ಯೆ ಮತ್ತು ಬರದ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಪ್ರಾರಂಭಿಸುತ್ತೇನೆ. ಈಗಾಗಲೇ ಈ ಒಂದು ಬರ ಪರಿಸ್ಥಿತಿ ಹಿಂದೆಂದೂ ಬರದಂತಹ ರೀತಿಯಲ್ಲಿ ನಮ್ಮನ್ನು ಕಾಡಿಸುತ್ತಿರುವುದು ಬಹಳ ಶೋಚನೀಯವಾದಂತಹ ಸ್ಥಿತಿಯಾಗಿದೆ. ಈ ಬರಗಾಲದ ಸ್ಥಿತಿ ಸಾಮಾನ್ಯವಾಗಿ ಪ್ರತಿ ವರ್ಷವೂ ಒಂದಲ್ಲ ಒಂದು ರೀತಿಯಲ್ಲಿ ಬರುತ್ತಿದೆ ಎಂಬುದು ನನ್ನ ಅನುಭವಕ್ಕೆ ಬಂದಿದೆ. ಬರಗಾಲ ಬಂದ ಮೇಲೆ ಅತಿವೃಷ್ಟಿಯಿಂದ ಬೆಳೆ ಹಾನಿ ಆಗುತ್ತಿದೆ. ವರ್ಷ ವರ್ಷವೂ ಕೂಡ ನಾವು ಇದೇ ರೀತಿ ಶಾಸನ ಸಭೆಗಳಲ್ಲಿ ಭಾಷಣಗಳನ್ನು ಮಾಡುತ್ತಿದ್ದೇವೆ, ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವಿರೋಧ ಪಕ್ಷಗಳವರು ಹೇಳುತ್ತಲೇ ಇದ್ದೇವೆ. ಆಡಳಿತ ಪಕ್ಷದವರು ಪ್ರತಿ ವರ್ಷವೂ ನಾವು ಇದಕ್ಕಾಗಿ ಇಷ್ಟು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ, ನಾವು ಆ ಕೆಲಸವನ್ನು ಮಾಡುತ್ತೇವ ಎಂದು ಭರವಸೆ ಕೊಡುತ್ತಲೇ ಇರುತ್ತಾರೆ. ಆದರೆ ಇದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಇದಕ್ಕೆ ಶಾಶ್ವತವಾದಂತಹ ಒಂದು ಪರಿಹಾರ ಕ್ರಮವನ್ನು ಇದುವರೆಗೂ ಕೂಡ ಕಂಡುಕೊಂಡೇ ಇಲ್ಲ ಎನ್ನುವಂತಹ ಸ್ಥಿತಿ ಇದೆ ಎಂಬುದು ನನ್ನ ಆಲೋಚನೆಗೆ ಬರುತ್ತಿದೆ. ಸರ್ಕಾರ ಇದನ್ನು ಪರಾಮರ್ಶೆ ಮಾಡಿ ಇದಕ್ಕೇನಾದರೂ ಒಂದು ಖಾಯಂ ಆದಂತಹ ಪರಿಹಾರವನ್ನು ಕಂಡುಹಿಡಿದುಕೊಳ್ಳಬೇಕಾದುದು ಬಹಳ ಅತ್ಯಾವಶ್ಯಕವಾಗಿದೆ ಎಂದು ನಾನಂತೂ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ವರ್ಷ ವರ್ಷವೂ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆದರೆ ಅದು

ಸರಿಯಾದಂತಹ ರೀತಿಯಲ್ಲಿ ವೆಚ್ಚವಾಗುತ್ತಿಲ್ಲ. ಈಗಾಗಲೇ ನಾವು ಮಾರ್ಚ್ ತಿಂಗಳಿನಲ್ಲಿದ್ದೇವೆ. ಸರ್ಕಾರ ಮುನ್ನೆಚ್ಚರಿಕೆ ವಹಿಸಿ ಜನವರಿ ತಿಂಗಳಿನಲ್ಲೇ ಇದಕ್ಕಾಗಿ ಕಾರ್ಯಕ್ರಮವೊಂದನ್ನು ರೂಪಿಸಿಕೊಂಡು, ಅದಕ್ಕೆ ಬೇಕಾದಂತಹ ಹಣವನ್ನು ಕ್ರೋಢೀಕರಿಸಿಕೊಂಡು, ಇದನ್ನು ಯಾವ ರೀತಿಯಲ್ಲಿ ಮಾಡಬೇಕು ಎಂದು ಪ್ಲಾನ್ ಮಾಡಿಕೊಂಡು ವ್ಯವಸ್ಥಿತ ರೀತಿಯಲ್ಲಿ ಹೋಗಿದ್ದರೆ ಚೆನ್ನಾಗಿರುತ್ತಿತ್ತು. ಇಷ್ಟೊಂದು ಕಷ್ಟ ಆಗ ಆಗುತ್ತಿರಲಿಲ್ಲವೇನೋ ಎಂಬುದು ನನ್ನ ಅನಿಸಿಕೆಯಾಗಿದೆ. ಇವತ್ತು ರೈತರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸವಿಸ್ತಾರವಾಗಿ ಇವತ್ತು ಇಲ್ಲಿ ಪ್ರಸ್ತಾಪವಾಗಿದೆ. ಕುಡಿಯುವ ನೀರಿನ ಅವ್ಯವಸ್ಥೆಯಿಂದಾಗಿ ನಾವು ಶಾಸಕರಾಗಿ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಸಮರ್ಪಕವಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಾವು ಯಾವುದೇ ಹಳ್ಳಿಗೆ ಹೋದರೂ ಸಹಾ ನಮ್ಮ ಕಣ್ಣೆದುರಿಗೇ ಬೋರ್‌ವೆಲ್ ಕೆಟ್ಟು ಹೋಗಿರುವುದನ್ನು, ಇದರಿಂದಾಗಿ ಕುಡಿಯುವ ನೀರು ಇಲ್ಲದಿರುವುದನ್ನು ನಮ್ಮ ಗಮನಕ್ಕೆ ತರುತ್ತಾರೆ. ಕೆಟ್ಟು ಹೋಗಿರುವಂತಹ ಬೋರ್‌ವೆಲ್ ಅನ್ನು ರಿಪೇರಿ ಮಾಡುವವರು ಯಾರು? ತಾಲ್ಲೂಕು ಪಂಚಾಯಿತಿಯವರು ಇದನ್ನು ಮಾಡಬೇಕೆಂದು ಗ್ರಾಮ ಪಂಚಾಯಿತಿಯವರು ಹೇಳುತ್ತಾರೆ. ತಾಲ್ಲೂಕು ಪಂಚಾಯಿತಿಯವರು ಇದಕ್ಕೂ ನಮಗೂ ಸಂಬಂಧವೇ ಇಲ್ಲ, ಇದಕ್ಕಾಗಿ ನಮಗೆ ಹಣವೇ ಬಿಡುಗಡೆಯಾಗಿಲ್ಲ ಎಂದು ಹೇಳುತ್ತಾರೆ. ಗ್ರಾಮ ಪಂಚಾಯಿತಿಯವರು ನಮ್ಮ ಬಳಿ ಮೆಷನರಿ ಇಲ್ಲ, ನಮ್ಮಲ್ಲಿ ಸರಿಯಾದಂತಹ ಟೆಕ್ನಿಕಲ್ ಹ್ಯಾಂಡ್ಸ್ ಇಲ್ಲ, ಇದನ್ನು ನಾವು ಮಾಡುವುದಕ್ಕಾಗುವುದಿಲ್ಲ ಎನ್ನುತ್ತಾರೆ. ಶಾಸಕರು ಇವತ್ತು ಯಾವ ಹಳ್ಳಿಗೆ ಹೋದರೂ ಕೂಡ ಗ್ರಾಮಸ್ಥರು ಕುಡಿಯುವ ನೀರಿನ ಬೋರ್‌ವೆಲ್ ರಿಪೇರಿ ಮಾಡಿಸಿಕೊಡಬೇಕು ಎಂದು ನಮ್ಮನ್ನು ಕೇಳುತ್ತಿದ್ದಾರೆ, ನಾವು ಅದಕ್ಕೆ ಉತ್ತರ ಕೊಡಬೇಕಾಗಿದೆ. ಯಾರೋ ಮಾಡಿದಂತಹ ಬೇಜವಾಬ್ದಾರಿತನಕ್ಕೆ ಶಾಸಕರಾಗಿ ನಾವು ತಲೆ ತಗ್ಗಿಸತಕ್ಕಂತಹ ಕೆಲಸ ಇವತ್ತು ಈ ಸರ್ಕಾರ ಮಾಡುತ್ತಿದೆ ಎಂದರೆ ಅದು ಅತಿಶಯೋಕ್ತಿಯಾಗಲಾರದು. ಇದಕ್ಕೆ ಸರಿಯಾದಂತಹ ರೀತಿಯ ಗೈಡ್‌ಲೈನ್ಸ್ ಅನ್ನು ಗ್ರಾಮೀಣಾಭಿವೃದ್ಧಿ ಮಂತ್ರಿಗಳು ನೀಡಬೇಕು. ಇಂಥಿಂಥ ಕೆಲಸಗಳನ್ನು ಇಂಥಿಂಥವರು ಮಾಡಬೇಕು ಎಂದು ಹೇಳಬೇಕು. ಗ್ರಾಮ ಪಂಚಾಯ್ತಿಯವರ ಕೆಲಸ ಇದು, ತಾಲ್ಲೂಕು ಪಂಚಾಯಿತಿಯವರ ಕೆಲಸ ಇದು, ಜಿಲ್ಲಾ ಪಂಚಾಯಿತಿಯವರ ಕೆಲಸ ಇದು ಎಂದು ನಿಗದಿಪಡಿಸಬೇಕು. ಇಲ್ಲಿ ಏನಾಗಿದೆ ಎಂದರೆ, ಒಬ್ಬರ ಜವಾಬ್ದಾರಿ ಇನ್ನೊಬ್ಬರ ಮೇಲೆ ಹೇರುತ್ತಿದ್ದಾರೆ. ಅವರು ಯಾರೂ ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕೊನೆಗೆ ಹೊಣೆಗಾರಿಕೆ ಶಾಸಕರ ತಲೆಗೇ ಬರುತ್ತಿದೆ. ಇದರ ಬಗ್ಗೆ ಒಂದು ಚಿಂತನೆಯನ್ನು ಸನ್ಮಾನ್ಯ ಮಂತ್ರಿಗಳು ಮಾಡಬೇಕು. ಇಂಥಿಂಥವರು ಇಂಥಿಂಥ ಕೆಲಸ ಮಾಡಬೇಕು ಎಂದು ಸರಿಯಾದಂತಹ ಗೈಡ್ಸ್‌ಲೈನ್ಸ್ ಅನ್ನು ಕೊಡಬೇಕು. ತಾಲ್ಲೂಕು ಪಂಚಾಯಿಯಿಂದ ಇದುವರೆಗೂ ಮಾಡುತ್ತಿದ್ದರು. ನಮ್ಮ ತಾಲ್ಲೂಕಿನ ಉದಾಹರಣೆಯನ್ನು ಹೇಳುವುದಾದರೆ, ಕಳೆದ ಒಂದು ತಿಂಗಳಿನಿಂದ ತಾಲ್ಲೂಕು

ಪಂಚಾಯಿತಿಯವರು ಆ ಕೆಲಸ ಮಾಡುತ್ತಿಲ್ಲ. ಅದನ್ನು ಗ್ರಾಮ ಪಂಚಾಯಿತಿಯವರಿಗೆ ಕೊಟ್ಟಿದ್ದಾರೆ. ಅವರಿಗೆ ಹಣ ಇಲ್ಲ, ಹಣ ಇದ್ದರೆ ಟೆಕ್ನಿಕಲ್ ಹ್ಯಾಂಡ್ ಇಲ್ಲ. ನಾವಂತೂ ಹಳ್ಳಿಗಳಿಗೆ ಹೋಗಲಾರದಂತಹ ಪರಿಸ್ಥಿತಿ ಗ್ರಾಮಾಂತರ ಪ್ರದೇಶಗಳಲ್ಲಿದೆ. ಅದನ್ನು ಸರಿಯಾದಂತಹ ರೀತಿಯಲ್ಲಿ ತಾವು ಪರಿಹರಿಸಬೇಕು.

ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಹೊರಡಿಸಿರುವ ಎರಡು ಸರ್ಕ್ಯುಲರ್‌ಗಳನ್ನು ಸದನದ ಗಮನಕ್ಕೆ ತರಬಯಸುತ್ತೇನೆ. 17ನೇ ಡಿಸೆಂಬರ್ 1999ರಂದು ಹೊರಡಿಸಲಾಗಿರುವ ಸುತ್ತೋಲೆಯಲ್ಲಿ ಯಾರ್ಯಾರು ಯಾವ್ಯಾವ ಕೆಲಸಗಳನ್ನು ಮಾಡಬೇಕೆಂಬುದನ್ನು ಸ್ಪಷ್ಟಪಡಿಸಿದ್ದೇವೆ. ಇದರ ಕಾಪಿ ಬೇಕಾದರೆ ನಾನು ತಮಗೆ ಕಳುಹಿಸಿಕೊಡುತ್ತೇನೆ. ಒಂದು ವೇಳೆ ಯಾರು ಏನು ಮಾಡಬೇಕೋ ಅದನ್ನು ಮಾಡದೇ ಹೋದರೆ, ಅದನ್ನು ಹೇಗೆ ಸರಿಪಡಿಸಬೇಕು ಎಂಬ ಬಗ್ಗೆ ದಿನಾಂಕ 13ನೇ ಏಪ್ರಿಲ್ 2000ರಂದು ಮತ್ತೊಂದು ಸುತ್ತೋಲೆ ಹೊರಡಿಸಿದ್ದೇವೆ. ಈ ಎರಡೂ ಸುತ್ತೋಲೆಗಳಲ್ಲಿ ಪ್ರತಿಯೊಂದನ್ನೂ ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಆದರೂ ಕೂಡ ಕೆಲವು ಕಡೆ ನಡೆಯದಿದ್ದರೆ ಅದು ಬೇರೆ ವಿಷಯ. ಆದರೆ ನಾವು ತಿಳಿಸಿಲ್ಲ ಎಂದು ಹೇಳುವ ಮಾತು ಸರಿಯಲ್ಲವೆಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಸಿ.ಬಸವರಾಜ್: ಮಾನ್ಯ ಅಧ್ಯಕ್ಷರೇ, ಸರ್ಕ್ಯುಲರ್ ಅನುಷ್ಠಾನ ಮಾಡುವವರು ಯಾರು? ಅವರು ಆ ಸರ್ಕ್ಯುಲರ್ ಅನ್ನು ಸರಿಯಾಗಿ ಅನುಷ್ಠಾನಗೊಳಿಸುತ್ತಿಲ್ಲ. ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ನಮ್ಮ ನಮ್ಮ ತಾಲ್ಲೂಕುಗಳಲ್ಲಿ ಇದು ಅನುಷ್ಠಾನಗೊಳ್ಳುತ್ತಿಲ್ಲ ಎಂಬುದು ನಮಗೆ ಪ್ರಾಕ್ಟಿಕಲ್ಲಾಗಿ ಗೊತ್ತಾಗುತ್ತಿದೆ. ಪಂಚಾಯಿತಿಯವರು ಯಾರೂ ಕೂಡ ರಿಪೇರಿ ಮಾಡುತ್ತಿಲ್ಲ. ಒಂದು ಬೋರ್‌ವೆಲ್ ರಿಪೇರಿಗೆ ಒಂದು ವರ್ಷಕ್ಕೆ 600 ರೂಪಾಯಿಗಳನ್ನು ಕೊಡುತ್ತಿರುವುದು ಸಾಕಾಗುವುದಿಲ್ಲ. ನಮ್ಮ ಕಡೆ ಹೆಚ್ಚಾಗಿ ಸಾಲ್ಟ್ ವಾಟರ್ ಇದೆ. ಒಂದೊಂದು ಸಲ ಒಂದೊಂದು ವರ್ಷಕ್ಕೇ ಪೈಪ್‌ಗಳನ್ನು ಬದಲಾಯಿಸಬೇಕಾಗುತ್ತದೆ. ಪೈಪ್‌ಗಳು ಇಲ್ಲ ಮತ್ತು ಹಣ ಇಲ್ಲ ಎಂದು ಹೇಳುತ್ತಾರೆ. ಈ ರೀತಿಯಾದಂತಹ ಪರಿಸ್ಥಿತಿ ಇದೆ. ಬೋರ್‌ವೆಲ್ ರಿಪೇರಿಗೆ ನೀವು ಕೊಡತಕ್ಕಂಥ ಹಣ ಸಾಲುವುದಿಲ್ಲ, ಅದನ್ನು ಜಾಸ್ತಿ ಮಾಡಬೇಕು. It should be practical ತಾಲ್ಲೂಕು ಪಂಚಾಯಿತಿಯವರು ಹಣ ಸಾಲುವುದಿಲ್ಲ ಎಂದು ಆ ಕೆಲಸವನ್ನು ಗ್ರಾಮ ಪಂಚಾಯಿತಿಯವರಿಗೆ ವಹಿಸಿದ್ದಾರೆ. ಜಿಲ್ಲಾ ಪಂಚಾಯಿತಿಯವರಿಗೆ ಪೈಪ್ಡ್ ವಾಟರ್ ಸಪ್ಲೈಯನ್ನು ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಎಂದು ಹೇಳುತ್ತೀರಿ. ಇವತ್ತು ಸೋರ್ಸ್‌ಸ್ ಕೆಳಗಡೆ ಹೋಗುತ್ತಿದೆ. ಕೆಲವು ಬೋರ್‌ವೆಲ್‌ಗಳು ಫೇಲ್ಯೂರ್ ಆಗುತ್ತಿವೆ. ಅದನ್ನು ಬದಲಾಯಿಸಬೇಕು, ಬೇರೆ ಹೊಸ ಬೋರ್‌ವೆಲ್ ಹಾಕಿಸಬೇಕೆಂದರೆ ಅದಕ್ಕೆ ಹಣ ಇಲ್ಲವೆಂದು ಹೇಳುತ್ತಾರೆ. ಅವರ ಹತ್ತಿರ ಹಣ ಇಲ್ಲ. ನೀವು ಎಕ್ಸ್‌ಟ್ರಾ ಹಣ

ಅದಕ್ಕೆ ಕೊಟ್ಟಿಲ್ಲ. ರಿಪೇರಿಗಾಗಿ ಮತ್ತು ಮೆಂಟೇನನ್ಸ್‌ಗಾಗಿ ಎಂದು ನೀವು ಹಣ ಕೊಟ್ಟಿಲ್ಲ. 50 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಎಂದು ನೀವು ಹೇಳಿದ್ದೀರಿ. ತಾವು ಇಟ್ಟಿದ್ದೀರಿ ನಿಜ. ತಾವು ಬಹಳ ಮೇಧಾವಿಗಳು, ತಮಗೆ ಮುಂದಾಲೋಚನೆ ಇದೆ. ಈ ಒಂದು ಇಲಾಖೆ ಬಗ್ಗೆ ಸಮರ್ಪಕವಾಗಿ ತಿಳಿದುಕೊಂಡಿದ್ದೀರಿ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ, ನಾನು ಆಗಲೇ ಹೇಳಿದ ಹಾಗೆ ನಿಮ್ಮ ಮಾತನ್ನು ಜಿಲ್ಲಾ ಪಂಚಾಯಿತಿಯವರು ಕೇಳುವುದಿಲ್ಲ, ಜಿಲ್ಲಾ ಪಂಚಾಯಿತಿಯವರ ಮಾತನ್ನು ತಾಲ್ಲೂಕು ಪಂಚಾಯಿತಿಯವರು ಕೇಳುವುದಿಲ್ಲ, ತಾಲ್ಲೂಕು ಪಂಚಾಯಿತಿಯವರ ಮಾತನ್ನು ಗ್ರಾಮ ಪಂಚಾಯಿತಿಯವರು ಕೇಳುವುದಿಲ್ಲ, ಹಣವನ್ನು ನೀವು ಬಿಡುಗಡೆ ಮಾಡಿದ ಮೇಲೆ ಅದು ಏನಾಗಿದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಇಲ್ಲಿ ಬಹಳಷ್ಟು ಗೊಂದಲವಾಗಿದೆ. ಇದರ ಪರಿಣಾಮ ಏನಾಗುತ್ತಿದೆ ಎಂದರೆ, ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಬಹಳ ಅಭಾವವಾಗುತ್ತಿದೆ. ತಮಗೆ ಒಂದು ಉದಾಹರಣೆಯನ್ನು ನೀಡುವುದಾದರೆ, ಇದೇ ಸದನದಲ್ಲಿ ನಾನು ಶಾಸನಸಭೆ ಸದಸ್ಯನಾದ ಮೊದಲನೇ ಅಧಿವೇಶನದಲ್ಲಿ ಕಣಗಾಲ್ ಎಂಬ ಗ್ರಾಮದಲ್ಲಿ ವರ್ಲ್ಡ್ ಬ್ಯಾಂಕ್ ಸ್ಕೀಮಿನಲ್ಲಿ ಹಾಕಲಾದ ಬೋರ್‌ವೆಲ್ ಫೇಲ್ಯೂರ್ ಆಗಿದೆ, ಅದಕ್ಕೆ ಬದಲಿಯಾಗಿ ಬೇರೊಂದು ಬೋರ್‌ವೆಲ್ ಹಾಕಬೇಕೆಂದು ಮನವಿ ಮಾಡಿಕೊಂಡಾಗ ಮಾನ್ಯ ಮಂತ್ರಿಗಳು ಅದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ, ಅಧಿಕಾರಿಗಳು ಬದಲಿ ಬೋರ್‌ವೆಲ್ ಅನ್ನು ಕೂಡಲೇ ಹಾಕುತ್ತಾರೆಂದು ಭರವಸೆ ನೀಡಿದ್ದರು. ಆದರೆ ಎರಡು ವರ್ಷಗಳಾದರೂ ಸಹಾ ನಿಮ್ಮ ಇಲಾಖೆಯವರು ಇದುವರೆಗೂ ಕೂಡ ಆ ಬದಲಿ ಬೋರ್‌ವೆಲ್ ಅನ್ನು ಹಾಕಲೇ ಇಲ್ಲ. ನನಗೂ ಹೇಳಿ ಹೇಳಿ ಸಾಕಾಗಿ ಸುಮ್ಮನಾದೆ. ಕೊನೆಗೆ ನಾನು ನಮ್ಮ ನಿಧಿಯಿಂದಲೇ ಅದಕ್ಕಾಗಿ ಹಣ ಮಂಜೂರು ಮಾಡುತ್ತೇನೆ, ನೀವು ಬದಲಿ ಬೋರ್‌ವೆಲ್ ಹಾಕಿ ಎಂದು ಹೇಳಿದೆ. ಪರಿಸ್ಥಿತಿ ಈ ರೀತಿ ಇದೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಯಾವುದನ್ನೇ ಕೇಳಿದರೂ ಸಹ ಹಣ ಇಲ್ಲವೆಂದು ಹೇಳುತ್ತಾರೆ. ನೀವು ಹಣ ಕೊಡುತ್ತೀರೋ ಬಿಡುತ್ತೀರೋ, ಅವರು ಹಣ ಇಲ್ಲವೆಂಬ ಒಂದೇ ಮಾತನ್ನು ಹೇಳುತ್ತಾರೆ. ಪೈಪ್ ಹಾಕಿ ಎಂದರೆ ಪೈಪ್‌ಗಳು ಇಲ್ಲವೆನ್ನುತ್ತಾರೆ. ನನ್ನ ಕ್ಷೇತ್ರದಲ್ಲೇ ಸುಮಾರು 7-8 ಹೊಸ ಸ್ಕೀಮ್‌ಗಳಡಿ ಪೈಪ್‌ಗಳು ಇಲ್ಲದೇ ಕೆಲಸ ನಿಂತಿದೆ. 20 ಸ್ಕೀಮ್‌ಗಳು ಕರೆಂಟ್ ಇಲ್ಲದೇ ನಿಂತಿವೆ. ಪ್ರಾಕ್ಟಿಕಲ್ಲಾಗಿ ಪ್ರಾಬ್ಲಮ್ಸ್‌ಗಳನ್ನು ಸಾಲ್ವ್ ಮಾಡುವುದು ಶಾಸಕರುಗಳಿಗೆ ಬಹಳ ಕಷ್ಟವಾಗುತ್ತಿದೆ. ಸರ್ಕಾರದವರು ಇದರ ಬಗ್ಗೆ ಗಮನ ಹರಿಸಿ ಸರಿಯಾದಂತಹ ರೀತಿಯಲ್ಲಿ ಹಣ ಒದಗಿಸಿಕೊಟ್ಟು ಕೆಲಸ ಕಾರ್ಯಗಳು ಸುಗುಮವಾಗಿ ನಡೆಯುವಂತೆ ಮಾಡಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಿನ್ಸಿಪಲ್ ಸೆಕ್ರೆಟರಿ, ಆರ್.ಡಿ.ಪಿ.ಆರ್. ನಿಂದ ಸರ್ಕಾರ ಪತ್ರವೊಂದನ್ನು ಬರೆದು, ಎಲ್ಲೆಲ್ಲಿ ಬೋರ್‌ವೆಲ್‌ಗಳು ಬೇಕೋ, ಎಲ್ಲೆಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬೇಕೋ ಅದನ್ನು ಆದ್ಯತೆ ಮೇಲೆ ಮಾಡಿ ಎಂದು ಸೂಚಿಸಿದ್ದೇವೆ ಎಂದು ನಿನ್ನೆ ಸದನದಲ್ಲಿ ಹೇಳಿದರು.

ನಾನು ಬಹಳಷ್ಟು ಆಸೆ ಇಟ್ಟುಕೊಂಡು ರಾತ್ರಿಯೇ ಇಂಥಿಂಥ ಕಡೆ ಬೋರ್‌ವೆಲ್‌ಗಳು ಬೇಕು, ಕೊರೆಸಿ ಎಂದು ಸಿ.ಇ.ಓ.ರವರಿಗೆ ಫೋನ್ ಮಾಡಿದರೆ ಅವರು ಸರ್ಕಾರದವರು ಸರ್ಕ್ಯೂಲರ್ ಏನೋ ಕಳುಹಿಸಿಕೊಟ್ಟಿದ್ದಾರೆ, ಆದರೆ ಅದು ಆರ್ಡರ್ ಅಲ್ಲ, it should be in form of order, how can we carry on, ಎಂದು ಹೇಳುತ್ತಾರೆ. ಜಿಲ್ಲಾ ಪಂಚಾಯಿತಿಯವರು ಮೆಂಬರ್‌ಗಳು ಎಲ್ಲಿದೆ ದುಡ್ಡು? ಎಲ್ಲಿಂದ ದುಡ್ಡು ತೆಗೆದು ಹಂಚುತ್ತೀರಿ ಎಂದು ಕೇಳಿದರೆ ನಾವೇನು ಉತ್ತರ ಕೊಡೋಣ, ನಮ್ಮಲ್ಲಿ ಸೇವಿಂಗ್ಸ್ ಕೂಡ ಇಲ್ಲವೆಂದು ಸಿ.ಇ.ಓ.ರವರು ಹೇಳುತ್ತಾರೆ. ಸರ್ಕಾರದವರು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯವರಿಗೆ ಏನಾದರೂ ಒಂದು ಡೈರೆಕ್ಷನ್ಸ್ ಕೊಟ್ಟರೆ, ಅದಕ್ಕಾಗಿ ಹಣವನ್ನೂ ಸಹ ಯಾವ ರೀತಿಯಾಗಿ ಒದಗಿಸಿಕೊಳ್ಳಬೇಕು ಎಂಬ ಸೂಚನೆಯನ್ನೂ ಸಹ ಕೊಡಬೇಕು. ಹಣವನ್ನೂ ಕೊಟ್ಟು ಆರ್ಡರ್ ಕೊಟ್ಟರೆ ಅದು ಕ್ಯಾರಿಯಾಗುತ್ತದೆಯೇ ವಿನಃ ಸುಮ್ಮನೆ ನಾವು ಪೇಪರ್‌ನಲ್ಲಿ ಹೇಳಿದರೆ ಅದು ಆಗುವುದಿಲ್ಲ. ಮೊನ್ನೆ ಪೇಪರ್‌ನಲ್ಲಿ ಕುಡಿಯುವ ನೀರಿಗೆ 200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, ಕುಡಿಯುವ ನೀರಿಗೆ ಯಾವುದೇ ರೀತಿಯ ತೊಂದರೆ ಇಲ್ಲ ಎಂದು ಬಂದಿತ್ತು. ನಾವೆಲ್ಲಾ ಅದನ್ನು ಓದಿ ಬಹಳ ಸಂತೋಷ ಪಟ್ಟೆವು. ಆದರೆ ಒಬ್ಬ ಶಾಸಕನಾಗಿ ನನಗೆ ಒಂದೆರಡು ಬೋರ್‌ವೆಲ್‌ಗಳನ್ನು ಹಾಕಿಸಲೂ ಸಹ ಸಾಧ್ಯವಾಗುತ್ತಿಲ್ಲ. ನಾನು ಯಾರನ್ನು ಕೇಳಲಿ? ಜಿಲ್ಲಾ ಪಂಚಾಯಿತಿಯವರನ್ನು ಕೇಳಿದರೆ ಹಣ ಇಲ್ಲವೆಂದು ಹೇಳುತ್ತಾರೆ. ತಾಲ್ಲೂಕು ಪಂಚಾಯಿತಿಯವರಿಗೆ ಅವರಿಗೇ ಹಣ ಸಾಲುವುದಿಲ್ಲ. ಯಾರು ಯಾರನ್ನು ಕೇಳುವುದು? ಮಾನ್ಯ ಮಂತ್ರಿಗಳು ಬರೀ ಬೋರ್‌ವೆಲ್ ಕೊರೆಸುವುದರಿಂದ ಏನನ್ನು ಸಾಧಿಸಿದಂತಾಗುತ್ತದೆ ಎಂದು ಕೇಳುತ್ತಾರೆ. ಬೋರ್‌ವೆಲ್ ಕೊರೆಸದಿದ್ದರೆ ಇವತ್ತು ನಾವು ಕುಡಿಯುವ ನೀರಿಗೆ ಏನು ಮಾಡಬೇಕು ಸ್ವಾಮಿ? ಹಲವಾರು ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಬೋರ್‌ವೆಲ್‌ಗಳೇ ಇಲ್ಲ. ಇರುವ ಬೋರ್‌ವೆಲ್‌ಗಳೆಲ್ಲಾ ಬತ್ತಿ ಹೋಗಿವೆ, ಅವುಗಳನ್ನು ಡೀಪನ್ ಮಾಡಬೇಕು. ಪ್ರಾಕ್ಟಿಕಲ್ ಪ್ರಾಬ್ಲಮ್ಸ್ ಬಹಳಷ್ಟು ಇವೆ. ಇದಕ್ಕೆ ತಾವು ದಯವಿಟ್ಟು ಸರಿಯಾದಂತಹ ರೀತಿಯಲ್ಲಿ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಹಳೆಯ ಯೋಜನೆಗಳು ಯಾವುವು ಫೇಲ್ ಆಗಿವೆಯೋ, ಅವುಗಳನ್ನೆಲ್ಲಾ ರಿವೈವಲ್ ಮಾಡಲು ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಎ.ಆರ್‌ಡಬ್ಲ್ಯೂ ಮತ್ತು ಎನ್‌ಆರ್‌ಡಬ್ಲ್ಯೂನ ಹತ್ತತ್ತು ಸ್ಕೀಮ್‌ಗಳು ಐದ್ಯೆದು ವರ್ಷಗಳಿಂದ ಇವೆ. ಅವುಗಳಿಗೆ ಟೆಂಡರ್ ಸಹಾ ಕರೆದಿಲ್ಲ. ಯಾಕೆ ಎಂದು ಕೇಳಿದರೆ, ಹಣ ಒದಗಿಸಿಲ್ಲ ಎಂದು ಹೇಳುತ್ತಾರೆ. 2-3 ಸಾವಿರ ಪ್ರಜಾಸಂಖ್ಯೆ ಇರತಕ್ಕಂಥ ಗ್ರಾಮಗಳಲ್ಲಿ ಎ.ಆರ್.ಡಬ್ಲ್ಯೂ. ಸ್ಕೀಮ್ ಅನ್ನು ನಾವು ಸ್ಟಾರ್ಟ್ ಮಾಡಲೂ ಸಹಾ ಸಾಧ್ಯವಾಗುತ್ತಿಲ್ಲ. ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಹಣ ಒದಗಿಸಬೇಕು ಈಗಾಗಲೇ ಜಿಲ್ಲಾ ಪಂಚಾಯಿತಿಗೆ ಶೇಕಡ 25ರಷ್ಟು ಕಟ್ ಆಗಿದೆ ಎಂದು ಹೇಳುತ್ತಿದ್ದೀರಿ. ಹಣ ಕೊಡದಿದ್ದರೆ ಯಾವ ಕೆಲಸ ಕಾರ್ಯಗಳೂ ಸಹಾ ಆಗುವುದಿಲ್ಲ

ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರಾಜೀವ್ ಗಾಂಧಿ ಯೋಜನೆ ಅಡಿಯಲ್ಲಿ ಕುಡಿಯುವ ನೀರಿಗೋಸ್ಕರ ನಮ್ಮ ತಾಲ್ಲೂಕುಗಳಲ್ಲಿ ಹಣ ಕಟ್ಟಿ 1-2 ವರ್ಷಗಳಾಯಿತು. ಹಣ ತೆಗೆದುಕೊಂಡು ಹೋಗಿ ಜಿಲ್ಲಾ ಪಂಚಾಯಿತಿಯಲ್ಲಿ ಇಟ್ಟಿದ್ದೀರಿ. ಜಿಲ್ಲಾ ಪಂಚಾಯಿತಿಯವರು ಬಡ್ಡಿ ತೆಗೆದುಕೊಂಡು ಅದನ್ನು ಸಂಬಳ ಕೊಟ್ಟುಕೊಂಡು ಕಾಲ ಕಳೆಯುತ್ತಿದ್ದಾರೆ. ಹೀಗಾದರೆ ಹೇಗೆ ಸ್ವಾಮಿ? ಸರ್ಕಾರದ ಮೇಲೆ ಜನ ವಿಶ್ವಾಸವನ್ನೇ ಕಳೆದುಕೊಳ್ಳುತ್ತಿದ್ದಾರೆ. ಅವರ ಕಷ್ಟ ಸುಖ ಏನೇ ಇದ್ದರೂ ಅವರು 10 ಪರ್ಸೆಂಟ್‌ನಷ್ಟು ಹಣ ಭರಿಸಿ ಈಗಾಗಲೇ ಎರಡು ವರ್ಷ ಆಯಿತು. ನಾವು ಶಾಸಕರಾಗಿ ಹಳ್ಳಿಗೆ ಹೋಗುವ ಪರಿಸ್ಥಿತಿಯಲ್ಲಿಲ್ಲ. ಸ್ವಚ್ಛ ಗ್ರಾಮ ಏನಾಯಿತು ಸ್ವಾಮಿ, ರಾಜೀವ್ ಗಾಂಧಿ ಯೋಜನೆ ಏನಾಯಿತು ಸ್ವಾಮಿ? ಪ್ರಾರಂಭ ಮಾಡಿಲ್ಲವೆಂದು ಹೇಳುತ್ತಾರೆ, ಈಗಾಗಲೇ ಹೇಳಿ ಒಂದು - ಒಂದೂವರೆ ವರ್ಷವಾಯಿತು. ಜನ ಬಹಳ ಜಾಗೃತರಾಗಿದ್ದಾರೆ. ಮೀಡಿಯಾದವರೂ ಬಹಳ ಜಾಗೃತರಾಗಿದ್ದಾರೆ. ಟಿವಿ ಹಾಗೂ ಪೇಪರ್‌ಗಳಲ್ಲಿ ಎಲ್ಲಾ ಮಾಹಿತಿಗಳನ್ನು ನೋಡುತ್ತಾರೆ. ಪ್ರತಿಯೊಂದು ಆಸೆ ಆಕಾಂಕ್ಷೆಗಳು ಜಾಸ್ತಿಯಾಗಿವೆ. ಅದರ ಜೊತೆ ಸ್ಪಂದಿಸುವುದಕ್ಕೆ ಸರ್ಕಾರಕ್ಕೂ ಸಾಧ್ಯವಾಗುತ್ತಿಲ್ಲ, ಶಾಸಕರಿಗೂ ಸಾಧ್ಯವಾಗುತ್ತಿಲ್ಲ. ನಮ್ಮ ಅತಿ ಮುಖ್ಯವಾದ ಸಮಸ್ಯೆ ಎಂದರೆ, ಕೆರೆಗಳ ಹೂಳೆತ್ತುವುದಕ್ಕೆ ಎಂದು ಬಜೆಟ್‌ನಲ್ಲಿ ಹಣ ಸೇರಿಸಿದ್ದೇ ಸೇರಿಸಿದ್ದು, ಸಣ್ಣ ನೀರಾವರಿ ಸಚಿವರೂ ಕೂಡ ಹೇಳಿದ್ದೇ ಹೇಳಿದ್ದು! ಮಾನ್ಯ ಮುಖ್ಯ ಮಂತ್ರಿಗಳು ಬಹಳಷ್ಟು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಹೋಬಳಿಗೆ ಒಂದು ಎಂದು 25 ಲಕ್ಷ ರೂಪಾಯಿ ಖರ್ಚಾದರೂ ಮಾಡೇ ಮಾಡುತ್ತೇವೆಂದು ಹೇಳಿದ್ದರು. ಇದರಿಂದ ನಮಗೆ ಬಹಳಷ್ಟು ಖುಷಿಯಾಗಿತ್ತು. ಮಂತ್ರಿಗಳು ಯುವಕರಿದ್ದಾರೆ, ಬಹಳ ಆಸಕ್ತಿ ವಹಿಸಿ ಮಾಡುತ್ತಾರೆಂದು ಭಾವನೆ ಇತ್ತು. ಅವರು ಮಾಡುತ್ತಿದ್ದಾರೆ, ಅದು ಕಾರ್ಯಗತವಾಗುತ್ತಿಲ್ಲ. ಹೂಳು ಮೇಲೆ ಬರುತ್ತಿಲ್ಲ. ಹೂಳೆತ್ತುವುದಕ್ಕೆ ಮೆಷಿನ್ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಸಾಲ ಮಾಡುವುದಕ್ಕೆ ಹೆದರಬೇಡಿ, ಸರ್ಕಾರಗಳು ಸಾಲಗಳು ಮಾಡುತ್ತಿವೆ. ಸರ್ಕಾರಗಳು ಸಾಲ ಮಾಡದೆ ಇದ್ದರೆ ಪ್ರಗತಿ ಮಾಡುವುದಕ್ಕಾಗುವುದಿಲ್ಲ. ಸಾಲ ಮಾಡಿಯಾದರೂ ತುಪ್ಪ ತಿನ್ನಬೇಕೆಂದು ಒಂದು ಗಾದೆ ಇದೆ. ಅದೇ ರೀತಿ ಸಾಲ ಮಾಡಿ ಕೆಲಸ ಮಾಡಿ. ಕೊನೇ ಪಕ್ಷ ಅಂಡರ್ ಗ್ರೌಂಡ್ ವಾಟರ್ ಮೇಲೆ ಬರಲಿಕ್ಕೆ ಅನುಕೂಲವಾಗುತ್ತದೆ. ಇದು ಬಹಳ ಅತ್ಯವಶ್ಯಕ ಇದೆ. ಇದಕ್ಕೆ ಸರ್ಕಾರ ಬಹಳ ಆದ್ಯತೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಇನ್ನು ವಿದ್ಯುಚ್ಛಕ್ತಿ ಬಗ್ಗೆ ಮಾತನಾಡಬೇಕೆಂದರೆ, ಕನಿಷ್ಟ ಪಕ್ಷ ಅರ್ಧ ಗಂಟೆಯಾದರೂ ಕಾಲಾವಕಾಶ ಬೇಕು.

ಅಧ್ಯಕ್ಷರು: ನಾವು 6.30ಕ್ಕೆ ಸಭೆಯನ್ನು ಮುಕ್ತಾಯ ಮಾಡಬೇಕು, ಅಕಸ್ಮಾತ್ ಯಾರಾದರು ಒಬ್ಬರು ಇಬ್ಬರು ಉಳಿದರೆ ನಾಳೆ ಮಾತನಾಡಿ.

ಶ್ರೀ ಹೆಚ್.ಸಿ.ಬಸವರಾಜ್: ಕೆಪಿಟಿಸಿಎಲ್ ಇಲಾಖೆ ಏನಿದೆ, ಈ ನಿಗಮದವರು

ಇವತ್ತು.....

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನಾಳೆ ಬಜೆಟ್ ಮಂಡನೆಗೆ ಎಲ್ಲಾ ತಯಾರಿ ನಡೆದಿದೆ. 22ನೇ ತಾರೀಖು 26,000 ಕೋಟಿ ರೂಪಾಯಿ ಬಜೆಟ್ ಬಗ್ಗೆ ಚರ್ಚೆ ಮಾಡುವುದಕ್ಕೆ 224 ಜನ ಸದಸ್ಯರಿಗೆ ಅವಕಾಶವಿದೆ. 23, 24, 25 ರಜೆ ಇದೆ. 26, ಮತ್ತು 27 ರಾಜ್ಯಸಭಾ ಚುನಾವಣೆ. 29ರಿಂದ ರಜೆ, ನಾವು ಬಜೆಟ್‌ಗೆ ಗೋವಿಂದ ಎಂದು ಹೇಳುವುದಕ್ಕಾಗುತ್ತಾ ಸ್ವಾಮಿ. ಇದಕ್ಕೆ ಉತ್ತರ ಆಗದೆ ಇದ್ದರೆ ಹೇಗೆ? ತಾವು ದಯವಿಟ್ಟು ಪರಾಮರ್ಶಿಸಿ.

ಅಧ್ಯಕ್ಷರು: ಸದಸ್ಯರು ಕೂತುಕೊಳ್ಳುವುದಿದ್ದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇವತ್ತೇ ಉತ್ತರ ಕೊಡಿಸಿ. ನಮಗೆ ಮಾತನಾಡುವುದಕ್ಕೆ ಒಂದು ಅವಕಾಶವಾದರೂ ಸಿಗಬೇಕು.

ಅಧ್ಯಕ್ಷರು: ಮಾತನಾಡುವವರು ಸ್ವಲ್ಪ ಸಮಯ ನೋಡಿಕೊಂಡು ಮಾತನಾಡಿದರೆ ಸರಿ ಹೋಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು 22 ವರ್ಷದಿಂದ ಈ ಸದನದಲ್ಲಿದ್ದೇನೆ. ದಯವಿಟ್ಟು ಬೇಸರ ಮಾಡಿಕೊಳ್ಳಬೇಡಿ. ಎರಡೂ ಕಡೆ ಕೂತು ಕೆಲಸ ಮಾಡಿದ್ದೇನೆ. ನಾನು ಬಹಳ ಕಡಿಮೆ 32 ನಿಮಿಷ ಮಾತನಾಡಿದ್ದೇನೆ.

MR.SPEAKER: If you want to sit late, I have no objection. I am ready to sit upto 10 PM.

ಶ್ರೀ ಪಿ.ಜಿ.ಆರ್.ಸಿಂಧ್ಯ: ಕೂತುಕೊಳ್ಳೋಣ ಏನಂತೆ?

ಶ್ರೀ ಹೆಚ್.ಸಿ.ಬಸವರಾಜು: ಕೆಪಿಟಿಸಿಎಲ್ ರೈತರ ಶೋಷಣೆಯ ಒಂದು ಸಂಸ್ಥೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಅವರು ಶೋಷಣೆ ಮಾಡಲಿ, ನಾವಿರುವುದೇ ಶೋಷಣೆ ಮಾಡಿಸಿಕೊಳ್ಳಲಿಕ್ಕೆ. ಸಾಯುವವರೆಗೂ ಶೋಷಣೆ. ಹುಟ್ಟುವುದೂ ಸಾಲದಲ್ಲಿ, ಸಾಯುವುದೂ ಸಾಲದಲ್ಲಿ, ಬದುಕುವುದೂ ಸಾಲದಲ್ಲಿ, ಇದನ್ನು ಒಪ್ಪಿಕೊಳ್ಳೋಣ. ಶೋಷಣೆ ಮಾಡಿಸಿಕೊಳ್ಳಬೇಕಾದರೂ, ಸಮರ್ಪಕವಾದ ವಿದ್ಯುಚ್ಛಕ್ತಿಯನ್ನು ದಿವಸಕ್ಕೆ ಆರು ಗಂಟೆ ಎಂಟು ಗಂಟೆ ಕೊಟ್ಟರೆ, ಅವರನು ಬೆಳೆಯತಕ್ಕಂತಹ ಅಂಬಲಿ, ರಾಗಿ, ಅಕ್ಕಿ, ಭತ್ತ ಬೆಳೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಏನೋ ಒಂದು ಆಸೆಯಿಂದ ಪಂಪ್‌ಸೆಟ್ ಮಾಡಿದ್ದಾರೆ, ನೀರಾವರಿ ಮಾಡಬೇಕೆಂದು ಹೊಲದಲ್ಲಿ ಭತ್ತ ಹಾಕುತ್ತಾನೆ, ಹಾಕಿದ ಮೇಲೆ ಸಾಲ ಮಾಡುತ್ತಾನೆ, ಇಷ್ಟೆಲ್ಲಾ ಮಾಡಿದರೂ ಕೂಡ ಕರೆಂಟ್ ಇಲ್ಲದೆ ನೀರು

ಕೊಡುವುದಕ್ಕಾಗದೆ, ಭತ್ತದ ಪೈರುಗಳೆಲ್ಲಾ ಒಣಗಿ ಹೋಗುತ್ತವೆ. ರಾತ್ರಿ ಹಗಲು ಅವರು ಪಡುವ ಕಷ್ಟವನ್ನು ಮನುಷ್ಯನಾದವನು ಕಣ್ಣಿನಿಂದ ನೋಡುವುದಕ್ಕಾಗುವುದಿಲ್ಲ. ಆ ರೀತಿ ಆಗುತ್ತಿದ್ದರೂ ಈ ಸರ್ಕಾರಕ್ಕೆ ಕಣ್ಣಿಲ್ಲವಾ ಎಂದು ನನಗಂತೂ ಆಶ್ಚರ್ಯವಾಗುತ್ತಿದೆ. ಇಂತಹ ಪರಿಸರದಲ್ಲಿ ಎಷ್ಟೇ ಸಾಲವಾಗಲಿ, ಯಾವುದೇ ರಾಜ್ಯದಿಂದಲಾದರೂ ವಿದ್ಯುಚ್ಛಕ್ತಿ ತಂದು ನಮ್ಮ ರೈತರಿಗೆ ಕೊಡಬೇಕು. 10- 12, ಗಂಟೆ ಬೇಡ, ಆರು ಗಂಟೆಗಳ ಕಾಲವಾದರೂ ವಿದ್ಯುಚ್ಛಕ್ತಿ ಕೊಡುವಂತಹ ಸಾಮರ್ಥ್ಯ ಈ ಸರ್ಕಾರಕ್ಕಿಲ್ಲವಲ್ಲಾ ಎಂಬುದು ನನಗೆ ಆಶ್ಚರ್ಯವಾಗುತ್ತದೆ. ನನ್ನ ಮನಸ್ಸಿಗೆ ಬಹಳ ನೋವಾಗುತ್ತಿದೆ. ನಾನು ರೈತನ ಮಗನಾಗಿ ರೈತನಾಗಿ ಹುಟ್ಟಿರುವುದೇ ಪಾಪ. ನನ್ನ ಬಳಿ ಆರೇಳು ಪಂಪ್‌ಸೆಟ್‌ಗಳಿದ್ದರೂ ಅದರಲ್ಲಿ ಎರಡಕ್ಕೆ ಮಾತ್ರ ಬಂದು ನಿಂತಿದೆ. ಕರೆಂಟ್ ಕೊಡುವುದಿಲ್ಲ ಸುಮ್ಮನೆ ಯಾಕೆ ಎಂದು ಎಲ್ಲಾ ಡಿಸ್‌ಕನೆಕ್ಟ್ ಮಾಡಿ ಬಿಟ್ಟಿದ್ದೇನೆ. ನೀರಿಲ್ಲದೆ ಸುಮ್ಮನೆ ಯಾಕೆ ಅದಕ್ಕೆ ದುಡ್ಡು ಖರ್ಚು ಮಾಡುವುದು? ಏನು ಪ್ರಯೋಜನವಿಲ್ಲ. ಇವತ್ತು ರೈತನಿಗೆ ಸ್ಫೂರ್ತಿ ಹೋಗುತ್ತಿದೆ. ಪ್ರಗತಿಪರ ರೈತನ ಸ್ಫೂರ್ತಿಯನ್ನು ಸರ್ಕಾರದವರು ಕಳೆಯುತ್ತಿದ್ದೀರಿ. ಇದು ನ್ಯಾಯವೇ ಎಂದು ನಾನು ಕೇಳುತ್ತಿದ್ದೇನೆ. ಇದು ಸರಿಯಲ್ಲ. ಸರ್ಕಾರದವರು ರೈತರಿಗೆ ಉತ್ತೇಜನ ಕೊಡಬೇಕು. ಕಾರ್ಖಾನೆಗಳಲ್ಲಿ ಸ್ವಲ್ಪ ವಿದ್ಯುತ್ ನಿಲುಗಡೆಯಾದರೆ ಏನೂ ಆಗುವುದಿಲ್ಲ. ಆದರೆ ಒಬ್ಬ ರೈತ ಸರಿಯಾದ ಬೆಳೆ ಬೆಳೆಯದಿದ್ದರೆ ದೇಶ ನಾಶವಾಗುತ್ತದೆ. ಆ ದೃಷ್ಟಿಯಿಂದ ಅಧ್ಯಕ್ಷರ ಮುಖಾಂತರ ನಾನು ಸರ್ಕಾರದವರಿಗೆ ಎಚ್ಚರಿಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಕಾರಣಕ್ಕೂ ರೈತರಿಗೆ ಕಡೆಗಣಿಸಬೇಡಿ. ಬಾಳಿಗಾರ್‌ರವರು ಬಹಳ ಬುದ್ಧಿವಂತರು. ಆದರೆ ಅದನ್ನು ಏನಾದರೂ ಮಾಡಿ, ಕೆಪಿಟಿಸಿಎಲ್ ಸರಿಪಡಿಸಬೇಕೆಂದು ಬಹಳ ಕಷ್ಟಪಡುತ್ತಿದ್ದಾರೆ. ಅದು ಬಹಳ ಹಳೆಯ ಕ್ಯಾನ್ಸರ್ ರೋಗ ಆಗಿ ಬಿಟ್ಟಿದೆ. ಅಷ್ಟು ಸುಲಭವಾಗಿ ಅವರ ಕೈಯಿಂದ ಬಗೆಹರಿಸುವುದಕ್ಕಾಗುತ್ತಿಲ್ಲ. ಸರ್ಕಾರದವರು ರೈತರಿಗೆ ಕನಿಷ್ಟ ಪಕ್ಷ ಐದು ಗಂಟೆ ಆರು ಗಂಟೆಗಳ ಕಾಲವಾದರೂ ವಿದ್ಯುಚ್ಛಕ್ತಿ ಕೊಡಿ. ಇವತ್ತು ಬೆಳಿಗ್ಗೆ ಎದ್ದು ಶಿವಾ ಎಂದು ಆರು ಗಂಟೆಗೆ ಫೋನ್ ತೆಗೆದುಕೊಂಡರೆ, ಪಿರಿಯಾಪಟ್ಟಣದಲ್ಲಿ ಕೆಪಿಟಿಸಿಎಲ್ ಆಫೀಸ್ ಮುಂದೆ ಸಾವಿರಾರು ಜನ ಧರಣಿ ಮಾಡುತ್ತಿದ್ದಾರೆ. ಏತಕ್ಕೆಂದರೆ, ಅಲ್ಲಿ ಸರಿಯಾದ ಪ್ರಮಾಣದಲ್ಲಿ ಕರೆಂಟ್ ಕೊಡುತ್ತಿಲ್ಲ. ನಾನು ಬಳಿಗಾರ್‌ರವರ ಮನೆಗೆ ಮೂರು ಸಾರಿ ಫೋನ್ ಮಾಡಿದೆ, ಅವರು ಮನೆಯಲ್ಲಿ ಸಿಗಲಿಲ್ಲ. ಕೊನೆಗೆ ಅಲ್ಲಿ ಇಂಜಿನಿಯರ್‌ಗೆ ಹೇಳಿದಾಗ ನಾನು ಏನು ಮಾಡಲಿ ಸ್ವಾಮಿ, ಮೆಟೀರಿಯಲ್ ಇಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲ, ಬ್ರೇಕರ್ಸ್ ಇಲ್ಲ, ಅದಿಲ್ಲ, ಇದಿಲ್ಲ ನಾವೇನೂ ಮಾಡುವುದಕ್ಕಾಗುವುದಿಲ್ಲವೆಂದು ಅಲ್ಲಿರತಕ್ಕಂತಹ ಲೋಕಲ್ ಆಫೀಸರ್. ಹೇಳುತ್ತಾನೆ. ಅಲ್ಲಿರತಕ್ಕಂತಹ ಆಫೀಸರ್ಸ್ ಲೈನ್‌ಮನ್‌ಗಳು ಪತ್ತೆಯೇ ಇರುವುದಿಲ್ಲ. ಮೂರು ಮೂರು ದಿವಸಗಳು ಲೈನ್‌ಮನ್‌ಗಳು ಪತ್ತೆ ಇಲ್ಲ. ಹೋದಂತಹ ಕರೆಂಟ್ ಹಾಕುವುದಕ್ಕೆ ಯಾರೂ ಇರುವುದಿಲ್ಲ, ಒಂದು ದಿವಸಕ್ಕೆ 24 ಸಾರಿ ಕರೆಂಟ್ ಹೋಗುತ್ತದೆ. ಓವರ್ ಶೆಡ್, ಓವರ್ ಲೋಡ್ ಆಗುತ್ತದೆ. ಇದಕ್ಕೆಲ್ಲಾ

ಔಷಧಿ ಕೊಡತಕ್ಕಂಥದ್ದು ಯಾರು? ಎಷ್ಟು ಗಂಟೆ ನಾವು ಈ ಸದನದಲ್ಲಿ ಮಾತನಾಡಬಹುದು, ಪ್ರತಿಯೊಬ್ಬ ಸದಸ್ಯ ಕೆಪಿಟಿಸಿಎಲ್ ಬಗ್ಗೆ ಅರ್ಧಗಂಟೆ ಮಾತನಾಡುತ್ತಾರೆ. ಇದಕ್ಕೇನೂ ಅರ್ಥವಿಲ್ಲವೇ? ಎಷ್ಟು ದಿವಸ ಮಾತನಾಡಬೇಕು? ಸರ್ಕಾರ ಈಗಲಾದರೂ ಎಚ್ಚೆತ್ತುಕೊಳ್ಳಬೇಕು. ಏನಾದರೂ ಆಗಲೀ, ನಾವು ರೈತರಿಗೆ ಸರಿಯಾದ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂಬ ಸಂಕಲ್ಪವನ್ನು ಮಾಡಿ ಅದನ್ನು ಕಾರ್ಯೋನ್ಮುಖರಾಗಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಒಂದೊಂದು ತಾಲ್ಲೂಕುಗಳಲ್ಲಿ ಕನಿಷ್ಠ ಪಕ್ಷ ಎರಡೆರಡು, ಮೂರು ಮೂರು ಸಬ್ ಸ್ಟೇಷನ್‌ಗಳಿವೆ. ನಮ್ಮ ತಾಲ್ಲೂಕು ಅದೇನು ಪಾಪ ಮಾಡಿದೆಯೋ ಗೊತ್ತಿಲ್ಲ. ಇದುವರೆಗೆ ಪಿರಿಯಾಪಟ್ಟಣದಲ್ಲಿ ಒಂದು ಸಬ್ ಸ್ಟೇಷನ್ ಹಾಕಿಲ್ಲ. ಒಂದು ಟ್ರಾನ್ಸ್‌ಫಾರ್ಮರ್ ಮಂಜೂರಾಗಿ ಎರಡು ವರ್ಷವಾಗಿತ್ತು, ಇದುವರೆಗೂ ಕಾರ್ಯಾರಂಭ ಮಾಡಿರಲಿಲ್ಲ, ಶ್ರೀ ಬಳಗಾರ್‌ರವರು ಬಂದ ಮೇಲೆ ಕೆಲಸ ಪ್ರಾರಂಭ ಮಾಡಿದ್ದಾರೆ, ಅದು ಇನ್ನೂ ಆರು ತಿಂಗಳು ಸಮಯ ಕೇಳಿದ್ದಾರೆ. ನಮಗೆ ಕನಿಷ್ಠ ಪಕ್ಷ ಮೂರು ಸಬ್ ಸ್ಟೇಷನ್ ಬೇಕು. ಒಂದೊಂದು ತಾಲ್ಲೂಕಿನ ಪರಿಸ್ಥಿತಿ ಹೀಗಿದೆ. ತಾಲ್ಲೂಕುಗಳಲ್ಲಿ ಪಂಪ್‌ಸೆಟ್ ಹಾಕಿಕೊಂಡವರಿಗೆ ಅಕ್ರಮ ಸಕ್ರಮ ಮಾಡುತ್ತೇವೆಂದು ಹೇಳುತ್ತೀರಿ, ಕರೆಂಟ್ ಇಲ್ಲ. ಕೊನೇಪಕ್ಷ, ರಾವಂದೂರಿನಲ್ಲಿ ಮತ್ತು ಹೊಸೂರಿನಲ್ಲಿ ಬಯಲುತುಂಗನಲ್ಲಿ ಒಂದು ಸಬ್ ಸ್ಟೇಷನ್ ಮಾಡಬೇಕೆಂದು ನಾನು ಅನೇಕ ಸಾರಿ ಸರ್ಕಾರದಲ್ಲಿ ಮನವಿ ಸಲ್ಲಿಸಿದ್ದೇನೆ. ಅದರ ಪ್ಲ್ಯಾನಿಂಗ್ ಪ್ರಾರಂಭ ಮಾಡಿಲ್ಲ. ಕೊನೇ ಪಕ್ಷ ಹೋಗಿ ಅದನ್ನು ನೋಡಿ ಅದು ಬೇಕು ಬೇಡ ಎಂದು ನೋಡಿ ಅದಕ್ಕೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯ ನಾನು ಕೆಪಿಟಿಸಿಎಲ್‌ನವರ ಗಮನಕ್ಕೆ ತರತಕ್ಕಂಥದ್ದು, ನಮ್ಮ ತಾಲ್ಲೂಕಿನಲ್ಲಿ ಪಿರಿಯಾಪಟ್ಟಣ ಲಿಫ್ಟ್ ಇರಿಗೇಷನ್ ಸ್ಕೀಮ್ ಅಥವಾ ಕರಡಿ ಲಕ್ಕನ ಕೆರೆ ಸ್ಕೀಮ್ 1985ರಲ್ಲಿ ಪ್ರಾರಂಭವಾಗಿದ್ದು, ಇದು ಸುಮಾರು 30 ರಿಂದ 35 ಎಕರೆ ನೀರಾವರಿ ಆಗತಕ್ಕಂಥದ್ದು, ಬರತಕ್ಕಂತಹ ಎರಡು - ಮೂರು ತಿಂಗಳಲ್ಲಿ ಆ ಸ್ಕೀಮ್ ಮುಗಿಸಿ ರೈತರಿಗೆ ನೀರು ಕೊಡತಕ್ಕಂತಹ ಪರಿಸ್ಥಿತಿಯಲ್ಲಿ ಇರತಕ್ಕಂಥ ಸಂದರ್ಭದಲ್ಲಿ 1985-90ರಲ್ಲಿ ಪ್ರಾರಂಭವಾದಾಗ ಸುಮಾರು ಮೂರು ಕೋಟಿ ರೂಪಾಯಿ ಹಣ ಮುಂಗಡವಾಗಿ ಕೆಪಿಟಿಸಿಎಲ್‌ಗೆ ಕಟ್ಟಿದ್ದೇವೆ. ಆದರೆ ಇದುವರೆಗೂ ಕರೆಂಟ್ ಕೊಡುವುದಕ್ಕಾಗುತ್ತಿಲ್ಲ. ಲೈನ್ ಎಳೆದಿದ್ದಾರೆ, ಕಂಬ ಹಾಕಿದ್ದಾರೆ, ಮಧ್ಯ ಸುಮಾರು ಐದು ಹೆಕ್ಟೇರ್ ಜಮೀನಿನಲ್ಲಿ ಕೇಂದ್ರ ಸರ್ಕಾರ ಅನುಮತಿ ಕೊಟ್ಟಿಲ್ಲವೆಂದು ಈಗ ಅದರ ಬಗ್ಗೆ ಹೋರಾಟ ಮಾಡುತ್ತಿದ್ದಾರೆ. ಇನ್ನು ಮೂರು ತಿಂಗಳುಗಳಲ್ಲಿ ಕರೆಂಟ್ ಕೊಡಬೇಕು. ಈಗ ಕೇಂದ್ರ ಸರ್ಕಾರಕ್ಕೆ ಬರೆಯುತ್ತೇವೆ, ಅನುಮತಿ ತೆಗೆದುಕೊಳ್ಳಬೇಕು, ಅಲ್ಲಿ ಗೊಬ್ಬಿ ಕಾವಲ್ ಎಂದು ಒಂದು ಚಿಕ್ಕ ಫಾರೆಸ್ಟ್ ಇದೆ. ಅದರೊಳಗೆ ಸುಮಾರು ನಾಲ್ಕೈದು ಕಂಬಗಳು ಹೋಗಬೇಕು. ಎಲ್ಲಾ ಕಡೆ ಮುಗಿಸಿ ಆ ಕೆಲಸ ಹಾಗೆಯೇ ನಿಂತಿದೆ. ಇದನ್ನು ಕಾರ್ಯಾರಂಭ ಮಾಡುವುದಕ್ಕೆ ಮೊದಲು

ವ್ಯವಹಾರ ಮಾಡಿದ್ದರೆ ಇಷ್ಟೊತ್ತಿಗೆ ಕೆಲಸ ಮುಗಿಯುತ್ತಿತ್ತು. ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಿದ್ದಾರೆ. ಆದರೆ ಕೇವಲ ಐದು ಹೆಕ್ಟೇರ್‌ನಲ್ಲಿ ಪಾಸ್ ಆಗತಕ್ಕಂತಹ ಲೈನ್‌ಗೆ ನಾಲ್ಕು ಕಂಬ ಹಾಕುವುದಕ್ಕಾಗದೆ ಅದು ಹಾಗೆಯೇ ನಿಂತು ಹೋಗಿದೆ. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನಾನು ನೋಡಿದಾಗ ಪರಿಸ್ಥಿತಿ ಈ ರೀತಿ ಇದೆ. ಕೆಪಿಟಿಸಿಎಲ್‌ನವರೂ ಕೂಡಲೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಒಂದೆರಡು ತಿಂಗಳುಗಳಲ್ಲಿ ಕರೆಂಟ್ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತರು ಇವತ್ತು ಬಹಳ ಕಂಗಾಲಾಗಿದ್ದಾರೆ. ಇವತ್ತು ಅವರಿಗೆ ಸಾಲದ ಮೇಲಿನ ಬಡ್ಡಿ ಕಟ್ಟುವುದಕ್ಕಾಗುತ್ತಿಲ್ಲ. ಅಂತಹ ಪರಿಸ್ಥಿತಿ ಬಂದು ಬಿಟ್ಟಿದೆ. ದಯಮಾಡಿ ಸರ್ಕಾರ ಈಗಲೇ ಅದನ್ನು ಪರಿಶೀಲಿಸಿ, ರೈತರಿಗೆ ಸಾಲ ಕೊಟ್ಟಿರುವಂತಹ ಸಹಕಾರ ಸಂಘಗಳು ಇರಬಹುದು, ಕಮರ್ಷಿಯಲ್ ಬ್ಯಾಂಕ್ ಇರಬಹುದು, ಯಾವುದೇ ಇರಬಹುದು, ಸಾಲದ ಮೇಲಿರುವ ಬಡ್ಡಿಯನ್ನು ಮನ್ನಾ ಮಾಡಬೇಕು. ಬಡ್ಡಿ ಮನ್ನಾ ಮಾಡಿ. ಬಡ್ಡಿ ಮನ್ನಾ ಮಾಡಿರುವಂತಹ ಸರ್ಕಾರಗಳೆಲ್ಲಾ ಒಳ್ಳೆಯ ಹೆಸರು ತೆಗೆದುಕೊಂಡಿವೆ. ಅಸಲು ಕಟ್ಟಿ ಬಡ್ಡಿ ಮನ್ನಾ ಮಾಡುತ್ತೇವೆಂದರೆ, ಅಸಲಾದರೂ ಕಟ್ಟುತ್ತಾರೆ. ಅಸಲು ಕಟ್ಟುವುದಕ್ಕೂ ಆಗುತ್ತಿಲ್ಲ, ಬಡ್ಡಿ ಕಟ್ಟುವುದಕ್ಕೂ ಆಗುತ್ತಿಲ್ಲ. ಆದ್ದರಿಂದ ಬಡ್ಡಿ ಮನ್ನಾ ಮಾಡಬೇಕು, ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲ ಮಾಡಿ ಸಮಯ ಕೊಟ್ಟು ಹೊಸ ಸಾಲ ಕೊಡತಕ್ಕಂತಹ ವ್ಯವಸಾಯ ಸ್ಕೀಮ್‌ಗೆ ತಾವು ಉತ್ತೇಜನ ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಅನೇಕ ವಿಷಯಗಳಿದ್ದರೂ ಸಹಿತ ಅಧ್ಯಕ್ಷರನ್ನು ಕೋಪಗೊಳಿಸುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಏಕೆಂದರೆ ಅವರು ಮಾಡಿಕೊಂಡರೆ ಬಹಳ ಕಷ್ಟ. ಮತ್ತೊಮ್ಮೆ ನಾನು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6.20 ಪಿಎಂ

+ ಶ್ರೀ ಹೆಚ್.ಎಸ್.ಮಹದೇವ್ ಪ್ರಸಾದ್(ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ಸದಸ್ಯರುಗಳು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ಕುಡಿಯುವ ನೀರಿನ ಸಮಸ್ಯೆ ಹಾಗೂ ವಿದ್ಯುತ್ ಸಮಸ್ಯೆ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡು ತಿಳಿಸಿದ್ದಾರೆ. ನಾನಾದರೂ ಈಗ ಗಡಿ ಜಿಲ್ಲೆಯಾದ ಚಾಮರಾಜನಗರದ ಬಗ್ಗೆ ಒಂದೆರಡು ಮಾತುಗಳಲ್ಲಿ ಹೇಳಬಯಸುತ್ತೇನೆ. ನಮ್ಮ ಜಿಲ್ಲೆ ಹೊಸದಾಗಿ ರಚನೆಯಾದಾಗ ಜಿಲ್ಲೆಗೆ ಸೇರಿದಂತಹ ಎಲ್ಲಾ ತಾಲ್ಲೂಕುಗಳಲ್ಲಿ ನೀರಾವರಿ ಸೌಲಭ್ಯವಿರಲಿಲ್ಲ. ಅದರಲ್ಲೂ ನನ್ನ ಗುಂಡ್ಲುಪೇಟೆ ಕ್ಷೇತ್ರವಂತೂ ಶಾಶ್ವತವಾದ ಬರಗಾಲ ಪ್ರದೇಶವಾಗಿದೆ. ಹೀಗಾಗಿ ಬರಗಾಲ ಸದಾ ಕಾಲದಲ್ಲೂ ಇದ್ದು ದಿನವನ್ನು ಕಳೆಯುವಂಥ ಪರಿಸ್ಥಿತಿ ಇದೆ. ನಮ್ಮ ಜಿಲ್ಲೆಯಲ್ಲಿ ಒಟ್ಟು ನಾಲ್ಕು ಸಾವಿರ ಕೊಳವೆ ಬಾವಿಗಳು ಚಾಲ್ತಿಯಲ್ಲಿವೆ. ಒಂದು ಕೊಳವೆ ಬಾವಿಯ ಮೆಂಟೆನೆನ್ಸ್‌ಗೆ 600 ರೂಪಾಯಿಗಳೆಂದು ಜಿಲ್ಲಾ ಪರಿಷತ್ ಹಣ

ನಿಗದಿಪಡಿಸಿದ್ದು ಈ ಹಣ ತಾಲ್ಲೂಕು ಪಂಚಾಯತ್‌ಗಳಿಗೆ ಪೂರ್ಣ ಹಣ ಬಿಡುಗಡೆಯಾಗದೇ ಕೊಳವೆ ಬಾವಿಗಳ ರಿಪೇರಿ ಕೆಲಸ ಮಾಡಿಸಲು ಸಾಧ್ಯವಾಗುತ್ತಿಲ್ಲ. ಈ ತಾಲ್ಲೂಕು ಪಂಚಾಯತ್‌ಗಳಲ್ಲಿ ಕೊಳವೆ ಬಾವಿ ರಿಪೇರಿ ಮಾಡಿಸಲು ಇರುವ ಲಾರಿಗಳೂ ಕೂಡ ಕೆಟ್ಟುಹೋಗಿದ್ದು, ಹೀಗಾಗಿ ಹಣವೂ ಕೂಡ ಇಲ್ಲದಿರುವಾಗ XIನೇ ಹಣಕಾಸು ಅಥವಾ ಸ್ಟ್ಯಾಂಪ್ ಡ್ಯೂಟಿ ಹಣದಿಂದ ರಿಪೇರಿ ಮಾಡಿಸಿ ಎಂದು ಜಿಲ್ಲಾ ಪರಿಷತ್‌ನವರು ಸೂಚನೆ ನೀಡುತ್ತಾರೆ. ಆದರೆ ತಾಲ್ಲೂಕು ಪಂಚಾಯತ್ ಸದಸ್ಯರುಗಳು ಕಾಮಗಾರಿಗಳಿಗೆ ಮೀಸಲಾಗಿರುವ ಹಣವನ್ನು ಎಲ್ಲಾ ನೀರಿಗೆ ಕೊಡುವುದಕ್ಕಾಗುವುದಿಲ್ಲ, ಶಾಸಕರುಗಳು ಸರ್ಕಾರದ ಗಮನಕ್ಕೆ ಸಮಸ್ಯೆಯ ಬಗ್ಗೆ ತಿಳಿಸಿ ಅವರು ಹಣ ತರಿಸಿಕೊಳ್ಳುತ್ತಾರೆ ಎಂದು ನಮ್ಮ ಮೇಲೆ ಒತ್ತಡ ತರುತ್ತಾರೆ. ಆದುದರಿಂದ ನಾನು ಹೇಳುವುದೇನೆಂದರೆ ಬೋರ್‌ವೆಲ್‌ಗಳ ಮೆಂಟೆನೆನ್ಸ್‌ಗೆ ಏನು ಹಣ ನಿಗದಿಯಾಗಿದೆ ಅದೆಲ್ಲವೂ ಪೂರ್ಣ ತಾಲ್ಲೂಕು ಪಂಚಾಯತ್‌ಗೆ ಬಿಡುಗಡೆಯಾಗುವಂತೆ ವ್ಯವಸ್ಥೆ ಆಗಬೇಕು. ನಮ್ಮ ಕ್ಷೇತ್ರಕ್ಕೆ 7 ಲಕ್ಷ ರೂಪಾಯಿಗಳು ಬೋರ್‌ವೆಲ್‌ಗಳ ನಿರ್ವಹಣೆಗೆ ನಿಗದಿಯಾಗಿದ್ದು ಇದರಲ್ಲಿ ಕೇವಲ 2 ಲಕ್ಷ ರೂಪಾಯಿಗಳು ಬಿಡುಗಡೆಯಾಗಿ ಇನ್ನೂ 5 ಲಕ್ಷ ರೂಪಾಯಿಗಳು ಮಾರ್ಚ್ ಕೊನೆಯ ಹಂತಕ್ಕೆ ಬಂದಿದ್ದರೂ ಕೂಡ ಇನ್ನೂ ಬಿಡುಗಡೆಯಾಗಿಲ್ಲ. ಇವೊತ್ತಿನ ಪರಿಸ್ಥಿತಿಯಲ್ಲಿ ಯಾರು 5 ಲಕ್ಷ ರೂಪಾಯಿಗಳ ಸ್ಪೇರ್ ಪಾರ್ಟ್ಸ್‌ಗಳನ್ನು ಸಪ್ಲೈ ಮಾಡುತ್ತಾರೆ ಅವರಿಗೆ ಸಾಲದ ರೂಪದಲ್ಲಿ ಕೊಡುವ ಹಾಗೆ ನಾವು ಶಿಫಾರಸ್ಸು ಮಾಡುವ ಪರಿಸ್ಥಿತಿಗೆ ಬಂದಿದ್ದೇವೆ. ಈ ರೀತಿ ಕೊಳವೆ ಬಾವಿಗಳ ಪರಿಸ್ಥಿತಿ ಇದೆ. ಇನ್ನು ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಯಬೇಡಿ, ಇರುವ ಬೋರ್‌ವೆಲ್‌ಗಳನ್ನೇ ಡೀಪನಿಂಗ್ ಮಾಡಿ ಎಂದು ಸರ್ಕಾರದಿಂದ ಸುತ್ತೋಲೆ ಬರುತ್ತಿದೆ. ಅದು ಒಳ್ಳೆಯದೇ. ಆದರೆ ರಿಗ್‌ಗಳನ್ನು ಇಟ್ಟುಕೊಂಡಿರುವವರು ಯಾರೂ ಕೂಡ ಬೋರ್‌ವೆಲ್ ಡೀಪನಿಂಗ್ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಅದಕ್ಕೆ ಕಡಿಮೆ ಹಣ ಖರ್ಚಾಗುತ್ತದೆ ಮತ್ತು ಯಾವುದಾದರೂ ಒಂದು ನಟ್ಟೋ ಅಥವಾ ಬೋಲ್ಟೋ ಬೋರ್‌ವೆಲ್ ಒಳಗೆ ಬಿದ್ದಿತ್ತು ಎಂದರೆ ನಮ್ಮ ಪಾಯಿಂಟ್ ಹೋಗುತ್ತದೆ ಎಂದು ಹೇಳಿ ಯಾವುದೇ ಬೋರ್‌ವೆಲ್ ಕಂಪನಿಗಳವರೂ ಕೂಡ ಡೀಪನಿಂಗ್ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ಈಗ ನನಗೆ ಗೊತ್ತಿರುವ ಹಾಗೆ ಸರ್ಕಾರ ಎರಡು ಹೈಡ್ರೋ ಫ್ರಾಕ್ಚರಿಂಗ್ ಮೆಷಿನ್‌ಗಳನ್ನು ಹೊಂದಿದ್ದು ಈ ಮೆಶಿನ್‌ಗಳು ಕೇವಲ ಎರಡೇ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ರಾಜ್ಯದ ಉಳಿದ ಯಾವ ಜಿಲ್ಲೆಯಲ್ಲೂ ಬಂದು ಕೆಲಸ ಮಾಡಿದಂಥ ಸೂಚನೆಗಳೇ ಇಲ್ಲ. ಈ ಮೆಷಿನ್‌ಗಳನ್ನು ಪ್ರಾರಂಭದಲ್ಲಿ ಕೊಂಡುಕೊಂಡಾಗ ಯಾವ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಲು ಕಳುಹಿಸಲಾಯಿತೋ ಅಲ್ಲಿಂದ ಮುಂದೆ ಯಾವ ಜಿಲ್ಲೆಗೂ ಅವುಗಳನ್ನು ಕಳುಹಿಸಿಲ್ಲ. ಬಹುಶಃ ಅವುಗಳನ್ನು ಕಾರ್ಯ ನಿರ್ವಹಿಸಲು ಬಾಗಲಕೋಟೆ, ಬೀಜಾಪುರದಲ್ಲಿ ತೊಡಗಿಸಿಬಿಟ್ಟಿದ್ದೀರಿ. ನಾನು ಹೇಳುವುದೇನೆಂದರೆ ಹದಿನೈದು ದಿವಸ ಅಥವಾ ಒಂದು ತಿಂಗಳ ಮಟ್ಟಿಗೆ ಆ ಹೈಡ್ರೋ ಫ್ರಾಕ್ಚರಿಂಗ್

ಮೆಷಿನ್‌ನ್ನು ನಮ್ಮ ಚಾಮರಾಜನಗರಕ್ಕೆ ಕಳುಹಿಸಿಕೊಟ್ಟರೆ ಬೋರ್‌ವೆಲ್‌ಗಳನ್ನು ಸ್ವಲ್ಪ ಡೀಪನಿಂಗ್ ಮಾಡಿಸಿ ಅದರಿಂದ ಸ್ವಲ್ಪ ಜಲ ಉತ್ಪತ್ತಿಯಾಗುವಂತಹ ಕೆಲಸವನ್ನು ಮಾಡಿಸಬಹುದು. ಇನ್ನು ತಮಿಳುನಾಡಿನಲ್ಲಿ ಅಲ್ಲಿಯ ಸರ್ಕಾರ ಆರು ಹೈಡ್ರೋ ಫ್ರಾಕ್ಚರಿಂಗ್ ಮೆಷಿನ್‌ಗಳನ್ನು ಡ್ಯಾನಿಡಾ, ಯುನಿಸೆಫ್ ಇತ್ಯಾದಿ ಸಂಸ್ಥೆಗಳಿಂದ ಹೊಂದಿದ್ದು ಅದರಿಂದ ಬೋರ್‌ವೆಲ್‌ಗಳನ್ನು ಡೀಪನಿಂಗ್ ಮಾಡಿಸತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಆದುದರಿಂದ ಇಲ್ಲೂ ಕೂಡ ಅಂಥ ಹೆಚ್ಚು ಮೆಷಿನ್‌ಗಳನ್ನು ಸರ್ಕಾರ ಖರೀದಿ ಮಾಡಿದರೆ ಇಲ್ಲೂ ಕೂಡ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಬಹುದು. ಅದನ್ನು ಬಿಟ್ಟು ಡೀಪನಿಂಗ್ ಬಗ್ಗೆ ಎಷ್ಟೇ ಭಾಷಣ ಮಾಡಿದರೂ ಕೂಡ ಪ್ರಾಕ್ಟಿಕಲಿ ಡ್ರಿಲ್ಲಿಂಗ್ ಮೆಷಿನ್ ಇಟ್ಟುಕೊಂಡಿರುವ ಯಾವುದೇ ಸಂಸ್ಥೆಯಾಗಲಿ ಡೀಪನಿಂಗ್ ಮಾಡುವುದಕ್ಕೆ ಬರುತ್ತಿಲ್ಲ. ಇದರಿಂದಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕಷ್ಟವಾಗುತ್ತಿದೆ. ಆದಕಾರಣ ಸರ್ಕಾರ ಹೈಡ್ರೋ ಫ್ರಾಕ್ಚರಿಂಗ್ ಮೆಷಿನ್‌ನ್ನು ಚಾಮರಾಜನಗರ ಹಾಗೂ ಎಲ್ಲಾ ಜಿಲ್ಲೆಗಳಿಗೂ ಕಳುಹಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕು ಮತ್ತು ಆ ಮೂಲಕ ನೀರಿನ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ಬಗೆಹರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇನ್ನು ಆರ್.ಡಿ.ಪಿ.ಆರ್.ನಿಂದ ಜಿಲ್ಲಾ ಪರಿಷತ್ ಮೂಲಕ 70 ಪರ್ಸೆಂಟ್ ಇ.ಎ.ಎಸ್. ಹಣವನ್ನು ತಾಲ್ಲೂಕು ಪಂಚಾಯತ್ ನಿರ್ವಹಣೆಗೆ ಕೊಟ್ಟಿದ್ದೀರಿ. ಇಲ್ಲಿ ಇಬ್ಬರು ಜೆ.ಇ.ಗಳು ಇದ್ದು ಅದರಲ್ಲಿ ಒಬ್ಬ ಇ.ಓ. ನಾನ್ ಟೆಕ್ನಿಕಲ್ ಪರ್ಸನ್ ಇರುತ್ತಾರೆ. ಅವರಿಗೆ ನೀವು ಕೊಟ್ಟ ಮೇಲೆ ಈ ಹಣವೆಲ್ಲವನ್ನೂ ತಾಲ್ಲೂಕು ಪಂಚಾಯತ್‌ನವರಾದ ನಾವು ಎಲ್ಲವನ್ನೂ ನಿರ್ವಹಣೆ ಮಾಡಬೇಕೆಂದು ಹೇಳಿ ಅದಕ್ಕೆ ಆ್ಯಕ್ಷನ್ ಪ್ಲಾನ್ ಮಾಡುವುದು, ಅಪ್ರೂವ್ ಮಾಡುವುದು ಮತ್ತೆ ಅಲ್ಲಿ ಸದಸ್ಯರುಗಳ ಪೈಕಿ ಅದನ್ನು ಕ್ಷೇತ್ರವಾರು ಕೆಲಸ ವಿಂಗಡಣೆ ಮಾಡಿಕೊಳ್ಳುವುದು, ಇಂಥ ಕೆಲಸಗಳೇ ನಡೆಯುತ್ತದೆ. ಈಗ ಇ.ಎ.ಎಸ್. ಗೈಡ್‌ಲೈನ್ಸ್‌ನಲ್ಲಿ ಒಂದು ಲಕ್ಷಕ್ಕಿಂತ ಕಡಿಮೆಯಾದ ಯಾವುದೇ ರಸ್ತೆಯ ಕೆಲಸವನ್ನು ತೆಗೆದುಕೊಳ್ಳಬಾರದು ಎಂದು ಇದೆ. ಆದರೆ ಅಂಥ ಕೆಲಸವನ್ನು ನಿರ್ವಹಣೆ ಮಾಡುವುದಕ್ಕೆ ಟೆಕ್ನಿಕಲ್ ಎಫಿಶಿಯೆನ್ಸಿ ಬೇಕಾಗುತ್ತದೆ. ಈಗ ತಾಲ್ಲೂಕು ಪಂಚಾಯತ್‌ನಲ್ಲಿ ಇಬ್ಬರು ಜೆ.ಇ.ಗಳನ್ನು ಇಟ್ಟು ಅವರ ಮೇಲೆ ಮೇಲುಸ್ತುವಾರಿ ನೋಡಿಕೊಳ್ಳುವುದಕ್ಕೆ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಲಿ ಅಥವಾ ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಲಿ ಇಲ್ಲದೇ ಇರುವಂಥ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದಲೇ ನಿರ್ವಹಣೆ ಮಾಡುವ ಕೆಲಸವನ್ನು ಮಾಡಿದರೆ ಒಳ್ಳೆಯದು ಎಂಬುದು ನನ್ನ ಸಲಹೆ. ನಮ್ಮ ಜಿಲ್ಲೆಯಿಂದ ಕುಡಿಯುವ ನೀರಿನ ಯೋಜನೆಗೆ ಸಂಬಂಧಪಟ್ಟಂತೆ 338 ಲಕ್ಷ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ಈಗಾಗಲೇ ಸರ್ಕಾರಕ್ಕೆ ಕಳುಹಿಸಿದ್ದೇವೆ. ತಾವು 5ನೇ ತಾರೀಖು ನಡೆದಂಥ ಸಂಪುಟ ಸಭೆಯಲ್ಲಿ ಚಾಮರಾಜ ನಗರಕ್ಕೆ ಕುಡಿಯುವ ನೀರಿಗಾಗಿ ಒಂದು

ಕೋಟಿ 38 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದರೂ ಕೂಡ ಇದುವರೆಗೆ ಕುಡಿಯುವ ನೀರಿನ ಬಗ್ಗೆ ಜಿಲ್ಲಾ ಪರಿಷತ್‌ಗೆ ಯಾವುದೇ ಹಣ ಬಿಡುಗಡೆಯಾಗಿಲ್ಲ. ಇನ್ನು ತೀವ್ರವಾಗಿ ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಎಂದರೆ ಅಧಿಕಾರಿಗಳು ನಮ್ಮ ಹತ್ತಿರ ಹಣವಿಲ್ಲ, ನಮಗೆ ಆರ್.ಡಿ.ಪಿ.ಆರ್. ಸೆಕ್ರೆಟರಿಯವರು ಒಂದು ಸುತ್ತೋಲೆ ಕಳುಹಿಸಿದ್ದಾರೆ. ಅದೇನೆಂದರೆ XIನೇ ಹಣಕಾಸು ಆಯೋಗದ ಹಣದಲ್ಲಿ ಯೋಜನೆ ಅಳವಡಿಸಿಕೊಂಡು ಬೋರ್‌ವೆಲ್ ಕೊರೆಯಿರಿ ಎಂದು ನಿನ್ನೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಸರ್ಕ್ಯೂಲರ್ ಓದಿದರು. ಇಲ್ಲದಿದ್ದರೆ ಮುಂದಿನ ವರ್ಷದ ಆ್ಯಕ್ಷನ್ ಪ್ಲಾನ್‌ನಲ್ಲಿ ಸೇರಿಸಿಕೊಂಡು ಕೆಲಸ ಮಾಡಿ ಎಂದು ಹೇಳಿಬಿಡುತ್ತೀರಿ. ಮುಂದಿನ ವರ್ಷದ ಆ್ಯಕ್ಷನ್ ಪ್ಲಾನ್ ಮಾಡಿ, ಅದು ಅಪ್ರೂವಲ್ ಆಗಿ ಅಲ್ಲಿ ಬೋರ್‌ವೆಲ್ ಕೊರೆಸುವವರೆಗೆ ಅಲ್ಲಿಯ ಜನರು ಕುಡಿಯುವ ನೀರಿಗೆ ಏನು ಮಾಡಬೇಕು? ಆದುದರಿಂದ ಕುಡಿಯುವ ನೀರಿನ ವಿಷಯದಲ್ಲಾದರೂ ಸರ್ಕಾರ ಆದೇಶಗಳಲ್ಲಿ ಕೆಲವು ರಿಲ್ಯಾಕ್ಸ್ ಮಾಡಬೇಕು ಮತ್ತು ಬೋರ್‌ವೆಲ್‌ಗಳನ್ನು ಆದ್ಯತೆ ಮೇಲೆ ಕೊರೆಯುವ ವ್ಯವಸ್ಥೆಯನ್ನು ಮಾಡಿದರೆ ಅಲ್ಲಿ ಜನಗಳನ್ನು ಶಾಸಕರಾದ ನಾವುಗಳು ಫೇಸ್ ಮಾಡಿ ಸಮಾಧಾನಪಡಿಸಬಹುದು. ಈಗ ಗ್ರಾಮಗಳಿಗೆ ಶಾಸಕರುಗಳು ಭೇಟಿ ಕೊಡುವುದಕ್ಕೇ ಬಹಳ ಕಷ್ಟವಾಗಿದೆ.

ಶ್ರೀ ಎಂ.ವೈ.ಘೋರ್ಪಡೆ: ಹಣದ ಕೊರತೆ ಇದೆ ಎಂದು ತಾವು ಹೇಳುತ್ತಿದ್ದೀರಿ. ನನಗೆ ಅನುಮಾನವಿದೆ. ಅದರ ಬಗ್ಗೆ ನಾನು ಹೇಳುವುದೇನೆಂದರೆ ಈಗಾಗಲೇ ಆ್ಯಕ್ಷನ್ ಪ್ಲಾನ್ ಸ್ಪಷ್ಟವಾಗಿದ್ದು ಅದರಲ್ಲಿ ಸೂಚಿಸಿರುವ ಕೆಲಸಗಳನ್ನು ಪೂರೈಸುವುದಕ್ಕೆ ಎಷ್ಟು ಹಣ ಬೇಕೋ ಅದನ್ನು ಖಂಡಿತವಾಗಿಯೂ ನಾವು ಅವರಿಗೆ ಕೊಟ್ಟಿದ್ದೇವೆ. ಅದನ್ನು ತಾವು ಒಪ್ಪುತ್ತೀರೆಂದು ನಂಬುತ್ತೇನೆ. ಉದಾಹರಣೆಗೆ ನಮ್ಮ ಆ್ಯಕ್ಷನ್ ಪ್ಲಾನ್‌ನಲ್ಲಿ ಎಲ್ಲಾ ಜಿಲ್ಲೆಗಳನ್ನೊಳಗೊಂಡಂತೆ 630 ಪೈಪ್‌ಲೈನ್ ವಾಟರ್, 1151 ಮಿನಿ ವಾಟರ್ ಮತ್ತು 3200 ಬೋರ್‌ವೆಲ್‌ಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಮಾಡಬೇಕೆಂದು ಯೋಜನೆ ಇದ್ದು ಇದಕ್ಕೆ ಬೇಕಾದಂಥ ಹಣವನ್ನು ಖಂಡಿತವಾಗಿಯೂ ನಾವು ಕೊಟ್ಟಿದ್ದೇವೆ. ಆ್ಯಕ್ಷನ್ ಪ್ಲಾನ್ ಬಿಟ್ಟು ನೀವು ಬೇರೆ ಏನಾದರೂ ಮಾಡುವುದಕ್ಕೆ ಹೋದರೆ ಮಾತ್ರ ಅದಕ್ಕೆ ಹಣ ಎಲ್ಲಿದೆ ಎಂದು ಕೇಳುವುದಕ್ಕೆ ಆಸ್ಪದವಿರುತ್ತದೆ. ಇಂಥದ್ದೇ ಜಾಸ್ತಿಯಾಗುತ್ತಿದೆ ಎಂದು ನನಗಾದರೂ ಅನ್ನಿಸುತ್ತಿದೆ. ಇದೇ ಅನುಮಾನವಿದ್ದು ಬಹುಶಃ ಇದೇ ರೀತಿಯಾಗುತ್ತಿದೆ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೆ, ಇಲ್ಲೇನಾಗಿದೆಯೆಂದರೆ ನಮಗೆ ಗೊತ್ತಿರುವ ಹಾಗೆ ಕೇಂದ್ರದಿಂದ 800 ಕೋಟಿ ರೂ. ಹಾಗೂ ರಾಜ್ಯದ 800 ಕೋಟಿ ರೂ. ಒಟ್ಟಾರೆ 1600 ಕೋಟಿ ರೂ. ಯೋಜನಾ ವೆಚ್ಚಕ್ಕೆ ಕಡಿತವಾಗಿದೆ. ಈ ಬಗ್ಗೆ ಪತ್ರಿಕೆಗಳಲ್ಲೂ ಕೂಡ ಬಂದಿದೆ. ನಮಗೆ ಸಿ.ಇ.ಓ.ಗಳು ಏನು ಹೇಳುತ್ತಾರೆಂದರೆ

ಯೋಜನಾ ವೆಚ್ಚದಲ್ಲಿ ಶೇಕಡಾ 15ರಷ್ಟು ಕಡಿತ ಮಾಡಿಕೊಂಡು ಕೆಲಸವನ್ನು ಮಾಡುತ್ತಿದ್ದೇವೆಯಾದ ಕಾರಣ ಆ್ಯಕ್ಷನ್ ಪ್ಲಾನ್ ಕೆಲಸವನ್ನೇ ಮುಗಿಸಲು ಕಷ್ಟವಾಗುತ್ತಿದೆ ಎಂದು ನಾವು ಹೋದಾಗಲೆಲ್ಲಾ ಹೇಳುತ್ತಾರೆ. ಶಾಸಕರಾದ ನಾವು ಶಾಸನಸಭೆಯಲ್ಲಿ ಬೇಜವಾಬ್ದಾರಿಯಿಂದ ಸರ್ಕಾರದ ಮೇಲೆ ಆರೋಪ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ನಮ್ಮ ಕ್ಷೇತ್ರಗಳಲ್ಲಿ ಪ್ರಾಕ್ಟಿಕಲಿ ಏನು ನೋಡುತ್ತಿದ್ದೇವೆ ಆ ವಿಚಾರಗಳನ್ನು ತಮ್ಮ ಗಮನಕ್ಕೆ ತರಲು ಪ್ರಯತ್ನ ಮಾಡುತ್ತಿದ್ದೇವೆ. ಈಗ ಕುಡಿಯುವ ನೀರಿಗಾಗಿ 42 ಕೋಟಿ ರೂ. ಬಿಡುಗಡೆ ಮಾಡಿದ್ದು ಇದರಲ್ಲಿ ಚಾಮರಾಜನಗರಕ್ಕೆ ಒಂದು ಕೋಟಿ 35 ಲಕ್ಷ ರೂ. ಕೊಡಲಾಗಿದೆ ಎಂದು ಹೇಳಿದ್ದೀರಿ. ಆದರೆ ಆ ಹಣ ಇನ್ನೂ ಬಂದಿಲ್ಲವಲ್ಲಾ. ಇದರ ಬಗ್ಗೆ ತಾವು ವಿಚಾರ ಮಾಡಿ ಈಗಲಾದರೂ ತಕ್ಷಣ ಆ ಹಣವನ್ನು ಬಿಡುಗಡೆ ಮಾಡಿಸಿಕೊಟ್ಟರೆ ತಮಗೆ ಹಾಗೂ ತಮ್ಮ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಇನ್ನು ಬೆಳೆ ವಿಮೆ ಯೋಜನೆಯನ್ನು ಹಿಂದೆ ಕ್ರಾಪ್ ಫೇಲ್ಯೂರ್ ಆದಾಗ ಮಾಡಲಾಗಿದೆ. ಇಂಥ ಸಂದರ್ಭದಲ್ಲಿ ಕ್ರಾಪ್ ಫೈಲ್ಯೂರ್ ಬಗ್ಗೆ ಸರ್ವೆ ಮಾಡಿದಾಗ ರೈತರು ಪ್ರೀಮಿಯಂ ಕಟ್ಟಿದ್ದಾರೆ. ಏನೋ ಫೈಲ್ಯೂರ್ ಕ್ರಾಪ್‌ಗೆ ವಿಮೆ ಸಿಗುತ್ತದಲ್ಲಾ ಎಂದು ತಿಳಿದು ರೈತರು ಒಂದೊಂದು ಆರ್. ಟಿ. ಸಿ. ತೆಗೆದುಕೊಳ್ಳುವುದಕ್ಕೂ 100 ರಿಂದ 200 ರೂಪಾಯಿಗಳನ್ನು ವಿಲೇಜ್ ಅಕೌಂಟೆಂಟ್‌ಗೆ ಕೊಟ್ಟು ತೆಗೆದುಕೊಂಡರು. ಆದರೆ ಇದುವರೆಗೆ ಕೇಂದ್ರ ಸರ್ಕಾರದಿಂದ ಬರಬೇಕಾದ ಪರಿಹಾರದ ಹಣ ಬಿಡುಗಡೆ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಇದುವರೆಗೂ ಯಾವುದೇ ರೈತನಿಗೂ ಕೂಡ ಬೆಳೆ ವಿಮೆ ಯೋಜನೆಯಲ್ಲಿ ಪ್ರೀಮಿಯಂ ಹಣ ಕಟ್ಟಿ ನಮಗೆ ಇನ್‌ಷೂರೆನ್ಸ್ ಹಣ ಬರುತ್ತದೆಂದು ನಿರೀಕ್ಷೆಯಲ್ಲಿದ್ದಾನೆ ಅವನಿಗೆ ಹಣ ತಲುಪಿಲ್ಲ. ಇನ್ನು ಜಲಸಂವರ್ಧನೆ ಬಗ್ಗೆ ಹೇಳುವುದಾದರೆ, ನಮ್ಮ ಸಣ್ಣ ನೀರಾವರಿ ಸಚಿವರು, ಬಹಳ ಉತ್ಸಾಹದಿಂದ ಪ್ರತಿಯೊಂದು ತಾಲ್ಲೂಕಿನಲ್ಲಿ ಹೋಬಳಿಗೆ ಒಂದು ಕೆರೆ ತೆಗೆದುಕೊಂಡು ಅಭಿವೃದ್ಧಿ ಪಡಿಸುತ್ತೇವೆಂದು ಹೇಳಿದರು. ಆದರೆ ಈಗ ಆ ಕೆರೆ ಹೂಳು ಎತ್ತದೆ ಇದ್ದರೆ ಅಂತರ್ಜಲ ಸೃಷ್ಟಿ ಮಾಡುವುದಕ್ಕೆ ಕಷ್ಟವಾಗುತ್ತದೆ. ಹಾಗಾಗಿ ಒಳ್ಳೆಯ ಒಂದು ಯೋಜನೆ ಕೈಗೊಂಡಿದ್ದಾರೆ ಎಂದು ಅಭಿನಂದಿಸಿದೆವು. ಈಗ ಅವರು ಹೇಳಿದ ಹಾಗೆ ಹೋಬಳಿಗೆ ಒಂದು ಕೆರೆ ಇರಲಿ, ಕ್ಷೇತ್ರಕ್ಕೆ ಒಂದು ಕೆರೆಯ ಕೆಲಸ ಕೂಡ ಕೈಗೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿಯಾದರೆ ಬರಿ ಪತ್ರಿಕಾ ಪ್ರಚಾರದಲ್ಲಿ ಈ ಸರ್ಕಾರದ ಕೆಲಸ ನಡೆಯುತ್ತಿದೆ ಎಂದು ನಾವು ಭಾವಿಸಬೇಕಾಗುತ್ತದೆ. ಮತ್ತು ಕಳೆದ ಬಜೆಟ್ ಮಂಡನೆಯಲ್ಲಿ ಒಬ್ಬೊಬ್ಬರು ಶಾಸಕರಿಗೆ 25 ಲಕ್ಷ ರೂಪಾಯಿ ಕ್ಷೇತ್ರಾಭಿವೃದ್ಧಿ ನಿಧಿ ಕೊಡುತ್ತಿದ್ದೇವೆಂದು ಘೋಷಣೆ ಮಾಡಿದರು. ಆಗ ನಮಗೆ ಪ್ರದೇಶಾಭಿವೃದ್ಧಿ ನಿಧಿ ಕೊಟ್ಟಿದ್ದಾರೆಂದು ಬಹಳ ಸಂತೋಷ ಪಟ್ಟೆವು. 25 ಲಕ್ಷ ರೂಪಾಯಿ ಎಂದು ಹೇಳಿದಾಗ 25 ಲಕ್ಷ ರೂಪಾಯಿಗೆ ಪ್ರೋಗ್ರಾಂಗಳನ್ನು ನಾವು ಜಿಲ್ಲಾಧಿಕಾರಿಗಳಿಗೆ ಕೊಟ್ಟೆವು. ಆದರೆ 12.50 ಲಕ್ಷ ರೂಪಾಯಿಗೆ ಮಾತ್ರ ಅಪ್ರೂವಲ್ ಕೊಟ್ಟಿದ್ದಾರೆ. ಈಗಾಗಲೇ ಈ ವರ್ಷ ಮುಗಿಯುತ್ತಾ ಬಂತು. ಇನ್ನು 12.50 ಲಕ್ಷ ರೂಪಾಯಿಯ ಬಗ್ಗೆ ಇನ್ನು ಏನೂ ನಮ್ಮ

ಗಮನಕ್ಕೆ ಬಂದಿಲ್ಲ.

ಅಧ್ಯಕ್ಷರು: ಬರುತ್ತದೆ. It is a commitment.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮತ್ತು ಸರ್ಕಾರ ಕುಡಿಯುವ ನೀರಿಗೆ ಕೂಡಲೇ ಬೇರೆ ಯಾವುದೇ ಕೆಲಸ ಕಾರ್ಯಗಳಿಗೆ ನೀಡುವ ಹಣವನ್ನು ಬದಿಗೊತ್ತಿ ಕೊಡಬೇಕೆಂದು ಹೇಳುತ್ತಾ, ವಿದ್ಯುಚ್ಛಕ್ತಿ ಅಭಾವದ ಬಗ್ಗೆ ಈಗಾಗಲೇ ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಅಗ್‌ಮೆಂಟೇಷನ್ ವರ್ಕ್ಸ್ ಎಂದು ಏನು ಅಪ್ರೂವ್ ಆಗಿವೆ ಅವುಗಳು ಟೆಂಡರ್ ಆಗಿ, ಏಜೆನ್ಸಿ ಫಿಕ್ಸ್ ಆಗಿ, ಎರಡೆರಡು ವರ್ಷವಾದರೂ ಕೂಡ ಇನ್ನೂ ಟ್ರಾನ್ಸ್‌ಫಾರ್ಮರ್‌ಗಳನ್ನು ಕಲುಪಿಸುವಂತಹ ವ್ಯವಸ್ಥೆಯಾಗಿಲ್ಲ. ಇದರಿಂದ ಏನಾಗಿದೆ. ಎಂದರೆ ಸಿಸ್ಟಂ ಇಂಪ್ರೂವ್ ಮಾಡದೆ ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಎಷ್ಟೇ ಹೇಳಿದರೂ ಕೂಡ ಪ್ರಯೋಜನವಾಗುವುದಿಲ್ಲ. ಆದುದರಿಂದ ಏನು ಎರಡು ವರ್ಷದ ಹಿಂದೆ ಸ್ಯಾಂಕ್ಷನ್ ಆಗಿರುವ ಅಗ್‌ಮೆಂಟೇಷನ್ ವರ್ಕ್ಸ್ ಇದೆ ಅದನ್ನು ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನೊಂದು ವಿಚಾರ, 1998ರಿಂದ ನಾಲ್ಕೈದು ಬಾರಿ ಅಕ್ರಮವಾಗಿ ಸರ್ವೀಸ್ ತೆಗೆದುಕೊಂಡಿದ್ದರೆ ಅದನ್ನು ಸಕ್ರಮ ಮಾಡುವುದನ್ನು ರಿನ್ಯೂ ಮಾಡಿಕೊಂಡು ಬಂದಿರಿ. ಆದರೆ ನನ್ನ ಅನುಭವದ ಪ್ರಕಾರ ಗೊತ್ತಿಲ್ಲದೆ ಸರ್ವೀಸ್ ತೆಗೆದುಕೊಂಡು ಅಕ್ರಮವಾಗಿ ತೆಗೆದುಕೊಂಡಿರುವುದನ್ನು ಸಕ್ರಮ ಮಾಡಿಕೊಳ್ಳುವಂತಹ ಸಂಖ್ಯೆ ಬಹಳ ಕಡಿಮೆ. ಬಹುತೇಕ ಜನ ಈ ಸಂದರ್ಭವನ್ನೇ ಬಳಸಿಕೊಂಡು ಆ ಕ್ಷಣದಲ್ಲಿ ಒಂದು ಬೋರ್ ಹಾಕಿಸಿ, ಒಂದೆರಡು ಲೈಟ್ ಕಂಬಗಳನ್ನು ತಂದು ಸರ್ವೀಸ್ ತೆಗೆದುಕೊಂಡು ಈ ಯೋಜನೆಯ ಲಾಭ ಪಡೆದುಕೊಳ್ಳುವುದಕ್ಕೆ ಮಾಡುತ್ತಿದ್ದಾರೆ ಹೊರತು ಇದನ್ನು ಸುಮ್ಮನೆ ಪ್ರಚಾರಕ್ಕೆ 3-4 ಸಲ ಕೊಟ್ಟುಕೊಂಡು ಬಂದಿದ್ದೀರಿ ಬಹುತೇಕ ಇದರಲ್ಲಿ ಹಣವಂತ ರೈತರು ಅಥವಾ ಬೇರೆ ಬೇರೆ ಉದ್ಯೋಗದಲ್ಲಿ ಇರತಕ್ಕಂಥ ಮತ್ತು ಬಿಸಿನೆಸ್ ಫೀಲ್ಡ್‌ನಲ್ಲಿ ಇರುವವರು ವ್ಯವಸಾಯದ ಒಂದು ಕಾರಣಕ್ಕೆ ಜಮೀನು ಮಾಡಿಕೊಂಡು ನಾವು ಒಂದು ಪಂಪ್‌ಸೆಟ್ ಮಾಡುತ್ತಾ ಇದ್ದೀವಿ, ಒಂದು ಫಾರಂ ಹೌಸ್ ಮಾಡಿಕೊಳ್ಳಬೇಕೆಂದು ಇದ್ದಾರೆ ಅಂತಹವರಿಗೆ ಇದು ಬೆನಿಫಿಟ್ ಆಗುತ್ತಿದೆಯೇ ಹೊರತು, ಇದು ನಿಜವಾಗಿ ರೈತನಿಗೂ ಪ್ರಯೋಜನವಾಗುತ್ತಿಲ್ಲ. ಡಾರ್ಕ್ ಅಂಡ್ ಗ್ರೇ ಏರಿಯಾ ಎಂದು ಏನಿದೆ, ಆ ತಾಲ್ಲೂಕಿನಲ್ಲಿ ಅಕ್ರಮವಾಗಿ ಏನು ಸರ್ವೀಸ್ ತೆಗೆದುಕೊಂಡಿದ್ದಾರೆ ಅಂಥಾದ್ದು ರೆಗ್ಯುಲರೈಸ್ ಮಾಡುವುದಕ್ಕೆ ಒತ್ತಾಯ ಮಾಡಬೇಕು. ಇನ್ನು ತ್ವರಿತ ವಿದ್ಯುತ್ ಯೋಜನೆ ಕಾರ್ಯಕ್ರಮ ಎಪಿಡಿಪಿ ಎಂದು ಏನಿದೆ ಅದರಲ್ಲಿ 39 ಕೋಟಿ ರೂಪಾಯಿ ನಮ್ಮ ಜಿಲ್ಲೆಗೆ ಬಂದು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಇದಕ್ಕೆ ಕರ್ನಾಟಕ ವಿದ್ಯುತ್ ಕಾರ್ಖಾನೆಗೆ ಏಜೆನ್ಸಿ ವಹಿಸಿದ್ದಾರೆ. ಅದು ಮಾರ್ಚ್ ಒಳಗೆ ಮುಗಿಸಬೇಕು. ಆದರೆ ಅವರು ಇನ್ನು 20-30 ಪರ್ಸೆಂಟ್ ಕೆಲಸ ಕೂಡ ಮುಗಿಸುವುದಕ್ಕೆ ಆಗಿಲ್ಲ. ಅವರ ಮೇಲೆ ಸ್ವಲ್ಪ ಪ್ರಭಾವ

ಬೀರಿ ಆದಷ್ಟು ಬೇಗ 15-20 ದಿವಸದಲ್ಲಿ ಮಾಡಿದರೆ ಒಳ್ಳೆಯದು. ಏಕೆಂದರೆ 1300 ಅಡಿಷನಲ್ ಟಿ.ಸಿ.ಗಳನ್ನು ನಮ್ಮ ಜಿಲ್ಲೆಯಲ್ಲಿ ಹಾಕಬೇಕು. ಈ ರೀತಿ ಅಡಿಷನಲ್ ಟಿ.ಸಿ. ಹಾಕುವುದರಿಂದ ಓವರ್ ಲೋಡ್ ಆಗಿರುವ ಟಿ.ಸಿ.ಗಳ ಒಂದು ಒತ್ತಡ ಕಡಿಮೆಯಾಗಿ ವಿದ್ಯುತ್ ಸರಬರಾಜು ಚೆನ್ನಾಗಿ ಆಗುತ್ತದೆ. ಆದುದರಿಂದ ಅದನ್ನು ಮಾಡಬೇಕೆಂದು ಹೇಳುತ್ತಾ, ಈ ಥೆಫ್ಟ್ ಆ್ಯಕ್ಟ್ ಏನಿದೆ ಇದು ಬಹಳ ಕಠಿಣವಾದ ಕಾನೂನಾಗಿದೆ. ನಮ್ಮ ರೈತರ ಮೇಲೆ ಇಷ್ಟೊಂದು ಕಠಿಣವಾದ ಕಾನೂನನ್ನು ಜಾರಿಗೊಳಿಸುವುದು ಸೂಕ್ತವಲ್ಲ. ಇದರಿಂದ ಸ್ವಲ್ಪ ಭಯ ಹುಟ್ಟಿದೆ. ಇವತ್ತು ಕೂಡ ಕೆ.ಪಿ.ಟಿ.ಸಿ.ಎಲ್.ನವರು ಹಳ್ಳಿಗಳಲ್ಲಿ ಜೀಪ್ ತೆಗೆದುಕೊಂಡು ಹೋಗಿ ಮೀಟರ್, ವೈರ್ ಎಲ್ಲಾ ತೆಗೆದುಕೊಂಡು ಹಾಕಿ ಸರ್ವೀಸ್ ಕೊಡುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಎರಡು ಸಣ್ಣ ಪೆಟ್ಟಿಗೆಗಳನ್ನು ಒಡೆದು ಸರ್ವೀಸ್ ತೆಗೆದುಕೊಳ್ಳುವಂತಹ ಕೆಲಸ ನಡೆಯುತ್ತಿದೆ. ಅಂಥಾದ್ದಕ್ಕೆ ಉತ್ತೇಜನ ಕೊಡದೆ ಇರುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತಿದ್ದೇನೆ. ಇನ್ನು ನಮ್ಮ ಕ್ಷೇತ್ರದಲ್ಲಿ ಥ್ರೀ ಫೇಜ್ ಕರೆಂಟ್ ಕೊಡುವುದು ಕನಸಿನ ಮಾತಾಗಿದೆ. ಎರಡು-ಮೂರು ಗಂಟೆ ಕೂಡ ಸಿಗುತ್ತಿಲ್ಲ. ಈ ರೈತರು ಏನು ಮಾಡುತ್ತಿದ್ದಾರೆ ಎಂದರೆ ಸಿಂಗಲ್ ಫೇಜ್‌ನಲ್ಲಿ ಹೆಚ್ಚಿಗೆ ವೋಲ್ಟೇಜ್ ಬರುವಂತಹ ಒಂದು ವಿಧಾನ ಕಂಡುಹಿಡಿದುಕೊಂಡು ಬಿಟ್ಟಿದ್ದಾರೆ. ಅದೇನೆಂದರೆ ಕಂಡೆನ್ಸರ್ ಅಳವಡಿಸಿಕೊಂಡು ವೋಲ್ಟೇಜ್ ತೆಗೆದುಕೊಳ್ಳುವುದು. ಏಕೆಂದರೆ ವಿಧಿಯಿಲ್ಲ ಈಗ ನಾವೇ ಏಳು ಸಾವಿರ ಬಾಳೆ ಕಂದು ಹಾಕಿದ್ದು, ಅದು ಎರಡು ತಿಂಗಳಿಂದ ಒಣಗಿ ಹೋಗುತ್ತಿದೆ. ಈಗ ಅದಕ್ಕೆ ಕಂಡೆನ್ಸರ್ ಹಾಕದೆ ನೀರು ಕೊಡುವುದಕ್ಕಾಗುವುದಿಲ್ಲ. ಅದಕ್ಕೆ ನೀವು ಕೇಸ್ ಹಾಕುವುದು, ಇನ್ನೊಂದು ಮಾಡುವುದಕ್ಕೆ ಹೋದರೆ ಹೇಗೆ? ಆದುದರಿಂದ ಸಿಂಗಲ್ ಫೇಸ್‌ನಲ್ಲಿ ಒಂದು ದಾರಿ ಕಂಡುಹಿಡಿದು ನೀರು ತೆಗೆದುಕೊಳ್ಳುವಂತಹ ವ್ಯವಸ್ಥೆ ರೈತರು ಮಾಡುತ್ತಿದ್ದಾರೆ, ಅಂಥಾದ್ದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ ಕಷ್ಟವಾಗುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ: ಅವರು ಬುದ್ಧಿವಂತರು, ಸಿಂಗಲ್ ಫೇಜ್ ಕೂಡ ಕಂಟಿನ್ಯೂಯಸ್ ಆಗಿ ಕೊಡುವುದಿಲ್ಲ. ಅದನ್ನು ಚೇಂಜ್ ಓವರ್ ಮಾಡಿ ಪಂಪ್‌ಗಳೆಲ್ಲಾ ಸುಟ್ಟು ಹೋಗಬೇಕು. ಅವರೆಲ್ಲಾ ಮುಗಿದು ಹೋಗಬೇಕು. ಅದೂ ಮಾಡುತ್ತಿದ್ದಾರೆ. ನಮ್ಮ ಕಡೆ ಅವರ್ಸ್ ಟುಗೆದರ್ ಫೇಜ್ ಚೇಂಜ್ ಮಾಡಿ ಬಿಡುತ್ತಾರೆ. ಎಲ್ಲಾ ಒಂದೇ ಸಲ ಮೋಟಾರ್ ಸುಟ್ಟು ಹೋಗುತ್ತವೆ.

ಶ್ರೀ ಎಂ.ಎಸ್.ಮಹದೇವ ಪ್ರಸಾದ್: ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಗಮನಕ್ಕೆ ತರುವುದೇನೆಂದರೆ, ಎಂಟು ಗಂಟೆ ಕರೆಂಟ್ ಕೊಡುತ್ತೇವೆಂದು ಹೇಳಿದಿರಿ, ಅದನ್ನು ರೀ-ಕನ್ಸಿಡರ್ ಮಾಡಿ ನಾಲ್ಕು ಗಂಟೆ ಎಂದು ಹೇಳಿ, ತೊಂದರೆ ಇಲ್ಲ. ಕೆ.ಪಿ.ಟಿ.ಸಿ.ಎಲ್. ಅಧ್ಯಕ್ಷರು ದಕ್ಷ ಅಧಿಕಾರಿ ಅವರ ಬಗ್ಗೆ ಗೌರವವಿದೆ. ಎಂಟು ಗಂಟೆ ಕರೆಂಟ್ ಕೊಡುತ್ತೇವೆಂದು ಹೇಳಿದ ಮೇಲೆ ಕೊಟ್ಟಿದ್ದಾರೆಂದು ರೈತರ ಭಾವನೆ ಇದೆ. ಹೀಗಾಗಿ ನಮ್ಮಲ್ಲಿ ಮೂರು ಸಬ್‌ಸ್ಟೇಷನ್‌ಗಳಲ್ಲಿ ಸೆಕ್ಷನ್ ಆಫೀಸರ್ಸ್ ಒಂದು

ತಿಂಗಳಿನಿಂದ ನಾಪತ್ತೆ. ಏಕೆಂದರೆ ಅವರು ಸಿಕ್ಕರೆ ಅವರೊಬ್ಬರೇ ಅಲ್ಲ, ಅವರ ಮನೆ ಮಂದಿಯನ್ನೆಲ್ಲಾ ಹರಾಜು ಹಾಕಿ ಕಿರುಕುಳ ಕೊಡುತ್ತಾರೆ. ಅದಕ್ಕೆ ಅವರು ಅನ್‌ಆಥರೈಸ್ಡ್ ಆಬ್ಸೆನ್ಸ್ ಆಗಿ ಇವತ್ತು ಬೇಗೂರು ಮತ್ತು ತೆರಕನಾಂಬಿಯಲ್ಲಿನ ಎರಡು ಸಬ್‌ಸ್ಟೇಷನ್‌ಗಳ ಸೆಕ್ಷನ್ ಆಫೀಸರ್‌ಗಳು 20-25 ದಿವಸದಿಂದ ಎಲ್ಲಿ ಹೋಗಿದ್ದಾರೆ ಎಂಬುದು ಗೊತ್ತಿಲ್ಲ. ನಾನು ಹೇಳುವ ಮಾತನ್ನು ಪರಿಗಣಿಸಿ ವಿಚಾರ ಮಾಡಿ. ಈ ರೀತಿಯ ಸಮಸ್ಯೆ ಇದೆ. ಆದುದರಿಂದ ಕುಡಿಯುವ ನೀರು ಹಾಗೂ ವಿದ್ಯುಚ್ಛಕ್ತಿ ಸಮಸ್ಯೆ ಇವೆರಡನ್ನು ತೆಗೆದುಕೊಂಡು ರೈತರಿಗೆ ನೆರವು ಆಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎನ್.ಯೋಗೀಶ್‌ಭಟ್(ಮಂಗಳೂರು): ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ವಿಶೇಷವಾಗಿ ಕುಡಿಯುವ ನೀರಿನ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ, ನನ್ನ ಕ್ಷೇತ್ರ ಮಂಗಳೂರು ಹಾಗೂ ವಿಶೇಷವಾಗಿ ನನ್ನ ಜಿಲ್ಲೆ ಬಗ್ಗೆ ಕೆಲವು ಸಮಸ್ಯೆಗಳನ್ನಷ್ಟೇ ತಮ್ಮ ಗಮನಕ್ಕೆ ತಂದು, ಈ ಸಮಸ್ಯೆಗಳನ್ನು ಪರಿಹರಿಸುವ ದಿಕ್ಕಿನಲ್ಲಿ ಈ ಸರ್ಕಾರ ಸ್ಪಂದಿಸಬೇಕು ಎಂದು ಹೇಳುವ ನಿಟ್ಟಿನಲ್ಲಿ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಇತ್ತೀಚೆಗೆ ಕೆಲವು ದಿವಸಗಳಿಂದ ವಿಶೇಷವಾಗಿ ಮಹಾನಗರ ಪಾಲಿಕೆ ಕ್ಷೇತ್ರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹದಗೆಟ್ಟು, ಹೋರಾಟ ಹಾಗೂ ಖಾಲಿ ಕೊಡಗಳ ಪ್ರದರ್ಶನವನ್ನು ಮಹಿಳೆಯರು ಮಹಾನಗರ ಪಾಲಿಕೆಗೆ ಬಂದು ಮಾಡುವಂತಹ ನಿಟ್ಟಿನಲ್ಲಿ ಆಗಿದ್ದು, ಈ ಹಿನ್ನೆಲೆಯಲ್ಲಿ ವಿಶೇಷವಾದಂತಹ ಗಮನವನ್ನು ಸರ್ಕಾರಕ್ಕೆ ಸೆಳೆಯುತ್ತೇನೆ. ಸಮಸ್ಯೆಯ ಗಂಭೀರತೆಯನ್ನು ನೋಡಿದಾಗ ಅದನ್ನು ಯಾವ ರೀತಿ ಪರಿಹರಿಸಬೇಕೆಂದು ಅಧ್ಯಯನ ಮಾಡಿದಾಗ, ಕಂಡುಕೊಂಡ ಅಂಶಗಳನ್ನು ತಮ್ಮ ಗಮನಕ್ಕೆ ನೀಡುವುದಕ್ಕೆ ಇಚ್ಛಿಸುತ್ತೇನೆ. ಮೊದಲನೆಯದಾಗಿ ಕುಡಿಯುವ ನೀರಿನ ಸೋರ್ಸ್ ಇರುವಂತಹ ನದಿಗಳಂತಹ ಕಡೆಯಿಂದ ಎಲ್ಲಿ ಪಂಪಿಂಗ್ ಆಗುತ್ತಿದೆ, ಅಲ್ಲಿ ಸರಿಯಾಗಿ ವಿದ್ಯುತ್ ಸರಬರಾಜು ಆಗುತ್ತಿಲ್ಲ. ನಮ್ಮಲ್ಲಿ ಗುಡ್ಡ ಹಾಗೂ ಎತ್ತರ ಪ್ರದೇಶಗಳು ಇರುವುದರಿಂದ ಮೂರ್‍ನಾಲ್ಕು ಪಾಯಿಂಟ್‌ಗಳಲ್ಲಿ ಪಂಪಿಂಗ್ ಆಗುವ ಅವಶ್ಯಕತೆ ಇದೆ. ಟ್ರೀಟ್‌ಮೆಂಟ್ ಪ್ಲಾಂಟ್‌ಗಳಲ್ಲಿ ಅದರ ನಂತರ ಬರುವ ಓವರ್ ಹೆಡ್ ಟ್ಯಾಂಕ್‌ಗಳಲ್ಲಿ ಇರುವ ಕಡೆಗಳಲ್ಲಿ ಮೂರ್‍ನಾಲ್ಕು ಪಾಯಿಂಟ್‌ಗಳಲ್ಲಿ ಪಂಪಿಂಗ್ ಆಗುವ ಅವಶ್ಯಕತೆ ಇದೆ. ಆದರೆ ಸಮಸ್ಯೆ ಏನಿದೆ ಎಂದರೆ ವಿದ್ಯುತ್ ಸರಬರಾಜು ಸರಿಯಾಗಿ ಆಗದೇ ಮೂಲ ಸೋರ್ಸ್‌ನಿಂದ ಪಂಪ್ ಆಗದೆ, 2ನೇ ಪಾಯಿಂಟ್‌ನಲ್ಲಿ ಟ್ರೀಟ್‌ಮೆಂಟ್ ಸೈಟಿನಿಂದ ಓವರ್ ಹೆಡ್ ಟ್ಯಾಂಕ್‌ಗೆ ಹೋಗುವ ಇನ್ನೊಂದು ಪ್ರದೇಶಗಳಲ್ಲಿ ಸಹಜವಾಗಿ ಏರ್‌ಲಾಸ್ ಸಮಸ್ಯೆಗಳು ಬರುತ್ತಿವೆ. ಅದರಿಂದಾಗಿ ಎರಡು ಮೂರು ದಿವಸಗಳಿಂದ ನೀರು ಸರಬರಾಜು ಆಗದೆ ಇರುವಂತಹ ಸ್ಥಿತಿ ಉದ್ಭವವಾಗುತ್ತಿದೆ. ಅದರ ಜೊತೆಯಲ್ಲಿ ವಿದ್ಯುತ್ ಉಪಕರಣಗಳ ವೈಫಲ್ಯತೆ

ಬರುವುದಿದೆ. ಆ ವೈಫಲ್ಯತೆಯಿಂದ ಟ್ರಾನ್ಸ್‌ಫಾರ್ಮರ್ ಹಾಗೂ ಸ್ಟೆಬಲೈಸರ್ ಹಾಳಾಗುವುದಿದ್ದು, ಈ ರೀತಿಯಾಗಿ ಟೆಕ್ನಿಕಲ್ ಪ್ರಾಬ್ಲಂ ಬರುವುದರ ಮೂಲಕ ಸಮಸ್ಯೆಗಳು ಉದ್ಭವವಾಗುತ್ತಿದೆ. ಈ ನಿಟ್ಟಿನಲ್ಲಿ ಕೂಡ ಸರ್ಕಾರ ಹೆಚ್ಚು ಸ್ಪಂದಿಸಬೇಕು. ಅದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಆದುದರಿಂದ ಈ ಸಂದರ್ಭದಲ್ಲಿ ಜನರೇಟರ್ ಅಳವಡಿಸಿಕೊಂಡರೆ ವಿದ್ಯುತ್ ವೈಫಲ್ಯವಾದಂತಹ ಸಂದರ್ಭದಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಎಡಿಬಿ ಸ್ಕೀಮ್ಸ್ ಬಗ್ಗೆ ಪದೇಪದೇ ಘೋಷಣೆ ಬಂದರೂ ಕೂಡ 2 ವರ್ಷದಿಂದ ಅದು ಅನುಷ್ಠಾನಕ್ಕೆ ಬಂದಿಲ್ಲ. ಕುಡಿಯುವ ನೀರಿಗೆ ಪರ್ಯಾಯ ವ್ಯವಸ್ಥೆ ಏನು ಮಾಡುತ್ತೀರಿ ಎನ್ನುವುದರ ಬಗ್ಗೆ ಕೇಳುತ್ತಾ, ಈ ಸ್ಕೀಮ್ ಅಳವಡಿಸಿಕೊಂಡಿದ್ದಿದ್ದಾರೆ ಸಾಕಷ್ಟು ಸಮಸ್ಯೆಗಳು ಬಗೆಹರಿಸಬಹುದಿತ್ತು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಕಡೆಗಳಲ್ಲಿ ಎಕ್ಸ್‌ಪ್ರೆಸ್ ಲೈನ್ ಜೋಡಣೆ, ನಿರಂತರವಾಗಿ ಶೆಡ್‌ಡೌನ್ ಆಗುವಂತಹ ಸಂದರ್ಭದಲ್ಲಿ ಸ್ವಿಚ್‌ಓವರ್ ಮಾಡಿಕೊಂಡು ಎಕ್ಸ್‌ಪ್ರೆಸ್ ಮತ್ತು ಪಂಪಿಂಗ್ ಸ್ಟೇಷನ್‌ನಲ್ಲಿ ನಿರಂತರವಾಗಿ ವಿದ್ಯುತ್ ಸರಬರಾಜು ಆಗುವಂತಹ ನಿಟ್ಟಿನಲ್ಲಿ ವಿಶೇಷವಾಗಿ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ. ಇಲ್ಲಿ ನಮ್ಮ ನಗರಾಭಿವೃದ್ಧಿ ಸಚಿವರು ಇದ್ದಾರೆ. ಇಲ್ಲಿರುವಂತಹ ಸೂಪರ್‌ವೈಸರ್ ಕೇಡರ್ ಏನಿದೆ, ಅದು ನಮ್ಮ ಮಂಗಳೂರು ನಗರಪಾಲಿಕೆಯಲ್ಲಿ ತಾವು ಹಾಕಿರುವಂತಹ ರಿಸ್ಟ್ರಿಕ್ಷನ್, ಹಾಗೂ ಬ್ಯಾನ್‌ಗಳಿಂದ ಅಲ್ಲಿ ಜ್ಯೂನಿಯರ್ ಇಂಜಿನಿಯರ್‌ಗಳು ಇಲ್ಲ, ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳು ಇಲ್ಲ. ಇವತ್ತು ಅಲ್ಲಿ ಕಾಂಟ್ರಾಕ್ಟ್ ಲೇಬರ್ಸ್‌ಗಳು ಯಾರಿದ್ದಾರೆ ಮತ್ತೆ ವಾಲ್ ಆಪರೇಟರ್‌ಗಳು ಯಾರಿದ್ದಾರೆ, ಅವರು ಇಲ್ಲಿ ರಾಜರುಗಳಾಗಿದ್ದಾರೆ. ಮತ್ತೆ ಇಲ್ಲಿ ಹೋಟಲ್‌ಗಳು, ಕೈಗಾರಿಕೆಗಳು ಎಲ್ಲಿ ಇವೆ, ಅಲ್ಲಿ ಸಾಕಷ್ಟು ನೀರು ಬರುತ್ತಿದೆ. ಆದರೆ ಗೃಹಗಳಿರುವಂತಹ ಪ್ರದೇಶಗಳಲ್ಲಿ ನೀರು ಬರುತ್ತಿಲ್ಲ. ಆದುದರಿಂದ ತಾವು ರಿಕ್ರೂಟ್‌ಮೆಂಟ್ ಮಾಡುವಂತಹ ಅವಶ್ಯಕತೆ ಇದೆಯೆಂಬ ಬೇಡಿಕೆ ಪದೇ ಪದೇ ಬಂದರೂ ಆ ಕೆಲಸವಾಗುತ್ತಿಲ್ಲ. ಇದು ನನ್ನ ಗಮನಕ್ಕೂ ಬಂದಿದೆ, ಆದಕಾರಣ ತಾವು ಇದನ್ನು ಸರಿಪಡಿಸಬೇಕೆಂಬ ಒತ್ತಾಯವನ್ನು ಮಾಡುತ್ತೇನೆ. ಇನ್ನು ಸಣ್ಣ ಸಣ್ಣ ವಿಚಾರಗಳ ಬಗ್ಗೆ ಹೇಳುವುದಾದರೆ ಅಧಿಕಾರಿಶಾಹಿಗಳ ಬಗ್ಗೆ ಎಷ್ಟು ಸಿರೀಯಸ್‌ನೆಸ್ ತೋರಿಸಿದ್ದಾರೆಂಬ ಬಗ್ಗೆ ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಎಸ್‌ಸಿ:ಎಸ್‌ಟಿಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ನಿರಂತರವಾಗಿ ನೀರು ಸರಬರಾಜು ಆಗುತ್ತಿಲ್ಲವೆಂದು ನೀರಿನ ಓವರ್‌ಹೆಡ್ ಟ್ಯಾಂಕ್ ಅನ್ನು ಕಟ್ಟಿಸಿ ನೀರನ್ನು ಪಂಪ್ ಮಾಡಿ ಇಲ್ಲಿಗೆ ನೀರು ಹೋಗಬೇಕೆಂದು ಮೂರು ಸೆಂಟ್ಸ್ ಜಾಗವನ್ನು ಎಸ್‌ಸಿ:ಎಸ್‌ಟಿಗೆ ಇರುವಂತಹ ಜಾಗದಲ್ಲಿ ಇದನ್ನು ಗುರುತಿಸಿಕೊಂಡು ಸರ್ಕಾರದ ಅನುಮತಿಗೋಸ್ಕರ ಜಿಲ್ಲಾಧಿಕಾರಿಗಳ ಕಛೇರಿಯಿಂದ ಸೆಕ್ರೆಟರಿಯೇಟ್‌ಗೆ ಹೋಗಿ 5-6 ತಿಂಗಳುಗಳಾಯಿತು ಇವತ್ತಿನವರೆಗೂ ಇದರ ಪರವಾನಗಿ ಬಂದಿಲ್ಲ. ಇಲ್ಲಿ ಕೇವಲ ಮೂರು ಸೆಂಟ್ಸ್ ಜಾಗಕ್ಕೆ ಇಷ್ಟೊಂದು ನಿರ್ಲಕ್ಷ್ಯ ತಾಳುವಂತಹ ವ್ಯವಸ್ಥೆ ಇದೆಯೆಂದರೆ, ಅದು ಕುಡಿಯುವ ನೀರಿಗೆ

ಆದ್ಯತೆ ಇದೆಯೆಂದು ಹೇಳುವಂಥಾದ್ದಕ್ಕೆ ಈ ರೀತಿಯಾಗಿದೆ ಎಂದರೆ ಇದು ನನಗೆ ಗೋಚರವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಕುಡಿಯುವ ನೀರಿಗೆ ಯಾವುದೇ ಒಂದು ಸಮಸ್ಯೆ ಬಂದಲ್ಲಿ ಅದಕ್ಕೆ ಪರವಾನಗಿ ಕೊಡುವಂತಹ ವಿಚಾರಕ್ಕೆ ತಕ್ಷಣ ಸ್ಪಂದಿಸಬೇಕೆಂಬ ವಿನಂತಿಯನ್ನು ಮಾಡುತ್ತೇನೆ. ಇನ್ನು ಮತ್ತೊಂದು ವಿಚಾರ ಕಳೆದ ಒಂದೂವರೆ ವರ್ಷಗಳ ಹಿಂದೆ ''ಪಶ್ಚಿಮವಾಹಿನಿ ಯೋಜನೆ'' ಎಂದು ಸನ್ಮಾನ್ಯ ಕುಮಾರ್ ಬಂಗಾರಪ್ಪನವರ ನೇತೃತ್ವದಲ್ಲಿ ಮೂರು ಜನ ಕರಾವಳಿ ಜಿಲ್ಲೆಯ ಶಾಸಕರುಗಳನ್ನು ಕರೆಸಿ ಸಮಾವೇಶ ನಡೆಸಲಾಗಿತ್ತು. ಆಗ ಜಿಲ್ಲೆಯ ಜನತೆಯು ಬಹಳ ಉತ್ಸುಕತೆಯಿಂದ, ಆಸಕ್ತಿಯಿಂದ ನಮ್ಮ ಸಮಸ್ಯೆಗಳು ಶಾಶ್ವತವಾಗಿ ಪರಿಹಾರವಾಗುತ್ತದೆಂಬ ನಿಟ್ಟಿನಲ್ಲಿ ಯೋಚನೆ ಮಾಡಲಾರಂಭಿಸಿದ್ದರು. ಅಲ್ಲಿ ಪಶ್ಚಿಮ ಅಭಿಮುಖವಾಗಿ ಸಮುದ್ರವನ್ನು ಸೇರುವಂತಹ ಎಲ್ಲಾ ನದಿಗಳಿಗೆ ಚೆಕ್ ಡ್ಯಾಮ್‌ಗಳನ್ನು ಹಾಕಿ ಶಾಶ್ವತವಾಗಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ನೀರಾವರಿ, ಹಾಗೂ ಮಿನಿ ಹೈಡಲ್ ಪ್ರಾಜಕ್ಟ್‌ಗಳನ್ನು ಈ ಪಶ್ಚಿಮ ವಾಹಿನಿಯ ಮೂಲಕ ಹಾಕಿ ನಮ್ಮ ಕುಡಿಯುವ ನೀರಿನ ಸಮಸ್ಯೆ ಶಾಶ್ವತವಾಗಿ ಪರಿಹಾರವಾಗುತ್ತದೆಂಬ ಯೋಚನೆ ನಮ್ಮಲ್ಲಿತ್ತು. ಆದರೆ ಕಳೆದ ಬಜೆಟ್ ಅಧಿವೇಶನದಲ್ಲಿ ಈ ಯೋಜನೆಗೆ ಒಂದು ನಯಾ ಪೈಸೆಯೂ ಇಟ್ಟಿಲ್ಲ, ನಾಳೆ ಮಂಡಿಸಲಿರುವ ಬಜೆಟ್‌ನಲ್ಲಾದರೂ ಇದಕ್ಕೆ ಹಣವನ್ನು ಇಡಲಾಗಿದೆಯೆಂದು ಘೋಷಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯವನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ನಮಗೆ ಆತಂಕವನ್ನು ತಂದಿರುವಂಥಾದ್ದು ಏನೆಂದರೆ ತಾವು ತಳೆದಿರುವಂತಹ ವಿಶೇಷ ಆಸಕ್ತಿಗೆ ನಾನು ಇದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಸಕಲೇಶಪುರದ ಕ್ಯಾಚ್‌ಮೆಂಟ್ ಏರಿಯಾ ಏನಿದೆ, ಅಲ್ಲಿಂದ ನದಿಯ ನೀರಿನ ಮೂಲವನ್ನು ತಿರುಗಿಸುವಂತಹ ನಿಟ್ಟಿನಲ್ಲಿ ವಿಶೇಷವಾದಂತಹ ಪ್ರಯತ್ನವಾಗುತ್ತಿದೆ. ಇದಕ್ಕೆ ಕಳೆದ ಬಜೆಟ್‌ನಲ್ಲೂ ಕೂಡ 5 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿತ್ತು. ಇಲ್ಲಿ ಜನರು ಆತಂಕಕ್ಕೆ ಒಳಪಟ್ಟಿದ್ದಾರೆ, ಇದು ಕಾರ್ಯರೂಪಕ್ಕೆ ಬಂದರೆ ಗತಿ ಏನು ಎಂಬ ಯೋಚನೆಯೂ ಆರಂಭವಾಗುತ್ತಿದೆ, ಈ ನಿಟ್ಟಿನಲ್ಲಿ ನಾನು ಅಧ್ಯಕ್ಷರ ಮುಖಾಂತರ ವಿನಂತಿ ಮಾಡುವುದೇನೆಂದರೆ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯ ಮೂಲಕ ಎಲ್ಲರಿಗೂ ಮಾಹಿತಿಯನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಅಲ್ಲಿಯವರೆಗೂ ಇಂತಹ ಯಾವುದೇ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಡಿ, ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಇನ್ನು ''ರಾಜೀವಗಾಂಧಿ ಕುಡಿಯುವ ನೀರಿನ ಯೋಜನೆಗೆ'' ಸಂಬಂಧಪಟ್ಟ ಹಾಗೆ ನಮ್ಮ ಜಿಲ್ಲೆಗೆ 40 ಕೋಟಿ ರೂಪಾಯಿಗಳು ಸ್ಯಾಂಕ್ಷನ್ ಆಗಿದ್ದರೂ ಕೇವಲ 11 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಕಳೆದ ಎರಡು ವರ್ಷಗಳಿಂದ ಶೇಕಡಾ 10ರಷ್ಟು ಕಟ್ಟಿದ ಸಣ್ಣ ಸಣ್ಣ ಘಟಕಗಳು ಅದು ಗ್ರಾಮೀಣ ಪ್ರದೇಶಗಳಲ್ಲಿ ಈ ಕಡೆಗಳಲ್ಲಿ ಶಾಶ್ವತವಾಗಿ ಸಮಸ್ಯೆಗಳು ಪರಿಹಾರವಾಗುತ್ತದೆಂದು ಶೇಕಡ 10ರಷ್ಟು ಕಟ್ಟಿದರೂ ಕೂಡ ಹಣ ಇವತ್ತಿನವರೆಗೂ ಬಿಡುಗಡೆಯಾಗಿಲ್ಲ. ಇಲ್ಲಿ ನನಗೆ ಆತಂಕವಾಗಿರುವಂಥಾದ್ದು ಇಲ್ಲಿ ಕಾಮಗಾರಿಯನ್ನು

ಜಿಲ್ಲಾ ಪಂಚಾಯತ್‌ನವರು ಮಾಡಬೇಕೋ ಅಥವಾ ಗ್ರಾಮ ಪಂಚಾಯತ್ ಮಾಡಬೇಕೋ ಎನ್ನುವ ವಿಶ್ಲೇಷಣೆ ಮತ್ತೆ ಇಲ್ಲಿ ಗುತ್ತಿಗೆದಾರರು ಯಾರಿರಬೇಕು, ಎನ್ನುವಂತಹ ಸಣ್ಣ ಸಣ್ಣ ವಿಷಯಗಳಲ್ಲಿ ತೊಡಕುಗಳು ಇದ್ದು ತಾಂತ್ರಿಕ ಕಾರಣದಿಂದ ಈ ರೀತಿಯಾಗಿರುವುದರಿಂದ ಸಮಸ್ಯೆಗಳು ಉದ್ಭವವಾಗಿದೆ. ಇದನ್ನು ಅನುಷ್ಠಾನಕ್ಕೆ ತಂದಿದ್ದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತಿತ್ತು ಎನ್ನುವಂತಹ ಮಾತನ್ನು ಹೇಳುತ್ತೇನೆ. ಇನ್ನು ಕೆ.ಪಿ.ಟಿ.ಸಿ.ಎಲ್. ಬಗ್ಗೆ ಒಂದೆರಡು ಮಾತುಗಳಲ್ಲಿ ಹೇಳುವುದಾದರೆ ಕಳೆದ ಎರಡು ವರ್ಷಗಳಲ್ಲಿ ಚರ್ಚೆಯಾದಂತಹ ಸಂದರ್ಭದಲ್ಲಿ ಶೇಕಡಾ 33ರಷ್ಟು ಟ್ರಾನ್ಸ್‌ಮಿಷನ್ ಲಾಸ್, ಮತ್ತೆ ಥೆಫ್ಟ್ ಆಗುತ್ತಿತ್ತು, ಎಂದು ನಮ್ಮ ಗಮನಕ್ಕೆ ಬಂದಿತ್ತು. ಈಗ ಇದು ಶೇಕಡಾ 38ರಷ್ಟು ಆಗಿದೆಯೆಂದು ಹಲವು ನೂರು ಕೋಟಿ ರೂಪಾಯಿಗಳನ್ನು ಇದರ ಅಭಿವೃದ್ಧಿಗೆ ವಿನಿಯೋಗ ಮಾಡಿದರೂ ಕೂಡ ಇವತ್ತು ಈ ಶೇಕಡಾ 38ರಷ್ಟು ಲಾಸ್ ಇರುವಂಥಾದ್ದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವಾಗ ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ, ಮತ್ತೆ ಇದನ್ನು ಕಡಿಮೆ ಮಾಡುವಂಥಾದ್ದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡಿದ್ದೀರೆಂಬುದರ ಬಗ್ಗೆ ಸ್ಪಷ್ಟವಾಗಿ ಉತ್ತರದಲ್ಲಿ ಹೇಳಬೇಕೆನ್ನುವ ಮಾತನ್ನು ಹೇಳುತ್ತೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಕೊನೆಯದಾಗಿ ನಾನು ಹೇಳುವುದೇನೆಂದರೆ ಗ್ರಾಮೀಣ ರಸ್ತೆಗಳಿಗೆ ಕೊಡುವ ಆದ್ಯತೆಗಿಂತ ಹೆಚ್ಚಿಗೆ ಕುಡಿಯುವ ನೀರಿಗೆ ಕೊಡಬೇಕೆಂದು ನಾನು ನನ್ನ ನಗರ ಪ್ರದೇಶಕ್ಕೆ, ಜಿಲ್ಲಾಪ್ರದೇಶಕ್ಕೆ ಮಾತ್ರ ಎಂದು ಹೇಳುತ್ತಿಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಆದ್ಯತೆಯ ಮೇರೆಗೆ ಅದು ಜಿಲ್ಲಾ ಪಂಚಾಯತ್ ಮೂಲಕ ಇರಬಹುದು, ಜಿಲ್ಲಾಧಿಕಾರಿಗಳ ಮೂಲಕ ಇರಬಹುದು, ಕನಿಷ್ಟಪಕ್ಷ ಒಂದು ತಿಂಗಳು ಅಥವಾ 15 ದಿವಸಗಳಲ್ಲಿ ಈ ಕುಡಿಯುವ ನೀರಿನ ಸಮಸ್ಯೆಗೆ ಅದು ಬೋರ್‌ವೆಲ್ ಮೂಲಕ ಇರಬಹುದು, ಇನ್ನಿತರ ವಿಧಾನಗಳ ಮೂಲಕ ಇರಬಹುದು. ಇದನ್ನು ತಾತ್ಕಾಲಿಕವಾಗಿಯಾದರೂ ವಿಶೇಷವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ, ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

\+ ಶ್ರೀ ಕೆ.ಬಿ.ಮಲ್ಲಿಕಾರ್ಜುನ(ಬೀರೂರು): ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ರಾಜ್ಯಕ್ಕೆ ಈ ವರ್ಷ ವಿಚಿತ್ರವಾದಂತಹ ಬರಗಾಲ ಇದೆ. ಪ್ರತಿವರ್ಷ ಬರಗಾಲವನ್ನು ಎದುರಿಸುತ್ತಿರುವಂತಹ ಸಂದರ್ಭದಲ್ಲಿ ಒಂದೊಂದು ವಿಷಯಕ್ಕೆ ಬರಗಾಲವನ್ನು ಎದುರಿಸುತ್ತಿದ್ದೆವು. ಆದರೆ ಈ ಬಾರಿ ನೀರಿನ ಬರ, ಅದರಲ್ಲೂ ವಿಶೇಷವಾಗಿ ವಿದ್ಯುಚ್ಛಕ್ತಿಯ ಬರ ಬಂದಿದೆ, ಜನರಿಗೆ ಕೂಲಿ ಸಿಗದೇ ಕೂಲಿಯ ಬರ ಬಂದಿದೆ, ದನಗಳಿಗೆ ಮೇವು ಸಿಗದೇ ಮೇವಿನ ಬರ ಬಂದಿದೆ, ಇದಕ್ಕೆಲ್ಲಾ ಮುಕುಟವಿಟ್ಟಂತೆ ಸರ್ಕಾರಕ್ಕೂ ಬರ ಬಂದಿದೆ. ಇಂತಹ ಸ್ಥಿತಿಯಲ್ಲಿ ನಾವು ಬರಗಾಲವನ್ನು

ಎದುರಿಸಬೇಕೆಂಬುದನ್ನು ನೋಡುತ್ತಿದ್ದೇವೆ. ನಾನು ಇಲ್ಲಿ ಮಾತನಾಡಿದಂತಹ ಎಲ್ಲರ ಮಾತಿಗೂ ಒತ್ತು ಕೊಡುತ್ತಾ, ಮಾನ್ಯ ಮುಖ್ಯಮಂತ್ರಿಯವರು ನಿನ್ನೆ ಮಾತನಾಡುತ್ತಾ ಒಂದು ಆದೇಶವನ್ನು ಓದಿದರು. ಈ ಮಾತನ್ನು ಸರ್ಕಾರ ಹೇಳಬಹುದೆಂಬ ದೃಷ್ಟಿಯಿಂದ ನಾನು ಜಿಲ್ಲಾ ಪರಿಷತ್ತಿನಿಂದ ಒಂದು ದಾಖಲೆಯನ್ನು ತಂದಿದ್ದೇನೆ. ನಾನೂ ಸಹ ಊಹೆ ಮಾಡಿದ್ದೆ, ಈ ರೀತಿಯಾಗಿಯೇ ಹೇಳಬಹುದು, ಇವರಿಗೆ ಹಣಕ್ಕೆ ತೊಂದರೆಯಿಲ್ಲ. ನೀವು ಏನು ಬೇಕಾದರೂ ಮಾಡಿ ಎಂದು ಹೇಳಬಹುದೆಂಬ ದೃಷ್ಟಿಯಿಂದ ಹೇಳಿದ್ದರು. ನಾನು ದಿನಾಂಕ 13.3.02 ರಂದು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಯವರಿಗೆ ಪತ್ರ ಬರೆದೆ, ಅವರಿಗೆ ಅತಿ ತುರ್ತಾಗಿ ಕುಡಿಯುವ ನೀರಿನ ಕಾರ್ಯಕ್ಕೆ ಎಷ್ಟು ಹಣವಿದೆ ಎಂದು ಕೇಳಿದೆ, ಮತ್ತೆ ಈ ಹಣವನ್ನು ಖರ್ಚು ಮಾಡಲು ಇರುವ ಷರತ್ತುಗಳು ಏನು ಎಂದು ಕೇಳಿದೆ. ಆದಕ್ಕೆ ಅವರು ಒಂದೇ ಸಾಲಿನಲ್ಲಿ ಈ ಬಗ್ಗೆ ಜಿಲ್ಲಾಧಿಕಾರಿಗಳು ಗಮನಹರಿಸುತ್ತಾರೆಂದು ಬರೆದಿದ್ದಾರೆ, ಅಂದರೆ ಅವರಿಗೆ ಜವಬ್ದಾರಿ ಇಲ್ಲ. ಇನ್ನು ಎರಡನೆಯದಾಗಿ ಜಿಲ್ಲೆಗೆ ಈ ಬೇಸಿಗೆಯಲ್ಲಿ ಕುಡಿಯುವ ನೀರನ್ನು ಒದಗಿಸಲು ಎಷ್ಟು ಹಣ ಬೇಕೆಂದು ಕೇಳಿದರೆ ದಿನಾಂಕ 16.2.02ರಂದು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಹಾಗೂ ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಯವರಲ್ಲಿಗೆ ಒಂದು ಡೆಲಿಗೇಷನ್ ಬಂದು ನಮಗೆ 259 ಲಕ್ಷ ರೂಪಾಯಿಗಳು ಕೊಟ್ಟರೆ ನಾವು ಈ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು, ಎಂದು ನನಗೆ ಉತ್ತರವನ್ನು ಕೊಟ್ಟಿದ್ದಾರೆ. ತಾವು ಆ್ಯಕ್ಷನ್ ಪ್ಲಾನ್ ಇರುವಂತಹ ಕೆಲಸಗಳನ್ನು ಮುಂದುವರೆಸುವುದಕ್ಕೆ ನಮಗೆ ಏನು ತೊಂದರೆ ಇಲ್ಲವೆಂದು ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದರು. ನಾವು ಎಲ್ಲಾ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದರು. ಅದಕ್ಕೆ ಇವರು ಜಿಲ್ಲೆಯಲ್ಲಿ ಈಗ ಹಾಲಿ ಇರುವಂತಹ ಕುಡಿಯುವ ನೀರಿನ ಯೋಜನೆಗಳನ್ನು ಮುಗಿಸಲು ಎಷ್ಟು ಹಣ ಬೇಕು? ಚಿಕ್ಕಮಗಳೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳಿಗೆ ಪ್ರಗತಿಯಲ್ಲಿರುವ ಯೋಜನೆಗಳನ್ನು ಮಾರ್ಚ್ 2002ರೊಳಗೆ ಪೂರ್ಣಗೊಳಿಸುವುದಕ್ಕಾಗಿ ಬೇಕಾಗುವ ಅನುದಾನವನ್ನು ಗ್ರಾಮವಾರು ಮತ್ತು ಯೋಜನವಾರು ತಯಾರಿಸಿ ರಾಜ್ಯವಲಯದಲ್ಲಿ 300 ಲಕ್ಷ ರೂಪಾಯಿಗಳು, ಮತ್ತು ಕೇಂದ್ರ ವಲಯದಲ್ಲಿ 300 ಲಕ್ಷ ರೂಪಾಯಿಗಳು ಬೇಕೆನ್ನುವ ಮಾತನ್ನು ಹೇಳಿದ್ದಾರೆ. ಯಾವ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಆದೇಶವನ್ನು ಸಿ.ಓ.ಗಳು ಪಾಲನೆ ಮಾಡುತ್ತಾರೆ ಎನ್ನುವಂತಹ ಪ್ರಶ್ನೆಗೆ ಸರ್ಕಾರದಿಂದ ಉತ್ತರವನ್ನು ಬಯಸುತ್ತೇನೆ. ಇಲ್ಲಿ ಹಣವೇ ಇಲ್ಲ, ಇಂತಹ ಸಂದರ್ಭದಲ್ಲಿ ಇವರು ಒಂದು ಆದೇಶವನ್ನು ಕಳುಹಿಸುತ್ತಾರೆ. ನೀವು ಬೋರ್‌ವೆಲ್‌ಗಳನ್ನು ಕೊರೆಸಿ, ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿ ಎಂದು ಹೇಳುತ್ತಾರೆ, ಇಲ್ಲಿ ಸಿ.ಇ.ಓ.ಗಳು ಎಲ್ಲಿಂದ ಹಣವನ್ನು ತಂದು ಈ ಕೆಲಸವನ್ನು ನಿರ್ವಹಿಸುತ್ತಾರೆ? ಇದಕ್ಕೆ ನಾನು ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ಎರಡನೆಯದಾಗಿ ಸರ್ಕಾರ ಹಣವನ್ನು ದಿನಾಂಕ 2.3.02ರಂದು ಸರ್ಕಾರದ ಆದೇಶದ

ಮೇರೆಗೆ 100ಲಕ್ಷ ರೂಪಾಯಿಗಳನ್ನು ಪ್ರಕೃತಿ ವಿಕೋಪ ನಿಧಿಯಿಂದ ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದಾರೆ. ಅಲ್ಲಿ ಒಂದು ಷರತ್ತು ಹೇಳಿದ್ದಾರೆ, ಕುಡಿಯುವ ನೀರಿಗಾಗಿ ಇದರಲ್ಲಿ ಚಿಕ್ಕಮಗಳೂರಿನ ಜಿಲ್ಲೆಗೆ 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ, ಜಿಲ್ಲಾಧಿಕಾರಿಗಳು ಆದ್ಯತೆಯ ಮೇರೆಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳತಕ್ಕದ್ದು, ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಕಾಮಗಾರಿಗಳನ್ನು ಕೈಗೊಳ್ಳುವಾಗ ಯಾವುದೇ ಹೊಸ ಕೊಳವೆ ಬಾವಿಗಳನ್ನು ಕೊರೆಯ ತಕ್ಕದ್ದಲ್ಲವೆಂದು ಹೇಳಿದ್ದಾರೆ. ಇಲ್ಲಿ ಸರ್ಕಾರ ಹೇಳಬೇಕು, ನಾವು ಎಲ್ಲಿಂದ ಜನರಿಗೆ ನೀರು ತಂದು ಕೊಡಬೇಕು? ನೀವು ಕೊಳವೆ ಬಾವಿಗಳನ್ನು ಕೊರೆಯಬಾರದೆಂದು ಹೇಳಿದ್ದೀರಿ, ಇರುವ ಕೊಳವೆ ಬಾವಿಗಳು ಬತ್ತಿ ಹೋಗಿವೆ, ನಾವು ಎಲ್ಲಿಂದ ಜನರಿಗೆ ನೀರು ತಂದು ಕೊಡಬೇಕೆಂಬುದಕ್ಕೆ ಸರ್ಕಾರ ಉತ್ತರ ಹೇಳಬೇಕು.

6.50 ಪಿಎಂ

ಒಂದು ರೂಪಾಯಿಯೂ ಎಲ್ಲಿಯೂ ಸಿಗುತ್ತಿಲ್ಲ. ಹೀಗಿರುವಾಗ ನಾವು ಈ ಆದೇಶವನ್ನು ಯಾವ ರೀತಿ ಪಾಲನೆ ಮಾಡಬೇಕು ಎನ್ನುವುದನ್ನು ಹೇಳಬೇಕಾಗುತ್ತದೆ. 259 ಲಕ್ಷ ರೂಪಾಯಿ ಬೇಕು ಎಂದು ಹೇಳಿರತಕ್ಕಂಥ ಜಿಲ್ಲೆಗೆ 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ನೀವು ಕಾಮಗಾರಿಯನ್ನು ಮುಂದುವರೆಸಿ, ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಎಂದರೆ ಯಾವ ರೀತಿ ಮಾಡುವುದಕ್ಕಾಗುತ್ತದೆ? ಆದ್ದರಿಂದ, ಏನೋ ಒಂದು ಆದೇಶ ಕೊಟ್ಟಿದ್ದೇವೆ, ಆ ಆದೇಶದ ಪ್ರಕಾರ ನಡೆದುಕೊಳ್ಳಿ ಎಂದು ಹೇಳುವುದು ತಪ್ಪಾಗುತ್ತದೆ. ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎಂದು ಹೇಳಬೇಕು. ಈ ರೀತಿಯ ಬರ ಬರುತ್ತದೆ ಎಂದು ನಮಗೆ ನವೆಂಬರ್, ಡಿಸೆಂಬರ್ ತಿಂಗಳಲ್ಲೇ ಗೊತ್ತಿತ್ತು. ಈ ಬರವನ್ನು ನಾವು ಎದುರಿಸಲೇಬೇಕು ಎಂದು ಸರ್ಕಾರ ಯೋಚನೆ ಮಾಡಬೇಕಾಗಿತ್ತು. ಕೂಲಿಯನ್ನಾದರೂ ಮಾಡಿ ಎಂದು ಒಂದಷ್ಟು ಹಣ ಬಿಡುಗಡೆ ಮಾಡಿದರು. ಈಗ ಅದನ್ನೂ ನಿಲ್ಲಿಸಿದ್ದಾರೆ. ಇವತ್ತು ಎಲ್ಲಿಯೂ ಕೂಲಿ ಕೆಲಸ ಸಿಗುತ್ತಿಲ್ಲ. ಜನ ಎಲ್ಲಿಂದ ಎಲ್ಲಿಗೆ ಗುಳೇ ಹೋದರೂ, ಕಡೆಗೆ ಬೆಂಗಳೂರಿಗೆ ಬಂದರೂ ಕೂಲಿ ಕೆಲಸ ಸಿಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಅದಕ್ಕೆ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಆದರೆ ಬರವನ್ನು ನಾವು ನಿರ್ವಹಣೆ ಮಾಡುತ್ತೇವೆ, ಅದಕ್ಕೆ ಹಣದ ತೊಂದರೆಯಿಲ್ಲ ಎಂದು ಸರ್ಕಾರದವರು ಹೇಳುತ್ತಾರೆ. ಬೋರ್‌ವೆಲ್‌ಗಳಲ್ಲೂ ನೀರು ಇಲ್ಲ. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಬೆಳವಾಡಿ ಎನ್ನುವ ಗ್ರಾಮದಲ್ಲಿ ಕಳೆದ 15 ದಿವಸಗಳಲ್ಲಿ 16 ಬೋರ್‌ವೆಲ್‌ಗಳು ಡ್ರೈ ಆಗಿವೆ. ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಸಬೇಡಿ ಎಂದು ಹೇಳುತ್ತಾರೆ. ಆದರೂ ಸಹ ನಿನ್ನೆ 400 ಅಡಿ ಕೊರೆಸಿದರೂ ಒಂದು ಹನಿ ನೀರಿಲ್ಲ. ಏನಾದರೂ ಮಾಡಿ ಕೆರೆಯಲ್ಲಿರತಕ್ಕಂಥ ನೀರನ್ನು ಕೊಡಿ ಎಂದು ಇಂಜಿನಿಯರುಗಳಿಗೆ ಫೋನ್ ಮಾಡಿದರೆ, ಅವರು ನಮ್ಮಲ್ಲಿ ಒಂದು ರೂಪಾಯಿಯೂ ಇಲ್ಲ, ನೀವೇನೂ ಕೇಳಬೇಡಿ, ನೀವು ಸರ್ಕಾರದಿಂದ ಹಣ

ಕೊಡಿಸಿದರೆ ನಾವು ಮಾಡುತ್ತೇವೆ ಎಂದು ಹೇಳುತ್ತಾರೆ. ಆದ್ದರಿಂದ ನೀರಿಗೆ ಏನು ಮಾಡಬೇಕು ಎನ್ನುವುದನ್ನು ಹೇಳಬೇಕಾಗುತ್ತದೆ. ಈ ಸರ್ಕಾರದಲ್ಲಿ ಪ್ರಾಕ್ಟಿಕಲ್ ಆಗಿ ಯೋಚನೆ ಮಾಡುವಂಥಾದ್ದೇ ಇಲ್ಲ. ಒಂದು ಆದೇಶ ಹೊರಡಿಸಿದ ತಕ್ಷಣ ನಮ್ಮ ಕೆಲಸವಾಯಿತು, ಅದನ್ನು ಜಿಲ್ಲಾ ಪಂಚಾಯಿತಿಯವರು ನೋಡಿಕೊಳ್ಳುತ್ತಾರೆ ಎನ್ನುವ ಭಾವನೆ ಸರ್ಕಾರಕ್ಕಿದ್ದರೆ, ಸರ್ಕಾರದವರು ದಯಮಾಡಿ ಈ ಸದನವನ್ನು ಜೂನ್‌ವರೆಗೆ ನಡೆಸಬೇಕಾಗುತ್ತದೆ. ಏಕೆಂದರೆ, ಆ ಸಮಯದಲ್ಲಿ ನಾವು ಊರಿಗೆ ಹೋಗದ ಹಾಗೆ ಇಲ್ಲೇ ಇರಬಹುದು. ಇಲ್ಲಿ ನಮಗೆ ಚರ್ಚೆ ಅಥವಾ ಬೇರೆಯದರ ಅವಶ್ಯಕತೆ ಇಲ್ಲ. ಅದನ್ನು ಆಮೇಲೆ ನೋಡೋಣ. ನಾವು ಊರಿಗೆ ಹೋಗದ ಹಾಗೆ ಇರಬೇಕು ಎಂದರೆ ಅಧಿವೇಶನ ಇರಬೇಕು. ಅಧಿವೇಶನ ಇದ್ದದ್ದರಿಂದ ನಾವು ಬೆಂಗಳೂರಿನಲ್ಲಿ ಇದ್ದೆವು ಎಂದು ನಮ್ಮ ಕ್ಷೇತ್ರದ ಜನಗಳಿಗೆ ಹೇಳಬಹುದು. ಅದನ್ನು ಬಿಟ್ಟು ನಮ್ಮನ್ನು ಊರಿಗೆ ಕಳುಹಿಸುವುದಾದರೆ ಅಧ್ಯಕ್ಷರು ದಯಮಾಡಿ ನಮಗೆ ರಕ್ಷಣೆ ಕೊಟ್ಟು ಊರಿಗೆ ಕಳುಹಿಸಬೇಕು. ಏಕೆಂದರೆ ನಾವು ಊರಿಗೆ ಹೋದರೆ ನಮಗೆ ಪೆಟ್ಟು ಬೀಳುತ್ತದೆ. ನನ್ನ ಸ್ನೇಹಿತರಾದ ಅಜ್ಜಂಪುರದ ಶಾಸಕರಿಗೆ ಈಗಾಗಲೇ ಪೆಟ್ಟುಬಿದ್ದಿದೆ. ಈ ಪರಿಸ್ಥಿತಿ ಬಂದಿದೆ. ಇದಕ್ಕಾಗಿ, ಸರ್ಕಾರ ಸ್ಪಷ್ಟವಾಗಿರತಕ್ಕಂಥ ನಿಲುವನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಆ್ಯಕ್ಷನ್ ಪ್ಲಾನ್ ಮಾಡಿಕೊಂಡು ಬನ್ನಿ ಎಂದು ಕಾನೂನು ಹೇಳತಕ್ಕಂತಾದ್ದು, 20 ಲಕ್ಷ ರೂ. 50 ಲಕ್ಷ ರೂ. ಬಿಡುಗಡೆ ಮಾಡುವುದು ಬೇಡ. ಶಾಸಕರಾದ ನಾವು ಡೆಪ್ಯುಟಿ ಕಮೀಷನರ್‌ರವರ ಕಛೇರಿಗೆ 20-30 ಸಲ ಅಲೆದಿದ್ದೇವೆ. ಬೆಳವಾಡಿಯಲ್ಲಿ ನೀರು ಇಲ್ಲ, ಕೈ ಮುಗಿಯುತ್ತೇವೆ, ಎರಡು ಬೋರ್‌ವೆಲ್ಲನ್ನಾದರೂ ತೆಗೆದು ನೀರು ಕೊಡಿ ಎಂದರೆ ಆಗುವುದಿಲ್ಲ, ಆ್ಯಕ್ಷನ್ ಪ್ಲಾನ್ ಬರಲಿ, ರಿಪೋರ್ಟ್ ಬರಲಿ ಎಂದು ಹೇಳುತ್ತಾರೆ. ಎಷ್ಟಾದರೂ ಡ್ರ್ಯಾಗ್ ಮಾಡಿ ಎಂದು ನಮಗೆ ಮೌಖಿಕ ಆದೇಶ ಇದೆ, ಹಾಗಾಗಿ ನಾವು ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ, ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಅಧಿಕಾರಿಗಳು ಹೇಳಿದರು. ಇದು ಇರತಕ್ಕಂಥ ಪರಿಸ್ಥಿತಿ. ನಮ್ಮ ಜಿಲ್ಲೆಯ ಕಡೂರು ಮತ್ತು ತರೀಕೆರೆ ತಾಲ್ಲೂಕಿಗೆ 10-10 ಲಕ್ಷ ರೂ. ಬಿಡುಗಡೆ ಮಾಡಿದ್ದಾರೆ. ನಮ್ಮ ಕೈಯ್ಯಲ್ಲಿ ಏನೂ ಮಾಡಲು ಆಗದೇ ಇರುವಂಥ ಸ್ಥಿತಿ ಇದೆ. ಆದರೆ ಮಾನ್ಯ ಸಗೀರ್ ಅಹಮದ್‌ರವರು ಒಂದು ಬುದ್ಧಿವಂತಿಕೆ ಮಾಡಿದರು. ಏನೆಂದರೆ, ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ರಿವ್ಯೂಗೆ ಬಂದಿದ್ದರು. ರಿವ್ಯೂಗೆ ಬಂದಂಥ ಸಂದರ್ಭದಲ್ಲಿ, ಬಹಳ ಮಳೆ ಬಂದು ರಸ್ತೆಗಳು ಹಾಳಾಗಿ ಹೋಗಿವೆ, ಅದರ ದುರಸ್ತಿಗಾಗಿ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿ ಅದನ್ನು ಬಿಡುಗಡೆ ಮಾಡಿದ್ದರು. ಈ ರೀತಿಯ ಬರ ಬರಬಹುದು ಎಂದು ಸಗೀರ್ ಅಹಮದ್‌ರವರಿಗೆ ತಿಳಿದಿತ್ತೆಂದು ತೋರುತ್ತದೆ. ಮಳೆ ಹಾನಿಯಿಂದ ಆಗಿರತಕ್ಕಂಥ ರಸ್ತೆಗಳು, ಚರಂಡಿಗಳು ಮತ್ತು ಸೇತುವೆಗಳ ದುರಸ್ತಿಗೆಂದು ಕೊಟ್ಟಿರತಕ್ಕ ಹಣದಲ್ಲಿ 25 ಲಕ್ಷ ರೂಪಾಯಿಗಳನ್ನು 6 ತಿಂಗಳಿಂದ ಹಾಗೇ ಇಟ್ಟಿದ್ದರು. ಇತ್ತೀಚೆಗೆ ಅದನ್ನು ಕುಡಿಯುವ ನೀರಿಗಾಗಿ ಉಪಯೋಗ ಮಾಡಿಕೊಂಡರು. ಈ ವಿಷಯದಲ್ಲಿ ನಾನು

ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಚಿಕ್ಕಮಗಳೂರು ತಾಲ್ಲೂಕಿಗೆ ಮಾತ್ರ ಸೀಮಿತವಾಗಿ ಈ ಕೆಲಸವನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾವು ಯಾವ ರೀತಿ ಕೆಲಸ ನಿರ್ವಹಣೆ ಮಾಡಬೇಕು ಎನ್ನುವುದನ್ನು ಸರ್ಕಾರ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ತಾವು ನಮ್ಮ ರಕ್ಷಣೆಗೆ ಬಂದು ಸದನವನ್ನು ಜೂನ್‌ವರೆಗೆ ಅಥವಾ ಮಳೆ ಬರುವವರೆಗೆ ನಡೆಸಿ. ನಾವು ನೆಮ್ಮದಿಯಾಗಿ ಶಾಸಕರ ಭವನಕ್ಕೂ ಇಲ್ಲಿಗೂ ಅಡ್ಡಾಡಿಕೊಂಡು ಇರುತ್ತೇವೆ. ಶನಿವಾರ ಮತ್ತು ಭಾನುವಾರಗಳಂದು ಸಹ ಸದನ ನಡೆಸಿದರೆ ಇನ್ನೂ ಉತ್ತಮವಾಗಿರುತ್ತದೆ.

ಅಧ್ಯಕ್ಷರು: ಮಲೆನಾಡಿನಲ್ಲಿ ಮೇ 15ಕ್ಕೇ ಮಳೆ ಬರುತ್ತದೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಅಲ್ಲಿಯವರೆಗೂ ನಡೆಸಿ. ಶನಿವಾರ, ಭಾನುವಾರಗಳೂ ನಡೆಸಿ. ನಾವು ಇಲ್ಲಿ ಆರಾಮವಾಗಿರಬಹುದು, ಇಲ್ಲದಿದ್ದರೆ ನಾವು ಊರಿಗೆ ಹೋಗಲು ಆಗುವುದಿಲ್ಲ ಎನ್ನುವುದನ್ನು ಹೇಳುತ್ತೇನೆ. ಇದೇ ರೀತಿ ನೀವು ಮಾಡಬೇಕು, ಯಾವ ಕಾನೂನನ್ನೂ ನೀವು ನೋಡಬೇಡಿ, ಎಂದು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಬೇಕು. ನೀರಿಲ್ಲ ಎಂದು ಜಿಲ್ಲಾಧಿಕಾರಿಗಳಿಗೆ ಗೊತ್ತಾದ ತಕ್ಷಣ, ಬೋರ್‌ವೆಲ್‌ಗಳನ್ನು ಕೊರೆಸಿ ನೀರು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಅದಕ್ಕೆ ಸರ್ಕಾರ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಇನ್ನು ಇದರ ಬಗ್ಗೆ ನಾನು ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡಲು ಹೋಗುವುದಿಲ್ಲ.

ಇನ್ನು ಕೆ.ಪಿ.ಟಿ.ಸಿ.ಎಲ್. ಬಗ್ಗೆ ಹೇಳುವುದಾದರೆ, ಪ್ರತಿಯೊಂದು ಸಂದರ್ಭದಲ್ಲೂ ಸಹ ಕೆ.ಪಿ.ಟಿ.ಸಿ.ಎಲ್. ಬಗ್ಗೆ ಪ್ರೊಟೆಸ್ಟ್ ಮಾಡುತ್ತಿದ್ದಾರೆ. ಏಕೆ ಮಾಡುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಮೊನ್ನೆ ಅಜ್ಜಂಪುರದಲ್ಲಿ ಒಂದು ಘಟನೆ ನಡೆಯಿತು. ಶಿವರಾತ್ರಿಗೂ ಹಿಂದೆ ಅಲ್ಲಿ ಐದು ದಿವಸ ಕರೆಂಟ್ ಇರಲಿಲ್ಲ. ಅಲ್ಲಿರತಕ್ಕಂಥ ಜನಗಳು ಏನು ಪಾಪ ಮಾಡಿದ್ದರು. ಏಕೋ ಆ ಕ್ಷೇತ್ರದ ಶಾಸಕರು ಇಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡುತ್ತಿಲ್ಲ. ನಿರಂತರವಾಗಿ ಐದು ದಿವಸಗಳ ಕಾಲ ಕರೆಂಟ್ ಇರಲಿಲ್ಲ. ಪ್ರತಿದಿವಸ ಕೆ.ಪಿ.ಟಿ.ಸಿ.ಎಲ್. ಕಛೇರಿಗೆ ಹೋಗಿ ಕರೆಂಟ್ ಕೊಡಿ ಎಂದು ಕೇಳಿದ್ದಾರೆ. ಅವರು ಕೊಟ್ಟಿಲ್ಲ. ಶಿವರಾತ್ರಿಯ ದಿವಸವೂ ಹೋಗಿ ಕೇಳಿದ್ದಾರೆ. ಮರುದಿನ ಬೆಳಿಗ್ಗೆ ಕೆ.ಪಿ.ಟಿ.ಸಿ.ಎಲ್.ನ ಅಧ್ಯಕ್ಷರು ಎಲ್ಲಾ ಪತ್ರಿಕೆಗಳಲ್ಲೂ ಒಂದು ಹೇಳಿಕೆ ಕೊಡುತ್ತಾರೆ. 8 ಗಂಟೆಗಳ ಕಾಲ ನಿರಂತರವಾಗಿ ತ್ರೀ ಫೇಸ್ ಕರೆಂಟ್ ಕೊಡುತ್ತೇವೆ, 10 ಗಂಟೆಗಳ ಕಾಲ ಟೂ ಫೇಸ್ ಕರೆಂಟ್ ಕೊಡುತ್ತೇವೆ, ಇದರ ಬಗ್ಗೆ ಯಾವುದೇ ಅನುಮಾನ ಬೇಡ ಎಂದು ಹೇಳಿಕೆ ಕೊಡುತ್ತಾರೆ. ಜನಗಳು ಅದನ್ನು ಓದಿದರು. ಕೆ.ಪಿ.ಟಿ.ಸಿ.ಎಲ್.ನ ಅಧ್ಯಕ್ಷರಾದ ಬಳಿಗಾರ್ ಮತ್ತು ಎಸ್.ಎಂ.ಕೃಷ್ಣಾರವರ ಸರ್ಕಾರದವರು ಕರೆಂಟನ್ನು ಕಳುಹಿಸುತ್ತಿದ್ದಾರೆ, ಇಲ್ಲಿರತಕ್ಕಂಥ ಎ.ಇ.ಇ. ನಮಗೆ ಮೋಸ ಮಾಡುತ್ತಿದ್ದಾನೆ ಎಂದು ಭಾವಿಸಿದ ಜನರು ಬಂದು ಕಛೇರಿಗೆ

ನುಗ್ಗಿದರು. ಅವತ್ತು ಸಂತೆ ಬೇರೆ ಇತ್ತು. ಪೋಲೀಸ್ ಜೀಪ್‌ಗಳನ್ನೆಲ್ಲಾ ಒಡೆದು ಹಾಕಿದರು. ಈ ಘಟನೆಯಲ್ಲಿ ಪೋಲೀಸ್ ಜೀಪ್ ಹಾಳಾಯಿತು, ಪೋಲೀಸಿನವರಿಗೂ ಕೆಲವು ಪೆಟ್ಟುಗಳು ಬಿದ್ದವು, ಎ.ಇ.ಇ.ಗೂ ಪೆಟ್ಟು ಬಿತ್ತು, ಎ.ಇ.ಇ.ನ ಮನೆಯವರನ್ನೂ ಸಹ ಎಳೆದಾಡುವ ಮಟ್ಟಕ್ಕೆ ಹೋದರು. ಆಗ ಅಲ್ಲಿಗೆ ಬಂದ ಡೆಪ್ಯುಟಿ ಕಮೀಷನರ್‌ರವರು ಮತ್ತು ಎಸ್.ಪಿ.ಯವರು ಜನರನ್ನು ಸಮಾಧಾನ ಮಾಡಿ ರಾತ್ರಿ 12 ಗಂಟೆಗೆ ವಾಪಸ್ಸು ಹೋದರು. ವಾಪಸ್ಸು ಹೋದಂಥ ಇವರು, ಅಜ್ಜಂಪುರ ಮತ್ತು ಶಿವನಿ ಹೋಬಳಿಯಲ್ಲಿ ಇರತಕ್ಕಂಥ ಮುಖಂಡರುಗಳನ್ನು ಅರೆಸ್ಟ್ ಮಾಡಿ, ಒಳಗೆ ಹಾಕಿ ಎಂದು ಚಿಕ್ಕಮಗಳೂರಿನಿಂದ ಮೆಸೇಜ್ ಕೊಡುತ್ತಾರೆ. ಸುಮಾರು ನಾಲ್ಕು ಗಂಟೆಯೊಳಗೆ ಅಲ್ಲಿನ 38 ಜನರನ್ನು ಅರೆಸ್ಟ್ ಮಾಡಿ ಕಡೂರಿನ ಸಬ್‌ಜೈಲಿಗೆ ಕರೆತಂದು, ಅವರಲ್ಲಿ 36 ಜನರನ್ನು ದನಕ್ಕೆ ಹೊಡೆಯುವ ಹಾಗೆ ಹೊಡೆದಿದ್ದಾರೆ. ಯಾವ ಕ್ರಿಮಿನಲ್ಸ್‌ಗೂ ಹೊಡೆಯದ ರೀತಿಯಲ್ಲಿ 36 ಜನರಿಗೆ ಹೊಡೆದಿದ್ದಾರೆ. ತಾಲ್ಲೂಕು ಪಂಚಾಯಿತಿ ಸದಸ್ಯರ ಪತಿ ಎಂದು ಒಬ್ಬರನ್ನು ಮತ್ತು ಹಾರ್ಟ್ ಪೇಷೆಂಟ್ ಎಂದು ಇನ್ನೊಬ್ಬರನ್ನು, ಇವರಿಬ್ಬರನ್ನು ಬಿಟ್ಟು ಉಳಿದ 36 ಜನರನ್ನು ಹೊಡೆದು, ಕೋರ್ಟಿಗೆ ಪ್ರೊಡ್ಯೂಸ್ ಮಾಡಿ, ಚಿಕ್ಕಮಗಳೂರು ಮತ್ತು ತರೀಕೆರೆ ಇವೆರಡೂ ಜೈಲಿನಲ್ಲಿ ಜಾಗ ಖಾಲಿ ಇಲ್ಲವಾದ ಕಾರಣ ಬಳ್ಳಾರಿ ಜೈಲಿಗೆ ಇವರನ್ನು ಕಳುಹಿಸಬೇಕು ಎಂದು ಆದೇಶ ಹೊರಡಿಸುತ್ತಾರೆ. ಈ ರೀತಿಯಾಗಿ ಕೋರ್ಟಿಗೆ ಮನವಿ ಮಾಡಿಕೊಳ್ಳುತ್ತಾರೆ. ಅವರು ಏನು ಪಾಪ ಮಾಡಿದ್ದರು? ಪೋಲೀಸ್ ಜೀಪ್ ಸುಟ್ಟಂಥವರು ತಪ್ಪಿಸಿಕೊಂಡಿದ್ದಾರೆ, ಕೆ.ಪಿ.ಟಿ.ಸಿ.ಎಲ್. ಕಛೇರಿಯನ್ನು ಹಾಳು ಮಾಡಿದಂಥವರು ತಪ್ಪಿಸಿಕೊಂಡಿದ್ದಾರೆ, ಪಾಪದವರಾದ ಕೆಲಸದವರು, ನಮಗೆ ಐದು ದಿವಸಗಳಿಂದ ಕರೆಂಟ್ ಇಲ್ಲ, ಕನಿಷ್ಟ ಶಿವರಾತ್ರಿಯಂದು ಸ್ನಾನ ಮಾಡಲಾದರೂ ನೀರು ತೆಗೆದುಕೊಳ್ಳಲು ಕರೆಂಟ್ ಕೊಡಿ ಎಂದು ಕೇಳಿದಂಥ ರೈತರನ್ನು ಶಿವರಾತ್ರಿಯ ದಿವಸ ರಾತ್ರಿ ಕರೆದುಕೊಂಡು ಹೋಗಿ, ಹೊಡೆದು ಬಳ್ಳಾರಿ ಜೈಲಿಗೆ ಕಳುಹಿಸಿದರು. ಇದು ಸರ್ಕಾರ ನಡೆಸತಕ್ಕಂಥ ಕ್ರಮವೇ ಎಂದು ನಾನು ಕೇಳುತ್ತೇನೆ. ಕೆ.ಪಿ.ಟಿ.ಸಿ.ಎಲ್.ನವರಿಂದ ಎಲ್ಲಿ ತಪ್ಪಾಯಿತು,. ಸ್ಟೇಟ್‌ಮೆಂಟ್ ಏಕೆ ಕೊಟ್ಟರು ಎನ್ನುವುದನ್ನು ಹೇಳಬೇಕಾಗುತ್ತದೆ. ಎ.ಇ.ಇ.ರವರು ಸಹಿ ಮಾಡಿರುವ ದಾಖಲೆಯೊಂದನ್ನು ತಂದಿದ್ದೇನೆ. 4 ಗಂಟೆಗಳ ಕಾಲ ತ್ರೀ ಫೇಸ್ ಕರೆಂಟ್, ಆರೂವರೆ ಗಂಟೆಗಳ ಕಾಲ ಸಿಂಗಲ್ ಫೇಸ್ ಕರೆಂಟನ್ನು ಕೊಡುತ್ತೇವೆ, ಉಳಿದ ಹದಿಮೂರೂವರೆ ಗಂಟೆಗಳ ಕಾಲ ಕರೆಂಟ್ ಕೊಡುವುದಿಲ್ಲ. ಎಂದು ರೈಟಿಂಗ್‌ನಲ್ಲಿ ಎ.ಇ.ಇ.ಯವರು ಕೊಟ್ಟಿರುವ ದಾಖಲೆ ಇದೆ. ಬೆಂಗಳೂರು ಮತ್ತು ಶಿವಮೊಗ್ಗದಲ್ಲಿ ಶಟ್‌ಡೌನ್ ಮಾಡುವುದು ಕಳೆದರೆ ಸಿಗುವಂಥಾದ್ದು ಒಂದು ಗಂಟೆ ತ್ರೀ ಫೇಸ್ ಕರೆಂಟ್ ಮಾತ್ರ. ಆದರೆ ಸರ್ಕಾರದ ಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳು 8 ಗಂಟೆಗಳ ಕಾಲ ಕರೆಂಟ್ ಕೊಡುತ್ತೇವೆ ಎಂದು ಸ್ಟೇಟ್‌ಮೆಂಟ್ ಕೊಡುತ್ತಾರೆ. ಆಗ ಜನಗಳಿಗೆ ತಪ್ಪು ಮಾಹಿತಿ ಹೋಗುತ್ತದೆ. ಆದ್ದರಿಂದ ದಯಮಾಡಿ ಈ ಅಜ್ಜಂಪುರ ಘಟನೆಯಲ್ಲಿ ಒಳಗೆ ಹಾಕಿರುವ ಪಾಪದವರನ್ನೆಲ್ಲಾ ಬಿಡಿಸಬೇಕಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಈ 38 ಜನ ರೈತರನ್ನು ಒಳಗೆ ಹಾಕಿರುವ ವಿಷಯದಲ್ಲಿ ನಾವು ಸುಮ್ಮನಿದ್ದರೆ ಮುಂದೆ ರೈತರನ್ನೆಲ್ಲಾ ಒಳಗೆ ಹಾಕುತ್ತಾರೆ. ನಾವೆಲ್ಲರೂ ಒಳಗೆ ಹೋಗಿ ಬಿಡೋಣ. ಇದರ ಬಗ್ಗೆ ಬಹಳ ದೀರ್ಘ ಚರ್ಚೆ ಮಾಡಬೇಕಾಗುತ್ತದೆ. ಇದನ್ನು ಸುಮ್ಮನೆ ಬಿಡಲಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಅಧಿಕಾರಿಯೇ ತಪ್ಪು ಮಾಡಿದ್ದಾನೆ, ಅಲ್ಲಿಗೆ ಕರೆಂಟೇ ಹೋಗಲಿಲ್ಲ ಎಂದು ಇಟ್ಟುಕೊಳ್ಳೋಣ. ಆಗ ಹೋಗಿ ಸುಟ್ಟುಬಿಡಿ, ಹೊಡೆದುಬಿಡಿ, ಕೊಂದು ಬಿಡಿ ಎಂದು ಜನರಿಗೆ ಹೇಳಿಬಿಡೋಣವೇ? ಸ್ಥಳೀಯ ಅಧಿಕಾರಿಗಳಿಂದ ತಪ್ಪಾಗಿದ್ದರೂ ಕೂಡ, ಅವರನ್ನು ಶಿಕ್ಷಿಸತಕ್ಕಂಥ ವಿಧಾನಗಳ್ಯಾವುವು ಎಂಬುದನ್ನು ನಾವು ನೀವು ಒಪ್ಪಿಕೊಂಡಿರತಕ್ಕಂಥ ಒಂದು ವ್ಯವಸ್ಥೆಯಲ್ಲಿದ್ದೇವೆ.

ಶ್ರೀ ಎಸ್.ಎಸ್.ಪಾಟೀಲ್: ನಾವು ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತೇವೆ. ಆದರೆ ನಿರಪರಾಧಿಗಳನ್ನು ಒಳಗೆ ಹಾಕಿದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ: ಅದರ ಬಗ್ಗೆ ಚರ್ಚೆ ಮಾಡೋಣ. ನಿರಪರಾಧಿಗಳನ್ನು ಒಳಗೆ ಹಾಕಿದ್ದಾರೆ, ಏಕೆ ಅದನ್ನು ಮಾಡಿದ್ದಾರೆ ಎನ್ನುವುದನ್ನು ತನಿಖೆ ಮಾಡತಕ್ಕಂಥ ಸಂದರ್ಭದಲ್ಲಿ ತೀರ್ಮಾನ ಮಾಡೋಣ. ಆದರೆ ಎಷ್ಟೇ ಸಿಟ್ಟು ಬಂದರೂ ಕೂಡ, ಸಿಟ್ಟನ್ನು ತೀರಿಸತಕ್ಕಂಥ ವಿಧಾನ ಯಾವುದು ಎನ್ನುವುದನ್ನು ನಾವೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಸ್ಥಿತಿಯನ್ನು, ರೂಪವನ್ನು ತಂದುಕೊಟ್ಟಿದ್ದೇವೆ. ಅದನ್ನು ಬಿಟ್ಟು ಹೋದರೆ ನಾವು ಎಲ್ಲಿಗೆ ಹೋಗುತ್ತೇವೆ ಎಂಬುದನ್ನು ಯೋಚನೆ ಮಾಡಿ.

ಶ್ರೀ ಎಸ್.ಎಸ್.ಪಾಟೀಲ್: ಮನುಷ್ಯ ಹೊಟ್ಟೆಗಿಲ್ಲದಂಥ ಹೊತ್ತಿಗೆ ಏನಾದರೂ ಮಾಡುತ್ತಾನೆ. ಆದರೆ ಅದನ್ನು ಮಾಡಬೇಕೆಂದು ನಾವು ಹೇಳುವುದಿಲ್ಲ. ಆದರೆ ತಪ್ಪು ಮಾಡಿದವನು ತಪ್ಪಿಸಿಕೊಳ್ಳುತ್ತಾನೆ. ಅಲ್ಲಿ ನಿರಾಪರಾಧಿಗಳನ್ನು ಜೈಲಿಗೆ ಹಾಕಿದ್ದಾರೆ. ನಮಗೂ ಸುದ್ದಿ ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಈ ದೇಶದಲ್ಲಿ ಹೊಟ್ಟೆಗೆ ಹಿಟ್ಟು ಇಲ್ಲವೆಂದು ಯಾರೂ ಅಂಥ ದೊಡ್ಡ ಕ್ರಾಂತಿಯನ್ನು ಮಾಡಲಿಲ್ಲ. ಉದ್ಯೋಗ ಇಲ್ಲವೆಂದು ಈ ದೇಶದಲ್ಲಿ ಕ್ರಾಂತಿ ಮಾಡಲಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ಘಟನೆ ಬಗ್ಗೆ ತಾವು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರದಿಂದ ಅವರು ಉತ್ತರ ಕೊಡಬೇಕಾಗುತ್ತದೆ. ಅದರಲ್ಲೂ ಕೂಡ ಕಾಂಗ್ರೆಸ್ ದಳ ಪಾರ್ಟಿ ಎಂದು ನೋಡಿದ್ದಾರೆ. ಇದೂ ಕೂಡ ಅಲ್ಲಿ ನಡೆದಿದೆ. ಗಲಾಟೆ ಮಾಡಿದವರನ್ನು ಬಿಟ್ಟು ಇನ್ನು ಯಾರನ್ನೋ ಜೈಲಿಗೆ ಹಾಕಿದ್ದಾರೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಅಲ್ಲಿ ಒಬ್ಬ ಅಧಿಕಾರಿಯ ಪತ್ನಿ ಏನು ಮಾಡಿದ್ದರು?

ಶ್ರೀ ಎಸ್.ಎಸ್.ಪಾಟೀಲ್: ಗಲಾಟೆ ಮಾಡಿದವರನ್ನು ಒಳಕ್ಕೆ ಹಾಕಿ. ನಾವು ಬೇಡ ಎಂದು ಹೇಳುವುದಿಲ್ಲ. ನಿರಾಪರಾಧಿಯನ್ನು ಒಳಗೆ ಹಾಕಿದರೆ ನಾವು ಅದನ್ನು ಒಪ್ಪುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಜನ ಸೇರಿದಲ್ಲಿ ಸಿಟ್ಟು ಬರುತ್ತದೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಅದನ್ನು ಹೇಗೆ ಸಮಾಧಾನ ಪಡಿಸಬೇಕು ಎನ್ನುವುದರ ಬಗ್ಗೆ ಸಂಯಮವನ್ನು ವ್ಯಕ್ತಪಡಿಸಬೇಕು.

ಶ್ರೀ ಎಸ್.ಎಸ್.ಪಾಟೀಲ್: ಅಲ್ಲಿ ನಿರಾಪರಾಧಿಗಳನ್ನು ಜೈಲಿಗೆ ಹಾಕಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಇವಾಗ ಇಲ್ಲಿ ಬೋಧನೆ ಮಾಡತಕ್ಕಂಥ ಜನ ಇವರು ಏನು ಮಾಡಬೇಕಿತ್ತೆಂದರೆ ಪವಿತ್ರವಾದಂಥ ಬಜೆಟ್ ಭಾಷಣ ಮಾಡತಕ್ಕಂಥ ಸನ್ನಿವೇಶದಲ್ಲಿ 22 ಗಂಟೆ ಕರೆಂಟ್ ಕೊಡುತ್ತೇವೆಂದು [XX] ಭಾಷಣ ಮಾಡಬಾರದಾಗಿತ್ತು. ಅಲ್ಲಿ ಕರೆಂಟ್ ಕೊಡಲಿಕ್ಕೆ ಆಗುತ್ತಿರಲಿಲ್ಲ ಎಂದಿದ್ದರೆ ಜನ ಬೇರೆ ಏನಾದರೂ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ನೀವು ಇಲ್ಲಿ ಕರೆಂಟ್ ಕೊಡುತ್ತೇವೆಂದು ಭಾಷಣ ಮಾಡುತ್ತೀರಿ. ಇನ್ನೊಂದು ಕಡೆ ಈ ತರಹ ನೀವು ಹೇಳುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಇದು ಒಂದು ಭಾಷೆಯನ್ನು ಬಳಸತಕ್ಕಂಥ ವಿಧಾನ ಅಲ್ಲ. ಬೊಗಳೆ ಯಾರು ಹೊಡೆಯುತ್ತಾರೆ?

MR.SPEAKER: That is not a decent word.

ಶ್ರೀ ಕಾಗೋಡು ತಿಮ್ಮಪ್ಪ: ಗಂಭೀರವಾಗಿ ಮಾತನಾಡುವುದಕ್ಕೆ ಕಲಿಯಬೇಕು. ಯಾರು ಬೊಗಳೆ ಹೊಡೆಯುತ್ತಾರೆ?

(ಗೊಂದಲ)

MR.SPEAKER: In a Parliamentary System, you have got good words to use.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ನಾಲಿಗೆ ಇದೆಯೆಂದು ನಾಲಿಗೆ ಎಳೆದು ಯಾವಾಗಲೂ ಮಾತನಾಡಬಾರದು.

[XX] ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕಿಂತ ಜೋರಾಗಿ ಮಾತನಾಡುವುದಕ್ಕೆ ನಮಗೂ ಸಹ ಬರುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ಇವರು ಈಗ ಇಲ್ಲಿ ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆ. ಇವರಿಗೆಲ್ಲಾ ನಾಚಿಕೆ ಆಗಬೇಕು.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ನಿಮಗೆ ನಾಚಿಕೆಯಾಗಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಯಾರಿಗೆ ಆಚೆ ಹಾಕಬೇಕು?

ಶ್ರೀ ಕಾಗೋಡು ತಿಮ್ಮಪ್ಪ: ಯಾರಿಗೆ ಎಂದರೆ ನಿಮಗೆ?

ಶ್ರೀ ಪಿ.ಜಿ.ಆರ್.ಸಿಂಧ್ಯ: ನನಗೆ ಆಚೆ ಹಾಕಬೇಕಾ?

ಶ್ರೀ ಕಾಗೋಡು ತಿಮ್ಮಪ್ಪ: ನಿಮಗೆ ನಾಚಿಗೆ ಆಗಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಆಚೆಗೆ ಹಾಕಿ ನೋಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, [XXX] ಆ ಪದವನ್ನು ಕಡತದಿಂದ ತೆಗೆದು ಹಾಕಬೇಕು.

ಅಧ್ಯಕ್ಷರು: ತೆಗೆಯುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನನ್ನನ್ನು ಆಚೆಗೆ ಹಾಕಿಸಲಿ, ನೋಡುತ್ತೇನೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮಗೂ ಮಾತನಾಡುವುದಕ್ಕೆ ಬರುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನನಗೂ ಬರುತ್ತದೆ. ಆಚೆ ಹಾಕಿಸುತ್ತೇನೆಂದು ಏನು ಹೇಳುವುದು? ಯಾರು ಇವರು ಆಚೆ ಹಾಕಿಸುವುದಕ್ಕೆ ನನಗೆ?

ಅಧ್ಯಕ್ಷರು: ಸೀನಿಯರ್ ಪೀಪಲ್ ಆಗಿ ಹೀಗೆ ಮಾತನಾಡಿದರೆ ಹೇಗೆ?

[XXX] ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದವನ್ನು ಕಡತದಿಂದ ಕೈಬಿಡಲಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಯಾರು ಇವರು ಆಚೆ ಹಾಕಿಸುವುದಕ್ಕೆ ನನಗೆ? ಆಚೆ ಹಾಕಿಸಲಿ, ನೋಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಾನು ಹೇಳಿದ್ದು ನಾಚಿಕೆಯಾಗಬೇಕು ಎಂದು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ XXX ಎನ್ನುವ ಆ ಪದವನ್ನು ಕಡತದಿಂದ ತೆಗೆಯುವುದಕ್ಕೆ ಹೇಳಿ.

ಅಧ್ಯಕ್ಷರು: XXX ಆ ವರ್ಡ್‌ನ್ನು ಕಡತದಿಂದ ತೆಗೆದು ಹಾಕಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಳೆ ತರುವುದಕ್ಕೆ, ಬೆಳೆ ತರುವುದಕ್ಕೆ ಇವರು ಏನು ದೇವರಾ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಇವರೇನು ದೇವರಾ? ಆಚೆ ಹಾಕಿಸುತ್ತೇನೆಂದು ಇವರೇನು ಹೇಳುವುದು?

ಶ್ರೀ ಜಗದೀಶ್ ಶೆಟ್ಟರ್: 12 ತಾಸು ವಿದ್ಯುತ್ ಕೊಡುತ್ತೇವೆಂದು ಬಜೆಟ್ ಭಾಷಣದಲ್ಲಿ ಹೇಳಿದರು. ಹಾಗಾದರೆ ಕೊಡುತ್ತೀರಾ? ಕೊಡುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಕೊಡುವುದಕ್ಕೆ ಆಗುವುದಿಲ್ಲವೆಂದರೆ ಏಕೆ ಹೇಳಬೇಕು? ಕೊನೆಯ ಪಕ್ಷ ಪ್ರಯತ್ನವನ್ನಾದರೂ ಮಾಡಿದ್ದೀರಾ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ನೀವು ಹೇಳಿದ್ದನ್ನು ನಾವು ಕೇಳಿದ್ದೇವೆ. ನಾವು ಹೇಳಿದ್ದನ್ನು ನಿಮ್ಮಿಂದ ಕೇಳುವುದಕ್ಕೆ ಆಗುವುದಿಲ್ಲವೇ?

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಹೀಗೆ ಎಲ್ಲರೂ ಒಟ್ಟಿಗೆ ಮಾತನಾಡಿದರೆ ಸದನ ಹೇಗೆ ನಡೆಸುವುದು? ಹೀಗೆ ಗಲಾಟೆ ಮಾಡಿದರೆ ಸಭೆಯನ್ನು ಮುಂದಕ್ಕೆ ಹಾಕಬೇಕಾಗುತ್ತದೆ.

XXX ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದವನ್ನು ಕಡತದಿಂದ ಕೈಬಿಡಲಾಗಿದೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ಆಚೆ ಹಾಕಲಿಕ್ಕೆ ನಾನು ಅಪರಾಧ ಏನು ಮಾಡಿದ್ದೇನೆ?

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಈಗ ಏನು ಅಪರಾಧ ಮಾಡಿದ್ದೇನೆಂದು ಹೇಳಿ, ಮತ್ತೊಂದು ಸಲ ನಾನು ರಿಪೀಟ್ ಮಾಡುತ್ತಿದ್ದೇನೆ. ಅಂದರೆ ಸತ್ವ ಇಲ್ಲದೇ ಇರತಕ್ಕಂಥ ಭಾಷಣ ಎಂದು.....

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಅದೇ ಭಾಷಣವನ್ನು ಮುಂದುವರಿಸಿದರೆ.....

MR.SPEAKER: That word has already been removed.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ಈಗ ಮಾನ್ಯ ಹಿಂಡಸಗೇರಿಯವರು ಸಿಂಧ್ಯಾರವರ ಭಾಷಣದ ಬಗ್ಗೆ ಆ ಪದವನ್ನು ಉಪಯೋಗಿಸಲಿ. I am not worried or bothered

MR.SPEAKER: It is not a good word in the Parliamentary system. When you have got good words to be used..........

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಅಜ್ಜಂಪುರದ ಘಟನೆ ನಡೆಯಬೇಕಾದರೆ ಸರ್ಕಾರವೇ ಕಾರಣ. ಸರ್ಕಾರ ಕರ್ನಾಟಕದ ಜನತೆಗೆ ಸುಳ್ಳು ಹೇಳಿದೆ. ಕರೆಂಟನ್ನು ಕೊಡುತ್ತೇವೆ ಎನ್ನುವಂಥ ಭರವಸೆಯನ್ನು ಕೊಟ್ಟಿದ್ದರಿಂದ ರೈತರು ಅವಲಂಬಿಸಿಕೊಂಡಿದ್ದರು. ಇಲ್ಲಿ ಎರಡು ಗಂಟೆ ಏರ್ ಕಂಡಿಷನ್ ರೂಂನಲ್ಲಿ ಮಲಗಿರತಕ್ಕಂಥ ನನ್ನಂಥ ಜನಗಳಿಗೆ ಕರೆಂಟ್ ಹೊರಟು ಹೋಯಿತೆಂದರೆ ಜನರೇಟರ್ ಇಟ್ಟುಕೊಳ್ಳುತ್ತೇವೆ. ಹಳ್ಳಿಯ ಜನ ಏನು ಕೇಳುವುದು ಎಂದರೆ ಕುಡಿಯುವುದಕ್ಕೆ ನೀರು ನಡೆಯುವುದಕ್ಕೆ ದಾರಿ. ಐದು ದಿವಸ ಕುಡಿಯುವುದಕ್ಕೆ ನೀರು, ಕರೆಂಟ್ ಕೊಡುವುದಿಲ್ಲವೆಂದು ಹೇಳಿದರೆ, ಅವರು ಹೋಗಿ ಪ್ರೊಟೆಸ್ಟ್ ಮಾಡಿದರೆ, ಅಧಿಕಾರ ಇದೆಯೆಂದು ಅಮಾಯಕರಾದಂಥ ಜನಗಳ ಮೇಲೆ ಪೋಲೀಸರನ್ನು ಬಿಟ್ಟು ಹೊಡೆಸಿ ಎಲ್ಲಾ ರೀತಿಯ ತೊಂದರೆ ಕೊಟ್ಟಿದ್ದೀರಿ. ಆಲ್‌ರೈಟ್. ನಾನು ಮಾನ್ಯ ತಿಮ್ಮಪ್ಪನವರು ಹೇಳಿದ್ದನ್ನು ಒಪ್ಪುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಲ್ಲಿ ಅಧಿಕಾರಿಯ ಪತ್ನಿಯನ್ನು, ಮಕ್ಕಳನ್ನು ಹಾಗೂ ಹೆಣ್ಣು ಮಕ್ಕಳನ್ನು ಎಳೆದಾಡುವಾಗ ನೀವು ಎಲ್ಲಿದ್ದಿರಿ?

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಎಲ್ಲಿ ಹೋಗಿದ್ದೆ ಎಂದು ಕೇಳಿದರೆ ಅದು ನನ್ನ ಜವಾಬ್ದಾರಿ ಅಲ್ಲ. ನಾನು ಹೋಂ ಮಿನಿಸ್ಟರ್ ಅಲ್ಲ. ನಾನು ಎಂ.ಎಲ್.ಎ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಎಂದರೆ ನೀವಲ್ಲ, ಬೋಧನೆ ಕೊಡುವವರಿಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು: ನೀವೇ ಮಾತನಾಡುತ್ತೀರಾ, ಅಥವಾ ಶ್ರೀ ಮಲ್ಲಿಕಾರ್ಜುನ್ ಅವರಿಗೆ ಮಾತನಾಡುವುದಕ್ಕೆ ಬಿಡ್ತೀರಾ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಒಂದ್ನಿಮಿಷ ಅಧ್ಯಕ್ಷರೆ, ನಾನು ಮತ್ತು ಶ್ರೀ ಎಸ್.ಎಸ್.ಪಾಟೀಲರು ಬಸವಣ್ಣನ ವಚನ ಹೇಳುತ್ತೇವೆಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು. ನನಗೆ ಆಚೆ ಹಾಕಬೇಕಂತೆ? ಏಕೆ ಆಚೆ ಹಾಕಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಆಚೆ ಹಾಕುತ್ತೇವೆಂದು ಯಾರು ಹೇಳಿದ್ದಾರೆ? ಆಚೆ ಹಾಕಿ ಎಂದು ಹೇಳಿಲಿಲ್ಲ. ಬೇಕಾದರೆ ರೆಕಾರ್ಡ್ ತೆಗೆಯಿರಿ.

(ಗೊಂದಲ)

ಅಧ್ಯಕ್ಷರು: ಆಚೆ ಹಾಕಬೇಕೆಂದು ಹೇಳಿಲ್ಲ. ಅವರು ಹೇಳಿದ್ದು ನಾಚಿಕೆ ಆಗಬೇಕು ಎಂದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಏಕೆ ನಾಚಿಕೆ ಆಗಬೇಕು?

ಅಧ್ಯಕ್ಷರು: ನಾಚಿಕೆ ಆಗಬೇಕು ಎಂದು ಹೇಳಿದ್ದನ್ನು ನೀವು ಆಚೆಗೆ ಹಾಕಬೇಕೆಂದು ಹೇಳಿದ್ದಾರೆಂದು ಮಿಸ್ಟೇಕ್ ಮಾಡಿಕೊಂಡಿದ್ದೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾಚಿಕೆ ಏಕೆ ಆಗಬೇಕು? ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಿ. ಆ ಮೇಲೆ ನೀವು ಹೊರಗೆ ಒಬ್ಬರಿಗೊಬ್ಬರು ಚರ್ಚೆ ಮಾಡಿಕೊಳ್ಳಿ.

(ಗೊಂದಲ)

MR.SPEAKER: Mr.Mallikarjun, don't yield to others.

ಶ್ರೀ ಮಲ್ಲಿಕಾರ್ಜುನ ಖರ್ಗೆ: ದಯವಿಟ್ಟು ಮಲ್ಲಿಕಾರ್ಜುನ್ ಅವರು ಕೇಳಬೇಕು. ನೀವು ಬಹಳ ಶಾಂತ ರೀತಿಯಿಂದ ಮಾತನಾಡುತ್ತಿದ್ದಿರಿ ನಾವು ಅದೇ ರೀತಿಯಾಗಿ ಕೇಳುತ್ತಿದ್ದೆವು. ನೀವು ಅನೇಕ ಚುಚ್ಚು ಮಾತುಗಳನ್ನು ಹೇಳಿದಿರಿ, ನಾನೂ ಕೂಡ ಏನೂ ಹೇಳುವುದಕ್ಕೆ ಹೋಗಿಲ್ಲ. ನಿಮ್ಮ ಏರಿಯಾಕ್ಕೆ ಸುಮಾರು 45 ಲಕ್ಷ ರೂ. ಒಂದು ಸಲ ಮತ್ತು 20 ಲಕ್ಷ ರೂ. ಇನ್ನೊಂದು ಸಲ ಅಂದರೆ 65 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, ಎಲ್ಲವನ್ನೂ ಕೂಡ ನಾನು ಹೇಳುವುದಕ್ಕೆ ಹೋಗಿಲ್ಲ. ಆದರೆ ನೀವು ಏನೋ ಇದು ಆಗಬೇಕು, ನಾಚಿಕೆ ಆಗಬೇಕು ಎಂದು ಹೇಳಿದಿರಿ. ನೀವು ಅನೇಕ ಚುಚ್ಚು ಮಾತುಗಳನ್ನು ಆಡಿದರೂ ನಾವು ಏನೂ ಒಂದು ಶಬ್ಧವನ್ನು ಕೂಡ ಹೇಳಲಿಲ್ಲ. ಆದರೆ ಯಾವಾಗ ನೀವು, ನಿಮ್ಮ ಬಜೆಟ್ ಇದು ಒಂದು ಬೊಗಳೆ ಭಾಷಣ ಇಂಥವೆಲ್ಲಾ ಮಾತುಗಳು ಎಂದರೆ ಪ್ರಚೋದನೆ ಮಾಡತಕ್ಕಂಥ ಮಾತುಗಳನ್ನು ಆಡಿದರೆ ನಾವೂ ಕೂಡ ಇಲ್ಲಿ ಟಾಲರೇಟ್ ಮಾಡುವುದಕ್ಕಾಗುತ್ತದೆಯೇ ನಾವು ಕೂಡ ಹೇಳಬೇಕಾಗುತ್ತದೆ...

ಶ್ರೀ ಪಿ.ಜಿ.ಆರ್.ಸಿಂಧ್ಯ: ಇಲ್ಲಿ ''ಬೊಗಳೆ'' ಎನ್ನತಕ್ಕಂಥ ಶಬ್ಧ ಸಂಸದೀಯ ಪದ ಅಲ್ಲ ಎಂದು ತೀರ್ಮಾನ ಕೊಟ್ಟಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ.

MR.SPEAKER: It is not in good taste.

ಶ್ರೀ ಪಿ.ಜಿ.ಆರ್.ಸಿಂಧ್ಯ: ಬೊಗಳೆ ಎಂದು ಹೇಳಿದರೆ ಅದರಲ್ಲಿ ತಪ್ಪೇನಿದೆ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಅನೇಕ ಸಂದರ್ಭಗಳಲ್ಲಿ ಅನೇಕ ಆಶ್ವಾಸನೆಗಳು ಬರುತ್ತವೆ. ಅದರ ಹಿನ್ನೆಲೆ ಏನು? ಯಾವ ರೀತಿಯಾಗಿ ತೊಂದರೆಗಳು ಇವೆ? ಅದನ್ನು ನಾವು ಎಕ್ಸ್‌ಪ್ಲೈನ್ ಮಾಡುತ್ತೇವೆ. ಅದಕ್ಕಿಂತ ಮುಂಚೆ ನೀವು ಇಲ್ಲಿ ಈ ರೀತಿ ಹೇಳಿದಿರಿ. ನೀವು ಹೇಳಿದ್ದನ್ನೆಲ್ಲಾ ತಾಳ್ಮೆಯಿಂದ ಕೇಳಿಕೊಂಡು ಮುಂಜಾನೆಯಿಂದ ಕುಳಿತಿದ್ದೇವೆ. ನಾವು ಸಮಯ ಬಂದಾಗ ಹೇಳೋಣ ಎಂದಿದ್ದೆವು. ನೀವು ಅದಕ್ಕಿಂತ ಮುಂಚೆ ಟೀಕೆಟಿಪ್ಪಣಿ ಮಾಡಿಕೊಳ್ಳುತ್ತಾ ಹೋದರೆ, ನಾವು ಏನು ಮಾಡುವುದು? ಟೀಕೆಟಿಪ್ಪಣಿ ಮಾಡುವುದನ್ನು ಒಂದು ಪದ್ಧತಿಯಲ್ಲಿ ಮಾಡಿದರೆ ಟಾಲರೇಟ್ ಮಾಡಬಹುದು. ಆದರೆ ಅನಾವಶ್ಯಕವಾಗಿ ಯಾವುದೋ ಒಂದು ವಿಷಯವನ್ನು ತಂದು ಹೇಳತಕ್ಕಂಥದ್ದು ಸರಿಯಲ್ಲ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಈಗ ನಾಚಿಕೆ ನಮಗೇ ಆಗುತ್ತದೆ. ನಾವೇ ನಾಚಿಕೆ ಪಡುತ್ತೇವೆ...

ಅಧ್ಯಕ್ಷರು: ಪುನಃ ಏಕೆ ಆ ವಿಷಯವನ್ನು ಪ್ರಸ್ತಾಪ ಮಾಡುತ್ತೀರಿ? ಅದು ಈಗ

ನಿಂತಿದೆ. ಪುನಃ ಅದನ್ನು ಪ್ರಸ್ತಾಪ ಮಾಡಿದರೆ ಮತ್ತೆ ಎಲ್ಲೋ ಚರ್ಚೆ ಹೋಗುತ್ತದೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೆ, ಇಷ್ಟು ದೊಡ್ಡ ಘಟನೆ ನಡೆದಿದೆ. ಸರ್ಕಾರದ ವತಿಯಿಂದ ಯಾರಾದರೂ ಒಬ್ಬರು ಅಲ್ಲಿಗೆ ಹೋಗಿದ್ದಾರೆಯೇ? ನಮಗೆ ನಾಚಿಕೆ ಆಗಬೇಕಲ್ಲವೇ? ನಾಚಿಕೆಪಡುತ್ತೇವೆ. ನಮ್ಮ ಜಿಲ್ಲೆಗೆ ಮೂರು ಜನ ಸಚಿವರು ಇದ್ದಾರೆ. ಒಬ್ಬರಿಗಾದರೂ ಮಾತಿನ ಒಂದು ಸಮಧಾನ ಹೇಳಿದ್ದಾರೆಯೇ? ನಾನು ನಾಚಿಕೆ ಪಡಬೇಕಾ ಅಥವಾ ಯಾರು ನಾಚಿಕೆ ಪಡಬೇಕು, ದಯವಿಟ್ಟು ಹೇಳಿ ಮಾನ್ಯ ಅಧ್ಯಕ್ಷರೆ. ಇವತ್ತು ಇಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಲಿ. ಶಿವರಾತ್ರಿ ದಿವಸ ಹೋಗಿ ನೀರು ಕೊಡಿ, ಶಿವನ ತಲೆ ಮೇಲೆ ನೀರು ಹಾಕುವುದಕ್ಕೆ ನೀರು ಕೊಡಿ, ಕುಡಿಯುವ ನೀರು ಕೊಡಿ ಎಂದು ಕೇಳಿದಾಗ, ಕೊಡದೇ ಹೋದಾಗ ಗಲಾಟೆ ಮಾಡಿದ್ದಾರೆ. 3 ಗಂಟೆಗೆ ಎಲ್ಲರನ್ನೂ ಅರೆಸ್ಟ್ ಮಾಡಿ ಜೈಲಿಗೆ ಹಾಕಬೇಕಾಗಿತ್ತು. 12 ಗಂಟೆಗೆ ವಾಪಸ್ಸು ಬಂದು ಕುಳಿತುಕೊಂಡು ವೈರ್‌ಲೆಸ್‌ನಲ್ಲಿ ಹೇಳಿ ಪಾಪಿ ಪರದೇಶಿಗಳನ್ನೆಲ್ಲಾ ಅರೆಸ್ಟ್‌ಮಾಡಿದ್ದೀರಲ್ಲಾ, ಜೈಲಿಗೆ ಹಾಕಲಿ, ಇವತ್ತೂ ಸಹ ನಾವು ಸರ್ಕಾರದ ಜೊತೆಗೆ ಸಹಕಾರ ನೀಡುತ್ತೇವೆ. ಯಾರ್‍ಯಾರು ಕೆ.ಪಿ.ಟಿ.ಸಿ.ಎಲ್.ನ ದಾಖಲೆಗಳನ್ನು ಸುಟ್ಟಿದ್ದಾರೋ ಅವರನ್ನು ಜೈಲಿಗೆ ಹಾಕಿ. ಯಾರು ಜೀಪ್‌ನ್ನು ಸುಟ್ಟಿದ್ದಾರೆ ಅವರನ್ನು ಜೈಲಿಗೆ ಹಾಕಲಿ. ಎಸ್.ಐ. ಅವರ ಮೇಲೆ ಕೈಹಾಕಿದವರನ್ನು ಜೈಲಿಗೆ ಹಾಕಲಿ. ಆದರೆ ಅದನ್ನು ಬಿಟ್ಟು ರಾತ್ರಿ 3 ಗಂಟೆಯಲ್ಲಿ ವೋಟರ್ ಲಿಸ್ಟ್ ಹಿಡಿದುಕೊಂಡು ಪಟ್ಟಿ ಮಾಡಿ ಮುಖಂಡರುಗಳನ್ನು ಅರೆಸ್ಟ್ ಮಾಡಿದ್ದಾರಲ್ಲಾ ಇದು ಸರಿಯೇ? ಸದನದ ಒಬ್ಬ ಗೌರವಾನ್ವಿತ ಸದಸ್ಯರ ನೆಂಟರನ್ನು ಅರೆಸ್ಟ್ ಮಾಡಿದ್ದಾರೆ. ಇವತ್ತು ನಮ್ಮ ವಿರುದ್ಧವಾಗಿ ಕೂಗಿದರಲ್ಲಾ, ಕೇಳಿ ಆ ಸದಸ್ಯರನ್ನು. ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೋ ಅವರೆಲ್ಲಾ ಆ ಸದಸ್ಯರ ನೆಂಟರು. ಆ ಸದಸ್ಯರಿಗೆ ಆಗಿರತಕ್ಕಂಥ ನೋವನ್ನು ಇಲ್ಲಿ ಹೇಳಿಕೊಳ್ಳುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಕಾರಣ ಏನು? ಇದು ಏಕೆ ಆಯಿತು ಅಂದರೆ ಕಡೂರು, ಬೀರೂರು, ತಂಗ್ಲಿ ಮತ್ತು ಅಜ್ಜಂಪುರಕ್ಕೆ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತದೆ. ಇಲ್ಲ ಎಂದು ಹೇಳುವುದಿಲ್ಲ. 1 ಕೋಟಿ 30 ಲಕ್ಷ ರೂಪಾಯಿಯ ಅಡಿಷನಲ್ ಟ್ರಾನ್ಸ್‌ಫಾರ್ಮರ್ ಕಳುಹಿಸಿದಿರಿ. ಅಭಿನಂದನೆಯನ್ನು ಅನೇಕ ಸಾರಿ ಸಾರ್ವಜನಿಕ ಭಾಷಣದಲ್ಲಿ ನಾವು ಸಲ್ಲಿಸಿದ್ದೇವೆ. ಆದಕ್ಕೆ ಸಿ.ಟಿ.ಯನ್ನು ಸುಮಾರು ಒಂದೂವರೆ ಲಕ್ಷ ರೂಪಾಯಿಗಳದ್ದು 6 ತಿಂಗಳು ಕಳುಹಿಸದೆಯೇ ಇಟ್ಟುಕೊಂಡರೆ ಕೆಲಸ ಹೇಗೆ ಆಗುತ್ತದೆ? ಚಿಕ್ಕ ಮೂರು ಸಿ.ಟಿ.ಗಳನ್ನು ಕಳುಹಿಸಿದ್ದರೆ ಕೆಲಸ ಆಗುತ್ತಿತ್ತು. ಮೇಜರ್ ವರ್ಕ್ಸ್‌ನವರು ಒಂದು ಸಣ್ಣ ಟ್ರಾನ್ಸ್‌ಫಾರ್ಮರ್ ರಿಪೇರ್ ಮಾಡುವುದಿಲ್ಲ. ಮೇಜರ್ ವರ್ಕ್ಸ್‌ಗಳನ್ನೆಲ್ಲಾ ತೆಗೆದುಕೊಂಡು ಹೋಗಿ ಅಕ್ರಮ ಸಕ್ರಮಕ್ಕೆ ಹಾಕಿಕೊಂಡಿದ್ದೀರಿ. ಕೆಲಸ ಮಾಡುವವರು ಗತಿ ಇಲ್ಲ. ಜನಗಳು ಏನು ಮಾಡಬೇಕು? ಮೇಜರ್ ವರ್ಕ್ಸ್‌ನಲ್ಲಿ ಹೋಗಿರತಕ್ಕಂಥವರನ್ನು ವಾಪಸ್ಸು ಜನರೇಷನ್ ಸ್ಟೇಷನ್‌ಗೆ ಕಳುಹಿಸಬೇಕು. ಏನು ಸಿ.ಟಿ.ಗಳನ್ನು ತೆಗೆದುಕೊಳ್ಳಬೇಕಾಗಿದೆ, ಅವು

ಸಣ್ಣಪುಟ್ಟ ಮೆಟೀರಿಯಲ್ಸ್ ಬೇಕಾಗಿದೆ. ಒಂದು ಕೋಟಿ 30 ಲಕ್ಷ ರೂಪಾಯಿಗಳ ಮೆಟೀರಿಯಲ್ಸ್ ಕೊಟ್ಟು 4-5 ಲಕ್ಷ ರೂಪಾಯಿಗಳ ಮೆಟೀರಿಯಲ್ಸ್ ಕೊಡದೇ ಹೋದರೆ ನಾವು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ? ಅದನ್ನು ತಂಗ್ಲಿ, ಬೀರೂರು ಮತ್ತು ಅಜ್ಜಂಪುರಕ್ಕೆ ಕಳುಹಿಸಬೇಕು. ಅಜ್ಜಂಪುರಕ್ಕೆ ಕಳುಹಿಸಿದ್ದಾರಂತೆ. ಕೆ.ಪಿ.ಟಿ.ಜಿ.ಎಲ್. ವಿರುದ್ಧ ಸ್ಟ್ರೈಕ್‌ಮಾಡುತ್ತಿದ್ದ ಹಾಗೆ ನಮಗೆ ಕರೆಂಟು ಬರುತ್ತದೆಂದು ಇದು ಒಂದು ತರಹ ಫ್ಯಾಶನ್ ಆಗಿದೆ. ಈ ಪರಿಸ್ಥಿತಿ ಮುಂದುವರಿದರೆ ಪ್ರತಿಯೊಬ್ಬರೂ ಸ್ಟ್ರೈಕ್ ಮಾಡುತ್ತಾರೆ. ಕೆ.ಪಿ.ಟಿ.ಸಿ.ಎಲ್. ಅದೇ ರೀತಿ ಕೆಲಸ ಮಾಡುತ್ತಿರುವುದು. ಎಲ್ಲಿ ಸ್ಟ್ರೈಕ್ ಮಾಡುತ್ತಾರೆ ಅಲ್ಲಿಗೆ ಒಂದೆರಡು ದಿವಸದಲ್ಲಿ ಹೇಗಾದರೂ ಮಾಡಿ ಕರೆಂಟ್ ಕೊಟ್ಟುಬಿಡುತ್ತಾರೆ. ಏಕೆಂದರೆ ಆಶ್ವಾಸನೆ ಕೊಟ್ಟುಬಂದಿರುತ್ತಾರಲ್ಲಾ ಅದಕ್ಕೆ. ಅದು ಆಗಬಾರದು. ನಿರಂತರವಾಗಿ ಕರೆಂಟ್ ಕೊಡಬೇಕೆಂದು ಹೇಳುತ್ತಿದ್ದೇನೆ. ಈ ರೀತಿಯಾಗಿರತಕ್ಕಂಥ ಸ್ಟೇಟ್‌ಮೆಂಟ್‌ಗಳನ್ನು ಕೊಡಬಾರದು. ವಾಸ್ತವ ಸ್ಥಿತಿಯಲ್ಲಿ ಅಲ್ಲಿರತಕ್ಕಂಥ ಸೆಕ್ಷನ್ ಆಫೀಸರ್‌ಗೆ, ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಬಿಡಿ, ನಾವು ಎಷ್ಟು ಕರೆಂಟ್ ಕೊಡುವುದಕ್ಕೆ ಆಗುತ್ತದೆಂದು ಹೇಳಿ, ನೀವು ಇಲ್ಲಿ 8 ಗಂಟೆ ಕರೆಂಟ್ ಕೊಡುತ್ತೇವೆಂದು ಹೇಳಿ ಅಲ್ಲಿ ಒಂದು ಗಂಟೆ ಕೂಡ ಕರೆಂಟ್ ಇರುವುದಿಲ್ಲ. ಆಗ ಅಲ್ಲಿ ಏನಾಗುತ್ತದೆ? ಇದಕ್ಕೆ ನಾವು ಏನು ಹೇಳಬೇಕು? ಇವರ ಸ್ಟೇಟ್‌ಮೆಂಟ್‌ಗೆ ನಾವು ಏನು ಹೇಳಬೇಕು? ನೀವೇ ಹೇಳಿ, ನೀವೇ ತೀರ್ಮಾನ ಮಾಡಿ. ಅದರ ಬಗ್ಗೆ ನಮ್ಮ ನಾಯಕರು ಹೇಳಿದ್ದಾರೆ, ಪುನಃ ಹೇಳಿ ಮತ್ತೊಂದು ಸಲ ಗೊಂದಲ ಎಬ್ಬಿಸುವುದಕ್ಕೆ ನಾನು ತಯಾರಿಲ್ಲ. ಬೋರ್‌ವೆಲ್ ತೆಗೆಯಬೇಡಿರಿ, ಕರೆಂಟ್ ಕೊಡುವುದಿಲ್ಲ, ಬರ ಪರಿಹಾರದ ಬಗ್ಗೆ ನೀವು ನಿಭಾವಣೆ ಮಾಡಿ ಎಂದರೆ ಹೇಗಾಗುತ್ತದೆ? ಮೊನ್ನೆ ಕೆ.ಡಿ.ಪಿ. ಸಭೆಯಲ್ಲೂ ಸಹ ಶ್ರೀ ಚಂದ್ರೇಗೌಡರನ್ನು ಕೇಳಿದೆ. ನೀವು ಏನೂ ಮಾಡಬೇಡಿ. 25 ಕೆ.ವಿ. ಟ್ರಾನ್ಸ್ ಫಾರ್ಮರ್ ಹಾಕಿ ಆರಾರು ತಿಂಗಳು ಆಗಿದೆ. ಅದಕ್ಕೆ ಎರಡು ಮೂರು ಸಾವಿರ ರೂಪಾಯಿಗಳ ಗೂಟ, ಪಿನ್ ಮುಂತಾದವುಗಳನ್ನು ಕೊಡುವುದಕ್ಕೆ ಕೆ.ಪಿ.ಟಿ.ಸಿ.ಎಲ್.ನಿಂದ ಆಗುತ್ತಿಲ್ಲ. ಆರಾರು ತಿಂಗಳು ಆಗಿದೆ. ವೈರ್ ಕೊಟ್ಟಿದ್ದಾರೆ, ಕಂಬ ಕೊಟ್ಟಿದ್ದಾರೆ, ಟಿ.ಸಿ. ಕೊಟ್ಟಿದ್ದಾರೆ. ಚಾರ್ಜ್ ಆಗಿಲ್ಲ. ಜನಗಳು ಏನು ಮಾಡಬೇಕು? ಆಗ ಜಗಳ ಮಾಡುತ್ತಾರೆ. ಎಲ್ಲಿ ಸ್ಟ್ರೈಕ್ ಆಗುತ್ತದೆ ಅಲ್ಲಿಗೆ ಏನಾದರೂ ಮಾಡಿ ಅಲ್ಲಿ ಇನ್‌ಸ್ಟಾಲ್ ಮಾಡಿ ಕರೆಂಟ್ ಕೊಡುವಂಥದ್ದು ಮಾಡುತ್ತಾರೆ. ಆಗ ಜನಗಳ ಮನಸ್ಸಿನಲ್ಲಿ ಏನಾಗುತ್ತದೆ ಎಂದರೆ ಅವರು ಸ್ಟ್ರೈಕ್ ಮಾಡಿದರು, ನಾವೂ ಸ್ಟ್ರೈಕ್ ಮಾಡಿದರೆ ನಮಗೂ ಸಿಗುತ್ತದೆಂದು ಸ್ಟ್ರೈಕ್ ಮಾಡುತ್ತಾರೆ. ಇದು ನಿರಂತರವಾಗಿರತಕ್ಕಂಥ ಒಂದು ಕ್ರಿಯೆ ಆಗುತ್ತದೆ. ನಾನು ಕೆ.ಪಿ.ಟಿ.ಸಿ.ಎಲ್.ನವರನ್ನು ಒಂದು ಸಲ ಕೇಳಿದೆ. ಎರಡು ಸಾವಿರ ರೂಪಾಯಿ ಕೊಟ್ಟು ಪೈಪ್ ಲೈನ್ ಹಾಕಿಸಿ ಎಂದು ಹೇಳಿದೆ. ಹಣ ಇಲ್ಲ ಎಂದು ಹೇಳಿದರು. ಮಾನ್ಯ ಅಧ್ಯಕ್ಷರೆ, ತಮಗೆ ಸಿ.ಇ.ಒ. ಅವರ ರಿಪೋರ್ಟ್‌ನ್ನು ಕೊಡುತ್ತೇನೆ. ಅವರು ದುಡ್ಡು ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತಾರೆ. ಸರ್ಕಾರ ಏಕೆ ಆದೇಶ ಹೊರಡಿಸುತ್ತೀರಿ? ನಿಮ್ಮ ಆದೇಶ ತೆಗೆದುಕೊಂಡು ಹೋಗಿ

ಹೇಳುತ್ತೇವೆ. ಆ ಮೇಲೆ ಕೆ.ಪಿ.ಟಿ.ಸಿ.ಎಲ್.ಗೆ ಎ.ಇ.ಗೆ ಹೇಳುತ್ತೇವೆ, ಸಿ.ಇ.ಒ.ಗೆ ಹೇಳುತ್ತೇವೆ. ಸರ್ಕಾರದಿಂದ ಆದೇಶ ಬಂದಿದೆ ಬೋರ್‌ವೆಲ್ ತೆಗೆಸಿ, ದುಡ್ಡು ಇಲ್ಲವೆಂದರೆ ನಮಗೆ ಗೊತ್ತಿಲ್ಲ ಎಂದು ಹೇಳುತ್ತೇವೆ. ಅವರನ್ನೂ ಸಹ ನೀವು ಟಾರ್‌ಗೆಟ್ ಮಾಡಿಕೊಂಡು ಇವತ್ತಿನ ದಿವಸ ಅವರಿಗೂ ಪೆಟ್ಟು ಬೀಳುವಂಥ ಪರಿಸ್ಥಿತಿಗೆ ತರಬೇಡಿ. ದುಡ್ಡು ಇದ್ದರೆ ಮಾಡಿ, ದುಡ್ಡು ಇಲ್ಲದಿದ್ದರೆ ಬಿಡಿ. ನಮ್ಮ ಕೈಯಿಂದ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ. ನಾವು ಹೇಗಾದರೂ ಜೀವನ ನಡೆಸುತ್ತೇವೆ. ನನ್ನ ಕೊನೆಯ ಸಲಹೆ ಏನೆಂದರೆ, ಕೆ.ಪಿ.ಟಿ.ಸಿ.ಎಲ್.ನವರು ವೈರ್, ಟ್ರಾನ್ಸ್‌ಫಾರ್ಮರ್, ಕಂಬ ಎಲ್ಲಾ ಕೊಟ್ಟಿದ್ದಾರೆ. ಐದು ಸಾವಿರ ರೂಪಾಯಿಗಳಷ್ಟು ಮೆಟೀರಿಯಲ್ಲನ್ನು ಅವರಿಂದ ಕೊಡುವುದಕ್ಕೆ ಆಗುತ್ತಿಲ್ಲ. ಕಾರಣ, ಅವರಿಗೆ ನೂರಾರು ಟೆಕ್ನಿಕಲ್ ಪ್ರಾಬ್ಲಮ್ ಇರುತ್ತದೆ. ನಾವು ಇಂಡೆಂಟ್ ಹಾಕಿದ್ದೇವೆ, ಆಜ್ಞೆ ಬರಬೇಕು ಇತ್ಯಾದಿ ಹೇಳುತ್ತಾರೆ ಅದು ನಮಗೆ ಅರ್ಥವಾಗುವುದಿಲ್ಲ. ಇವರು ಕೊಳವೆ ಬಾವಿಗೆ ಪೈಪ್ ಹಾಕುವುದಕ್ಕೆ ದುಡ್ಡುಕೊಡುವುದಿಲ್ಲ. ಕೊಳವೆ ಬಾವಿ ಕೊರೆಸುವುದಕ್ಕೆ ದುಡ್ಡು ಕೊಡುವುದಿಲ್ಲ. ನಾನು ಕೊನೆಯದಾಗಿ ಮನವಿ ಮಾಡಿಕೊಳ್ಳುವುದೇನೆಂದರೆ, ಶಾಸಕರ ಅನುದಾನ ಹನ್ನೆರಡೂವರೆ ಲಕ್ಷ ರೂಪಾಯಿ ಬಾಕಿ ಏನು ಬಿಡುಗಡೆ ಮಾಡಬೇಕು ಅದನ್ನು ಬೇಗನೆ ಬಿಡುಗಡೆ ಮಾಡಬೇಕು. ಅದಕ್ಕೂ ಒಂದು ಆದೇಶ ಬಂದಿದೆ. ಆ ಆದೇಶದಲ್ಲಿ ಒಂದು ಮಾರ್ಪಾಡನ್ನು ನಾನು ಕೇಳುತ್ತಿದ್ದೇನೆ. ಸರ್ಕಾರದ ಆದೇಶದಲ್ಲಿ ಒಂದು ಲಕ್ಷ ರೂಪಾಯಿಯ ಕೆಳಗಿನ ಕೆಲಸವನ್ನು ಮಾಡಬಾರದೆಂದು ಬಂದಿದೆ. ಅದನ್ನು ಮಾರ್ಪಾಡು ಮಾಡಿ ಒಂದು ಲಕ್ಷ ರೂಪಾಯಿಗಳಿಗಿಂತ ಕೆಳಗೆ ಇರುವ ಕೆಲಸಗಳು ಅಂದರೆ ಶಾಲಾ ಕಟ್ಟಡ, ಅಂಗನವಾಡಿ, ಮಿನಿ ವಾಟರ್ ಸಪ್ಲೈ, ಸ್ಯಾನಿಟೇಷನ್, ಸಿವಿಕ್ ಅಮಿನಿಟೀಸ್, ಹೈಸ್ಕೂಲ್‌ಗೆ ಕಂಪ್ಯೂಟರ್ ಕೊಡುವುದಕ್ಕೆ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇದ್ದರೂ ಸಹಿತ ಡಿ.ಸಿ.ಯವರು ಎಸ್ಟಿಮೇಟ್‌ನ್ನು ಅಪ್ರೂವ್ ಮಾಡಬಹುದೆಂದು ಕೊಡಬೇಕು. ನೀವು ಹನ್ನೆರಡೂವರೆ ಲಕ್ಷ ರೂಪಾಯಿಯನ್ನು ರಿಲೀಸ್ ಮಾಡಿ, ಕೆ.ಪಿ.ಟಿ.ಸಿ.ಎಲ್.ಗೆ ಬೇಕಾಗಿರುವಂಥ ಅಗತ್ಯ ವಸ್ತುಗಳನ್ನು ಕೊಡಲಿಕ್ಕೂ ಅನುಮತಿ ಕೊಡಬಹುದು. ಕುಡಿಯುವ ನೀರಿನ ಅನುಮತಿ ಕೊಡಬಹುದು ಎಂದು ಆದೇಶ ಮಾಡಿಬಿಟ್ಟರೆ, ಹನ್ನೆರಡೂವರೆ ಲಕ್ಷ ರೂ. ಹಣದಲ್ಲಿ ಮರ್ಯಾದೆ ಉಳಿಸಿಕೊಂಡು ವಿಧಾನಸಭೆಗೆ ಮತ್ತೊಂದು ಸಲ ಬಜೆಟ್ ಅಧಿವೇಶನಕ್ಕೆ ಬರುತ್ತೇವೆ. ಇಲ್ಲ ಎಂದರೆ ನಮ್ಮ ವಿಕಾರವಾಗಿರತಕ್ಕಂಥ ಮುಖವನ್ನು ನೀವು ನೋಡಬೇಕಾಗುತ್ತದೆ, ಜನಗಳಿಂದ ಹೊಡೆಸಿಕೊಂಡು ಬರುತ್ತೇವೆ. ಧನ್ಯವಾದಗಳು.

+ ಶ್ರೀ ಸಿ.ಗುರುಸ್ವಾಮಿ(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ನಾನು ಮೊದಲನೆಯದಾಗಿ ತಾವು ನನಗೆ ಈ ಒಂದು ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತಾ, ನಮ್ಮ ಗ್ರಾಮಾಂತರದಲ್ಲಿ 'ಮೊದಲನೆ ಮಗನಾಗಬಾರದು, ಕೊನೆಯ ಭಾಷಣಕಾರರಾಗಬಾರದು' ಎನ್ನುವ ಮಾತನ್ನು

ಹೇಳುತ್ತಾರೆ. ಈಗ ಏನಾಗಿದೆ ಎಂದರೆ ಸಾಕಷ್ಟು ಚರ್ಚೆಗಳನ್ನು ಹಿರಿಯ ಸದಸ್ಯರು ಮತ್ತು ಹೊಸದಾಗಿ ಬಂದಿರತಕ್ಕಂಥವರು ಎಲ್ಲರೂ ಸರ್ಕಾರದವರ ಗಮನವನ್ನು ಸೆಳೆದಿದ್ದಾರೆ. ಅವರು ಹೇಳಿದ್ದನ್ನೇ ರಿಪೀಟ್ ಮಾಡಲಿಕ್ಕೆ ನಾನು ಇಷ್ಟಪಡುವುದಿಲ್ಲ. ಅವರೆಲ್ಲ ಹೇಳಿದಂಥ ಸಮಸ್ಯೆಗಳು ಬಹಳ ಗಂಭೀರವಾದಂಥ, ವಾಸ್ತವವಾದಂಥ ಸಮಸ್ಯೆಗಳಾಗಿವೆ. ಅದಕ್ಕೆ ಸರ್ಕಾರ ಸ್ಪಂದಿಸಬೇಕಾಗಿರುವುದು ಬಹಳ ಅನಿವಾರ್ಯ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಎರಡು ವಿಚಾರಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರದಲ್ಲಿರತಕ್ಕಂಥ ರೈತರ ಸಮಸ್ಯೆ ಆ ರೀತಿ ಇರತಕ್ಕಂಥದ್ದು. ಬಹುಶಃ ಎರಡು ಘಟನೆಗಳನ್ನು ಈ ಸದನದಲ್ಲಿ ನಾವು ಗಮನಿಸಿದ್ದೇವೆ. ಒಂದನೆಯದು, ಅಜ್ಜಂಪುರದ ಘಟನೆಯನ್ನು ಮಾನ್ಯ ಮಲ್ಲಿಕಾರ್ಜುನ್ ಅವರು ವಿವರವಾಗಿ ಹೇಳಿದರು. ಬಹುಶಃ ಅದಕ್ಕೆ ಮಂತ್ರಿಗಳೂ ಕೂಡ ಯಾವುದೇ ಒಂದು ತಪ್ಪಾಗಿದ್ದರೂ ಕೂಡ ಒಂದು ಎಸ್ಟಾಬ್ಲಿಷ್‌ಡ್ ಪ್ರಿನ್ಸಿಪಲ್ ಇದೆ, ಒಂದು ರೂಲ್ ಇದೆ, ಆ ರೂಲ್ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಅಲ್ಲಿ ಉದ್ರೇಕಗೊಂಡು ಹೆಂಗಸರು ಮಕ್ಕಳನ್ನು ಎಳೆದಾಡಿದ್ದು ಸರಿಯಿಲ್ಲ ಎನ್ನತಕ್ಕಂಥದ್ದನ್ನು ಹೇಳಿದರು. ನಾನೂ ಕೂಡ ಅದನ್ನು ಒಪ್ಪುತ್ತೇನೆ. ಅದೇ ರೀತಿ ಇಲ್ಲಿ ನಡೆದಂಥ ಘಟನೆಯನ್ನು ಸಹ ತಾವು ಗಮನಿಸಿದಿರಿ. ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ಸಿಂಧ್ಯ ಅವರು ಏನೋ ಒಂದು ಪದ ಬಳಸಿದರೆಂದು ಹೇಳಿ ಮಾನ್ಯ ಮಂತ್ರಿಗಳು ಸಿಟ್ಟು ಮಾಡಿಕೊಂಡಿದ್ದನ್ನು ನಾವು ಗಮನಿಸಿದ್ದೇವೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ಒಂದು ಸದನದಲ್ಲಿ ಕಮಿಟ್‌ಮೆಂಟ್ ಇರತಕ್ಕಂಥ ನಾವು, ಒಂದು ಜವಾಬ್ದಾರಿಕೆ ಸ್ಥಾನದಲ್ಲಿರತಕ್ಕಂಥ ನಾವು ಯಾವುದೋ ಒಂದು ಪದ ಅವರು ಬಳಸಿದರು ಎಂದಾಗ ನಮಗೆ ಯಾವ ರೀತಿಯ ಸಿಟ್ಟು ಬಂತೋ ಅದು ಸಹಜ. ಅದು ತಪ್ಪು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇದಕ್ಕಿಂತ ಗಂಭೀರವಾಗಿರತಕ್ಕಂಥದ್ದು ಅಜ್ಜಂಪುರದಲ್ಲಿ ಐದು ದಿನಗಳ ಕಾಲ ಕಂಟಿನ್ಯೂಸ್ ಆಗಿ ಎಲೆಕ್ಟ್ರಿಸಿಟಿ ಸಪ್ಲೈ ಇಲ್ಲದೆಯೇ ರೈತರು ರೊಚ್ಚಿಗೆದ್ದು ಅವರ ವಾತಾವರಣದ ಸ್ಥಿತಿ ಏನಿತ್ತು; ಅದು ಜಸ್ಟಿಫೈ ಆಗುತ್ತದಾ ಎನ್ನುವ ದಿಕ್ಕಿನಲ್ಲಿ ಹೀಗೆ ಎರಡನ್ನೂ ನಾವು ಯೋಚನೆ ಮಾಡಬೇಕಾಗಿರತಕ್ಕಂಥದ್ದು. ಹೀಗಾಗಿ ಅದು ಸರಿಯೋ ಇದು ಸರಿಯೋ ಎನ್ನತಕ್ಕಂಥದ್ದು ನಮಗೆ ಬಿಟ್ಟಂಥ ವಿಚಾರ. ಅದೇನಿದ್ದರೂ ಇವತ್ತು ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ನಾನು ಕೂಡ ಹಲವಾರು ವಿಷಯಗಳಲ್ಲಿ, ಹಲವಾರು ಚರ್ಚೆಗಳಲ್ಲಿ ಭಾಗವಹಿಸಿದ್ದೇನೆ. ನನ್ನ ಒಂದು ಅನಿಸಿಕೆ ಏನೆಂದರೆ, ಈ ಒಂದು ಚರ್ಚೆಗಳು ಬರೀ ಚರ್ಚೆ ಆಗಿ ಇಲ್ಲಿಯೇ ಉಳಿಯತಕ್ಕಂಥದ್ದು ಆಗಬಾರದು. ಇದರಿಂದ ಏನಾದರೂ ಒಂದು ಫಲ ಕಾಣತಕ್ಕಂಥ ದಿಕ್ಕಿನಲ್ಲಿ ನಾವು ಚಿಂತನೆ ಮಾಡತಕ್ಕಂಥದ್ದು. ಸುಮ್ಮನೆ ಏನೋ ಚರ್ಚೆಯಾಗತಕ್ಕಂಥದ್ದು ಆಗಬಾರದು. ಕಳೆದ ಸಾರಿ ಚರ್ಚೆಯಾಗಿ ಏನು ಪ್ರಯೋಜನವಾಗಿಲ್ಲ ಎಂದು ನನಗೆ ಬಹಳ ನೋವಾಗುತ್ತಿದೆ. ಬರ ಪರಿಹಾರದ ವಿಚಾರದಲ್ಲಿ 2-3 ದಿವಸಗಳ ಕಾಲ ಹಿರಿಯ, ಕಿರಿಯ ಸದಸ್ಯರು ಬಹಳ ಗಂಭೀರವಾದಂಥ ಚರ್ಚೆಯನ್ನು ಇಲ್ಲಿ ಮಾಡಿದೆವು. ಆದರೆ

ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಇದ್ದಿರಿ, ಬಹುಶಃ ಮಾನ್ಯ ಕಂದಾಯ ಸಚಿವರ ಉತ್ತರ ಕೇವಲ 5-10 ನಿಮಿಷದಲ್ಲಿ ಎರಡು ಪುಟದ ಉತ್ತರವನ್ನು ಓದಿ ಮುಗಿಸಿದರು.

7.20 ಪಿಎಂ

ಏನೇನು ಸಮಸ್ಯೆಗಳಿದ್ದವು ಅವು ಯಾವುದಕ್ಕೂ ಸ್ಪಷ್ಟವಾದ ಉತ್ತರವನ್ನು ಅವರು ಕೊಡಲಿಲ್ಲ. ಇದು ನಮಗೆ ನೋವಿನ ವಿಚಾರ ಇದು ವಾಸ್ತಾವಾಂಶವಾದ ಸಂಗತಿ ಬೇಕಾದರೆ ರೆಕಾರ್ಡ್ ತೆಗೆದುನೋಡಿ. ಇದು ಆಗಬಾರದು ಎಂಬುದು ನಮ್ಮ ಚಿಂತೆ, ಮಾರ್ಚಿ, ಏಪ್ರಿಲ್ ತಿಂಗಳಲ್ಲಿ ಮಳೆಗಾಲ ಪ್ರಾರಂಭವಾಗಬೇಕು ಅದು ಎಷ್ಟರ ಮಟ್ಟಿಗೆ ಮಳೆ ಬಂದು ಜನ ತೃಪ್ತರಾಗುತ್ತಾರೆ ಇವೆಲ್ಲಾ ಅನ್‌ಸರ್ಟನಿಟಿ ಇದೆ. ನಮ್ಮ ಚಾಮರಾಜನಗರ ಜಿಲ್ಲೆಗೆ ಮಾತ್ರ ಸೀಮಿತವಾಗಿರದೆ ಇಡೀ ರಾಜ್ಯದಲ್ಲಿ ಕುಡಿಯುವ ನೀರು ಹಾಗೂ ಕೆಪಿಟಿಸಿಎಲ್ ಈ ಎರಡು ಒಂದಕ್ಕೊಂದು ಇಂಟರ್‌ಲಿಂಕ್ ಇರತಕ್ಕಂಥದ್ದು, ಕೇವಲ ಕೆಪಿಟಿಸಿಎಲ್ ಸರಿಯಾಗಿದ್ದು, ಕುಡಿಯುವ ನೀರು ಇಲ್ಲದೆ ಬೋರ್‌ವೆಲ್ ಇಲ್ಲದೆ ಅದು ಪ್ರಯೋಜನವಾಗುವುದಿಲ್ಲ, ಅಂತರಜಲ ಚೆನ್ನಾಗಿ ಇದ್ದು ಬೋರ್‌ವೆಲ್ ತೆಗೆಸಿದರೆ ಕೆಪಿಟಿಸಿಎಲ್ ಸರಿಯಾಗಿಲ್ಲ ಎಂದರೆ ಅದು ಪ್ರಯೋಜನವಾಗುವುದಿಲ್ಲ, ಆದ್ದರಿಂದ ಈ ಕೆಪಿಟಿಸಿಎಲ್ ಮತ್ತು ಬೋರ್‌ವೆಲ್ ಎರಡೂ ಚೆನ್ನಾಗಿದ್ದರೆ ಮಾತ್ರ ಎಲ್ಲರಿಗೂ ಉಪಯೋಗವಾಗುತ್ತದೆ. ಸರ್ಕಾರದವರು ಹಣ ಕೊಡುತ್ತೀರಿ ನಾನು ಇಲ್ಲವೆಂದು ಹೇಳುತ್ತಿಲ್ಲ, ಮಾನ್ಯ ಘೋರ್ಪಡೆಯವರು ಹೇಳಿದರು, ಹ್ಯಾಂಡ್ ಬೋರ್‌ವೆಲ್ ರಿಪೇರಿ ಮಾಡುವುದು, ಮಿನಿ ಮೋಟರ್ ವೆಲ್‌ಗಳಿಗೆ, ಎನ್‌ಆರ್‌ಡಬ್ಲ್ಯೂ ಎಸ್ ಸ್ಕೀಮ್‌ಗಳಿಗೆ, ಮೆಂಟೆನೆನ್ಸ್ ಸುಮಾರು 10-20 ಕೋಟಿ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದರು ಬಹಳ ಸಂತೋಷ you have to maintain it regularly. You have to give it. ಈ ಬಗ್ಗೆ ಎರಡು ಮಾತಿಲ್ಲ. ಯಾವುದೇ ಇಲಾಖೆಯಲ್ಲಾದರೂ ನಿಮ್ಮ ಸಂಪನ್ಮೂಲಗಳನ್ನು ನೋಡಿಕೊಂಡು ನಿಮ್ಮ ಕೈಲಾದಷ್ಟು ಹಣವನ್ನು ನೀವು ಒದಗಿಸುತ್ತೀರಿ. ಅದರಲ್ಲಿ ಸ್ವಲ್ಪ ವ್ಯತ್ಯಾಸಯಿರಬಹುದು ನಾನು ಅದನ್ನು ಹೇಳುತ್ತಿಲ್ಲ, ನಾನೇನು ಹೇಳುತ್ತೇನೆಂದರೆ, ಕರ್ನಾಟಕದಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿ ನೀವು ಇದ್ದೀರಿ, ಐದು ವರ್ಷಕ್ಕೆ ಜನ ನಿಮ್ಮನ್ನು ಆಯ್ಕೆ ಮಾಡಿದ್ದಾರೆ ನೀವು ರಾಜ್ಯ ಆಳಿ, ಇದಕ್ಕೆ ನಾನೇನೂ ಬೇಡವೆಂದು ಹೇಳುವುದಿಲ್ಲ. ಸುಮಾರು 40-43 ಜನ ಮಂತ್ರಿಗಳು ಇದ್ದು, ಪ್ರತಿಯೊಂದು ಇಲಾಖೆಯಲ್ಲೂ ಹಣ ಬಿಡುಗಡೆಯಾಗುತ್ತದೆ, ತಾವು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು, ಇವತ್ತಿಗೆ ಎರಡೂವರೆ ವರ್ಷವಾಯಿತು, ಮಾನ್ಯ ಕಾಗೋಡು ತಿಮ್ಮಪ್ಪನವರು ಬಿಳಿಗಿರಿ ರಂಗನ ಬೆಟ್ಟದಲ್ಲಿ ಮಿನಿ ಸಂಪುಟವನ್ನು ನಡೆಸುತ್ತಾರೆ, ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ ಎನ್ನುವ ಹಿನ್ನೆಲೆಯಲ್ಲಿ ಅಧಿಕಾರಿಗಳ ರಿವ್ಯೂ ಸಭೆಯನ್ನು ಮಾಡಿದರು, ಬಹಳ ಸಂತೋಷ ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಇದೊಂದನ್ನು ಬಿಟ್ಟರೆ. ನಮ್ಮ ಚಾಮರಾಜನಗರ

ಜಿಲ್ಲೆಯಲ್ಲಿ, ಇಷ್ಟೊಂದು ಇಲಾಖೆಗಳು ಇವೆಯಲ್ಲಾ, ಇದುವರೆವಿಗೂ ಒಬ್ಬ ಮಂತ್ರಿಯೂ ಸಹ ತಮ್ಮ ಇಲಾಖೆಯ ಪ್ರಗತಿಯನ್ನು ಕೊಟ್ಟಿರತಕ್ಕಂಥ ಹಣವನ್ನು ಅಧಿಕಾರಿಗಳು ಯಾವ ರೀತಿಯಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಸದ್ವಿನಿಯೋಗ ಮಾಡುತ್ತಾರೆ ಎನ್ನುವ ಒಂದಾದರೂ ರಿವ್ಯೂ ಸಭೆ ಮಾಡಿದ್ದರೆ ನಾನು ಈ ರಾಜಕೀಯದಿಂದಲೇ ನಿವೃತ್ತಿಯಾಗಿಬಿಡುತ್ತೇನೆ. ಏಕೆ ಹೀಗೆ ಮಾಡುತ್ತಾರೆ? ಮಾನ್ಯ ಮುಖ್ಯಮಂತ್ರಿಗಳೇನು ಚಾಮರಾಜನಗರ ಜಿಲ್ಲೆಗೆ ಬರುವುದಿಲ್ಲ. ಅದೇನೋ ಪ್ರತೀತಿ ಅದೇನೋ ಕತೆ, ಮಂತ್ರಿಗಳಿಗೆ ಏನಾಗಿದೆ? ಮಾನ್ಯ ಕಾಗೋಡು ತಿಮ್ಮಪ್ಪನವರು ಬಂದು ರಿವ್ಯೂ ಮಾಡಿದರು ಅವರು ಅಧಿಕಾರದಲ್ಲಿ ಮುಂದುವರಿಯುತ್ತಿಲ್ಲವೆ? ಅವರೇನು ಅಧಿಕಾರ ಕಳೆದುಕೊಂಡು ಬಿಟ್ಟರಾ? ಏಕೆ ಹೀಗೆ ಮಾಡುತ್ತಾರೆ? ಬರದ ಬಗ್ಗೆ, ಕುಡಿಯುವ ನೀರಿನ ಬಗ್ಗೆ, ಕೆಪಿಟಿಸಿಎಲ್ ಬಗ್ಗೆ ಯಾರಾದರೂ ರಿವ್ಯೂ ಮಾಡಿದ್ದೀರಾ? ಕೆಪಿಟಿಸಿಎಲ್‌ನ ಮಂತ್ರಿಗಳು ಅಧಿಕಾರಕ್ಕೆ ಬಂದು ಎರಡು ವರ್ಷವಾಯಿತು ತಮ್ಮ ಕರ್ತವ್ಯ ಏನು? ನಿಮ್ಮನ್ನು ಏತಕ್ಕೆ ಮಂತ್ರಿಯನ್ನಾಗಿ ಮಾಡಿದ್ದಾರೆ? ನಮ್ಮ ಸಂವಿಧಾನದ ಪ್ರಕಾರ ನಿಮ್ಮ ಡ್ಯೂಟಿ ಏನು? ಇದನ್ನೆಲ್ಲಾ ಡಿಸೈಡ್ ಮಾಡಲಿಕ್ಕೆ ಸೂಪರ್‌ವಿಷನ್ ಮಾಡಲಿಕ್ಕೆ ನೀವು ಜಿಲ್ಲಾವಾರು ರಿವ್ಯೂ ಮಾಡಬಾರದಾ? ಚಾಮರಾಜನಗರದಲ್ಲಿ 220 ಕೆವಿ ಸ್ಟೇಷನ್ಸ್ ಆಗುತ್ತಿದೆ, ಮಾನ್ಯ ಮಹಾದೇವ ಪ್ರಸಾದ್‌ರವರು ಹೇಳಿದ ಹಾಗೆ ಎಪಿಡಿಪಿಯಿಂದ ಚಾಮರಾಜನಗರದಲ್ಲಿ ಕಾರ್ಯಕ್ರಮ ನಡೆಯುತ್ತಿದೆ. ಒಂದಾದರೂ ರಿವ್ಯೂ ಮೀಟಿಂಗ್ ನೀವು ಮಾಡಿದ್ದೀರಾ? ಏಕೆ ಮಾಡಲಿಲ್ಲ? ಅಧಿಕಾರ ಇವತ್ತು ಬರುತ್ತದೆ ನಾಳೆ ಹೋಗುತ್ತದೆ ಅದರ ಬಗ್ಗೆ ಇವತ್ತು ಚಿಂತನೆ ಮಾಡುತ್ತಿಲ್ಲ, ಅಧಿಕಾರ ನಮಗೆ ಬರುವುದು ಮುಖ್ಯವಲ್ಲ, ನಾವು ಎಷ್ಟು ವರ್ಷಗಳ ಕಾಲ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿದ್ದೆ ಎನ್ನುವುದು ಪ್ರಮುಖವಲ್ಲ, ನಾನು ಮಂತ್ರಿಯಾಗಿದ್ದಾಗ ಯಾವ ರೀತಿ ಸಾರ್ವಜನಿಕ ಕೆಲಸ ಮಾಡಿದೆ ಎಂಬುದು ಮುಖ್ಯ. ಎಪಿಡಿಪಿ ಕಾರ್ಯಕ್ರಮ ಕವಿಕಾದಿಂದ ನಡೆಯುತ್ತಿದೆ, ಕರ್ನಾಟಕ ವಿದ್ಯುಚ್ಛಕ್ತಿ ಕಾರ್ಯಾಗಾರದವರು ಅವರೇನು ಮಾಡಿದ್ದಾರೆಂದರೆ, ಇನ್ನೊಬ್ಬ ಏಜೆನ್ಸಿಗೆ ಸಪ್ಲೈ ಟೆಂಡರ್ ಕೊಟ್ಟಿದ್ದಾರೆ, ಅವನು ಅಲ್ಲಿ ಲೋಕಲ್‌ನವರು ಹಿಡಿದುಕೊಂಡು ಅಲ್ಲಿ ಯಾವ ಕೆಲಸವೂ ಆಗುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ಎಲೆಕ್ಟ್ರಿಕಲ್ ಸಿಸ್ಟಂ ಇಂಪ್ರೂವ್ ಮಾಡುತ್ತೇನೆಂದರೆ ಹೇಗೆ? ಅಲ್ಲಿ ಯಾರೂ ಸೂಪರ್‌ವಿಷನ್ ಮಾಡುವುದು? ಅಧಿಕಾರಿಗಳಾದ ಶ್ರೀ ಬಾಳಿಗಾರ್‌ರವರಾದರೂ ರಿವ್ಯೂ ಮಾಡುತ್ತಿದ್ದಾರಾ? ಇದೊಂದು ಇಲಾಖೆಯಲ್ಲ ಯಾವುದೇ ಇಲಾಖೆಯಲ್ಲೂ ಯಾರೂ ರಿವ್ಯೂ ಮಾಡುತ್ತಿಲ್ಲವಲ್ಲ ಏಕೆ? ನಿಮಗೆ ಜವಾಬ್ದಾರಿಯಿರುವುದರಿಂದ ನೀವು ಇದನ್ನೆಲ್ಲಾ ರಿವ್ಯೂ ಮಾಡಿದರೆ ನೀವು ಕೊಡುವ ಹಣ ಸದುಪಯೋಗವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಈ ಪ್ರಶ್ನೆಯನ್ನು ಇಲ್ಲಿ ಕೇಳಿದೆನೇ ವಿನಃ ಬೇರೆ ಯಾವ ದುರುದ್ದೇಶದಿಂದ ನಾನು ಇದನ್ನು ಕೇಳುತ್ತಿಲ್ಲ. ನಾನು ಈ ಮಾತನ್ನು ಬಹಳ ನೊಂದು ಹೇಳುತ್ತಿದ್ದೇನೆ. ಇವತ್ತು ಕೆಪಿಟಿಸಿಎಲ್ ಏಕೆ ಹೀಗಾಗಿದೆ? ಮಾನ್ಯ ಸಚಿವರು ಹೇಳಿದ ಹಾಗೆ ಇದು ನಿಜ, ಮಾನ್ಯ

ಖರ್ಗೆಯವರು ಹೇಳಿದ ಹಾಗೆ, ಹಿಂದೆ ಐದು ಸಾವಿರ, ಏಳು ಸಾವಿರ ಇತ್ತು, ಈಗ ಅದು ಹೆಚ್ಚಾಗಿರುವುದರಿಂದ ಪಂಪ್‌ಸೆಟ್ಟುಗಳು ಜಾಸ್ತಿಯಾದವು. ಜಾಸ್ತಿಯಾಗಿದ್ದು ನಿಜ, ಸರ್ವೀಸಸ್ ಜಾಸ್ತಿ ಕೊಟ್ಟಿದ್ದು ನಿಜ, ಆದರೆ ಸಿಸ್ಟಂ ಇಂಪ್ರೂವ್‌ಮೆಂಟ್ ಮಾಡಿದ್ದೀರಾ? ಹಿಂದೆ ಯಾವುದೋ ಓಬಿರಾಯನ ಕಾಲದಲ್ಲಿ ಹಾಕಿದಂತಹ ಎಗ್ಸಿಸ್ಟಿಂಗ್ ಲೈನ್‌ಗಳಿಗೆ ಅದಕ್ಕೆ ನೀವು ಟಿಸಿಗಳನ್ನು ಕೂರಿಸಿ ಹೆಚ್ಚು ಹೆಚ್ಚು ಕನೆಕ್ಷನ್ ಕೊಡುತ್ತಾ ಹೋದರೆ ಆ ಲೈನ್‌ನಲ್ಲಿ ಬರುವ ವಿದ್ಯುತ್ ಯಾವ ರೀತಿ ಸಮರ್ಪಕವಾಗಿ ತಂದು ಜನಗಳಿಗೆ ಕೊಡಬಹುದು? Unless the system is improved ಜನಗಳು ಬಂದಾಗ ನೀವು ಯಾವುದೋ ಒತ್ತಡಕ್ಕೆ ಮಣಿದು ಕನೆಕ್ಷನ್ ಕೊಟ್ಟುಕೊಂಡು ಹೋದರೆ ಏನು ಸಾರ್ಥಕವಾಗುತ್ತದೆ? ಹೀಗಾಗಿಯೇ ನಾವು ಇವತ್ತು ಇಷ್ಟೊಂದು ಕಷ್ಟವನ್ನು ಅನುಭವಿಸುತ್ತಿರುವುದು. ಒಂದು 100 ಕೆವಿ ಸ್ಟೇಷನ್‌ಗೆ ಎಷ್ಟು ಕನೆಕ್ಷನ್ ಮಾಡಬಹುದು? ಮಿನಿಮಮ್ ಕೊಡಬಹುದು, ಅದಕ್ಕೊಂದು ಮಿತಿ ಇರುತ್ತದೆ, ಅದನ್ನು ಮೀರಿ ಒನ್ ಟೂ ಡಬ್ಬಲ್, ತ್ರಿಬಲ್, ಸರ್ವೀಸ್‌ಗಳನ್ನು ಹಿಂದಿನಿಂದಲೂ ಈಗಾಗಲೇ ಕೊಟ್ಟುಕೊಂಡು ಬಂದಿರುವುದರಿಂದ ಈಗ ಪ್ರಾಬ್ಲಂ., ಹೀಗಾಗಿ ಯಾವುದೂ ಟಿಸಿ ಗಳು ನಿಲ್ಲುವುದಿಲ್ಲ ಎಲ್ಲಾ ಬರ್ನ್ ಆಗುತ್ತವೆ. ಸಿಸ್ಟಂ ಇಂಪ್ರೂವ್‌ಮೆಂಟ್ ಮಾಡದೇ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ, ತಾವು ಇನ್ನು ಮುಂದೆಯಾದರೂ ಇದರ ಬಗ್ಗೆ ಚಿಂತನೆ ಮಾಡಬೇಕು. ಇರಿಗೇಷನ್ ಪಂಪ್ ಸೆಟ್ಟುಗಳಿಗೆ ಇದೇ ಟಿಸಿ, ಕುಡಿಯುವ ನೀರಿಗೂ ಅದೇ ಟಿಸಿ, ಕನೆಕ್ಷನ್ ಕೊಟ್ಟು ಕೊಟ್ಟು ಎಲ್ಲಾ ಓವರ್ ಲೋಡ್ ಆಗಿದೆ. ತಾವು ಏನಾದರೂ ಜನಕ್ಕೆ ಒಳ್ಳೆಯದನ್ನು ಮಾಡಬೇಕೆಂದಿದ್ದರೆ ತಕ್ಷಣವೇ ಸಂಬಂಧಪಟ್ಟ ಕುಡಿಯುವ ನೀರಿನ ವ್ಯವಸ್ಥೆ ಎಲ್ಲೆಲ್ಲಿ ಇದೆ ಅಲ್ಲಿ ಕುಡಿಯುವ ನೀರಿಗೆ ಸೆಪರೇಟ್ ಟಿಸಿಯನ್ನು ಅಳವಡಿಸಿ ತುರ್ತಾಗಿ ಆ ಕೆಲಸ ಮಾಡಬೇಕು. ತಾವು ಇದನ್ನು ತೆಗೆದುಕೊಂಡರೆ ಆ ಕೆಲಸ ಆಗುತ್ತದೆ. ಅದನ್ನು ಬಿಟ್ಟು ನಾವು ಇಲ್ಲಿ ಸುಮ್ಮನೆ ಕೂಗಾಡುವುದು, ಕಿರಚಾಡುವುದು, ಜನ ಬಂದು ನಿಮ್ಮನ್ನು ಘೇರಾವು ಮಾಡುವುದು, ಇದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಮಾನ್ಯ ಮಹಾದೇವ್ ಪ್ರಸಾದ್‌ರವರು ಹೇಳಿದ ಹಾಗೆ ನಮ್ಮ ಚಾಮರಾಜನಗರಕ್ಕೆ 500 ರಿಂದ 600 ಟಿಸಿ ಗಳನ್ನು ಕೊಡುವುದು, 26 ಹೊಸ ಲೈನ್‌ಗಳನ್ನು ಕೊಡುವುದು, ಎಗ್ಸಿಸ್ಟಿಂಗ್ ಲೈನ್ ಜೊತೆಯಲ್ಲಿ ಅಡಿಷನಲ್ಲಾಗಿ ಲೈನ್‌ಗಳನ್ನು ಎಳೆಯುವುದು, ಈ ಕೆಲಸಗಳೆಲ್ಲವೂ ಆಗಬೇಕು. ಹಣ ಕೊಟ್ಟಿದ್ದೀರಿ ಎಲ್ಲವು ಮಾಡಿದಿರಿ ಆದರೆ ನಮ್ಮ ಜಿಲ್ಲೆಯಲ್ಲಿ ಸಮರ್ಪಕವಾಗಿ ಕೆಲಸ ಆಗುತ್ತಿಲ್ಲ, ಯಾರು ಸೂಪರ್‌ವಿಷನ್ ಮಾಡುತ್ತಿಲ್ಲ. ಮಾನ್ಯ ಕೆಯಿಬಿ ಮಂತ್ರಿಗಳನ್ನು ಕೈಮುಗಿದು ಕೇಳುತ್ತೇನೆ ದಯಮಾಡಿ ನೀವು ಬನ್ನಿ ನಮ್ಮ ಜನ ನಿಮ್ಮನ್ನು ಕೊಂಡಾಡುತ್ತಾರೆ. ಮಾನ್ಯ ಘೋರ್ಪಡೆಯವರು ಇಲ್ಲಿ ಕುಳಿತು ಹೇಳಿದರು ಅದು ಕೇಳುವುದಕ್ಕೆ ಬಹಳ ಚೆನ್ನಾಗಿ ಇದೆ. ಬೋರ್‌ವೆಲ್‌ಗಳ ರಿಪೇರಿ ಕೆಲಸವನ್ನು ಜಿಲ್ಲಾ ಪಂಚಾಯಿತಿಗೆ ಇದ್ದದ್ದನ್ನು ತಾಲ್ಲೂಕು ಪಂಚಾಯಿತಿಗೆ ವಹಿಸಿದಿರಿ, ಎಷ್ಟು ಅಧ್ವಾನ ಆಗಿದೆ ಎಂದರೆ, ರಿಪೇರಿ ಮಾಡುವುದಕ್ಕೆ ಅಲ್ಲಿ ಮೆನ್ ಇಲ್ಲ. ಅಲ್ಲಿ ವಾಹನಗಳು ಇಲ್ಲ,

ನಾನು ಈ ಬಗ್ಗೆ ಜಿಲ್ಲಾ ಪಂಚಾಯತ್ ಮೀಟಿಂಗ್‌ನಲ್ಲಿ ಹಾಗೂ ಕಳೆದ ಅಸೆಂಬ್ಲಿಯಲ್ಲೂ ಪ್ರಸ್ತಾಪಿಸಿದ್ದೇನೆ. ಅಲ್ಲಿ ಅವರು 3-4 ವಾಹನಗಳನ್ನು ಬಾಡಿಗೆ ತೆಗೆದುಕೊಳ್ಳುತ್ತಿರುವುದರಿಂದ ನೀವು ಕೊಡುವ ಅರ್ಧ ದುಡ್ಡು ಎಲ್ಲಾ ಆ ವೆಹಿಕಲ್ ಬಾಡಿಗೆಗೆ ಹೋಗುತ್ತಿದೆ. ಆದ್ದರಿಂದ, ಹೊಸ ವೆಹಿಕಲ್ ಅನ್ನು ಕೊಟ್ಟರೆ ತುರ್ತಾಗಿ ಅದನ್ನು ರೆಡಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ತಾವು ಮಾಡುವುದಿಲ್ಲ. ಅದು ಬಿಟ್ಟು ನೀವು ಕೇವಲ ಇಷ್ಟು ಮಿನಿ ವಾಟರ್ ಸಪ್ಲೈ ಇದೆ, ಇಷ್ಟು ಎನ್‌ಆರ್‌ಡಬ್ಲ್ಯೂ ಇದೆ, ಇಷ್ಟು ಬೋರ್‌ವೆಲ್ಸ್ ಇವೆ ಎಂದು ಹೇಳುತ್ತೀರಿ, ನಿಜವಾಗಲೂ ನಮಗೆ ಬಹಳ ನೋವಾಗುತ್ತದೆ. ಮಾನ್ಯ ಸಚಿವರ ಬಗ್ಗೆ ನಮಗೆ ಬಹಳ ಗೌರವ ಇದೆ, ತಾವು ಹಿರಿಯರು ಇದ್ದೀರಿ, ಅನೇಕ ವಿಚಾರಗಳನ್ನು ತಾವು ತಿಳಿದುಕೊಂಡಿದ್ದೀರಿ, ಹೀಗಾಗಿ ನಿಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ. ನಿಮ್ಮ ಚಿಂತನೆ ಏನಿದೆ ನಿಮ್ಮ ಹೋರಾಟ ಏನಿದೆ ಇವೆಲ್ಲಾ ಎಲ್ಲಿ ಮುಟ್ಟಬೇಕೋ ಅಲ್ಲಿ ಮುಟ್ಟುತ್ತಿಲ್ಲ, ಇಲ್ಲಿ ಕೇಳುವುದಕ್ಕೆ ಹಾಗೂ ಪತ್ರಿಕೆಗಳಲ್ಲಿ ಓದುವುದಕ್ಕೆ ಬಹಳ ಚೆನ್ನಾಗಿ ಇದೆ. ಅದು ಎಲ್ಲಿ ಮುಟ್ಟಬೇಕೋ ಅಲ್ಲಿ ಮುಟ್ಟಿದಾಗ ಮಾತ್ರ ನೀವು ಮಂತ್ರಿಯಾಗಿದ್ದಕ್ಕೂ ಸಾರ್ಥಕವಾಗುತ್ತದೆ. ಆಗ ನಿಮಗೆ ಒಳ್ಳೆಯದಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೆಪಿಟಿಸಿಎಲ್ ವಿಚಾರ ಇಷ್ಟು ಆಯಿತು ಇನ್ನು ಬರಗಾಲದ ಬಗ್ಗೆ ಹೇಳುವುದಾದರೆ, ನೀವು ಇಷ್ಟೊಂದು ದುಡ್ಡನ್ನು ಕೊಡುತ್ತೀರಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಎಂದು ಅಧಿಕಾರ ವಿಕೇಂದ್ರಿಕರಣಗೊಂಡಿದೆ, ಇದು ಸಂತೋಷಕರವಾದ ಸಂಗತಿ. ಸರ್ಕಾರದಿಂದ ಬರುವ ಹಣದ ಬಗ್ಗೆಯಾಗಲಿ, ಯಾವ್ಯಾವ ಕೆಲಸ ಎನ್ನುವುದರ ಬಗ್ಗೆಯಾಗಲಿ, ಎಷ್ಟು ಖರ್ಚಾಗುತ್ತಿದೆ ಎನ್ನುವುದರ ಬಗ್ಗೆಯಾಗಲಿ, ಇವು ಯಾವ ವಿಚಾರಗಳು ಸಾಮಾನ್ಯವಾಗಿ ಶಾಸಕರ ಗಮನಕ್ಕೆ ಬರುವುದಿಲ್ಲ. ನಾವು ಹೋಗಿ ಅಲ್ಲಿ ವಿಚಾರಗಳನ್ನು ಕೇಳಿ ತಿಳಿದುಕೊಳ್ಳಬೇಕಾಗಿದೆ ಇದು ಬಹಳ ನೋವಿನ ಸಂಗತಿ. ಹಣಕಾಸು ಬಿಡುಗಡೆಯಾಗುವ ಸಂದರ್ಭದಲ್ಲಿ ಶಾಸಕರಿಗೆ ಗೊತ್ತಾಗುವುದಿಲ್ಲ. ಇದು ಗೊತ್ತಾಗುವಂತೆ ಆಗಬೇಕು. ತಾವು ಏನಾದರೂ ಜನಗಳಿಗೆ ಒಳ್ಳೆಯದನ್ನು ಮಾಡಬೇಕು ಎಂದರೆ ಈ ಬೋರ್‌ವೆಲ್‌ಗಳ ರಿಪೇರಿ ಕೆಲಸವನ್ನು ತಾಲ್ಲೂಕು ಪಂಚಾಯಿತಿಯಿಂದ ಕಿತ್ತು ಹಿಂದೆ ಇದ್ದಂತೆ ಜಿಲ್ಲಾ ಪಂಚಾಯಿತಿಗೆ ವಹಿಸಿ. ಇದನ್ನು ಮಾಡಿದರೆ ಬಹಳ ಉಪಕಾರವಾಗುತ್ತದೆ ಏಕೆಂದರೆ, ಜಿಲ್ಲಾ ಪಂಚಾಯಿತಿಯಲ್ಲಿ ನಿಮ್ಮ ಇಂಜಿನಿಯರ್ಸ್ ಇರುತ್ತಾರೆ, ಮೆನ್ಸ್ ಇರುತ್ತಾರೆ, ಅವರು ದುಡ್ಡನ್ನು ಹೇಗೋ ಅಡ್ಜೆಸ್ಟ್ ಮಾಡಿ ಕೆಲಸ ಮಾಡುತ್ತಾರೆ. ತಾಲ್ಲೂಕು ಪಂಚಾಯಿತಿಯಲ್ಲಿ ಆ ರೀತಿ ಆಗುತ್ತಾ ಇಲ್ಲ ಇಂಜಿನಿಯರ್‌ಗಳು ಶಾರ್ಟೇಜ್ ಇದ್ದಾರೆ ಅಲ್ಲಿ ಮೆನ್‌ಗಳಿಲ್ಲ, ವೆಹಿಕಲ್‌ಗಳು ಇಲ್ಲ ಹೀಗಾಗಿ ತಾವು ದಯಮಾಡಿ ಈ ಕೆಲಸ ಮಾಡಿಕೊಡಬೇಕು. ಮಾನ್ಯ ಕಂದಾಯ ಸಚಿವರು ಸ್ವಲ್ಪ ಚುರುಕಾಗಬೇಕು, ಬಹಳ ಜವಾಬ್ದಾರಿ ಇರತಕ್ಕಂಥ ಇಲಾಖೆ, ಕಳೆದ ಸಾರಿ ನಮ್ಮ ಜಿಲ್ಲೆಗೆ ಬರ ಪರಿಹಾರದ ಬಗ್ಗೆ ದುಡ್ಡು ಕೊಟ್ಟಿರಿ, ಅದು ಯಾವ ರೀತಿ ಉಪಯೋಗವಾಯಿತು? ಎಲ್ಲಿ ಆಯಿತು? ಏನಾಯಿತು? ಅಕೌಂಟ್ ಎಲ್ಲಿದೆ?

ಪಬ್ಲಿಕ್ ಮನಿಗೆ ಅಕೌಂಟಬಿಲಿಟಿ ಬೇಡವೆ? ಯಾವುದಾದರೂ ರಿವ್ಯೂ ಮೀಟಿಂಗ್ ಮಾಡಿದ್ದೀರಾ? ಇದುವರೆಗೆ ದುಡ್ಡು ಎಷ್ಟು ರಿಲೀಸ್ ಆಯಿತು? ಕುಡಿಯುವ ನೀರಿಗೆ ಮಾನ್ಯ ಮಹದೇವ್‌ಪ್ರಸಾದ್‌ರವರು ಹೇಳಿದ ಹಾಗೆ ಒಂದು ಕೋಟಿ ಮೂವತ್ತು ಲಕ್ಷ ರೂ. ಒಂದು ಜಿಲ್ಲೆಗೆ ರಿಲೀಸ್ ಎಂದು ಹೇಳುತ್ತೀರಿ, ಅಲ್ಲಿ ಡಿಸಿ ಕೇಳಿದರೆ ದುಡ್ಡು ಬಂದಿಲ್ಲ ಸಾರ್ ಎಂದು ಹೇಳುತ್ತಾರೆ. ಪರಿಸ್ಥಿತಿ ಬಹಳ ಅಧ್ವಾನ ಆಗಿದೆ, ದಯಮಾಡಿ ಇನ್ನಾದರೂ ಸ್ವಲ್ಪ ಚಿಂತನೆ ಮಾಡಿ ಜವಾಬ್ದಾರಿಯಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳದೇ ಹೋದರೆ ಕಷ್ಟವಾಗುತ್ತದೆಂದು ಹೇಳುತ್ತಾ, ಸಾಕಷ್ಟು ಸಮಯ ಆಗಿರುವುದರಿಂದ ಹಾಗೂ ಅನೇಕ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿರುವುದರಿಂದ, ಸುಮ್ಮನೆ ಕೇವಲ ಭಾಷಣಕ್ಕಿಂತ ಕಾರ್ಯಪ್ರವೃತ್ತರಾಗುವುದು ಅವಶ್ಯಕವಿದೆ. ದಯಮಾಡಿ ಇದನ್ನು ತಾವು ಮಾಡಬೇಕೆಂದು ಹೇಳುತ್ತಾ, ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಅನೇಕ ಮಾನ್ಯ ಸದಸ್ಯರುಗಳಿಂದ ಚೀಟಿಗಳು ಬರುತ್ತಿವೆ, ಜೊತೆಗೆ ಕೆಲವು ಸದಸ್ಯರು ಕೆಲವು ವಿಚಾರಗಳನ್ನು ಈಗ ಎತ್ತಿದ್ದಾರೆ, ಗೌರ್ನಮೆಂಟ್‌ನವರೂ ಸಹ ಇನ್‌ಫಾರ್‌ಮೇಷನ್ ತರಿಸಿಕೊಳ್ಳಬೇಕಲ್ಲವೆ? I feel the reply should be given on Friday. I think the sense of the House is like that ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡುತ್ತಿದ್ದೇವೆ.

(ಸದನವು ಸಂಜೆ 7-31ಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 21ನೇ ಮಾರ್ಚ್ 2002ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)